ಮಂಗಳವಾರ, ಆಗಸ್ಟ್ 26, 2025 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪರಿಸರ ಸ್ನೇಹಿ ಗಣಪ

ಪರಿಸರ ರತ್ನ ಬಳಗ ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿ ಸಹಯೋಗದಲ್ಲಿ ಬೆಂಗಳೂರಿನ ಪ್ರಕಾಶ್ ನಗರದ ಸರ್ಕಾರಿ ಶಾಲೆಯ ಮಕ್ಕಳಿಗೆ ಪರಿಸರ ಸ್ನೇಹಿ ಗಣಪತಿ ಮೂರ್ತಿಗಳನ್ನು ವಿತರಿಸಲಾಯಿತು

ಜೊಕೊವಿಚ್ ಮುನ್ನಡೆ

ಸರ್ಬಿಯಾದ ತಾರೆ ನೊವಾಕ್ ಜೊಕೊವಿಚ್ ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ ಆತಿಥೇಯ ದೇಶದ ಲರ್ನರ್ ಟಿಯೆನ್ ಅವರನ್ನು ನೇರ ಸೆಟ್‌ಗಳಿಂದ ಮಣಿಸಿ 2ನೇ ಸುತ್ತು ತಲುಪಿದರು

ಮಾಡೆಲ್	125 CF	NS 125	150 SD	NS 200	NS400
ಎಕ್ಸ್-ಶೋರೂಮ್ ಬೆಲೆ	₹94 074/-*	₹99 994/-*	₹1 13 984/-*	₹1 40 691/-*	₹1 92 793/-*
ಹ್ಯಾಟ್-ಟ್ರಿಕ್ ಸೇವಿಂಗ್ಸ್	₹7 500/-*	₹6 000/-*	₹7 500/-*	₹10 000/-*	₹9 200/-*

72198 21111

BAJAJ SECURE • AMC • ROAD SIDE ASSISTANCE | SHRIRAM Finance | IDFC FIRST Bank ALWAYS YOU FIRST | BAJAJ AUTO CREDIT | L&T Finance | TATA CAPITAL Two Wheeler Loans

*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಉಲ್ಲೇಖಿಸಲಾದ ಒಟ್ಟು ಉಳಿತಾಯಗಳು ಕ್ಯಾಶ್‌ಬ್ಯಾಕ್, ಶೂನ್ಯ ಪ್ರೊಸೆಸಿಂಗ್ ಶುಲ್ಕ ಮತ್ತು 1 ವರ್ಷದ ಸ್ವಂತ ಹಾನಿ ವಿಮೆಯಿಂದ ಪಡೆದ ಒಟ್ಟು ಉಳಿತಾಯಗಳಾಗಿವೆ. ಹಣಕಾಸುದಾರ/ ವಿಮಾದಾರರನ್ನು ಅವಲಂಬಿಸಿ ಶೂನ್ಯ PF ಮತ್ತು OD ವಿಮೆಯ ಮೇಲಿನ ಉಳಿತಾಯಗಳು ವಿವಿಧ ಸ್ಥಳಗಳಲ್ಲಿ ಬದಲಾಗಬಹುದು. *ಆಯಾ ಮೋಡೆಲ್‌ಗಳ ಉಲ್ಲೇಖಿಸಲಾದ ಪಲ್ಸರ್ ಬೇಸ್ ವೇರಿಯೆಂಟ್‌ಗಳ ಎಕ್ಸ್ ಶೋರೂ ಬೆಲೆ. **ಪಲ್ಸರ್ 125 ನಿಯಾನ್‌ಗೆ ಡೌನ್-ಪೇಮೆಂಟ್ ಮಾರ್ಜಿನ್ ಮನಿಯಾಗಿದೆ. ಮಾರ್ಜಿನ್ ಮನಿಯಲ್ಲಿ ಡಿಸಿಸಿ ಶುಲ್ಕಗಳು, ಪ್ರೊಸೆಸಿಂಗ್ ಶುಲ್ಕಗಳು, ಇತರ ಶುಲ್ಕಗಳು ಸೇರಿಲ್ಲ. ಹಣಕಾಸುದಾರರ ಸ್ವಂತ ವಿವೇಚನೆಯಡಿ ಹಣಕಾಸು ಒದಗಲಿದೆ. ನಿಯಮ ಮತ್ತು ಷರತ್ತುಗಳು ಅನ್ವಯ. ಪೂರ್ವ ಸೂಚನೆ ಇಲ್ಲದೆ ಯಾವುದೇ ಅಥವಾ ಎಲ್ಲ ಕೊಡುಗೆಗಳನ್ನು ಹಿಂತೆಗೆದುಕೊಳ್ಳುವ ಹಕ್ಕನ್ನು ಬಜಾಜ್ ಆಟೋ ಕಾಯ್ದಿರಿಸಿಕೊಂಡಿದೆ. ಸ್ಟಂಟ್‌ಗಳನ್ನು ತಜ್ಞರು, ವೃತ್ತಿಪರ ಮೇಲ್ವಿಚಾರಣೆಯಲ್ಲಿ, ನಿಂಯಂತ್ರಿತ ಮತ್ತು ಸುರಕ್ಷಿತ ಪರಿಸರದಲ್ಲಿ ಸಾರ್ವಜನಿಕರಿಂದ ಮತ್ತು ಸಾರ್ವಜನಿಕ ರಸ್ತೆಗಳಿಂದ ಪ್ರತ್ಯೇಕವಾಗಿ ನಿರ್ವಹಿಸಿದ್ದಾರೆ. ಈ ಸ್ಟಂಟ್‌ಗಳನ್ನು ತಾವು ಯಾರೂ ಪ್ರಯತ್ನಿಸಬಾರದಾಗಿ ವಿನಂತಿ. ಯಾವಾಗಲೂ ಸಂಚಾರ ಮತ್ತು ಸುರಕ್ಷತಾ ನಿಯಮಗಳನ್ನು ಅನುಸರಿಸಿ. ನಿರ್ದಿಷ್ಟ ಮಾಡೆಲ್‌ಗಳಲ್ಲಿ ಮತ್ತು ನಿರ್ದಿಷ್ಟ ರಾಜ್ಯಗಳಲ್ಲಿ AMC ಲಭ್ಯವಿದೆ. ಹೆಚ್ಚಿನ ವಿವರಗಳನ್ನು ಬಜಾಜ್ ಡೀಲರ್‌ರಿಂದ ಪಡೆದುಕೊಳ್ಳಿ. ರೋಡ್ ಸೈಡ್ ಸರ್ವಿಸನ್ನು ಥರ್ಡ್ ಪಾರ್ಟಿಗಳು ಅವರ ನಿಯಮ ಮತ್ತು ಷರತ್ತುಗಳ ಅಡಿ ಒದಗಿಸುತ್ತಾರೆ.

Authorised Dealers for Bajaj Auto Ltd.: Bangalore • **Bommanahalli** AMBA BAJAJ: 9535411100 • **HSR Layout** AMBA BAJAJ: 8884333732 • **Sarjapur** AMBA BAJAJ: 7406688884• **BTM Layout** AMBA BAJAJ: 9513926221• **Madiwala** AMBA BAJAJ: 9945000048• **Electronic City** AMBA BAJAJ: 8971711118• **Nayandahalli** RV BAJAJ: 6360308373 • **Moodalapalya** RV BAJAJ: 9740444545 • **Kengeri** RV BAJAJ: 7353763305 • **Giri Nagar** RV BAJAJ: 7353763302• **Vijaynagar** RV BAJAJ: 7353763307• **Banashankari** POPULAR BAJAJ: 9945111874 • **Rajajinagar** POPULAR BAJAJ : 6366554001 • **Koramangala** POPULAR BAJAJ: 9845589079 • **Konankunte** POPULAR BAJAJ: 7760967834 • **Ramnagara** POPULAR BAJAJ: 7760967832 • **Kanakpura** POPULAR BAJAJ: 9972533890 • POPULAR BAJAJ **Channapatna** 9901947666 • POPULAR BAJAJ **Uttarahalli** 9972095890 • POPULAR BAJAJ **Gottigere** 7760996891 • **Yelahanka** KALYANI BAJAJ: 9449849618 • **Mekhri circle** KALYANI BAJAJ 8884413593 **Mathikere** KALYANI BAJAJ: 8884430126 • **Chikkaballapura** KALYANI BAJAJ: 8884413594 • **Devanahalli** KALYANI BAJAJ: 9449849624 • **Marathahalli** KHIVRAJ BAJAJ: 9036091986 • **Kasturba Rd** KHIVRAJ BAJAJ: 9035060140 • **Indiranagar** KHIVRAJ BAJAJ: 9035060139 • **Hennur** KHIVRAJ BAJAJ: 9742155225 • **Banaswadi** KHIVRAJ BAJAJ: 9035060147 • **Yeshwanthpur :** KHIVRAJ BAJAJ: - 9148752305 • **Hesargatta** KHIVRAJ BAJAJ: 9035060148 • **Whitefield** KHIVRAJ BAJAJ: 8618840097 • **Hoskote** KHIVRAJ BAJAJ: 9035005075 • **Magadi Rd** ANANT BAJAJ: 9980009166 • **Laggere** ANANT BAJAJ: 9900072690 • **Hubli** CHANNAMMA BAJAJ: 9008030908 • **Arvind Nagar branch** 8884771881 **Gadag** CHANNAMMA BAJAJ: 7090665850 • **Sirsi** CHANNAMMA BAJAJ: 8884645609 • **Haveri** CHANNAMMA BAJAJ: 8151884422 • **Belgaum** JAGASHREE BAJAJ: 988690116, JAGASHREE BAJAJ: 9448634872. • **Chikodi** JAGASHREE BAJAJ: 7349773953 • **Gokak** JAGASHREE BAJAJ: 7349773965 • **Bellary AADI BAJAJ: 9606050246• Raichur SHREE BALAJI AUTOMOBILES: 9880235539• Koppal I A BAJAJ: 9632512938• Hospet AADI BAJAJ:9731361414 • Hagaribommanahalli AADI BAJAJ: 9900363010• SIRUGUPPA AADI BAJAJ: 9110217558 • Bijapur BIJJARGI BAJAJ (BLDE Road)**: 6362877793 •(Bus Stand Road) 8884000970 • **Bagalkot** BIJJARGI BIKES: 9148448324 • **Sindagi** BIJJARGI BAJAJ 8861946802• **Bidar** SINDOL BAJAJ 9513226555 • **Chitradurga** BTV BAJAJ: Ph: 8310553554 • **Hiriyur** BTV BAJAJ: Ph: 8310553554 • **Challakere** BTV BAJAJ 8310553554 • **Davangere** JAIN BAJAJ: Ph: 9343636805 • **Harihara** JAIN BAJAJ: Ph: 9632300444 • **Gulbarga** VKG BAJAJ: 9632018700 • **Yadgir** VKG BAJAJ: 8867776567 • **Humnabad** VKG BAJAJ 8050889160 • **Shimoga** SUPREME BAJAJ: 8105000999 • **Sagar** SUPREME BAJAJ: 9008339799 • **Bhadravathi** SUPREME BAJAJ: 9008352799 • **Chikkamagalur** SUPREME BAJAJ: 9008379799 • **Tarikere** SUPREME BAJAJ: 9008569799 • **Hosanagar** SUPREME BAJAJ 9731767799 • **Anandpura** SUPREME BAJAJ 9663501499 • **Hassan** ARPITA BAJAJ: 9902439255, **Arsikere** ARPITA BAJAJ: 9964094535 • **Kolar** KHIVRAJ 9611768292 • **KGF** KHIVRAJ BAJAJ: 7349507477• **Tumkur** AKSHAYA BAJAJ: 7259040212• **Tiptur** AKSHAYA BAJAJ: 7259040226 • **Sira** AKSHAYA BAJAJ: 7259040328 • **Kunigal** AKSHAYA BAJAJ: 7338662706 • **Madhugiri** AKSHAYA BAJAJ: 7259040340 • **BH Road:** 7338662687 • **Mysore Saraswathipuram** POPULAR BAJAJ: 9148101113 • **Chamarajapuram** POPULAR BAJAJ: 7259786271 • **Vontikoppal** STAR BAJAJ: 9886959722 • **Mandya** POPULAR BAJAJ: 7760967900 • **Chamarajanagara** PATEL BAJAJ: 9480494888 • **Hunsur** STAR BAJAJ: 8884374777 • **Kushalnagar** POPULAR BAJAJ: 7259786276 • **Nanjangud** STAR BAJAJ: 9742100252 • **NR Mohalla** STAR BAJAJ: 8095777706 • **Balmatta** SUPREME BAJAJ: 9606973192 • **Kuloor** SUPREME BAJAJ: 9606237547 • **Surathkal** SUPREME BAJAJ: 9606973193 • **Thokottu** 9606702429 • **B C Road** 7618715273 • **Bidar** SINDOL BAJAJ 9513226555 • **UDUPI** SAANVI BAJAJ 8861135225.

‘ಹಕ್ಕು, ಅಧಿಕಾರಕ್ಕಾಗಿ ಹೋರಾಟ’

ಮೈಸೂರಿನಲ್ಲಿ ‘ಪರಮೋತ್ಸವ’ ಅಭಿಮಾನಿಗಳಿಂದ ‘ದಲಿತ ಸಿ.ಎಂ’ ಕೂಗು

ಪ್ರಜಾವಾಣಿ ವಾರ್ತೆ

ಮೈಸೂರು: ‘ಹಕ್ಕು ಮತ್ತು ಅಧಿಕಾರ ಪಡೆಯಲು ಮುಂದಿನ ದಿನಗಳಲ್ಲಿ ಹೋರಾಟಕ್ಕೆ ಸಜ್ಜಾಗಬೇಕು’ ಎಂದು ಗೃಹ ಸಚಿವ ಜಿ.ಪರಮೇಶ್ವರ ಸೋಮವಾರ ಇಲ್ಲಿ ತಮ್ಮ ಬೆಂಬಲಿಗರಿಗೆ ಹೇಳಿದರು.

ನಗರದ ಕಲಾಮಂದಿರದಲ್ಲಿ ‘ಡಾ.ಜಿ. ಪರಮೇಶ್ವರ ಅಭಿಮಾನಿಗಳ ಬಳಗ’ವು ತಮ್ಮ 74ನೇ ಹುಟ್ಟುಹಬ್ಬದ ಪ್ರಯುಕ್ತ ಆಯೋಜಿಸಿದ್ದ ‘ಪರಮೋತ್ಸವ’ದಲ್ಲಿ ಅವರು ಮಾತನಾಡಿದರು.

‘ನೀವು ಮುಖ್ಯಮಂತ್ರಿಯಾಗಬೇಕು’ ಎಂಬ ಅಭಿಮಾನಿಗಳ ಕೂಗಿಗೆ, ‘ಎಲ್ಲರಿಗೂ ಹೃದಯ ವೈಶಾಲ್ಯ ಇರಬೇಕು. ಆದರೆ ಅದು ಆಗುತ್ತಿಲ್ಲ. ಹೋರಾಟಕ್ಕೆ ಸಜ್ಜಾಗದಿದ್ದರೆ ಬಾಬಾಸಾಹೇಬರಿಗೆ ಮಾಡುವ ಅಪಮಾನ’ ಎಂದರು.

‘ಒಂದು ಸಮುದಾಯವು ನಿಮ್ಮ ಜೊತೆಗೆ ಯಾವಾಗಲೂ ನಿಂತಿದೆ. ಅವರಿಗೆ ಮೋಸ ಮಾಡಿದರೆ ಅದು ಬುದ್ಧಿ ಕಲಿಸುತ್ತದೆ ಎಂದು ಜ್ಞಾನಪ್ರಕಾಶ ಸ್ವಾಮೀಜಿ ಹೇಳಿದ್ದಾರೆ. ಅದು ನಿಜ. ಹೃದಯ ಶ್ರೀಮಂತಿಕೆ ನಿಮಗೆ ಬರಬಾರದೇ’ ಎಂದು ಪ್ರಶ್ನಿಸಿದರು.

‘ದಲಿತ ಸಮುದಾಯವು ಸಮಾನತೆ ಮತ್ತು ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಇನ್ನೆಷ್ಟು ವರ್ಷ ಕಾಯಬೇಕು? ದೇಶ ಆರ್ಥಿಕವಾಗಿ ಸದೃಢತೆಯಾಗುತ್ತಿದೆ. ಚಂದ್ರಯಾನ ಮಾಡಿದೆ. ಬಲಿಷ್ಠ ಸೇನೆಯಿದೆ. ಆದರೂ, ಜಾತಿ ಸಂಘಗಳು ರಚನೆಯಾಗುತ್ತಿವೆ. ಶಾಶ್ವತ ಸಮಾನತೆ ಬರುವವರೆಗೂ ಮೀಸಲಾತಿ ಇರಲೇಬೇಕು’ ಎಂದರು.

‘ಪ್ರತಿನಿಧಿಸಿದ ಜನರಿಗಾಗಿ ಹೋರಾಡಿದ್ದೇನೆ. ಬಡ್ತಿ ಮೀಸಲಾತಿ ಜಾರಿಗೊಳಿಸದಿದ್ದರೆ ಡಿಸಿಎಂ ಹುದ್ದೆಯಲ್ಲಿ ಒಂದು ಕ್ಷಣ ಇರುವುದಿಲ್ಲ ಎಂದು ಆಗಿನ ಸಿ.ಎಂ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಹೇಳಿದ ಮೇಲೆ ಜಾರಿಯಾಯಿತು. ಶೋಷಿತರ ಪರ ಕೆಲಸ ಮಾಡದೇ ಇದ್ದರೆ, ಸ್ಥಾನದಲ್ಲಿದ್ದೂ ಪ್ರಯೋಜನವಿಲ್ಲ’ ಎಂದರು.

ಮುಖ್ಯಮಂತ್ರಿ ಮಾಡಿ: ‘ಜನಸಂಖ್ಯೆಯಲ್ಲಿ 1ನೇ ಸ್ಥಾನದಲ್ಲಿರುವ ದಲಿತ ಸಮುದಾಯದಿಂದ ಯಾರೊಬ್ಬರೂ ಸಿ.ಎಂ ಆಗಿಲ್ಲ. ರಾಷ್ಟ್ರೀಯ ಪಕ್ಷ ಇಲ್ಲಿಯವರೆಗೆ ಮಾಡಿರುವ ತಪ್ಪನ್ನು ಪರಮೇಶ್ವರ ಅವರಿಗೆ ಸಿ.ಎಂ ಸ್ಥಾನ ನೀಡಿ ಸರಿಪಡಿಸಿಕೊಳ್ಳಬೇಕು’ ಎಂದು ಉರಿಲಿಂಗಪೆದ್ದಿಮಠದ ಜ್ಞಾನ ಪ್ರಕಾಶ ಸ್ವಾಮೀಜಿ ಒತ್ತಾಯಿಸಿದರು.

‘ಒಂದು ಸಮುದಾಯಕ್ಕೆ 9 ಸಲ, ಮತ್ತೊಂದಕ್ಕೆ 7 ಬಾರಿ ಅವಕಾಶ ಸಿಕ್ಕಿದೆ. ಅಧಿಕಾರವು ಸಣ್ಣ ಪುಟ್ಟ ಸಮುದಾಯದವರಿಗೂ ಸಿಕ್ಕಿದೆ. ನೂರಕ್ಕೆ ನೂರರಷ್ಟು ಬೆಂಬಲಿಸಿರುವ ದಲಿತ ಸಮುದಾಯವನ್ನು ಕಡೆಗಣಿಸಿದರೆ ರಾಜ್ಯದಲ್ಲಿ ಕಾಂಗ್ರೆಸ್ ಅಸ್ತಿತ್ವ ಕಳೆದುಕೊಳ್ಳಬೇಕಾಗುತ್ತದೆ’ ಎಂದು ಎಚ್ಚರಿಸಿದರು.

‘ಪರಮ ಪಯಣ’ ಕೃತಿ ಬಿಡುಗಡೆ ಮಾಡಿದ ಶಾಸಕ ತನ್ವೀರ್ ಸೇಠ್, ‘ಪರಮೇಶ್ವರ ಅವರನ್ನು ಎತ್ತರದ ಸ್ಥಾನದಲ್ಲಿ ನೋಡಬೇಕೆಂಬುದು ಆಸೆ ಆಗಿಯೇ ಉಳಿದಿದೆ. ಅವರೊಂದಿಗೆ ಹೆಜ್ಜೆ ಹಾಕುತ್ತೇವೆ’ ಎಂದರು.

ಶಾಸಕರಾದ ದರ್ಶನ್ ಧ್ರುವನಾರಾಯಣ, ಕೆ.ಹರೀಶ್‌ಗೌಡ ಪಾಲ್ಗೊಂಡಿದ್ದರು.

ಮುಖ್ಯಾಂಶಗಳು

- ಮುಖ್ಯಮಂತ್ರಿ ಸ್ಥಾನ ಕಾಂಗ್ರೆಸ್‌ಗೆ ಒತ್ತಾಯ
- ಕಡೆಗಣಿಸಿದರೆ ಪಕ್ಷ ಅಸ್ತಿತ್ವ ಕಳೆದುಕೊಳ್ಳಬೇಕಾದೀತು
- ಜ್ಞಾನಪ್ರಕಾಶ ಸ್ವಾಮೀಜಿ ಎಚ್ಚರಿಕೆ

ಸಮಾಜವು ಬದಲಾಗದಿದ್ದರೆ ನಾವೇ ಬದಲಾಯಿಸಬೇಕು. ಅಂಬೇಡ್ಕರ್ ಅವರು ನಮಗೆ ಮತದಾನದ ಅಸ್ತ್ರ ಕೊಟ್ಟಿದ್ದಾರೆ. ತೀರ್ಮಾನಿಸಬೇಕಷ್ಟೇ
ಜಿ.ಪರಮೇಶ್ವರ
ಗೃಹ ಸಚಿವ

ಮೈಸೂರಿನಲ್ಲಿ ‘ಡಾ.ಜಿ.ಪರಮೇಶ್ವರ ಅಭಿಮಾನಿಗಳ ಬಳಗ’ವು ತಮ್ಮ 74ನೇ ಹುಟ್ಟುಹಬ್ಬದ ಪ್ರಯುಕ್ತ ಸೋಮವಾರ ಆಯೋಜಿಸಿದ್ದ ‘ಪರಮೋತ್ಸವ’ದಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ ಸನ್ಮಾನ ಸ್ವೀಕರಿಸಿದರು. ಮಂಜುನಾಥ್, ಕಿರಣ್, ಬಿಳಿಕೆರೆ ರಾಜು, ಜ್ಞಾನ ಸ್ವರೂಪಾನಂದ ಸ್ವಾಮೀಜಿ, ಜ್ಞಾನಪ್ರಕಾಶ ಸ್ವಾಮೀಜಿ, ತನ್ವೀರ್ ಸೇಠ್, ದರ್ಶನ್ ಧ್ರುವನಾರಾಯಣ, ಹರೀಶ್‌ಗೌಡ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

‘ಕಾರ್ಯಕ್ರಮಕ್ಕೆ ಅನೇಕ ವಿಘ್ನ’

‘ನನ್ನ ವ್ಯಕ್ತಿತ್ವವಲ್ಲದೇ, ಅನೇಕ ವಿಚಾರಗಳು ಬೇರೆ ಬೇರೆ ಆಯಾಮಗಳಲ್ಲಿ ರಾಜ್ಯಕ್ಕೆ ತಲುಪಬಹುದೆಂಬ ಕಾರಣಕ್ಕೆ ಅನೇಕರಿಗೆ ಈ ಕಾರ್ಯಕ್ರಮ ಆಗುವುದು ಬೇಕಿರಲಿಲ್ಲ. ವಿಘ್ನಗಳು ಎದುರಾಗಿವೆ’ ಎಂದು ಸಚಿವ ಪರಮೇಶ್ವರ ಹೇಳಿದರು.

‘ನೀನೊಬ್ಬನೇ ಕುಳಿತು ಕೋ ನಾನು ಕಾರ್ಯಕ್ರಮಕ್ಕೆ ಬರುತ್ತೇನೆಂದು ಸಂಘಟಕ ಬಿಳಿಕೆರೆ ರಾಜು ಅವರಿಗೆ ಹೇಳಿದ್ದೆ’ ಎಂದು ಅವರು ಹೇಳಿದರು.

ಚಿಟಿಕೆ ಸುದ್ದಿ

ಮೈಸೂರಿನ ಶಿಕ್ಷಕಗೆ ರಾಷ್ಟ್ರೀಯ ಪ್ರಶಸ್ತಿ

ನವದೆಹಲಿ: ಕೇಂದ್ರ ಶಿಕ್ಷಣ ಸಚಿವಾಲಯ ನೀಡುವ ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿಗೆ ಮೈಸೂರಿನ ಹಿನಕಲ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹಾಯಕ ವಿಜ್ಞಾನ ಶಿಕ್ಷಕ ಮಧುಸೂದನ್ ಕೆ.ಎಸ್. ಆಯ್ಕೆ ಆಗಿದ್ದಾರೆ.

ಮಧುಸೂದನ್

ನವದೆಹಲಿಯ ವಿಜ್ಞಾನ ಭವನದಲ್ಲಿ ಸೆ. 5ರಂದು ನಡೆಯುವ ಸಮಾರಂಭದಲ್ಲಿ ವಿವಿಧ ರಾಜ್ಯಗಳ 45 ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಪ್ರಶಸ್ತಿಯು 50 ಸಾವಿರ ನಗದು ಹಾಗೂ ಬೆಳ್ಳಿಯ ಪದಕವನ್ನು ಒಳಗೊಂಡಿದೆ.

‘ಖಾಸಗಿ ಕೃಷಿ ಕಾಲೇಜು ಶೀಘ್ರ’

ಬೆಳಗಾವಿ: ‘ಜಿಲ್ಲೆಯ ಯರಗಟ್ಟಿ ತಾಲ್ಲೂಕಿನ ತೆನಿಕೊಳ್ಳದಲ್ಲಿ 60 ಎಕರೆ ಪ್ರದೇಶದಲ್ಲಿ ಉತ್ತರ ಕರ್ನಾಟಕದ ಮೊದಲ ಖಾಸಗಿ ಕೃಷಿ ವಿಜ್ಞಾನಗಳ ಮಹಾವಿದ್ಯಾಲಯ-ದಲ್ಲಿ ತರಗತಿಗಳು ಇದೇ ವರ್ಷ ಆರಂಭವಾಗಲಿವೆ’ ಎಂದು ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಹೇಳಿದರು.



ಪ್ರಭಾಕರ ಕೋರೆ

‘120 ವಿದ್ಯಾರ್ಥಿಗಳ ಪ್ರವೇಶಕ್ಕೆ ಅನುಮತಿಯಿದೆ. 72 ವಿದ್ಯಾರ್ಥಿಗಳು (ಶೇ 60) ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಮತ್ತು 48 ವಿದ್ಯಾರ್ಥಿಗಳು (ಶೇ 40) ಕೆಎಲ್‌ಇ ಸಂಸ್ಥೆ ಮೂಲಕ 4 ವರ್ಷಗಳ ಬಿ.ಎಸ್ಸಿ (ಕೃಷಿ) ಕೋರ್ಸ್‌ಗೆ ಪ್ರವೇಶ ಪಡೆಯಬಹುದು’ ಎಂದು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

‘ಶೇ 50ರಷ್ಟು ಸೀಟುಗಳಿಗೆ ರೈತರ ಮಕ್ಕಳಿಗೆ ಆದ್ಯತೆ ನೀಡಲಾಗುವುದು. ಶೇ 50ರಷ್ಟು ಪ್ರಾಯೋಗಿಕ ಆಧರಿತ ಪಠ್ಯಕ್ರಮ ಇರಲಿದೆ. 32 ವಿಭಾಗಗಳನ್ನು ಹೊಂದಿರಲಿದೆ. ಬೀದರ್‌ನ ಪಶುವೈದ್ಯಕೀಯ ವಿಜ್ಞಾನ ವಿ.ವಿಗೆ ಸಂಯೋಜಿತವಾಗಿರಲಿದೆ’ ಎಂದರು.

ಈದ್ ಮೆರವಣಿಗೆ ಮುಂದೂಡಿಕೆ

ಬೆಳಗಾವಿ: ಸಾರ್ವಜನಿಕ ಗಣೇಶ ಮೂರ್ತಿಗಳ ವಿಸರ್ಜನಾ ಮೆರವಣಿಗೆ ಇಲ್ಲಿ ಸೆ.6ರಂದು ನಡೆಯುವ ಕಾರಣ ಸೆ. 5ರಂದು ನಡೆಯಬೇಕಿದ್ದ ಈದ್ ಮಿಲಾದ್ ಮೆರವಣಿಗೆಯನ್ನು ಸೆಪ್ಟೆಂಬರ್ 14ಕ್ಕೆ ಮುಂದೂಡಲಾಗಿದೆ ಎಂದು ಮುಸ್ಲಿಂ ಮುಖಂಡರು ತಿಳಿಸಿದ್ದಾರೆ.

ಬೆಳಗಾವಿಯಲ್ಲಿ ಈ ಸಲ 370ಕ್ಕೂ ಹೆಚ್ಚು ಸಾರ್ವಜನಿಕ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗುತ್ತಿದೆ. ಸೆ. 6ರ ಸಂಜೆಯಿಂದ 7ರ ಮಧ್ಯಾಹ್ನದವರೆಗೆ ಮೆರವಣಿಗೆ ನಡೆಯಲಿದೆ. ಮುಸ್ಲಿಂ ಧರ್ಮಗುರುಗಳು, ಮುಖಂಡರು ಸೋಮವಾರ ಸಭೆ ನಡೆಸಿ ಮೆರವಣಿಗೆ ಮುಂದೂಡಲು ನಿರ್ಧರಿಸಿದರು.

‘ಈದ್ ಮಿಲಾದ್ ಮೆರವಣಿಗೆಗೆ ಮುಂದೂಡಿ ಕಾನೂನು ಮತ್ತು ಸುವ್ಯವಸ್ಥೆ ರಕ್ಷಣೆಗೆ ನೆರವಾಗಿದ್ದಾರೆ’ ಎಂದು ನಗರ ಪೊಲೀಸ್ ಕಮಿಷನರ್ ಭೂಷಣ ಬೊರಸೆ ತಿಳಿಸಿದರು.

ಹಲವು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಮಂಗಳವಾರ ಮತ್ತು ಬುಧವಾರ ಭಾರಿ ಮಳೆಯಾಗುವ ಬಗ್ಗೆ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಬಹುತೇಕ ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ನೀಡಿದೆ.

ಉಡುಪಿ, ದಕ್ಷಿಣ ಕನ್ನಡ ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ಗಾಳಿ ಸಹಿತ ಜೋರು ಮಳೆಯಾಗುವ ಸಾಧ್ಯತೆ ಇದೆ. ಕೆಲವೆಡೆ ಗುಡುಗು ಸಹಿತ ಧಾರಾಕಾರ ಮಳೆಯಾಗುವ ಸಂಭವ ಇದೆ ಎಂದು ಇಲಾಖೆ ತಿಳಿಸಿದೆ.

ಭಾರಿ ಮಳೆಯ ಮುನ್ಸೂಚನೆ ನೀಡಲಾದ ಬಾಗಲಕೋಟೆ, ಬೆಳಗಾವಿ, ಬೀದರ್, ಧಾರವಾಡ, ಗದಗ, ಹಾವೇರಿ, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯಪುರ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಹಲವೆಡೆ ಗಂಟೆಗೆ 40 ರಿಂದ 50 ಕಿ.ಮೀ. ವೇಗದಲ್ಲಿ ಗಾಳಿ ಬೀಸಬಹುದು, ಬೆಂಗಳೂರಿನಲ್ಲಿ ಸಾಧಾರಣ ಮಳೆಯಾಗಲಿದೆ.

ರಾಜೇಂದ್ರ ಕಲ್ಬಾವಿ ಎಸಿಸಿಇ ಅಧ್ಯಕ್ಷ

ಮಂಗಳೂರು: ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್ ಇಂಡಿಯಾ ಅಧ್ಯಕ್ಷರಾಗಿ ದಕ್ಷಿಣ ಕನ್ನಡ ನಿರ್ಮಿತಿ ಕೇಂದ್ರದ ಕಾರ್ಯ ನಿರ್ವಾಹಕ ನಿರ್ದೇಶಕ ರಾಜೇಂದ್ರ ಕಲ್ಬಾವಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ರಾಜೇಂದ್ರ ಕಲ್ಬಾವಿ

2025-27ನೇ ಸಾಲಿನ ಅವಧಿಗಾಗಿ ಸಂಸ್ಥೆಯ ಬೆಂಗಳೂರು ಕೇಂದ್ರ ಕಚೇರಿಯಲ್ಲಿ ಸೋಮವಾರ ಆನ್‌ಲೈನ್ ಮೂಲಕ ಚುನಾವಣಾ ಪ್ರಕ್ರಿಯೆ ಜರುಗಿತು.

ಸುದ್ದಿ 2 ನಿಮಿಷ

‘ಕೆಪಿಸಿಸಿ ಅಧ್ಯಕ್ಷರು ಆರ್‌ಎಸ್‌ಎಸ್ ಗೀತೆ ಹಾಡುವುದು ತಪ್ಪು’

ನವದೆಹಲಿ: ‘ಕೆಪಿಸಿಸಿ ಅಧ್ಯಕ್ಷರು ಆರ್‌ಎಸ್‌ಎಸ್ ಗೀತೆ ಹಾಡುವುದು ತಪ್ಪು. ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾಗಿ ಹಾಡಿದ್ದರೆ ಕ್ಷಮೆಯಾಚಿಸಬೇಕು’ ಎಂದು ಕಾಂಗ್ರೆಸ್‌ನ ಹರಿಯಾಣ ಉಸ್ತುವಾರಿ ಬಿ.ಕೆ. ಹರಿಪ್ರಸಾದ್ ಆಗ್ರಹಿಸಿದರು.

ಸೋಮವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಶಿವಕುಮಾರ್ ಅವರು ಉಪಮುಖ್ಯಮಂತ್ರಿಯಾಗಿ ಸಂಘದ ಗೀತೆ ಹಾಡುವುದಕ್ಕೆ ನಮ್ಮ ಅಭ್ಯಂತರ ಇಲ್ಲ. ಸರ್ಕಾರ ಕಾಂಗ್ರೆಸ್ ಪಕ್ಷಕ್ಕೆ ಮಾತ್ರ ಸೀಮಿತ ಅಲ್ಲ. ಅದು ಏಳು ಕೋಟಿ ಜನರ ಸ್ವತ್ತು. ಅಲ್ಲಿ ಒಳ್ಳೆಯವರು ಸೇರಿದಂತೆ ಎಲ್ಲ ಬಗೆಯ ಜನರು ಇರುತ್ತಾರೆ. ಆರ್‌ಎಸ್‌ಎಸ್, ತಾಲಿಬಾನ್‌ಗಳು ಕೂಡ ಇರುತ್ತಾರೆ’ ಎಂದು ವ್ಯಾಖ್ಯಾನಿಸಿದರು.

‘ಮಹಾತ್ಮ ಗಾಂಧಿ ಅವರನ್ನು ಕೊಲೆ ಮಾಡಿದವರು ಆರ್‌ಎಸ್‌ಎಸ್‌ನವರು. ದೇಶದಲ್ಲಿ ಮೂರು ಸಲ ಈ ಸಂಘವನ್ನು ನಿಷೇಧಿಸಲಾಗಿತ್ತು. ಯಾರಿಗೆ ಸಂದೇಶ ನೀಡಲು ಶಿವಕುಮಾರ್ ಈ ಗೀತೆ ಹಾಡಿದ್ದಾರೆ ಎಂಬುದು ಗೊತ್ತಿಲ್ಲ. ಅವರಿಗೆ ಕೃಷಿಕ, ವ್ಯಾಪಾರಸ್ಥ ಹಾಗೂ ರಾಜಕಾರಣಿ ಸೇರಿದಂತೆ ಹಲವು ಮುಖಗಳಿವೆ’ ಎಂದರು.

‘ಕಾಂಗ್ರೆಸ್ ಬಹಳ ವರ್ಷಗಳಿಂದ ಅನೇಕ ಜನರನ್ನು ನೋಡಿದೆ. ಪಕ್ಷಕ್ಕೆ ಸಾಕಷ್ಟು ಮಂದಿ ಬಂದು ಹೋಗಿದ್ದಾರೆ. ಶಿವಕುಮಾರ್ ಅವರು ಬಿಜೆಪಿ ಸೇರುವ ಧೈರ್ಯ ಮಾಡುವುದಿಲ್ಲ ಎಂಬುದು ನನ್ನ ನಂಬಿಕೆ’ ಎಂದರು.

ಸಂಘದ ಇಬ್ಬರಿಂದ ಧರ್ಮಸ್ಥಳಕ್ಕೆ ಕೆಟ್ಟ ಹೆಸರು: ‘ಘಟ್ಟದ ಮೇಲೆ ಹಾಗೂ ಘಟ್ಟದ ಕೆಳಗೆ ಇರುವ ಆರ್‌ಎಸ್‌ಎಸ್‌ನ ಇಬ್ಬರು ನಾಯಕರಿಂದ ಧರ್ಮಸ್ಥಳಕ್ಕೆ ಕೆಟ್ಟ ಹೆಸರು ಬರುತ್ತಿದೆ’ ಎಂದು ಹರಿಪ್ರಸಾದ್ ಆರೋಪಿಸಿದರು.

‘ಧರ್ಮಸ್ಥಳದ ವಿಚಾರದಲ್ಲಿ ಮಾಜಿ ಸಂಸದ ನಳಿನ್ ಕುಮಾರ್ ಕಟೀಲು ಹಾಗೂ ಶಾಸಕ ವಿ.ಸುನೀಲ್ ಕುಮಾರ್ ಈ ಹಿಂದೆ ನೀಡಿರುವ ಹೇಳಿಕೆಗಳನ್ನು ಗಮನಿಸಿದರೆ ಈ ಸತ್ಯ ಗೊತ್ತಾಗುತ್ತದೆ. ಸೌಜನ್ಯಾ ಪ್ರಕರಣದಲ್ಲಿ ತನಿಖೆ ಆಗಬೇಕೆಂದು ಉಭಯ ನಾಯಕರು ಧರ್ಮಸ್ಥಳದಲ್ಲೇ ಭಾಷಣ ಮಾಡಿದ್ದರು. ಎಸ್‌ಐಟಿ ರಚಿಸಬೇಕು ಎಂದು ಬಿಜೆಪಿಯವರೇ ಒತ್ತಾಯಿಸಿದ್ದರು’ ಎಂದು ಅವರು ಹೇಳಿದರು.

ಧರ್ಮ ವಿಜಯ ಸಮಾವೇಶ 5ಕ್ಕೆ

ಬೆಳ್ತಂಗಡಿ (ದಕ್ಷಿಣ ಕನ್ನಡ): ‘ಧರ್ಮಸ್ಥಳ ಕ್ಷೇತ್ರ ಹಾಗೂ ಧರ್ಮಾಧಿಕಾರಿಯವರ ಕುಟುಂಬದವರ ಮೇಲಿನ ಆರೋಪ, ಷಡ್ಯಂತ್ರವನ್ನು ಮಟ್ಟಹಾಕಲು ಒತ್ತಾಯಿಸಿ ಸೆಪ್ಟೆಂಬರ್ ಮೊದಲ ವಾರದಲ್ಲಿ ತಾಲ್ಲೂಕಿನಲ್ಲಿ ‘ಧರ್ಮ ವಿಜಯ ಸಮಾವೇಶ’ ಹಮ್ಮಿಕೊಳ್ಳಲು ನಿರ್ಧರಿಸಲಾಯಿತು.

ಧರ್ಮಸ್ಥಳದ ಭಕ್ತರು ಹಾಗೂ ಹೆಗ್ಗಡೆ ಅವರ ಅಭಿಮಾನಿಗಳು ಬೆಳ್ತಂಗಡಿಯಲ್ಲಿ ಸೋಮವಾರ ಸಮಾಲೋಚನೆ ನಡೆಸಿ ಈ ತೀರ್ಮಾನ ಕೈಗೊಂಡರು. ‘ಷಡ್ಯಂತ್ರಕ್ಕೆ ಕಾರಣರಾದವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು’ ಎಂದು ಆಗ್ರಹಪಡಿಸಿದರು.

ಸೆ.5ರಂದು ಸಮಾವೇಶ: ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ಧರ್ಮ ಕ್ಷೇತ್ರಗಳ ಮುಖ್ಯಸ್ಥರ ಸಮಾವೇಶವನ್ನು ಸೆ.5ರಂದು ಧರ್ಮಸ್ಥಳದಲ್ಲಿ ನಡೆಸಲಾಗುವುದು ಎಂದು ಧಾರ್ಮಿಕ ಪರಿಷತ್ ಸದಸ್ಯ ಯೋಗೀಶ ಕುಮಾರ್ ನಡಕರ, ಪೂರಣ್ ಯಶೋವರ್ಮ ಪ್ರಕಟಿಸಿದರು. ಧರ್ಮಸ್ಥಳದ ದೇವರ ಮುಂದೆ ಪ್ರಾರ್ಥನೆ ಸಲ್ಲಿಸಿ, ಮೆರವಣಿಗೆ ನಡೆಯಲಿದೆ. ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಸಂದೇಶ ನೀಡಲಿದ್ದಾರೆ ಎಂದರು.

ಸಾಕ್ಷಿ ದೂರುದಾರನ ವಿಚಾರಣೆ

ಸೆ.3ರವರೆಗೆ ಬಂಧಿತ ಎಸ್‌ಐಟಿ ವಶಕ್ಕೆ • ಯೂಟ್ಯೂಬರ್ 3 ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಬೆಳವಣಿಗೆಗೆ ಸಂಬಂಧಿಸಿದಂತೆ ಈಗ ಬಂಧಿಸಲಾಗಿರುವ, ಸಾಕ್ಷಿ ದೂರುದಾರನನ್ನು ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು ಸೋಮವಾರವೂ ವಿಚಾರಣೆಗೆ ಒಳಪಡಿಸಿದರು.

ಆತನನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿದ ಬಳಿಕ ಆತ ತಂದೊಪ್ಪಿಸಿದ್ದ ತಲೆ ಬುರುಡೆಗೆ ಸಂಬಂಧಿಸಿ ಅಧಿಕಾರಿಗಳು ಮಾಹಿತಿ ಕಲೆಹಾಕಿದರು. ಧರ್ಮಸ್ಥಳ ಗ್ರಾಮದಲ್ಲಿ ಸಾಕ್ಷಿ ದೂರುದಾರ ತೋರಿಸಿದ್ದ ಜಾಗಗಳಲ್ಲಿ ನಡೆದ ಶೋಧಕಾರ್ಯದ ದಾಖಲೀಕರಣ ಪ್ರಕ್ರಿಯೆಯೂ ಮುಂದುವರಿಯಿತು.

ಬಂಧಿತನನ್ನು ದೂರುದಾರನನ್ನು ಬೆಳ್ತಂಗಡಿ ಜೆಎಂಎಫ್‌ಸಿ ನ್ಯಾಯಾಲಯ ಸೆ.3ರವರೆಗೆ ಎಸ್‌ಐಟಿ ಕಸ್ಟಡಿಗೆ ಒಪ್ಪಿಸಿದೆ.

ಯೂಟ್ಯೂಬರ್ ವಿಚಾರಣೆ: ಧರ್ಮಸ್ಥಳದ ಬೆಳವಣಿಗೆ ಕುರಿತು ವಿಡಿಯೊವನ್ನು ಪ್ರಸಾರ ಮಾಡಿದ್ದ ಪ್ರಕರಣ ಸೇರಿ ‘ದೂತ’ ಯೂಟ್ಯೂಬ್ ಚಾನೆಲ್‌ನ ಎಂ.ಡಿ. ಸಮೀರ್ ವಿಚಾರಣೆ ಸೋಮವಾರವೂ ಮುಂದುವರಿಯಿತು. ಈತನ ವಿರುದ್ಧ ದಕ್ಷಿಣ ಕನ್ನಡ ಜಿಲ್ಲೆಯ ಠಾಣೆಗಳಲ್ಲಿ ಒಟ್ಟು ಮೂರು ಪ್ರಕರಣಗಳು ದಾಖಲಾಗಿವೆ.

ಮಧ್ಯಾಹ್ನ 12 ಗಂಟೆ ಸುಮಾರಿಗೆ ಠಾಣೆಗೆ ವಕೀಲರ ಜೊತೆ ಹಾಜರಾದ ಸಮೀರ್ ರಾತ್ರಿವರೆಗೂ ಅಲ್ಲೇ ಇದ್ದರು. ವಿಡಿಯೊ ಪ್ರಸಾರ ಮಾಡಿದ ಎರಡು ಪ್ರಕರಣಗಳ ವಿಚಾರಣೆಯನ್ನು ಬೆಳ್ತಂಗಡಿ ವೃತ್ತ ನಿರೀಕ್ಷಕ ನಾಗೇಶ್ ಕದ್ರಿಯವರು ಹಾಗೂ ಉಜಿರೆ ಬೆನಕ ಆಸ್ಪತ್ರೆ ಬಳಿ ನಡೆದ ಗಲಾಟೆಗೆ ಸಂಬಂಧಿಸಿದ ಪ್ರಕರಣದ ವಿಚಾರಣೆಯನ್ನು ಬೆಳ್ತಂಗಡಿ ಇನ್‌ಸ್ಪೆಕ್ಟರ್ ಸುಬ್ಬಾಪುರ ಮಠ ಅವರು ನಡೆಸುತ್ತಿದ್ದಾರೆ.

ಜಯಂತ್ ವಿಚಾರಣೆಗೆ ಹಾಜರು: ಮಹೇಶ್ ಶೆಟ್ಟಿ ತಿಮರೋಡಿ ಬಂಧನದ ವೇಳೆ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ ಪ್ರಕರಣದ ವಿಚಾರಣೆಗೆ ಜಯಂತ್ ಟಿ ಬೆಳ್ತಂಗಡಿ ಠಾಣೆಗೆ ಸೋಮವಾರ ಹಾಜರಾದರು.

‘ಮಹೇಶ್ ಶೆಟ್ಟಿ ವಿರುದ್ಧ ದಾಖಲಾದ ಪ್ರಕರಣ ಸಂಬಂಧ ವಿಚಾರಣೆಗೆ ಗುರುವಾರ 9 ಗಂಟೆಗೆ ಹಾಜರಾಗಲು ಉಡುಪಿ ಜಿಲ್ಲೆಯ ಬ್ರಹ್ಮಾವರ ಠಾಣೆಯವರು ನೋಟಿಸ್ ನೀಡಿದ್ದರು. ನಾವು ಠಾಣೆಗೆ ಹೋಗಿದ್ದೇವೆ. ಸೌಜನ್ಯಾಗೆ ಜೈಕಾರ ಹಾಕಿ, ಒಳ್ಳೆ ರೀತಿಯಲ್ಲೇ ತೆರಳಿದ್ದೇವೆ. ಆದರೂ ನಮ್ಮ ವಿರುದ್ಧವೇ ಪ್ರಕರಣ ದಾಖಲಿಸಿದ್ದಾರೆ. ಅದರ ಉದ್ದೇಶ ಗೊತ್ತಿಲ್ಲ’ ಎಂದು ಜಯಂತ್ ಟಿ. ಸುದ್ದಿಗಾರರಿಗೆ ತಿಳಿಸಿದರು.

ಅಮೆರಿಕ ಪ್ರವಾಸಕ್ಕೆ ಅನುಚೇತ್

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯ ಪ್ರಕರಣಗಳ ತನಿಖೆಗೆ ರಾಜ್ಯ ಸರ್ಕಾರ ರಚಿಸಿದ್ದ ವಿಶೇಷ ತನಿಖಾ ತಂಡದ (ಎಸ್‌ಐಟಿ) ಸದಸ್ಯ, ಪೊಲೀಸ್ ನೇಮಕಾತಿ ವಿಭಾಗದ ಡಿಐಜಿ ಎಂ.ಎನ್. ಅನುಚೇತ್ ಅವರು ಅಮೆರಿಕ ಪ್ರವಾಸಕ್ಕೆ ತೆರಳಿದ್ದಾರೆ. ಪ್ರಕರಣದ ತನಿಖೆಯ ಮಧ್ಯೆಯೇ ಅವರು ಪ್ರವಾಸಕ್ಕೆ ಹೋಗಿದ್ದಾರೆ ಎಂದು ಗೊತ್ತಾಗಿದೆ.

ಎಂ.ಎನ್. ಅನುಚೇತ್

ರಾಜ್ಯ ಸರ್ಕಾರವು ಆಗಸ್ಟ್ 19ರಿಂದ 31ರವರೆಗೆ ವೇತನ ಸಹಿತ ರಜೆಯನ್ನು ಮಂಜೂರು ಮಾಡಿದ್ದು, ಅನುಚೇತ್ ಅವರು ಆಗಸ್ಟ್ 18ರಿಂದ ಆರಂಭವಾಗಿರುವ ‘ಇಂಟೆಲಿಜೆಂಟ್ ಟ್ರಾನ್ಸ್‌ಪೋರ್ಟೇಷನ್ ಸೊಸೈಟಿ ಆಫ್ ಅಮೆರಿಕ ವರ್ಲ್ಡ್ ಕಾಂಗ್ರೆಸ್-2025’ರಲ್ಲಿ ಭಾಗವಹಿಸಲು ತೆರಳಿದ್ದಾರೆ ಎಂದು ಗೊತ್ತಾಗಿದೆ. ವೇತನ ಸಹಿತ ರಜೆ ಮಂಜೂರು ಮಾಡುವಂತೆ ಕೋರಿ, ಅನುಚೇತ್ ಅವರು ಜುಲೈ 16ರಂದು ಮನವಿ ಸಲ್ಲಿಸಿದ್ದರು. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಸೂಚನೆಯ ಮೇರೆಗೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಯವರು ಆಗಸ್ಟ್ 1ರಂದೇ ಪ್ರವಾಸಕ್ಕೆ ಅನುಮತಿ ನೀಡಿ ಆದೇಶ ಹೊರಡಿಸಿದ್ದರು. ಅನುಚೇತ್ ಅವರು ಆಗಸ್ಟ್ 18ರಂದೇ ಅಮೆರಿಕಕ್ಕೆ ತೆರಳಿದ್ದಾರೆ. ಸೆ.3 ಅಥವಾ 4ರಂದು ವಾಪಸ್ ಬರುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಧರ್ಮಸ್ಥಳ: ಬುಗಡಿ ವಿರುದ್ಧ ಏಳು ಪ್ರಕರಣ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಧರ್ಮಸ್ಥಳ ಪ್ರಕರಣಗಳ ಸಂಬಂಧ ಗಿರೀಶ ಮಟ್ಟೆಣ್ಣವರ ಅವರು ಮಾನವ ಹಕ್ಕು ಅಧಿಕಾರಿ ಎಂದು ಪರಿಚಯಿಸಿದ್ದ ಮದನ ಬುಗಡಿ ವಿರುದ್ಧ ಹುಬ್ಬಳ್ಳಿಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಕೊಲೆ ಸೇರಿ ಏಳು ಪ್ರಕರಣಗಳು ದಾಖಲಾಗಿವೆ’ ಎಂದು ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದರು.

‘ಹಳೇ ಹುಬ್ಬಳ್ಳಿಯಲ್ಲಿ ಐದು, ಕೇಶ್ವಾಪುರ ಹಾಗೂ ಹುಬ್ಬಳ್ಳಿ ಗ್ರಾಮೀಣ ಠಾಣೆಯಲ್ಲಿ ತಲಾ ಒಂದು ಪ್ರಕರಣ ದಾಖಲಾಗಿದೆ’ ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

ಮಂಡ್ಯ ಮತ್ತು ಮೈಸೂರಿನಿಂದ ಧರ್ಮಸ್ಥಳಕ್ಕೆ ಬಂದಿದ್ದ ಜೆಡಿಎಸ್ ಮುಖಂಡರು, ಭಕ್ತರು ವೀರೇಂದ್ರ ಹೆಗ್ಗಡೆ ಅವರನ್ನು ಭೇಟಿಯಾದರು

ಧರ್ಮಸ್ಥಳದತ್ತ ಮುಖಂಡರ ‘ಯಾತ್ರೆ’

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): ಧರ್ಮಸ್ಥಳ ಕ್ಷೇತ್ರ ಹಾಗೂ ವೀರೇಂದ್ರ ಹೆಗ್ಗಡೆ ಅವರನ್ನು ಬೆಂಬಲಿಸಿ ಮೈಸೂರು, ಮಂಡ್ಯ ಜಿಲ್ಲೆಗಳ ಜೆಡಿಎಸ್ ಮುಖಂಡರು, ಭಕ್ತರು ಸೋಮವಾರ ಧರ್ಮಸ್ಥಳ ಯಾತ್ರೆ ಕೈಗೊಂಡಿದ್ದರು.

ಜೆಡಿಎಸ್ ಕಾರ್ಯಾಧ್ಯಕ್ಷ ಸಾ.ರಾ.ಮಹೇಶ್, ಮಂಡ್ಯ ಮಾಜಿ ಸಂಸದ ಸಿ.ಎಸ್. ಪುಟ್ಟರಾಜು ನೇತೃತ್ವದಲ್ಲಿ ಕಾರುಗಳಲ್ಲಿ ಬಂದಿದ್ದ ಇವರು, ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರನ್ನು ಭೇಟಿಯಾದರು.

‘ಧರ್ಮಸ್ಥಳದ ಘನತೆ, ಗೌರವ ಕಾಪಾಡಲು ನಾವೆಲ್ಲರೂ ಸದಾ ಬದ್ಧರಾಗಿದ್ದೇವೆ’ ಎಂದು ಭರವಸೆ ನೀಡಿದರು. ದೇವರ ದರ್ಶನ ಮಾಡಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಪಾದಯಾತ್ರಿಗಳ ಸಂಘ: ಬೆಂಗಳೂರಿನ ಪಾದಯಾತ್ರಿಗಳ ಸಂಘದ ಸ್ಥಾಪಕ ಅಧ್ಯಕ್ಷ ಹನುಮಂತಪ್ಪ ಗುರೂಜಿ ನೇತೃತ್ವದಲ್ಲಿ ಭಕ್ತರು ಸೋಮವಾರ ನೇತ್ರಾವತಿ ಸ್ನಾನಘಟ್ಟದಿಂದ ದೇವಸ್ಥಾನದವರೆಗೆ ಶಿವಪಂಚಾಕ್ಷರಿ ಮಂತ್ರ ಪಠಣದೊಂದಿಗೆ ಪಾದಯಾತ್ರೆ ನಡೆಸಿದರು.

ದೇವರ ದರ್ಶನ, ಸಾಮೂಹಿಕ ಪ್ರಾರ್ಥನೆ ಬಳಿಕ ಧರ್ಮಾಧಿಕಾರಿ ಅವರನ್ನು ಭೇಟಿಯಾದರು.

ವೀರೇಂದ್ರ ಹೆಗ್ಗಡೆ ಭೇಟಿ: ಮಂಗಳೂರು, ಮೂಡುಬಿದಿರೆ, ಬಂಟ್ವಾಳ, ಸುರತ್ಕಲ್, ಉಳ್ಳಾಲ ಹಾಗೂ ಬೆಳ್ತಂಗಡಿ ತಾಲ್ಲೂಕುಗಳಿಂದ ಭಕ್ತರು ಹಾಗೂ ಅಭಿಮಾನಿಗಳು ಸ್ಥಳೀಯ ಜನಪ್ರತಿನಿಧಿಗಳೊಂದಿಗೆ ಸೋಮವಾರ ಧರ್ಮಸ್ಥಳಕ್ಕೆ ಬಂದು ಹೆಗ್ಗಡೆ ಅವರನ್ನು ಭೇಟಿಯಾದರು.

‘ದೇವರ ಅನುಗ್ರಹದಿಂದ ಸತ್ಯದ ಅನಾವರಣ ಆಗುತ್ತಿರುವುದು ಸಂತಸ ತಂದಿದೆ. ಭಕ್ತರ ಪ್ರೋತ್ಸಾಹದಿಂದ ಎಲ್ಲ ಸೇವಾ ಕಾರ್ಯಗಳನ್ನು ಮುಂದುವರಿಸುವ ಉತ್ಸಾಹ ಮೂಡಿದೆ
ಡಿ.ವೀರೇಂದ್ರ ಹೆಗ್ಗಡೆ
ಧರ್ಮಾಧಿಕಾರಿ

ಮುಸುಕು ಹಾಕಿಸಿದ್ದೇ ಸರ್ಕಾರ: ಅಶೋಕ

ಹೊಸಪೇಟೆ (ವಿಜಯನಗರ): ‘ಸಾಕ್ಷಿ ದೂರುದಾರನಿಗೆ ಮುಸುಕು ಹಾಕಿಸಿದ್ದೇ ರಾಜ್ಯ ಸರ್ಕಾರ. ಇದರ ಹಿಂದೆ ಮುಖ್ಯಮಂತ್ರಿ ಅವರಿಗೆ ನಿಕಟರಾದ ಪ್ರಗತಿಪರರು ಇದ್ದಾರೆ. ಬುರುಡೆ ಕಥೆ ಹೊರ ಬಂದ ಬಳಿಕ ಪ್ರಗತಿಪರರು ಕಾಣೆಯಾಗಿದ್ದಾರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದರು.

ಆರ್. ಅಶೋಕ

‘ಧರ್ಮಸ್ಥಳ ವಿಷಯದ ಹಿಂದೆ ಉತ್ತಮ ಆದಾಯ ಬರುವ ಹಿಂದೂ ದೇವಾಲಯಗಳನ್ನು ಮುಜರಾಯಿ ಇಲಾಖೆಗೆ ಸೇರಿಸುವ ಯತ್ನ ನಡೆದಿದೆ’ ಎಂದು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

ಶಾಸಕ ಅರವಿಂದ ಬೆಲ್ಲದ ಅವರು, ‘ಮುಸುಕುಧಾರಿ ಹೇಳಿದಂತೆ ಕೇಳಿದ್ದೇ ತಪ್ಪು. ಹಿಂದೂಗಳ ದೇವಸ್ಥಾನ, ಅದನ್ನು ನಡೆಸುವವರ ಮೇಲೆ ಶ್ರದ್ಧೆ ಕುಗ್ಗಿಸಲು ಪ್ರಯತ್ನ ನಡೆದಂತಿದೆ’ ಎಂದರು.

‘ಧರ್ಮಸ್ಥಳ ಚಲೊ’ ಸೆ.1ಕ್ಕೆ

ಬೃಹತ್ ಸಮಾವೇಶದಲ್ಲಿ ಎನ್‌ಐಎ ತನಿಖೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮಸ್ಥಳದಲ್ಲಿ ನೂರಾರು ಶವಗಳನ್ನು ಹೂತು ಹಾಕಲಾಗಿದೆ ಎನ್ನಲಾದ ಆರೋಪದ ಸಂಪೂರ್ಣ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ಒಪ್ಪಿಸಬೇಕು ಎಂದು ಸರ್ಕಾರವನ್ನು ಆಗ್ರಹಿಸಲು ಸೆ.1ರಂದು ‘ಧರ್ಮಸ್ಥಳ ಚಲೊ’ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು..

ರಾಜ್ಯ ಸರ್ಕಾರವೇ ಎನ್‌ಐಎ ತನಿಖೆಗೆ ಒಪ್ಪಿಸಿದರೆ ಜನರು ಮತ್ತು ಭಕ್ತರಿಗೆ ಸರ್ಕಾರದ ಬಗ್ಗೆ ವಿಶ್ವಾಸ ಮೂಡಲಿದೆ ಎಂದು ಅವರು ಸೋಮವಾರ ಸುದ್ದಿ-ಗೋಷ್ಠಿಯಲ್ಲಿ ತಿಳಿಸಿದರು.

ಧರ್ಮಸ್ಥಳದ ಬಗ್ಗೆ ಅಪಪ್ರಚಾರ ನಡೆಸಲು ಅವಕಾಶ ನೀಡಿ ಹಿಂದೂಗಳ ಭಾವನೆಗೆ ಧಕ್ಕೆ ತಂದ ಸರ್ಕಾರದ ಕಿವಿ ಹಿಂಡುವ ಕೆಲಸ ಆಗಬೇಕಿದೆ. ಹೀಗಾಗಿ ಧರ್ಮಸ್ಥಳದಲ್ಲಿ ಸೆ.1 ರ ಮಧ್ಯಾಹ್ನ 2ಕ್ಕೆ ನಡೆಯುವ ಬೃಹತ್ ಸಮಾವೇಶದಲ್ಲಿ ಸಮಸ್ತ ಹಿಂದೂ ಸಮಾಜ ಪಾಲ್ಗೊಳ್ಳಬೇಕು ಎಂದರು.

ರಾಜ್ಯದ ಪ್ರತಿ ವಿಧಾನಸಭಾ ಕ್ಷೇತ್ರದಿಂದಲೂ ದೊಡ್ಡ ಸಂಖ್ಯೆಯಲ್ಲಿ ಹಿಂದೂಗಳು ಭಾಗವಹಿಸಲಿದ್ದಾರೆ. ಧರ್ಮಸ್ಥಳಕ್ಕೆ ಹೊರಡುವ ದಿನ ಹಿಂದೂ ಸಮಾಜದವರು ತಮ್ಮ ನಗರ ಮತ್ತು ಗ್ರಾಮಗಳಲ್ಲಿ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿ, ಸ್ಥಳೀಯವಾಗಿ ಮೆರವಣಿಗೆ ಮಾಡಬೇಕು ಎಂದು ಹೇಳಿದರು.

‘ಧರ್ಮಸ್ಥಳದ ಘಟನೆಯಿಂದ ಸರ್ಕಾರಕ್ಕೆ ಕಳಂಕ ಬಂದಿದೆ. ಆ ಕಳಂಕದಿಂದ ಹೊರಗೆ ಬರಬೇಕಾಗಿದೆ. ಈ ದುಷ್ಕೃತ್ಯದ ಹಿಂದೆ ಇರುವ ಸಂಘಟನೆಗಳು, ದುಷ್ಟ ಶಕ್ತಿಗಳ ಬಗ್ಗೆ ಸಮರ್ಪಕ ತನಿಖೆ ಆಗಬೇಕಾಗಿದೆ. ಈ ದುಷ್ಟ ಶಕ್ತಿಗಳು ಬೇರೆ ಹಿಂದೂ ದೇವಸ್ಥಾನಗಳ ವಿರುದ್ಧವೂ ಷಡ್ಯಂತ್ರ ಮಾಡಬಹುದು. ಧರ್ಮಸ್ಥಳದ ವಿರುದ್ಧ ಮುಖ್ಯಮಂತ್ರಿ ಆತುರ ತೋರಿದ್ದೇಕೆ ಎಂಬುದು ಒಗಟಾಗಿಯೇ ಉಳಿದಿದೆ’ ಎಂದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ದೇವರ ಮೇಲೆ ಎಷ್ಟು ನಂಬಿಕೆ ಇದೆ? ಧರ್ಮಸ್ಥಳದ ಮಂಜುನಾಥೇಶ್ವರ, ಅಣ್ಣಪ್ಪ ಸ್ವಾಮಿಯ ಬಗ್ಗೆ ಎಷ್ಟು ಶ್ರದ್ಧೆ ಇದೆ ಎಂಬುದರ ಕುರಿತು ನನಗೆ ಮಾಹಿತಿ ಇಲ್ಲ. ಆದರೆ, ಮಂಜುನಾಥೇಶ್ವರ, ಅಣ್ಣಪ್ಪ ಸ್ವಾಮಿಗೆ ಕೋಟ್ಯಂತರ ಭಕ್ತರಿದ್ದಾರೆ. ಈ ಭಕ್ತರಿಗೆ ಧರ್ಮಸ್ಥಳ ಒಂದು ಪವಿತ್ರಕ್ಷೇತ್ರ. ಅದು ಒಂದು ಮಂದಿರವಲ್ಲ, ಅದೊಂದು ಶ್ರದ್ಧೆ ಎನ್ನುವುದು ಮುಖ್ಯಮಂತ್ರಿಯವರಿಗೆ ತಿಳಿದಿರುವುದಾಗಿ ಭಾವಿಸಿದ್ದೇನೆ’ ಎಂದು ಹೇಳಿದರು.

ಸಂಸದ ತೇಜಸ್ವಿ ಸೂರ್ಯ ಅವರು ಸೋಮವಾರ ಬೆಂಗಳೂರಿನ ನೈಸ್ ರಸ್ತೆಯ ಬಳಿ ‘ಧರ್ಮದ ಉಳಿವಿಗಾಗಿ ಧರ್ಮ ಯುದ್ಧ’ ಅಭಿಯಾನಕ್ಕೆ ಚಾಲನೆ ನೀಡಿದರು. ಶಾಸಕ ಸಿ.ಕೆ.ರಾಮಮೂರ್ತಿ ಮತ್ತು ಇತರರು ಇದ್ದರು

ಎಸ್‌ಐಟಿ ರಚನೆಗೆ ಸೂಚಿಸಿದ ದೆಹಲಿ ನಾಯಕ ಯಾರು: ತೇಜಸ್ವಿ ಸೂರ್ಯ

‘ಧರ್ಮಸ್ಥಳದ ವಿಚಾರದಲ್ಲಿ ದೆಹಲಿಯ ನಾಯಕರು ಹೇಳಿದ ತಕ್ಷಣ ಎಸ್‌ಐಟಿ ರಚನೆ ಮಾಡಿದ್ದೀರಿ ಎಂಬುದು ಸತ್ಯ. ಆ ನಾಯಕ ಯಾರು’ ಎಂದು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಪ್ರಶ್ನಿಸಿದರು.

‘ಧರ್ಮದ ಉಳಿವಿಗಾಗಿ ಧರ್ಮ ಯುದ್ಧ’ ಅಭಿಯಾನದ ಕಾರ್ಯ-ಕ್ರಮದಲ್ಲಿ ಅವರು ಭಾಗವಹಿಸಿ ಮಾತನಾಡಿದರು. ಜಯನಗರ ಶಾಸಕ ಸಿ.ಕೆ.ರಾಮಮೂರ್ತಿ ಕಾರ್ಯಕ್ರಮ ಆಯೋಜಿಸಿದ್ದರು.

‘ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ನಡೆದಿದೆ. ಈ ಪ್ರಕರಣದ ಬಗ್ಗೆ ಸಿಬಿಐ ತನಿಖೆ ನಡೆಯಬೇಕಿದೆ. ಯೂಟ್ಯೂಬ್ ವಿಡಿಯೊಗಳ ಮೂಲಕ ಅಪಪ್ರಚಾರ ನಡೆಸಿದವರ ಪರ 10 ವಕೀಲರು ಬರುತ್ತಾರೆ. ₹5 ಲಕ್ಷದಿಂದ ₹10 ಲಕ್ಷ ತೆಗೆದುಕೊಳ್ಳುವ ಈ ವಕೀಲರು ಅವರ ಪರ ನಿಲ್ಲುತ್ತಿದ್ದಾರೆ. ಮುಖ್ಯಮಂತ್ರಿಯವರೇ ಈ ವಕೀಲರ ಬೆಂಬಲಕ್ಕೆ ನಿಂತಿದ್ದಾರೆ’ ಎಂದು ದೂರಿದರು.

ಸಿಇಟಿ ಎರಡನೇ ಸುತ್ತು: ಮುಂಗಡ ಪಾವತಿಗೆ ಇಂದೇ ಕೊನೆ ದಿನ

ಬೆಂಗಳೂರು: ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಎರಡನೇ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆ ಆರಂಭವಾಗಿದ್ದು, ಅರ್ಹ ವಿದ್ಯಾರ್ಥಿಗಳಿಗೆ ಮುಂಗಡ ಪಾವತಿಸಲು ಮತ್ತು ಆಯ್ಕೆಗಳನ್ನು ಬದಲಿಸಿಕೊಳ್ಳಲು/ತೆಗೆದುಹಾಕಲು ಆಗಸ್ಟ್ 26ರಂದು ಮಧ್ಯಾಹ್ನ 1 ಗಂಟೆವರೆಗೆ ಕಾಲಾವಕಾಶ ನೀಡಲಾಗಿದೆ.

ಮೊದಲ ಸುತ್ತಿನಲ್ಲಿ ಹಂಚಿಕೆಯಾದ ಸೀಟುಗಳನ್ನು ರದ್ದುಪಡಿಸಿಕೊಳ್ಳಲು ಕೂಡ ಆಗಸ್ಟ್ 26ರ ಬೆಳಿಗ್ಗೆ 11 ಗಂಟೆವರೆಗೆ ಅವಕಾಶ ನೀಡಲಾಗಿದೆ. ಎರಡನೇ ಸುತ್ತಿನ ಅಣಕು/ ತಾತ್ಕಾಲಿಕ ಸೀಟು ಹಂಚಿಕೆಯ ಫಲಿತಾಂಶವನ್ನು ಆಗಸ್ಟ್ 29ರಂದು ಮಧ್ಯಾಹ್ನ 1 ಗಂಟೆ ನಂತರ ಪ್ರಕಟಿಸಲಾಗುತ್ತದೆ. ಅಂತಿಮ ಫಲಿತಾಂಶದ ದಿನಾಂಕವನ್ನು ನಂತರ ತಿಳಿಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಎಂಜಿನಿಯರಿಂಗ್, ಆರ್ಕಿಟೆಕ್ಚರ್, ಕೃಷಿ ವಿಜ್ಞಾನ, ಪಶುವೈದ್ಯಕೀಯ, ಫಾರ್ಮಸಿ, ಬಿಎಸ್ಸಿ ನರ್ಸಿಂಗ್, ಯೋಗ- ನ್ಯಾಚುರೋಪಥಿ, ಬಿಪಿಟಿ, ಬಿಪಿಒ, ಅಲೈಡ್ ಹೆಲ್ತ್ ಸೈನ್ಸ್ ಇತ್ಯಾದಿ ಯುಜಿಸಿಇಟಿ ಕೋರ್ಸ್‌ಗಳಿಗೆ ಎರಡನೇ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶದ ನಂತರ ಅಭ್ಯರ್ಥಿಗಳು ಛಾಯ್ಸ್- 1 ಅಥವಾ ಛಾಯ್ಸ್-4 ಆಯ್ಕೆ ಮಾಡಿಕೊಳ್ಳಬಹುದು. ಛಾಯ್ಸ್-2 ಮತ್ತು 3 ಲಭ್ಯವಿರುವುದಿಲ್ಲ ಎಂದು ಅವರು ತಿಳಿಸಿದ್ದಾರೆ.

‘ಎನ್‌ಐಎ ತನಿಖೆ ಅಗತ್ಯವಿಲ್ಲ’

ಧರ್ಮಸ್ಥಳ ಪ್ರಕರಣ: ಗೃಹ ಸಚಿವ ಜಿ.ಪರಮೇಶ್ವರ

ಪ್ರಜಾವಾಣಿ ವಾರ್ತೆ

ಮೈಸೂರು: ‘ಧರ್ಮಸ್ಥಳ ಪ್ರಕರಣದ ತನಿಖೆಯನ್ನು ಹೀಗೆಯೇ ಮಾಡಿ ಎಂದು ಹೇಳಲಾಗದು. ಹೇಗೆ ಮಾಡಬೇಕೆಂಬುದನ್ನು ಪೊಲೀಸರು ನಿರ್ಧರಿಸುತ್ತಾರೆ. ಪ್ರಕರಣವನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ವಹಿಸುವ ಅಗತ್ಯವಿಲ್ಲ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಹೇಳಿಕೆ ನೀಡುವುದರಿಂದ ಸತ್ಯ ಹೊರಬರುವುದಿಲ್ಲ. ಹೇಳಿಕೆ ನೀಡುವುದನ್ನು ನಿಲ್ಲಿಸಲಿ. ದೂರುದಾರನ ಮಂಪರು ಪರೀಕ್ಷೆ ಬೇಕೋ? ಬೇಡವೋ ಎಂಬುದನ್ನು ನಾನು ನಿರ್ಧರಿಸಲಾಗದು. ಎಸ್‌ಐಟಿ ಸರಿಯಾಗಿಯೇ ತನಿಖೆ ಮಾಡುತ್ತಿದೆ. ಆದಷ್ಟು ಬೇಗ ತನಿಖೆ ಮುಗಿಸಿ ಎಂದು ಹೇಳಿದ್ದೇನೆ’ ಎಂದರು.

‘ಧರ್ಮಸ್ಥಳ ರ‍್ಯಾಲಿ’ ಕುರಿತ ಪ್ರಶ್ನೆಗೆ, ‘ಅವರೆಲ್ಲಾ ಮಂಜುನಾಥನ ದರ್ಶನಕ್ಕೆ ಹೋಗುತ್ತಿರಬೇಕು. ಹೋಗುವವರನ್ನು ತಡೆಯಲು ಸಾಧ್ಯವೇ? ಈ ಪ್ರಕರಣದಲ್ಲಿ ಯಾರೂ ರಾಜಕೀಯ ಮಾಡಬಾರದು’ ಎಂದರು.

‘ಆರ್‌ಎಸ್‌ಎಸ್ ವಿಚಾರದಲ್ಲಿ ಡಿ.ಕೆ. ಶಿವಕುಮಾರ್ ನೀಡಿರುವ ಹೇಳಿಕೆ, ಅದಕ್ಕೆ ಕೆ.ಎನ್.ರಾಜಣ್ಣ ಪ್ರತಿಕ್ರಿಯೆ ಸೇರಿದಂತೆ ಯಾವ ಹೇಳಿಕೆಗೂ ನಾನು ಉತ್ತರಿಸುವುದಿಲ್ಲ’ ಎಂದರು.

‘ಗೃಹ ಇಲಾಖೆಯಲ್ಲಿ ಲಂಚಾವತಾರವಿದೆ’ ಎಂಬ ಜೆಡಿಎಸ್ ಮುಖಂಡ ಸಾ.ರಾ.ಮಹೇಶ್ ಆರೋಪಕ್ಕೆ, ‘ಯಾರು ಹಣ ಪಡೆದರು, ಕೊಟ್ಟರು ಎಂಬ ಬಗ್ಗೆ ದೂರು ನೀಡಿದರೆ ತನಿಖೆ ಮಾಡಲಾಗುವುದು’ ಎಂದರು.

ನಿಧನ ವಾರ್ತೆ

ನಟ ದಿನೇಶ್ ಮಂಗಳೂರು

ಕುಂದಾಪುರ (ಉಡುಪಿ): ಪೋಷಕ ನಟ, ಕಲಾ ನಿರ್ದೇಶಕ ದಿನೇಶ್ ಮಂಗಳೂರು (63) ಅವರು ಸೋಮವಾರ ಬೆಳಿಗ್ಗೆ ಇಲ್ಲಿಗೆ ಸಮೀಪದ ಕೋಟೇಶ್ವರದ ಆಸ್ಪತ್ರೆಯಲ್ಲಿ ನಿಧನರಾದರು.

ದಿನೇಶ್ ಮಂಗಳೂರು

ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ಸಂಪೆಕಟ್ಟೆಯ ದಿನೇಶ್ ಕೆ.ವಿ. ಪೈ ಅವರು ಸ್ಯಾಂಡಲ್‌ವುಡ್‌ನಲ್ಲಿ ಪೋಷಕ ನಟರಾಗಿ ದಿನೇಶ್ ಮಂಗಳೂರು ಎಂದು ಹೆಸರಾಗಿದ್ದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ.

‘ಉಳಿದವರು ಕಂಡಂತೆ’, ‘ಕೆಜಿಎಫ್’, ‘ಕಿಚ್ಚ’, ‘ಕಿರಿಕ್ ಪಾರ್ಟಿ’, ‘ನಾಗಮಂಡಲ’, ‘777 ಚಾರ್ಲಿ’ ಮುಂತಾದ ಸಿನಿಮಾಗಳಲ್ಲಿ ನಟಿಸಿದ್ದರು. ಹಲವು ಚಿತ್ರಗಳಿಗೆ ಕಲಾ ನಿರ್ದೇಶನ ಮಾಡಿದ್ದರು.

ಹಲವು ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಇಲ್ಲಿನ ಸರ್ಜನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅದಕ್ಕಾಗಿ ಸಮೀಪದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. 15 ದಿನಗಳಿಂದ ಆರೋಗ್ಯ ತೀವ್ರ ಹದಗೆಟ್ಟಿದ್ದು, ಆಸ್ಪತ್ರೆಗೆ ಸೇರಿಸಲಾಗಿತ್ತು. ಮೃತದೇಹವನ್ನು ಬೆಂಗಳೂರಿಗೆ ಒಯ್ಯಲಾಯಿತು.

ಮಂಗಳವಾರ, ಆಗಸ್ಟ್ 26, 2025 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಹೋರಾಟ

ಸಂಯುಕ್ತ ಕಿಸಾನ್ ಮೋರ್ಚಾವು ದೆಹಲಿಯಲ್ಲಿ ಆಯೋಜಿಸಿದ್ದ 'ಕಿಸಾನ್ ಮಹಾಪಂಚಾಯತ್'ನಲ್ಲಿ ಭಾಗಿಯಾಗಿದ್ದ ರೈತ ಮಹಿಳೆ

ಮೀರಾ ಮುಡಿಗೆ ಚಿನ್ನ

ಭಾರತದ ಮೀರಾಬಾಯಿ ಚಾನು ಅವರು ಅಹಮದಾಬಾದಿನಲ್ಲಿ ಸೋಮವಾರ ನಡೆದ ಕಾಮನ್‌ವೆಲ್ತ್ ವೇಟ್‌ಲಿಫ್ಟಿಂಗ್‌ನ ಮಹಿಳೆಯರ 48 ಕೆ.ಜಿ. ವಿಭಾಗದಲ್ಲಿ ಚಿನ್ನ ಗೆದ್ದರು

ಜೆ.ಜೆ.ಪೆರ್ರಿ, ಯಶ್ ಹಾಗೂ ಗೀತು ಮೋಹನ್‌ದಾಸ್

ಭರ್ಜರಿಯಾಗಿರಲಿದೆ ಟಾಕ್ಸಿಕ್ ಆ್ಯಕ್ಷನ್ಸ್

ನಟ ಯಶ್ ನಟನೆಯ 19ನೇ ಸಿನಿಮಾ 'ಟಾಕ್ಸಿಕ್' 2026ರ ಮಾರ್ಚ್ 19ರಂದು ತೆರೆಕಾಣಲಿದೆ. ಗೀತು ಮೋಹನ್‌ದಾಸ್ ನಿರ್ದೇಶನದ ಈ ಸಿನಿಮಾದ ಮುಖ್ಯವಾದ ಸಾಹಸ ದೃಶ್ಯಗಳ ಚಿತ್ರೀಕರಣವನ್ನು ಇದೀಗ ಚಿತ್ರತಂಡ ಆರಂಭಿಸಿದೆ.

ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಏಕಕಾಲದಲ್ಲಿ ಚಿತ್ರೀಕರಣಗೊಳ್ಳುತ್ತಿರುವ ಈ ಸಿನಿಮಾವು ಹಿಂದಿ, ತಮಿಳು, ತೆಲುಗು, ಮಲಯಾಳ ಸೇರಿದಂತೆ ಹಲವು ಭಾರತೀಯ ಹಾಗೂ ವಿದೇಶಿ ಭಾಷೆಗಳಲ್ಲಿ ಡಬ್ ಆಗಿ ರಿಲೀಸ್ ಆಗಲಿದೆ. ಹಾಲಿವುಡ್‌ನ 'ಜಾನ್ ವಿಕ್', 'ಫಾಸ್ಟ್ ಆ್ಯಂಡ್ ಫ್ಯೂರಿಯಸ್', 'ವಾರಿಯರ್' ಮುಂತಾದ ಸಿನಿಮಾಗಳಿಗೆ ಸಾಹಸ ನಿರ್ದೇಶಕರಾಗಿ ಕೆಲಸ ಮಾಡಿದ್ದ ಜೆ.ಜೆ.ಪೆರ್ರಿ 'ಟಾಕ್ಸಿಕ್'ನ ಸಾಹಸ ದೃಶ್ಯಗಳ ಸಂಯೋಜನೆಯ ನೇತೃತ್ವ ವಹಿಸಿದ್ದಾರೆ.

45 ದಿನ ಸತತ ಶೂಟಿಂಗ್

ಭಾರತೀಯ ಚಿತ್ರರಂಗದ ಖ್ಯಾತ ಸಾಹಸ ತಂಡದ ಜೊತೆಗೂಡಿ ಮುಂಬೈನಲ್ಲಿ ಸತತ 45 ದಿನಗಳ ಸಾಹಸ ದೃಶ್ಯಗಳ ಚಿತ್ರೀಕರಣ ನಡೆಯಲಿದೆ. ಭಾರತೀಯ ಸಿನಿಮಾದಲ್ಲಿ ಹಿಂದೆಂದೂ ಈ ಪ್ರಮಾಣದಲ್ಲಿ ಆ್ಯಕ್ಷನ್ ಸೀಕ್ವೆನ್ಸ್‌ಗಳನ್ನು ಸೆರೆಹಿಡಿಯಲಾಗಿಲ್ಲ ಎಂದಿದೆ ಚಿತ್ರತಂಡ. ಈ ಹಿಂದಿನ ಸಾಹಸ ದೃಶ್ಯಗಳಿಗೆ ವಿದೇಶಿ ಸಾಹಸ ತಜ್ಞರನ್ನು ಕರೆತಂದಿದ್ದ ಪೆರ್ರಿ, ಭಾರತೀಯ ಸಾಹಸ ಕಲಾವಿದರ ಕೆಲಸ, ಶ್ರದ್ಧೆಯನ್ನು ಗಮನಿಸಿ ಅವರೊಂದಿಗೇ ಬಹುಮುಖ್ಯ ಭಾಗದ ಚಿತ್ರೀಕರಣ ಆರಂಭಿಸಿದ್ದಾರೆ. 'ಪ್ರಸ್ತುತ ಒಂದು ಮುಖ್ಯ ಸೀಕ್ವೆನ್ಸ್ ಶೂಟಿಂಗ್ ಮಾಡುತ್ತಿದ್ದೇವೆ. ಇದೊಂದು ಸವಾಲಾಗಿದ್ದು, ಇಂಥ ಸವಾಲು ನನಗಿಷ್ಟ' ಎಂದಿದ್ದಾರೆ ಪೆರ್ರಿ.

ಈ ನಿರ್ಣಾಯಕ ಸೀಕ್ವೆನ್ಸ್ ಅನ್ನು ಪೆರ್ರಿ, ಯಶ್, ವೆಂಕಟ್ ಕೆ.ನಾರಾಯಣ, ಗೀತು ಮೋಹನ್‌ದಾಸ್ ಹಾಗೂ ಈ ಚಿತ್ರದ ವಿಎಫ್‌ಎಕ್ಸ್ ಕೆಲಸ ಮಾಡುತ್ತಿರುವ ಡಿಎನ್‌ಇಜಿ ಸಂಸ್ಥೆ ಜೊತೆಗೂಡಿ ಯೋಜಿಸಿದೆ. 2024ರ ಆಗಸ್ಟ್‌ನಲ್ಲಿ ಈ ಚಿತ್ರದ ಚಿತ್ರೀಕರಣ ಆರಂಭವಾಗಿತ್ತು. ಬೆಂಗಳೂರಿನಲ್ಲಿ ಮೊದಲ ಹಂತದ ಚಿತ್ರೀಕರಣ ಪೂರ್ಣಗೊಳಿಸಿ ಚಿತ್ರತಂಡ ಮುಂಬೈಗೆ ಹೆಜ್ಜೆ ಇಟ್ಟಿತ್ತು. ಈ ಸಿನಿಮಾವನ್ನು ಕೆವಿಎನ್ ಪ್ರೊಡಕ್ಷನ್ಸ್ ಹಾಗೂ ಯಶ್ ಅವರ ಮಾನ್‌ಸ್ಟರ್ ಮೈಂಡ್ ಕ್ರಿಯೇಷನ್ಸ್ ನಿರ್ಮಾಣ ಮಾಡುತ್ತಿದೆ. ❖

ಜೆ.ಜೆ.ಪೆರ್ರಿ, ಯಶ್

ಆ.29ಕ್ಕೆ 'ಅಂದೊಂದಿತ್ತು ಕಾಲ' ತೆರೆಗೆ

ಅದಿತಿ ಪ್ರಭುದೇವ

ವಿನಯ್ ರಾಜ್‌ಕುಮಾರ್, ಅದಿತಿ ಪ್ರಭುದೇವ ಹಾಗೂ ನಿಶಾ ರವಿಕೃಷ್ಣನ್ ನಟಿಸಿರುವ, ಕೀರ್ತಿ ಕೃಷ್ಣ ನಿರ್ದೇಶನದ 'ಅಂದೊಂದಿತ್ತು ಕಾಲ' ಸಿನಿಮಾ ಆ.29ರಂದು ಬಿಡುಗಡೆಯಾಗಲಿದೆ.

90ರ ಕಾಲಘಟ್ಟದ ಪ್ರೇಮಕಥೆಯನ್ನು ಹೊಂದಿರುವ ಈ ಸಿನಿಮಾವನ್ನು ಭುವನ್ ಸಿನಿಮಾಸ್ ಮೂಲಕ ಭುವನ್ ಸುರೇಶ್ ನಿರ್ಮಾಣ ಮಾಡಿದ್ದಾರೆ. ಧನಂಜಯ್ ರಂಜನ್ ಸಾಹಿತ್ಯದಲ್ಲಿ ಮೂಡಿಬಂದಿರುವ ಸಿನಿಮಾದ 'ಮುಂಗಾರು ಮಳೆಯಲ್ಲಿ...' ಹಾಡು ಈಗಾಗಲೇ ಪ್ರೇಕ್ಷಕರನ್ನು ಸೆಳೆದಿದ್ದು, ಸಿದ್ ಶ್ರೀರಾಮ್ ದನಿಗೆ ಕೇಳುಗರು ಮನಸೋತಿದ್ದಾರೆ.

ಚಿತ್ರದಲ್ಲಿ ವಿನಯ್ ರಾಜ್‌ಕುಮಾರ್ ಎರಡು ಶೇಡ್‌ಗಳಲ್ಲಿ ಕಾಣಿಸಿಕೊಳ್ಳಲಿದ್ದು, ಇದೊಬ್ಬ ನಿರ್ದೇಶಕನ ಜೀವನದ ಕಥೆಯಾಗಿದೆ ಎಂದಿದೆ ಚಿತ್ರತಂಡ. ಅತಿಥಿ ಪಾತ್ರದಲ್ಲಿ ಕ್ರೇಜಿಸ್ಟಾರ್ ವಿ. ರವಿಚಂದ್ರನ್ ಅಭಿನಯಿಸಿದ್ದು, ಅರುಣಾ ಬಾಲರಾಜ್, ಜಗಪ್ಪ ಸೇರಿದಂತೆ ಅನೇಕ ಕಲಾವಿದರು ತಾರಾಬಳಗದಲ್ಲಿದ್ದಾರೆ. ಚಿತ್ರಕ್ಕೆ ಕಥೆ-ಚಿತ್ರಕಥೆಯನ್ನು ಕೀರ್ತಿ ಕೃಷ್ಣ ಅವರೇ ಬರೆದಿದ್ದು, ಬೆಂಗಳೂರು, ತೀರ್ಥಹಳ್ಳಿ ಮುಂತಾದ ಕಡೆ ಚಿತ್ರದ ಚಿತ್ರೀಕರಣ ನಡೆದಿದೆ. ಅಭಿಷೇಕ್ ಕಾಸರಗೋಡು ಛಾಯಾಚಿತ್ರಗ್ರಹಣ, ವಿ.ರಾಘವೇಂದ್ರ ಸಂಗೀತ, ಎ.ಆರ್.ಕೃಷ್ಣ, ಸುರೇಶ್ ಆರ್ಮುಗಂ ಸಂಕಲನ, ರವಿವರ್ಮ ಸಾಹಸ, ರಘು ಆರ್.ಜೆ. ನೃತ್ಯ ನಿರ್ದೇಶನ ಚಿತ್ರಕ್ಕಿದೆ. ❖

ಸೋನು ನಿಗಮ್ ಹಾಡಿಗಿಲ್ಲ ನಿರ್ಬಂಧ

ಪ್ರವೀರ್ ಶೆಟ್ಟಿ, ರಿಷಿಕಾ ನಾಯಕ್

ಗಾಯಕ ಸೋನು ನಿಗಮ್‌ಗೆ ಅಸಹಕಾರ ತೋರಲು ನಿರ್ಧರಿಸಿದ್ದ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ (ಕೆಎಫ್‌ಸಿಸಿ) ತನ್ನ ನಿರ್ಧಾರವನ್ನು ಸಡಿಲಿಸಿದೆ. 'ಸೋನು ನಿಗಮ್ ಅವರು ಸಾರ್ವಜನಿಕವಾಗಿ ಕ್ಷಮೆಯಾಚಿಸಿದ ಕಾರಣ ಅವರ ಹಾಡು ಬಳಸಿಕೊಳ್ಳಲು ಯಾವುದೇ ನಿರ್ಬಂಧವಿಲ್ಲ' ಎಂದು ಮಂಡಳಿಯ ಅಧ್ಯಕ್ಷರಾದ ಎಂ.ನರಸಿಂಹಲು ಸೋಮವಾರ(ಆ.25) ಹೇಳಿದರು.

ಸುರಾಗ್ ಸಾಗರ್ ನಿರ್ದೇಶನದ 'ನಿದ್ರಾದೇವಿ ನೆಕ್ಸ್ಟ್ ಡೋರ್' ಸಿನಿಮಾದಲ್ಲಿನ 'ನೀ ನನ್ನ ಹೊಸತನ' ಹಾಡನ್ನು ಸೋನು ನಿಗಮ್ ಹಾಡಿದ್ದು, ಈ ಹಾಡನ್ನು ಚಿತ್ರದಲ್ಲಿ ಬಳಸಿಕೊಳ್ಳಬೇಕೇ ಬೇಡವೇ ಎನ್ನುವ ಪ್ರಶ್ನೆಯನ್ನು ಚಿತ್ರದ ನಿರ್ಮಾಪಕ ಜಯರಾಮ ದೇವಸಮುದ್ರ ಕೆಎಫ್‌ಸಿಸಿ ಮುಂದೆ ಇಟ್ಟಿದ್ದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ನರಸಿಂಹಲು, 'ನಮ್ಮದೇ ನಿರ್ಮಾಪಕರು ಹಾಡು ಮಾಡಿಸಿರುವ ಕಾರಣ, ಅವರಿಗೆ ತೊಂದರೆ ಆಗಬಾರದು. ಕ್ಷಮೆ ಕೇಳಿದ ಬೆನ್ನಲ್ಲೇ ವಿವಾದವನ್ನು ಅಲ್ಲಿಗೇ ನಾವು ಕೈಬಿಟ್ಟಿದ್ದೇವೆ. ಸೋನು ನಿಗಮ್ ಹಾಡಿರುವ ಹಾಡನ್ನು ಬಳಸಿಕೊಳ್ಳಬಹುದು. ಪ್ರಸ್ತುತ ಸೋನು ನಿಗಮ್ ಮೇಲೆ ಯಾವುದೇ ನಿರ್ಬಂಧವಿಲ್ಲ. ಕ್ಷಮೆ ಕೇಳಿರುವುದಕ್ಕಿಂತ ದೊಡ್ಡದು ಬೇರೆ ಯಾವುದೂ ಇಲ್ಲ. ಹೀಗಾಗಿ ಅಸಹಕಾರ ಹಿಂಪಡೆದಿದ್ದೇವೆ' ಎಂದರು.

'ನಿದ್ರಾದೇವಿ ನೆಕ್ಸ್ಟ್ ಡೋರ್' ಸಿನಿಮಾ ಸೆ.12ರಂದು ತೆರೆಕಾಣುತ್ತಿದ್ದು, ಪ್ರವೀರ್ ಶೆಟ್ಟಿ, ರಿಷಿಕಾ ನಾಯಕ್ ಜೋಡಿಯಾಗಿ ನಟಿಸಿದ್ದಾರೆ. ❖

ಸ್ಪಾರ್ಕ್ ಟೀಸರ್ ಬಿಡುಗಡೆ

ನಟ ಉಪೇಂದ್ರ ಅವರ ಅಣ್ಣನ ಮಗ ನಿರಂಜನ್ ಸುಧೀಂದ್ರ ನಟನೆಯ 'ಸ್ಪಾರ್ಕ್' ಸಿನಿಮಾದ ಟೀಸರ್ ಬಿಡುಗಡೆಯಾಗಿದೆ. ನಟ 'ನೆನಪಿರಲಿ' ಪ್ರೇಮ್ ಈ ಸಿನಿಮಾದಲ್ಲಿ ವಿಶೇಷ ಪಾತ್ರದಲ್ಲಿ ನಟಿಸಿದ್ದಾರೆ. ಹಲವು ಸಿನಿಮಾಗಳಲ್ಲಿ ಸಹ ನಿರ್ದೇಶಕರಾಗಿ ಕೆಲಸ ಮಾಡಿದ ಅನುಭವವಿರುವ ಡಿ.ಮಹಾಂತೇಶ್ ಹಂದ್ರಾಳ್ ಆ್ಯಕ್ಷನ್ ಕಟ್ ಹೇಳಿರುವ ಈ ಸಿನಿಮಾದಲ್ಲಿ ಪತ್ರಕರ್ತನಾಗಿ ನಿರಂಜನ್ ಬಣ್ಣ ಹಚ್ಚಿದ್ದಾರೆ. ಒಂದು ಹಗರಣದ ಸುತ್ತ ಸಾಗುವ ಕಥೆಯನ್ನು ಸಿನಿಮಾದಲ್ಲಿ ಕಟ್ಟಿಕೊಡಲಾಗಿದೆ.

'ಸ್ಪಾರ್ಕ್ ಎಲ್ಲರ ಮನಸ್ಸಿನಲ್ಲಿರುವ ಕಿಡಿ. ಏನೇ ಹಗರಣ ನಡೆದರೂ ಮೊದಲು ಧ್ವನಿ ಎತ್ತುವುದು ಪತ್ರಕರ್ತರು. ನಾನೂ ಇಂಥ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಇದು ದೊಡ್ಡ ಜವಾಬ್ದಾರಿ. ಇದರಲ್ಲಿ ಪಾತ್ರಗಳ ಬರವಣಿಗೆ ತುಂಬಾ ಗಟ್ಟಿಯಾಗಿದೆ' ಎಂದರು ನಿರಂಜನ್.

'ನಾನು ಇಂಡಸ್ಟ್ರಿಗೆ ಮಾಸ್ ಹೀರೊ ಆಗಬೇಕು ಎಂದು ಬಂದೆ. ಆದರೆ ಸತತ ಲವ್ ಸ್ಟೋರಿ ಸಿನಿಮಾ ಮಾಡಿ ಅದು ಹಿಟ್ ಆಗಿ ನನ್ನನ್ನು ಕ್ಲಾಸ್ ಹೀರೊ ಎಂದು ಗುರುತಿಸಿದರು. ನನ್ನಲ್ಲಿರುವ ಸ್ಪಾರ್ಕ್ ನೋಡಿ ಮಹಾಂತೇಶ್ ನನಗೆ ಈ ಮಾಸ್ ಪಾತ್ರ ನೀಡಿದ್ದಾರೆ' ಎಂದು ನಟ ಪ್ರೇಮ್ ಹೇಳಿದರು.

ಚಿತ್ರದಲ್ಲಿ ನಾಯಕಿಯಾಗಿ ರಚನಾ ಇಂದರ್ ಅಭಿನಯಿಸಿದ್ದು, ಡಾ. ಗರಿಮಾ ಅವಿನಾಶ್ ವಸಿಷ್ಠ ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ. ❖

ನಿರಂಜನ್ ಸುಧೀಂದ್ರ, ರಚನಾ ಇಂದರ್

ಸಿಐಸಿ ಆದೇಶ ರದ್ದುಗೊಳಿಸಿದ ಹೈಕೋರ್ಟ್

ಪ್ರಧಾನಿ ನರೇಂದ್ರ ಮೋದಿ ಅವರ ಪದವಿ ವ್ಯಾಸಂಗದ ವಿವರ ಬಹಿರಂಗ ಪಡಿಸುವಂತೆ ಕೋರಿದ್ದ ಪ್ರಕರಣ

ನವದೆಹಲಿ(ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಪದವಿ ವ್ಯಾಸಂಗಕ್ಕೆ ಸಂಬಂಧಿಸಿದ ವಿವರಗಳನ್ನು ಬಹಿರಂಗಪಡಿಸುವಂತೆ ಕೇಂದ್ರ ಮಾಹಿತಿ ಆಯೋಗ (ಸಿಐಸಿ) ಹೊರಡಿಸಿದ್ದ ಆದೇಶವನ್ನು ದೆಹಲಿ ಹೈಕೋರ್ಟ್ ಸೋಮವಾರ ರದ್ದುಪಡಿಸಿದೆ.

'ಇದು ವೈಯಕ್ತಿಕ ಮಾಹಿತಿ. ಈ ವಿವರ ಕೋರಿರುವುದರ ಹಿಂದೆ ಯಾವುದೇ ಸಾರ್ವಜನಿಕ ಹಿತಾಸಕ್ತಿ ಇಲ್ಲ' ಎಂದು ನ್ಯಾಯಮೂರ್ತಿ ಸಚಿನ್ ದತ್ತ ಹೇಳಿದ್ದಾರೆ.

ಈ ವಿಚಾರ ಕುರಿತ ಅರ್ಜಿಯ ವಿಚಾರಣೆ ಪೂರ್ಣಗೊಳಿಸಿದ್ದ ನ್ಯಾಯಮೂರ್ತಿ ದತ್ತ, ಫೆಬ್ರುವರಿ 27ರಂದು ತೀರ್ಪು ಕಾಯ್ದಿರಿಸಿದ್ದರು.

ಪ್ರಧಾನಿ ಮೋದಿ ಅವರು 1978ರಲ್ಲಿ ಬಿ.ಎ ತೇರ್ಗಡೆಯಾಗಿದ್ದಾರೆ. ಅವರ ಪದವಿ ವ್ಯಾಸಂಗಕ್ಕೆ ಸಂಬಂಧಿಸಿದ ವಿವರಗಳನ್ನು ಒದಗಿಸುವಂತೆ ನೀರಜ್ ಎಂಬುವವರು ಆರ್‌ಟಿಐ ಅಡಿ ಅರ್ಜಿ ಸಲ್ಲಿಸಿದ್ದರು. 1978ರಲ್ಲಿ ಬಿ.ಎ ತೇರ್ಗಡೆಯಾದವರ ದಾಖಲೆಗಳನ್ನು ಪರಿಶೀಲಿಸಲು ಅನುಮತಿ ನೀಡಿ, ಸಿಐಸಿ 2016ರ ಡಿಸೆಂಬರ್ 21ರಂದು ಆದೇಶಿಸಿತ್ತು.

ಇದನ್ನು ಪ್ರಶ್ನಿಸಿ ದೆಹಲಿ ವಿಶ್ವವಿದ್ಯಾಲಯ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ್ದ ದೆಹಲಿ ಹೈಕೋರ್ಟ್, ಸಿಐಸಿ ಆದೇಶಕ್ಕೆ ತಡೆ ನೀಡಿ 2017ರ ಜನವರಿ 23ರಂದು ಆದೇಶಿಸಿತ್ತು.

ಹೈಕೋರ್ಟ್ ಹೇಳಿದ್ದೇನು?

- ಸಾರ್ವಜನಿಕ ಹುದ್ದೆಯೇರಲು ಅಥವಾ ಅಧಿಕಾರದಲ್ಲಿದ್ದುಕೊಂಡು ಕರ್ತವ್ಯ ನಿಭಾಯಿಸುವುದಕ್ಕೆ ಶೈಕ್ಷಣಿಕ ಅರ್ಹತೆಗಳೂ ಶಾಸನಬದ್ಧ ಅಗತ್ಯವೇನಲ್ಲ
- 'ಸಾರ್ವಜನಿಕರಿಗೆ ಆಸಕ್ತಿದಾಯಕ' ಎನಿಸಿದ ಸಂಗತಿಗೂ 'ಸಾರ್ವಜನಿಕ ಹಿತಾಸಕ್ತಿ ಒಳಗೊಂಡ ವಿಷಯ'ಕ್ಕೂ ವ್ಯತ್ಯಾಸ ಇದೆ
- ಸರ್ಕಾರದ ಹುದ್ದೆಯಲ್ಲಿರುವ ವ್ಯಕ್ತಿಯೊಬ್ಬರಿಗೆ ಸಂಬಂಧಿಸಿದ ಮಾಹಿತಿಯನ್ನು ಕೇಳಿದ್ದರೂ ಕೂಡ, ಖಾಸಗಿತನ/ಗೋಪ್ಯತೆ ಕಾಪಾಡುವ ಹಕ್ಕುಗಳಿಗಿಂತ ಅವರ ವೈಯಕ್ತಿಕ ಮಾಹಿತಿ ಒದಗಿಸುವುದು ಮಹತ್ವದ್ದೆನಿಸುವುದಿಲ್ಲ. ಅಲ್ಲದೇ, ಕೇಳಿರುವ ಮಾಹಿತಿ ಅವರ ಕರ್ತವ್ಯ ನಿರ್ವಹಣೆಗೆ ಯಾವುದೇ ರೀತಿ ಸಂಬಂಧ ಹೊಂದಿಲ್ಲ
- ಸರ್ಕಾರದ ಕಾರ್ಯವೈಖರಿಯಲ್ಲಿ ಪಾರದರ್ಶಕತೆ ಉತ್ತೇಜಿಸುವುದು ಆರ್‌ಟಿಐ ಕಾಯ್ದೆಯ ಉದ್ದೇಶವಾಗಿದೆಯೇ ಹೊರತು, ಯಾವುದೇ ಒಂದು ವಿಚಾರವನ್ನು ಸಂವೇದನಾಶೀಲಗೊಳಿಸುವುದಲ್ಲ
- ಪಡೆದ ಅಂಕಗಳು, ಶ್ರೇಣಿ, ಉತ್ತರ ಪತ್ರಿಕೆಗಳು... ವೈಯಕ್ತಿಕ ಮಾಹಿತಿ ಆಗಿದ್ದು, ಈ ವಿವರಗಳನ್ನು ಬಹಿರಂಗಪಡಿಸದಂತೆ ಆರ್‌ಟಿಐ ಕಾಯ್ದೆ ಸೆಕ್ಷನ್ 8(1) ಅಡಿ ರಕ್ಷಣೆ ನೀಡಲಾಗಿದೆ

ಸ್ಮೃತಿ ಇರಾನಿ ಪ್ರಕರಣ: ಆದೇಶವೂ ರದ್ದು

ಬಿಜೆಪಿ ನಾಯಕಿ ಸ್ಮೃತಿ ಇರಾನಿ ಅವರ 10 ಮತ್ತು 12ನೇ ತರಗತಿಗೆ ಸಂಬಂಧಿಸಿದ ದಾಖಲೆಗಳ ಪ್ರತಿಗಳನ್ನು ಒದಗಿಸುವಂತೆ ಕೇಂದ್ರ ಮಾಹಿತಿ ಆಯೋಗ (ಸಿಐಸಿ) ಹೊರಡಿಸಿದ್ದ ಆದೇಶವನ್ನು ಕೂಡ ದೆಹಲಿ ಹೈಕೋರ್ಟ್ ಸೋಮವಾರ ರದ್ದುಪಡಿಸಿದೆ.

ಇರಾನಿ ಅವರಿಗೆ ಸಂಬಂಧಿಸಿದ ಈ ದಾಖಲೆಗಳನ್ನು ಅರ್ಜಿದಾರರಿಗೆ ಒದಗಿಸುವಂತೆ ಸಿಬಿಎಸ್‌ಇಗೆ ಸಿಐಸಿ 2017ರ ಜನವರಿ 17ರಂದು ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಸಿಬಿಎಸ್‌ಇ ಹೈಕೋರ್ಟ್ ಮೊರೆ ಹೋಗಿತ್ತು.

ಅಲಿ ಖಾನ್ ವಿರುದ್ಧದ ವಿಚಾರಣೆಗೆ ತಡೆ

ಅಶೋಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಅಲಿ ಖಾನ್ ಮಹಮೂದಾಬಾದ್ ವಿರುದ್ಧ ಹರಿಯಾಣ ಎಸ್‌ಐಟಿ ಸಲ್ಲಿಸಿರುವ ಆರೋಪಪಟ್ಟಿಯನ್ನು ವಿಚಾರಣೆಗೆ ತೆಗೆದುಕೊಳ್ಳುವುದಕ್ಕೆ ಸುಪ್ರಿಂ ಕೋರ್ಟ್ ಸೋಮವಾರ ತಡೆಯಾಜ್ಞೆ ನೀಡಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠ ಈ ಪ್ರಕರಣದಲ್ಲಿ ಯಾವುದೇ ದೋಷಾರೋಪ ನಿಗದಿ ಮಾಡದಂತೆ ವಿಚಾರಣಾ ನ್ಯಾಯಾಲಯಕ್ಕೆ ಸೂಚಿಸಿದೆ.

ಆಪರೇಷನ್ ಸಿಂಧೂರ ಕುರಿತು ಅಲಿ ಖಾನ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಮಾಡಿದ್ದ ಪೋಸ್ಟ್‌ಗಳಿಗೆ ಸಂಬಂಧಿಸಿ ಅವರ ವಿರುದ್ಧ ಪ್ರಕರಣ ದಾಖಲಿಸಿ, ತನಿಖೆ ಕೈಗೊಳ್ಳಲಾಗಿದೆ.

ಅಲಿ ಖಾನ್ ಅವರ ವಿವಾದಾತ್ಮಕ ಪೋಸ್ಟ್‌ಗಳ ಕುರಿತು ದಾಖಲಾದ ಎರಡು ಎಫ್‌ಐಆರ್‌ಗಳ ತನಿಖೆಗೆ ಸುಪ್ರೀಂ ಕೋರ್ಟ್ ಎಸ್‌ಐಟಿ ರಚಿಸಿತ್ತು. 'ಒಂದು ಎಫ್‌ಐಆರ್‌ಗೆ ಸಂಬಂಧಿಸಿದಂತೆ ಪರಿಸಮಾಪ್ತಿ ವರದಿಯನ್ನು ಸಲ್ಲಿಸಲಾಗಿದ್ದು, ಇನ್ನೊಂದರ ಕುರಿತು ಆಗಸ್ಟ್ 22ರಂದು ಆರೋಪಪಟ್ಟಿ ಸಲ್ಲಿಸಲಾಗಿದೆ' ಎಂದು ಎಸ್‌ಐಟಿ ಪೀಠಕ್ಕೆ ತಿಳಿಸಿತು.

ಹರಿಯಾಣ ಪೊಲೀಸರ ಪರ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಈ ಬಗ್ಗೆ ಪೀಠಕ್ಕೆ ಮಾಹಿತಿ ನೀಡಿದರು.

'ಅಪರಾಧ ಎಸಗಿದ್ದಾರೆ ಎಂಬುದನ್ನು ಸಾಬೀತುಪಡಿಸುವ ಹಲವು ಅಂಶಗಳು ತನಿಖೆಯ ವೇಳೆ ಕಂಡುಬಂದಿವೆ. ಆದ್ದರಿಂದ ಮತ್ತೊಂದು ಎಫ್‌ಐಆರ್‌ಗೆ ಸಂಬಂಧಿಸಿದಂತೆ ಆರೋಪಪಟ್ಟಿ ಸಲ್ಲಿಸಲಾಗಿದೆ' ಎಂದು ಹೇಳಿದರು.

ಅಲಿ ಖಾನ್ ಪರ ಹಾಜರಾದ ಹಿರಿಯ ವಕೀಲ ಕಪಿಲ್ ಸಿಬಲ್, ಚಾರ್ಜ್‌ಶೀಟ್ ಸಲ್ಲಿಸಿರುವುದು 'ಅತ್ಯಂತ ದುರದೃಷ್ಟಕರ' ಎಂದು ಪೀಠಕ್ಕೆ ತಿಳಿಸಿದರು.

ಅರೋಪಪಟ್ಟಿ ಪರಿಶೀಲಿಸಲು, ಖಾನ್ ವಿರುದ್ಧ ಮಾಡಲಾಗಿರುವ ಆರೋಪ ಪಟ್ಟಿ ಸಿದ್ಧಪಡಿಸಲು ಸೂಚಿಸಿದ ಪೀಠ, ವಿಚಾರಣೆ ಮುಂದೂಡಿತು.

'ಸಂಜಯ್ ಅವರ ವಿರುದ್ಧ ಕ್ರಮ ಬೇಡ'

ನವದೆಹಲಿ: ಸಿಎಸ್‌ಡಿಎಸ್ ಸಂಸ್ಥೆಯ ಸಹ ನಿರ್ದೇಶಕ, ಚುನಾವಣಾ ವಿಶ್ಲೇಷಕ ಸಂಜಯ್ ಕುಮಾರ್ ಅವರ ವಿರುದ್ಧ ದಾಖಲಾಗಿರುವ ಎರಡು ಎಫ್‌ಐಆರ್‌ಗಳಿಗೆ ಸಂಬಂಧಿಸಿ ಯಾವುದೇ ಕ್ರಮ ಕೈಗೊಳ್ಳಬಾರದು, ಅವರನ್ನು ಬಂಧಿಸಬಾರದು ಎಂದು ಸುಪ್ರೀಂ ಕೋರ್ಟ್ ಸೋಮವಾರ ಮಧ್ಯಂತರ ಆದೇಶ ನೀಡಿದೆ.

ಸುಳ್ಳು ಮಾಹಿತಿ ಹಂಚಿಕೊಂಡಿದ್ದಾರೆ ಎಂದು ಆರೋಪಿಸಿ ಚುನಾವಣಾ ಆಯೋಗವು ಇವರ ಮೇಲೆ ಎರಡು ದೂರು ನೀಡಿತ್ತು. ತಮ್ಮ ಮೇಲೆ ದಾಖಲಾಗಿರುವ ಎಫ್‌ಐಆರ್ ರದ್ದು ಮಾಡುವಂತೆ ಕೋರಿ ಸಂಜಯ್ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಮತ್ತು ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಅವರ ಪೀಠವು ವಿಚಾರಣೆ ನಡೆಸಿತು.

ಲೋಕಸಭೆ ಮತ್ತು ವಿಧಾನಸಭೆ ಚುನಾವಣೆ ಹೋಲಿಕೆಯಲ್ಲಿ ಮಹಾರಾಷ್ಟ್ರದ ಎರಡು ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾರರ ಸಂಖ್ಯೆ ಅಧಿಕಗೊಂಡಿದೆ ಎಂದು ಅಂಕಿ ಅಂಶ ಸಮೇತ ಸಂಜಯ್ ಅವರು ಪೋಸ್ಟ್ ಹಂಚಿಕೊಂಡಿದ್ದರು. ಬಳಿಕ, ಅಂಕಿ ಅಂಶಗಳಲ್ಲಿ ಕೆಲವು ದೋಷಗಳು ಇವೆ ಎಂದು ಸಾರ್ವಜನಿಕವಾಗಿ ಕ್ಷಮೆ ಕೇಳಿ ಪೋಸ್ಟ್ ಅನ್ನು ಅಳಿಸಿ ಹಾಕಿದ್ದರು.

ಜೆಪಿಸಿ ಬಹಿಷ್ಕರಿಸುತ್ತೇವೆ: ಉದ್ಧವ್ ಬಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ, ಮುಖ್ಯಮಂತ್ರಿಗಳು ಮತ್ತು ರಾಜ್ಯ ಸರ್ಕಾರಗಳ ಸಚಿವರು ಪ್ರಕರಣವೊಂದರಲ್ಲಿ 30 ದಿನಗಳವರೆಗೆ ಸತತವಾಗಿ ಜೈಲಿನಲ್ಲಿದ್ದರೆ ಅವರನ್ನು ಆ ಹುದ್ದೆಯಿಂದ ತೆಗೆದು ಹಾಕುವ ಸಂಬಂಧ ಕೇಂದ್ರ ಸರ್ಕಾರ ರೂಪಿಸಿರುವ ಮೂರು ಮಸೂದೆಗಳನ್ನು ಜಂಟಿ ಸಂಸದೀಯ ಸಮಿತಿಗೆ (ಜೆಪಿಸಿ) ಕಳುಹಿಸಲಾಗಿದ್ದು, ಈ ಸಮಿತಿಯನ್ನು ಬಹಿಷ್ಕರಿಸುತ್ತೇವೆ ಎಂದು ಶಿವಸೇನಾ (ಉದ್ಧವ್ ಬಣ) ಸೋಮವಾರ ಘೋಷಿಸಿದೆ.

'ಸಮಿತಿಗೆ ಸೇರುವುದಿಲ್ಲ' ಎಂದು ತೃಣಮೂಲ ಕಾಂಗ್ರೆಸ್, ಸಮಾಜವಾದಿ ಪಕ್ಷ ಮತ್ತು ಆಮ್ ಆದ್ಮಿ ಪಕ್ಷ ಈಗಾಗಲೇ ಹೇಳಿವೆ. 'ಬಿಜೆಪಿಯದ್ದು ಇದೊಂದು ನಾಟಕ' ಎಂದು ಶಿವಸೇನಾ ಟೀಕಿಸಿದೆ. 'ಇಂಡಿಯಾ' ಮೈತ್ರಿಕೂಟದ ಕೆಲವು ಪಕ್ಷಗಳು ಸಮಿತಿಯನ್ನು ಬಹಿಷ್ಕರಿಸಿವೆ. ಕಾಂಗ್ರೆಸ್ ಮಾತ್ರವೇ ಇನ್ನೂವರೆಗೂ ತನ್ನ ನಿರ್ಧಾರ ಬಹಿರಂಗಪಡಿಸಿಲ್ಲ.

ಗುರುವಾಯೂರು ದೇವಾಲಯ; ಶುದ್ಧೀಕರಣ ಇಂದು

ತಿರುವನಂತಪುರ: ಹಿಂದೂಯೇತರ ಮಹಿಳೆಯೊಬ್ಬರು ಪ್ರವೇಶಿಸಿದ್ದಕ್ಕೆ, ಕೇರಳದ ಪ್ರಸಿದ್ಧ ಗುರುವಾಯೂರು ಶ್ರೀಕೃಷ್ಣ ದೇಗುಲದ ಕೊಳದಲ್ಲಿ ಮಂಗಳವಾರ 'ಶುದ್ಧೀಕರಣ' ಪ್ರಕ್ರಿಯೆ ನಡೆಸಲು ನಿರ್ಧರಿಸಲಾಗಿದೆ.

ಸಾಮಾಜಿಕ ಮಾಧ್ಯಮ ಇನ್‌ಫ್ಲುಯೆನ್ಸರ್ ಜಾಸ್ಮಿನ್ ಜಾಫರ್ ಅವರು ದೇವಸ್ಥಾನದ ಆವರಣದಲ್ಲಿ ಮಾಡಿದ್ದ ವಿಡಿಯೊವೊಂದನ್ನು ಪೋಸ್ಟ್ ಮಾಡಿದ್ದರು. ದೇವಾಲಯದ ಕೊಳದಲ್ಲಿ ತಮ್ಮ ಪಾದಗಳನ್ನು ತೊಳೆಯುತ್ತಿರುವ ದೃಶ್ಯ ವಿಡಿಯೊದಲ್ಲಿತ್ತು. ವಿಡಿಯೊಗೆ ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾಗುತ್ತಿದ್ದಂತೆಯೇ ಪೋಸ್ಟ್ ಅಳಿಸಿ ಹಾಕಿ, ಕ್ಷಮೆಯಾಚಿಸಿದ್ದರು.

ಈ ಬೆಳವಣಿಗೆಯ ಬೆನ್ನಲ್ಲೇ ದೇವಸ್ಥಾನದ ಆಡಳಿತ ಮಂಡಳಿ ಪ್ರಕಟಣೆ ಹೊರಡಿಸಿದೆ. 'ಹಿಂದೂಯೇತರ ಮಹಿಳೆಯೊಬ್ಬರು ಕೊಳದ ಆವರಣ ಪ್ರವೇಶಿಸಿ ವಿಡಿಯೊ ಮಾಡಿ ದೇವಸ್ಥಾನದ ಸಂಪ್ರದಾಯಗಳನ್ನು ಮುರಿದಿದ್ದಾರೆ. ಆದ್ದರಿಂದ, ಆಗಸ್ಟ್ 26ರಂದು ಶುದ್ಧೀಕರಣ ವಿಧಿಗಳನ್ನು ನಡೆಸಲಾಗುವುದು. ಅಂದು ಬೆಳಿಗ್ಗೆ 5ರಿಂದ ಮಧ್ಯಾಹ್ನದವರೆಗೆ ದೇವಾಲಯಕ್ಕೆ ಭಕ್ತರ ಪ್ರವೇಶ ನಿರ್ಬಂಧಿಸಲಾಗಿದೆ' ಎಂದು ತಿಳಿಸಿದೆ.

ದೇವಾಲಯದ ಆವರಣದಲ್ಲಿ ರೀಲ್ಸ್ ತೆಗೆಯುವುದಕ್ಕೆ ಕೇರಳ ಹೈಕೋರ್ಟ್ ವಿಧಿಸಿದ್ದ ನಿರ್ಬಂಧವನ್ನು ಉಲ್ಲಂಘಿಸಿಸಲಾಗಿದೆ ಎಂದು ಆರೋಪಿಸಿ ದೇವಸ್ಥಾನದ ಅಧಿಕಾರಿಗಳು ಪೊಲೀಸರಿಗೂ ದೂರು ನೀಡಿದ್ದಾರೆ.

'ಪೊಲೀಸರು ಸ್ಥಳೀಯ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ವರದಿ ಸಲ್ಲಿಸಿದ್ದಾರೆ. ನ್ಯಾಯಾಲಯದ ನಿರ್ದೇಶನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಚಂದ್ರನಲ್ಲಿಗೆ ಹೋಗಲು ನಾನೂ ಸ್ಪರ್ಧಿ'

ಮಕ್ಕಳೊಂದಿಗಿನ ಸಂವಾದದಲ್ಲಿ ಗಗನಯಾನಿ ಶುಭಾಂಶು

ಲಖನೌ (ಪಿಟಿಐ): '2040ರ ಹೊತ್ತಿಗೆ ಚಂದ್ರನ ಅಂಗಳದಲ್ಲಿ ಕಾಲಿಡುವ ಗುರಿ ನಮ್ಮ ಮುಂದಿದೆ. ಬಹುಶಃ ನಿಮ್ಮಲ್ಲಿ ಒಬ್ಬರು ಚಂದ್ರ ಮೇಲೆ ಕಾಲಿಡಬಹುದು. ಗಗನಯಾನಿ ಆಗುವುದು ಅಷ್ಟು ಸುಲಭವಲ್ಲ. ನೋಡಿ ಮತ್ತೆ, ಮುಂದೆ ನಾನು ನಿಮಗೆ ಸ್ಪರ್ಧೆ ಒಡ್ಡಲಿದ್ದೇನೆ. ಅದಕ್ಕಾಗಿಯೇ ಹೇಳುತ್ತಿದ್ದೇನೆ. ಕಠಿಣ ಪರಿಶ್ರಮ ಹಾಕಿ. ನಾವು ಒಟ್ಟಿಗೆ ಸ್ಪರ್ಧೆ ಮಾಡೋಣ. 2040ರಲ್ಲಿ ಯಾರು ಚಂದ್ರನ ಮೇಲೆ ಹೋಗುತ್ತಾರೆ ನೋಡೋಣ...'

ಶುಭಾಂಶು

ಹೀಗೆಂದು, ಬಾಹ್ಯಾಕಾಶ ಯಾನಕ್ಕೆ ಮಕ್ಕಳನ್ನು ಹುರಿದುಂಬಿಸಿದವರು ಗಗನಯಾನಿ ಶುಭಾಂಶು ಶುಕ್ಲಾ. ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರಕ್ಕೆ ತೆರಳಿ 'ಆಕ್ಸಿಯಂ-4' ಯೋಜನೆಯನ್ನು ಪೂರ್ಣಗೊಳಿಸಿ, ವಾಪಸು ಬಂದ ಬಳಿಕ ಇದೇ ಮೊದಲ ಬಾರಿಗೆ ತಮ್ಮ ಹುಟ್ಟೂರು ಲಖನೌಗೆ ಶುಕ್ಲಾ ಸೋಮವಾರ ಭೇಟಿ ನೀಡಿದರು. ತಾವು ಓದಿದ ಸಿಟಿ ಮಾಂಟೆಸರಿ ಶಾಲೆಗೆ ಭೇಟಿ ನೀಡಿ ಮಕ್ಕಳೊಂದಿಗೆ ಸಂವಾದ ನಡೆಸಿದರು.

'ಬಾಹ್ಯಾಕಾಶ ಕೇಂದ್ರದಲ್ಲಿ ಇರುವಾಗಲೂ ಸೇರಿ ಈವರೆಗೆ ನಾನು ಮಕ್ಕಳೊಂದಿಗೆ ಮೂರು ಸಂವಾದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದೇನೆ. ನಾನು ಏನು ಮಾಡುತ್ತೇನೆ ಅಂತಾಗಲಿ, ಗಗನಯಾನಿಗಳು ಯಾವ ಕಾರ್ಯ ನಿರ್ವಹಿಸುತ್ತಾರೆ ಅಂತಾಗಲಿ ಯಾವ ಮಗುವೂ ನನ್ನ ಬಳಿ ಪ್ರಶ್ನೆ ಕೇಳಿಲ್ಲ. ಆದರೆ, ಎಲ್ಲರೂ ನೀವು ಹೇಗೆ ಗಗನಯಾನಿಯಾದಿರಿ ಎಂದು ಕೇಳುತ್ತಾರೆ' ಎಂದರು.

'ಭವಿಷ್ಯವು ನನಗೆ ಭರವಸೆದಾಯಕವಾಗಿ ತೋರುತ್ತಿದೆ. ಬಾಹ್ಯಾಕಾಶ ಯೋಜನೆಗಳಿಗೆ ಇದೊಂದು ಸುವರ್ಣಾವಕಾಶ ' ಎಂದು ಅವರು ಅಭಿಪ್ರಾಯಪಟ್ಟರು

ಶುಕ್ಲಾ ಹೆಸರಿನಲ್ಲಿ ವಿದ್ಯಾರ್ಥಿ ವೇತನ: ಶುಭಾಂಶು ಶುಕ್ಲಾ ಅವರ ಹೆಸರಿನಲ್ಲಿ ರಾಜ್ಯದಲ್ಲಿ ಹೊಸ ವಿದ್ಯಾರ್ಥಿ ವೇತನನೀಡುವುದಾಗಿ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಘೋಷಿಸಿದರು. ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಉನ್ನತ ಶಿಕ್ಷಣ ಪಡೆಯಲು ಬಯಸುವವರಿಗೆ ಈ ವಿದ್ಯಾರ್ಥಿ ವೇತನ ನೀಡಲಾಗುತ್ತದೆ.

ಹುಟ್ಟೂರಿನಲ್ಲಿ ಅದ್ದೂರಿ ಸ್ವಾಗತ

ಆಗಸ್ಟ್ 17ಕ್ಕೇ ಭೂಮಿಗೆ ವಾಪಸ್ ಆಗಿದ್ದರೂ ಶುಕ್ಲಾ ಅವರು ಆಗಸ್ಟ್ 25ಕ್ಕೆ ತಮ್ಮ ಹುಟ್ಟೂರಿಗೆ ಆಗಮಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ರಾಷ್ಟ್ರಪತಿ ಭೇಟಿ ಸೇರಿ ವಿವಿಧ ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸಿದ್ದರು. ಹುಟ್ಟೂರಿನಲ್ಲಿ ಸೋಮವಾರ ಅವರಿಗೆ ಅದ್ದೂರಿ ಸ್ವಾಗತವನ್ನೇ ಕೋರಲಾಯಿತು.

ವಿಮಾನ ನಿಲ್ದಾಣದಿಂದ ಶಾಲೆಯವರೆಗೆ ತೆರೆದ ವಾಹನದಲ್ಲಿ ಮೆರವಣಿಗೆ ಮಾಡಲಾಯಿತು. ತಂದೆ, ತಾಯಿ, ಪತ್ನಿ ಮತ್ತು ಮಗ ಸೇರಿದಂತೆ ಕುಟುಂಬಸ್ಥರು, ಸ್ನೇಹಿತರೊಂದಿಗೆ ಶುಕ್ಲಾ ಅವರು ತೆರೆದ ವಾಹನದಲ್ಲಿ ಕೈಬೀಸಿದರು. ಅವರ ಮೇಲೆ ಹೂಮಳೆಗರೆಯಲಾಯಿತು. ಶಾಲಾ ಮಕ್ಕಳು ರಸ್ತೆಯ ಇಕ್ಕೆಲಗಳಲ್ಲಿ ಭಾರತ ಬಾವುಟ ಹಿಡಿದು ಸ್ವಾಗತ ಕೋರಿದರು.

ಉಪರಾಷ್ಟ್ರಪತಿ ಚುನಾವಣೆ: ನ್ಯಾಯಮೂರ್ತಿ ರೆಡ್ಡಿ ಬೆಂಬಲಿಸಿದ ನಿವೃತ್ತ ನ್ಯಾಯಮೂರ್ತಿಗಳು

ಶಾ ಹೇಳಿಕೆ: ಭಯಾನಕ ಪರಿಣಾಮದ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಲ್ವಾ ಜುಡುಮ್ ಕುರಿತ ತೀರ್ಪು ವಿಚಾರವಾಗಿ ಉಪರಾಷ್ಟ್ರಪತಿ ಚುನಾವಣೆಯ ವಿಪಕ್ಷಗಳ ಅಭ್ಯರ್ಥಿ ನಿವೃತ್ತ ನ್ಯಾಯಮೂರ್ತಿ ಬಿ.ಸುದರ್ಶನ ರೆಡ್ಡಿ ವಿರುದ್ಧ ಕೇಂದ್ರ ಗೃಹ ಸಚಿವ ಅಮಿತ್ ಶಾ ವಾಗ್ದಾಳಿ ನಡೆಸಿರುವುದು ದುರದೃಷ್ಟಕರ ಎಂದು ನಿವೃತ್ತ ನ್ಯಾಯಮೂರ್ತಿಗಳು ಹಾಗೂ ಕಾನೂನು ತಜ್ಞರ ಗುಂಪು ಟೀಕಿಸಿದೆ.

ನ್ಯಾಯಮೂರ್ತಿ ಸುದರ್ಶನ ರೆಡ್ಡಿ

'ಈ ರೀತಿಯ ಹಾನಿಕಾರಕ ಹೇಳಿಕೆಗಳು ಹಾಲಿ ನ್ಯಾಯಮೂರ್ತಿಗಳ ಮೇಲೆ ಭಯಾನಕವಾದ ಪರಿಣಾಮ ಬೀರಲಿವೆ' ಎಂದು ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ನ 18 ನಿವೃತ್ತ ನ್ಯಾಯಮೂರ್ತಿಗಳು ಹಾಗೂ ಇಬ್ಬರು ಕಾನೂನು ತಜ್ಞರು ಎಚ್ಚರಿಕೆ ನೀಡಿದ್ದಾರೆ.

ಉಪರಾಷ್ಟ್ರಪತಿ ಚುನಾವಣೆಯ ವಿರೋಧ ಪಕ್ಷಗಳ ಮೈತ್ರಿಕೂಟ 'ಇಂಡಿಯಾ'ದ ಅಭ್ಯರ್ಥಿ, ನಿವೃತ್ತ ನ್ಯಾಯಮೂರ್ತಿ ಬಿ.ಸುದರ್ಶನ ರೆಡ್ಡಿ ಅವರನ್ನು ಬೆಂಬಲಿಸಿ ಹೇಳಿಕೆ ಬಿಡುಗಡೆ ಮಾಡಿರುವ ಈ ಗುಂಪು, ಶಾ ವಿರುದ್ಧ ಟೀಕಾಪ್ರಹಾರ ಮಾಡಿದೆ.

'ಉಪ ರಾಷ್ಟ್ರಪತಿ ಚುನಾವಣೆ ಕುರಿತ ಪ್ರಚಾರವನ್ನು ಘನತೆ ಹಾಗೂ ಗೌರವಯುತವಾಗಿ ನಡೆಸಬೇಕು. ಎರಡೂ ಪಾಳಯದ ಅಭ್ಯರ್ಥಿಗಳು ನಂಬಿರುವ ಸಿದ್ಧಾಂತವನ್ನು ಟೀಕಿಸುವುದರಿಂದ ದೂರ ಇರಬೇಕು' ಎಂದು ನಿವೃತ್ತ ನ್ಯಾಯಮೂರ್ತಿಗಳು ಹಾಗೂ ಕಾನೂನು ತಜ್ಞರು ಹೇಳಿದ್ದಾರೆ.

ಈ ಹೇಳಿಕೆಗೆ ಸುಪ್ರೀಂ ಕೋರ್ಟ್‌ನ 7 ನಿವೃತ್ತ ನ್ಯಾಯಮೂರ್ತಿಗಳು, ಹೈಕೋರ್ಟ್‌ನ ಮೂವರು ನಿವೃತ್ತ ನ್ಯಾಯಮೂರ್ತಿಗಳು, 8 ನ್ಯಾಯಮೂರ್ತಿಗಳು ಹಾಗೂ ಇಬ್ಬರು ಖ್ಯಾತ ಕಾನೂನು ತಜ್ಞರು ಸಹಿ ಹಾಕಿದ್ದಾರೆ.

ಕಳೆದ ಶುಕ್ರವಾರ ಕಾರ್ಯಕ್ರಮವೊಂದರಲ್ಲಿ ಸಚಿವ ಶಾ, ಸುದರ್ಶನ ರೆಡ್ಡಿ ನೀಡಿದ್ದ ತೀರ್ಪು ಕುರಿತು ಟೀಕಿಸಿದ್ದರು.

ಪ್ರಮುಖಾಂಶ

- ಸಲ್ವಾ ಜುಡುಮ್ ಕುರಿತ ತೀರ್ಪನ್ನು ತಪ್ಪಾಗಿ ನಿರೂಪಣೆ ಮಾಡಿದ್ದು ದುರದೃಷ್ಟಕರ. ನಕ್ಸಲವಾದ ಅಥವಾ ಅದಕ್ಕೆ ಸಂಬಂಧಪಟ್ಟ ಸಿದ್ಧಾಂತವನ್ನು ಈ ತೀರ್ಪು ಬೆಂಬಲಿಸಿಲ್ಲ
- ಉನ್ನತ ಹುದ್ದೆಯಲ್ಲಿರುವ ರಾಜಕೀಯ ನೇತಾರರೊಬ್ಬರು ಸುಪ್ರೀಂ ಕೋರ್ಟ್‌ನ ತೀರ್ಪೊಂದನ್ನು ಪೂರ್ವಗ್ರಹ ಪೀಡಿತರಾಗಿ ಈ ರೀತಿ ತಪ್ಪಾಗಿ ನಿರೂಪಣೆ ಮಾಡಬಾರದು. ಇಂತಹ ಹೇಳಿಕೆಗಳು ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಧಕ್ಕೆ ತರುತ್ತವೆ
- ಉಪರಾಷ್ಟ್ರಪತಿ ಹುದ್ದೆಗೆ ಸ್ಪರ್ಧಿಸಿರುವ ಅಭ್ಯರ್ಥಿಯೊಬ್ಬರ ಕುರಿತು ಅವಹೇಳನಕಾರಿ ಹೇಳಿಕೆ ನೀಡಬಾರದು

ಕಾಂಗ್ರೆಸ್ ಟೀಕೆ

ನಿವೃತ್ತ ನ್ಯಾಯಮೂರ್ತಿಗಳು ಹಾಗೂ ಕಾನೂನು ತಜ್ಞರ ಹೇಳಿಕೆ ಉಲ್ಲೇಖಿಸುವ ಮೂಲಕ ಕಾಂಗ್ರೆಸ್ ಪಕ್ಷವು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಟೀಕಿಸಿದೆ.

'ಸಚಿವ ಅಮಿತ್ ಶಾ ಅವರನ್ನು ಬಹಿರಂಗವಾಗಿ ಟೀಕಿಸಬಲ್ಲಂತಹ ಜನರು ಭಾರತದಲ್ಲಿ ಇಂದಿಗೂ ಇದ್ದಾರೆ' ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಹೇಳಿದ್ದಾರೆ.

ಬಿಜೆಪಿ ಸಮರ್ಥನೆ

ಉಪರಾಷ್ಟ್ರಪತಿ ಚುನಾವಣೆಯಲ್ಲಿ, ವಿರೋಧ ಪಕ್ಷಗಳ ಕೂಟ 'ಇಂಡಿಯಾ'ದ ಅಭ್ಯರ್ಥಿ, ನಿವೃತ್ತ ನ್ಯಾಯಮೂರ್ತಿ ಸುದರ್ಶನ ರೆಡ್ಡಿ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿರುವ ಹೇಳಿಕೆಗಳನ್ನು ಬಿಜೆಪಿ ಸೋಮವಾರ ಸಮರ್ಥಿಸಿಕೊಂಡಿದೆ.

'ಸುದರ್ಶನ ರೆಡ್ಡಿ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರೆ. ಹೀಗಾಗಿ ಅವರ ಎಲ್ಲ ನಡೆಗಳನ್ನು ಪ್ರಶ್ನಿಸಲಾಗುತ್ತದೆ' ಎಂದು ಬಿಜೆಪಿ ವಕ್ತಾರ ರವಿಶಂಕರ ಪ್ರಸಾದ್ ಹೇಳಿದರು. 'ಸುದರ್ಶನ ರೆಡ್ಡಿ ಅವರು 2011ರಲ್ಲಿ ನೀಡಿದ್ದ ತೀರ್ಪಿನಿಂದ ನಕ್ಸಲರ ವಿರುದ್ಧದ ಹೋರಾಟಕ್ಕೆ ಹಿನ್ನಡೆಯಾಯಿತು ಹೀಗಾಗಿ, ಅವರು ಪ್ರಕಟಿಸಿದ್ದ ತೀರ್ಪಿನ ಕುರಿತು ಶಾ ಹೇಳಿಕೆ ನೀಡಿದ್ದಾರೆ' ಎಂದರು.

'ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿಯೊಬ್ಬರು ಹಾಗೂ ಕೆಲ ನ್ಯಾಯಮೂರ್ತಿಗಳು ಚುನಾವಣೆಯಲ್ಲಿ ಸ್ಪರ್ಧಿಸಿದ್ದರು ಇಲ್ಲವೇ ಆಯ್ಕೆಯಾಗಿದ್ದರು. ಆಗ, ಅವರ ಆಯ್ಕೆ ಬಗ್ಗೆ ವಿರೋಧ ಪಕ್ಷಗಳು ಪ್ರಶ್ನೆ ಎತ್ತಿದ್ದವು. ಈಗ, ನಿವೃತ್ತ ನ್ಯಾಯಮೂರ್ತಿ ರೆಡ್ಡಿ ಅವರನ್ನು ಶಾ ಪ್ರಶ್ನಿಸಿದ್ದರಲ್ಲಿ ತಪ್ಪೇನಿದೆ?' ಎಂದರು.

prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪ್ರಧಾನಿ ಭೇಟಿ

ಭಾರತ ಪ್ರವಾಸದಲ್ಲಿರುವ ಫಿಜಿ ಪ್ರಧಾನಿ ಸಿಟಿವೆನಿ ರಬುಕಾ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರನ್ನು ಸೋಮವಾರ ಭೇಟಿಯಾದರು



ಸೆನ್ಸೆಕ್ಸ್ 81,635 | ನಿಫ್ಟಿ 24,967 | $/₹ 87.56 | ಚಿನ್ನ (Std. 10g) ₹1,05,300 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,23,700 (ಬೆಂಗಳೂರು)

ಗೌರಿ ಹಬ್ಬದ ಶುಭಾಶಯಗಳು

ಅಂಗವಿಕಲರ ಅವಹೇಳನಕ್ಕೆ ಕಿಡಿ

ಬೇಷರತ್ ಕ್ಷಮೆ ಯಾಚಿಸಿ, ಪ್ರಸಾರ ಮಾಡಿ: ಇನ್‌ಫ್ಲುಯೆನ್ಸರ್‌ಗಳಿಗೆ 'ಸುಪ್ರೀಂ' ಸೂಚನೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ವಾಣಿಜ್ಯ ಉದ್ದೇಶವನ್ನು ಹೊಂದಿದ ಸ್ವೀಕಾರಾರ್ಹವಲ್ಲದ ಮಾತುಗಳನ್ನು ಮೂಲಭೂತ ಹಕ್ಕು ಎಂದು ಪರಿಗಣಿಸಲಾಗದು ಎಂಬುದಾಗಿ ಸ್ಪಷ್ಟಪಡಿಸಿರುವ ಸುಪ್ರೀಂ ಕೋರ್ಟ್, ಅಂಗವಿಕಲರು ಹಾಗೂ ಅಪರೂಪದ ಆನುವಂಶಿಕ ಸಮಸ್ಯೆಗಳಿಂದ ಬಳಲುವವರನ್ನು ಅವಹೇಳನ ಮಾಡಿದ್ದಕ್ಕಾಗಿ ಬೇಷರತ್ ಕ್ಷಮೆ ಯಾಚಿಸುವಂತೆ ಐವರು ಸಾಮಾಜಿಕ ಮಾಧ್ಯಮ ಇನ್‌ಫ್ಲುಯೆನ್ಸರ್‌ಗಳಿಗೆ ಸೋಮವಾರ ಸೂಚಿಸಿದೆ.

'ಇಂಡಿಯಾಸ್ ಗಾಟ್ ಲೇಟೆಂಟ್' ಕಾರ್ಯಕ್ರಮ ನಡೆಸಿಕೊಡುವ ಸಮಯ್ ರೈನಾ ಸೇರಿ ಐವರು ಇನ್‌ಫ್ಲುಯೆನ್ಸರ್‌ಗಳು ತಮ್ಮ ಪಾಡ್‌ಕಾಸ್ಟ್ ಅಥವಾ ಕಾರ್ಯಕ್ರಮಗಳಲ್ಲಿ ಬೇಷರತ್ ಕ್ಷಮೆ ಯಾಚಿಸಬೇಕು' ಎಂದು ಸೂಚಿಸಿದೆ.

ನ್ಯಾ ಯ ಮೂ ತಿ ್ ಗ ಳಾ ದ ಸೂರ್ಯಕಾಂತ ಮತ್ತು ಜಾಯ್‌ಮಾಲ್ಯ ಬಾಗ್ಚಿ ಅವರು ಇದ್ದ ಪೀಠ ಈ ನಿರ್ದೇಶನ ನೀಡಿದ್ದು, ವಿಚಾರಣೆಯನ್ನು ನವೆಂಬರ್‌ಗೆ ಮುಂದೂಡಿತು.

ಮುಖ್ಯಾಂಶಗಳು

- ವಿಚಾರಣೆ ನವೆಂಬರ್‌ಗೆ ಮುಂದೂಡಿಕೆ
- ನ್ಯಾ. ಸೂರ್ಯಕಾಂತ, ನ್ಯಾ. ಜಾಯ್‌ಮಾಲ್ಯ ಬಾಗ್ಚಿ ಪೀಠದ ನಿರ್ದೇಶನ

ರೈನಾ ಅಲ್ಲದೇ, ಇನ್‌ಫ್ಲುಯೆನ್ಸರ್‌ಗಳಾದ ವಿಪುಲ್ ಗೋಯಲ್, ಬಲರಾಜ್ ಪರಂಜೀತ್ ಸಿಂಗ್ ಘಾಯ್, ಸೋನಾಲಿ ಠಕ್ಕರ್ ಅಲಿಯಾಸ್ ಸೋನಾಲಿ ಆದಿತ್ಯ ದೇಸಾಯಿ ಹಾಗೂ ನಿಶಾಂತ್ ಜಗದೀಶ್ ತನ್ವರ್ ಆರೋಪಿಗಳಾಗಿದ್ದಾರೆ. ಸೋನಾಲಿ ಹೊರತುಪಡಿಸಿ ಉಳಿದ ನಾಲ್ವರು ನ್ಯಾಯಾಲಯದಲ್ಲಿ ಹಾಜರಿದ್ದರು.

'ಎಸಗಿದ ಅಪರಾಧ ಕೃತ್ಯದ ತೀವ್ರತೆಗಿಂತ ಅದಕ್ಕಾಗಿ ವ್ಯಕ್ತಪಡಿಸುವ ಪಶ್ಚಾತ್ತಾಪದ ಮಟ್ಟ ದೊಡ್ಡದಿರಬೇಕು. ಅಂಗವಿಕಲ ವ್ಯಕ್ತಿಗಳನ್ನು ಅವಹೇಳನ ಮಾಡಿರುವ ಸಾಮಾಜಿಕ ಮಾಧ್ಯಮಗಳ ಇನ್‌ಫ್ಲುಯೆನ್ಸರ್‌ಗಳಿಗೆ ನಂತರದ ದಿನಗಳಲ್ಲಿ ದಂಡ ವಿಧಿಸಲು ಪರಿಗಣಿಸಲಾಗುವುದು' ಎಂದು ಪೀಠ ಸ್ಪಷ್ಟಪಡಿಸಿದೆ.

'ಮಾಡಿರುವ ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು' ಎಂದ ನ್ಯಾಯಮೂರ್ತಿ ಸೂರ್ಯಕಾಂತ, 'ನೀವು ಎಷ್ಟು ದಂಡ ಪಾವತಿಸಲು ಸಿದ್ಧರಿದ್ದೀರಿ? ಸ್ಪೈನಲ್ ಮಸ್ಕುಲರ್ ಅಟ್ರೋಫಿ (ಎಸ್‌ಎಂಎ) ಸೇರಿ ವಿರಳ ಆನುವಂಶಿಕ ಸಮಸ್ಯೆಗಳಿಂದ ಬಳಲುವವರ ಚಿಕಿತ್ಸೆಗೆ ಆ ದಂಡದ ಹಣವನ್ನು ಬಳಸಿಕೊಳ್ಳಬಹುದು' ಎಂದು ಇನ್‌ಫ್ಲುಯೆನ್ಸರ್‌ಗಳನ್ನು ಉದ್ದೇಶಿಸಿ ಹೇಳಿದರು.

'ಅಂಗವಿಕಲರು ಸೇರಿ ವಿವಿಧ ಸಮುದಾಯಗಳ ಕುರಿತು ಹಾಸ್ಯ ಸೃಷ್ಟಿಸುವ ವೇಳೆ ಇನ್‌ಫ್ಲುಯೆನ್ಸರ್‌ಗಳು ಬಹಳ ಎಚ್ಚರಿಕೆಯಿಂದ ಇರಬೇಕು' ಎಂದು ನ್ಯಾಯಮೂರ್ತಿ ಬಾಗ್ಚಿ ಹೇಳಿದರು.

ಅಂಗವಿಕಲರನ್ನು ಅವಹೇಳನ ಮಾಡಿದ್ದರು ಎಂಬ ಆರೋಪಕ್ಕೆ ಸಂಬಂಧಿಸಿ, ವಿಚಾರಣೆಗೆ ಹಾಜರಾಗುವಂತೆ ಈ ಐವರು ಇನ್‌ಫ್ಲುಯೆನ್ಸರ್‌ಗಳಿಗೆ ಸುಪ್ರೀಂ ಕೋರ್ಟ್ ಜುಲೈ 15ರಂದು ನೋಟಿಸ್ ಜಾರಿ ಮಾಡಿತ್ತು.

ಇವರ ವಿರುದ್ಧ ಕ್ರಮ ಜರುಗಿಸುವಂತೆ ಕೋರಿ 'ಕ್ಯೂರ್ ಎಸ್‌ಎಂಎ ಫೌಂಡೇಷನ್ ಆಫ್ ಇಂಡಿಯಾ', ಕೋರ್ಟ್ ಮೆಟ್ಟಿಲೇರಿತ್ತು. ಸಂಸ್ಥೆ ಪರವಾಗಿ ಹಿರಿಯ ವಕೀಲೆ ಅಪರಾಜಿತಾ ಸಿಂಗ್ ಹಾಜರಿದ್ದರು.

ಮಾರ್ಗಸೂಚಿ ರಚಿಸಲು ಸೂಚನೆ

ಈ ಪ್ರಕರಣದಲ್ಲಿ ಮಾಹಿತಿ ಮತ್ತು ಪ್ರಸಾರ ಸಚಿವಾಲಯಕ್ಕೆ ಮಧ್ಯಂತರ ಅರ್ಜಿ ಸಲ್ಲಿಸಲು ಅನುಮತಿ ನೀಡಿದ ಪೀಠ, ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಸಾರವಾಗುವ ವಿಷಯವಸ್ತುಗಳ ನಿಯಂತ್ರಣಕ್ಕೆ ಮಾರ್ಗಸೂಚಿಗಳನ್ನು ರಚಿಸುವಂತೆ ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಅವರಿಗೆ ಸೂಚಿಸಿತು.

ಇದಕ್ಕೆ ಪ್ರತಿಕ್ರಿಯಿಸಿದ ವೆಂಕಟರಮಣಿ, 'ಮಾರ್ಗಸೂಚಿಗಳ ರಚನೆ ಕುರಿತು ಸರ್ಕಾರ ಕಾರ್ಯಪ್ರವೃತ್ತವಾಗಿದೆ' ಎಂದರು. ಇದಕ್ಕೆ ಸಮ್ಮತಿಸಿದ ನ್ಯಾಯಮೂರ್ತಿ ಸೂರ್ಯಕಾಂತ, 'ಈ ವಿಚಾರದಲ್ಲಿ ಉತ್ತರದಾಯಿತ್ವ ಎಂಬುದು ಇರಲೇಬೇಕು. ಇವತ್ತು ಅಂಗವಿಕಲರ ಅವಹೇಳನ ಮಾಡುತ್ತಾರೆ. ನಾಳೆ, ಮಹಿಳೆ, ಮಕ್ಕಳು ಹಾಗೂ ಹಿರಿಯ ನಾಗರಿಕರು ಗುರಿಯಾಗಬಹುದು' ಎಂದರು.

ಪೀಠ ಹೇಳಿದ್ದು

- ವಾಣಿಜ್ಯಿಕ ಭಾಷಣಗಳಲ್ಲಿ ತೊಡಗುವ ಇನ್‌ಫ್ಲುಯೆನ್ಸರ್‌ಗಳು ನಂತರ ತಮ್ಮ ಮಾತುಗಳು ಅಭಿವ್ಯಕ್ತಿ ಸ್ವಾತಂತ್ರ್ಯದಡಿ ಬರುತ್ತವೆ ಎಂದು ಹೇಳಬಾರದು
- ಸಮಾಜದಲ್ಲಿರುವ ವಿವಿಧ ಜನಸಮುದಾಯಗಳ ಸಂವೇದನೆಗಳ ಬಗ್ಗೆ ಸಾಮಾಜಿಕ ಮಾಧ್ಯಮಗಳ ಇನ್‌ಫ್ಲುಯೆನ್ಸರ್‌ಗಳ ಗಮನ ಹರಿಸಬೇಕು
- ಮಾರ್ಗಸೂಚಿಗಳು ಒಂದು ಘಟನೆಗೆ ಸಂಬಂಧಿಸಿ ರೂಪಿಸಿದ್ದಾಗಿರಬಾರದು. ಸಂಬಂಧಪಟ್ಟ ಕ್ಷೇತ್ರದ ತಜ್ಞರ ಅಭಿಪ್ರಾಯ ಪಡೆದು, ವ್ಯಾಪಕವಾಗಿ ಅನ್ವಯವಾಗುವ ಮಾರ್ಗಸೂಚಿಗಳನ್ನು ರಚಿಸಬೇಕು

ಒಳ ಮೀಸಲಾತಿಗೆ ಕೂಗು

ಪ್ರಜಾವಾಣಿ ಚಿತ್ರ

ಶೇ 1ರಷ್ಟು ಒಳ ಮೀಸಲಾತಿ ಕಲ್ಪಿಸಬೇಕು ಎಂದು ಆಗ್ರಹಪಡಿಸಿ 'ಅತಿಸೂಕ್ಷ್ಮ ಅಲೆಮಾರಿಗಳ ಸಮುದಾಯಗಳ ಒಳಮೀಸಲಾತಿ ವಂಚಿತ ಹೋರಾಟ ಸಮಿತಿ' ಸದಸ್ಯರು ಸೋಮವಾರ ಬಳ್ಳಾರಿಯಲ್ಲಿ ನಡೆಸಿದ ಪ್ರತಿಭಟನೆಯ ವೇಳೆ ಬಾಯಿ ಬಡಿದುಕೊಳ್ಳುವ ಮೂಲಕ ಗಮನಸೆಳೆದರು

'ಸುಳ್ಳು ಜಾತಿ: 170 ಪ್ರಕರಣ'

ಸರ್ಕಾರದ ಸೌಲಭ್ಯ ಹಿಂಪಡೆಯಲು ಮುಖ್ಯಮಂತ್ರಿ ಸೂಚನೆ

6,635	4,912	4149	36	679
2023ರಿಂದ ಪರಿಶಿಷ್ಟರ ಮೇಲಿನ ದೌರ್ಜನ್ಯ ಪ್ರಕರಣ	ದೋಷಾರೋಪ ಪಟ್ಟಿ ಸಲ್ಲಿಕೆ	60 ದಿನಗಳ ಒಳಗೆ ದೋಷಾರೋಪ ಪಟ್ಟಿ ಸಲ್ಲಿಕೆ ಪ್ರಕರಣ	ಶಿಕ್ಷೆಯಾದ ಪ್ರಕರಣ	ತನಿಖಾ ಹಂತದಲ್ಲಿರುವ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸುಳ್ಳು ಜಾತಿ ಪ್ರಮಾಣಪತ್ರ ಪಡೆದಿರುವ ಆರೋಪ ಸಾಬೀತಾಗಿರುವ 170 ಪ್ರಕರಣಗಳಲ್ಲಿ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸರ್ಕಾರದ ಸೌಲಭ್ಯ ಪಡೆದಿರುವುದು ಸಾಬೀತಾದರೆ, ಅದನ್ನು ಹಿಂಪಡೆಯಬೇಕು' ಎಂದು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ವಿಧಾನಸೌಧ ಸಮ್ಮೇಳನ ಸಭಾಂಗಣದಲ್ಲಿ ಸೋಮವಾರ ನಡೆದ 2025-26ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ನಿಯಂತ್ರಣ) ಜಾಗೃತ ಹಾಗೂ ಉಸ್ತುವಾರಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, 'ಸುಳ್ಳು ಜಾತಿ ಪ್ರಮಾಣಪತ್ರ ಪ್ರಕರಣಗಳಲ್ಲಿ ನ್ಯಾಯಾಲಯಗಳು ನೀಡಿರುವ ತೀರ್ಪುಗಳ ಅನ್ವಯ ಯಾಕೆ ಕ್ರಮ ಕೈಗೊಂಡಿಲ್ಲ' ಎಂದು ಖಾರವಾಗಿ ಪ್ರಶ್ನಿಸಿದ್ದಾರೆ.

▶8

ಮುಖ್ಯಮಂತ್ರಿ ಹೇಳಿದ್ದೇನು...

ಸಿದ್ದರಾಮಯ್ಯ

- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆ ಕಟ್ಟುನಿಟ್ಟಾಗಿ ಜಾರಿ
- ಸುಳ್ಳು ಜಾತಿ ಪ್ರಮಾಣಪತ್ರ ಸಲ್ಲಿಸಿದ ಪ್ರಕರಣಗಳಲ್ಲಿ ಕಾನೂನು ಕ್ರಮ
- ದೇವದಾಸಿಯರ ಸಮೀಕ್ಷೆ ಪೂರ್ಣಗೊಂಡ ಬಳಿಕ, ಪುನರ್ವಸತಿ ಮತ್ತು ಈ ಪಿಡುಗು ತೊಲಗಿಸಲು ಯೋಜನೆ ಜಾರಿ
- ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ ವಿಷಯದಲ್ಲಿ ರಾಜಿ ಪ್ರಶ್ನೆಯೇ ಇಲ್ಲ
- ದಲಿತರಿಗೆ ನ್ಯಾಯ ಒದಗಿಸುವ ವಿಚಾರದಲ್ಲಿ ಅಡ್ಡಗಾಲು ಹಾಕುವ ಅಧಿಕಾರಿಗಳ ವಿರುದ್ಧ ಕ್ರಮ

ಮೇಲ್ಮನೆಗೆ 4 ಹೆಸರು ಅಂತಿಮ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ನಲ್ಲಿ ಖಾಲಿ ಇರುವ ನಾಲ್ಕು ಸ್ಥಾನಗಳಿಗೆ ಏಳು ತಿಂಗಳ ಹಗ್ಗ ಜಗ್ಗಾಟದ ಬಳಿಕ ಆರತಿ ಕೃಷ್ಣ, ರಮೇಶ್ ಬಾಬು, ಎಫ್.ಎಚ್. ಜಕ್ಕಪ್ಪನವರ್ ಮತ್ತು ಶಿವಕುಮಾರ್ ಅವರ ಹೆಸರನ್ನು ಕಾಂಗ್ರೆಸ್ ಅಂತಿಮಗೊಳಿಸಿದೆ.

ಈ ನಾಲ್ವರನ್ನು ನಾಮನಿರ್ದೇಶನ ಮಾಡಿ ಆದೇಶ ಹೊರಡಿಸುವಂತೆ ರಾಜಭವನಕ್ಕೆ ರಾಜ್ಯ ಸರ್ಕಾರದಿಂದ ಪತ್ರ ರವಾನೆಯಾಗಿದೆ. ಅಧಿಸೂಚನೆ ಹೊರಬೀಳುವುದು ಬಾಕಿ ಇದೆ.

ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ್‌ಬಾಬು, ಕರ್ನಾಟಕ ಸರ್ಕಾರದ ಅನಿವಾಸಿ ಭಾರತೀಯ ಸಮಿತಿ ಅಧ್ಯಕ್ಷೆ ಆರತಿ ಕೃಷ್ಣ, ಎಐಸಿಸಿ ಪರಿಶಿಷ್ಟ ಜಾತಿ ವಿಭಾಗದ ಪ್ರಧಾನ ಕಾರ್ಯದರ್ಶಿ ಜಕ್ಕಪ್ಪನವರ್, ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತ, ಪತ್ರಕರ್ತ ಮೈಸೂರಿನ ಶಿವಕುಮಾರ್ ಅವರಿಗೆ ಅವಕಾಶ ಒಲಿದಿದೆ.

ಜಾತಿವಾರು ಲೆಕ್ಕಾಚಾರ: ನಾಮ ನಿರ್ದೇಶನಗೊಂಡಿರುವ ನಾಲ್ವರ ಪೈಕಿ ಆರತಿ ಕೃಷ್ಣ ಅವರು ಒಕ್ಕಲಿಗ, ರಮೇಶ್ ಬಾಬು ಅವರು ಹಿಂದುಳಿದ ವರ್ಗ, ಜಕ್ಕಪ್ಪನವರ್ ಹಾಗೂ ಶಿವಕುಮಾರ್ ಅವರು ದಲಿತ ಬಲಗೈ ಸಮುದಾಯಕ್ಕೆ ಸೇರಿದವರು.

ಒಳ ಮೀಸಲು ಜಾರಿ: ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಗೆ ಲಭ್ಯ ಇರುವ ಶೇಕಡ 17ರಷ್ಟು ಮೀಸಲಾತಿಯ ಪೈಕಿ, ಎಡಗೈ ಸಂಬಂಧಿತ ಜಾತಿಗಳಿರುವ 'ಎ' ಪ್ರವರ್ಗಕ್ಕೆ ಶೇ 6, ಬಲಗೈ ಸಂಬಂಧಿತ ಜಾತಿಗಳಿರುವ 'ಬಿ' ಪ್ರವರ್ಗಕ್ಕೆ ಶೇ 6 ಹಾಗೂ ಸ್ಪೃಶ್ಯ ಮತ್ತು ಅಲೆಮಾರಿ ಜಾತಿಗಳಿರುವ 'ಸಿ' ಪ್ರವರ್ಗಕ್ಕೆ ಶೇ 5ರಷ್ಟು ಒಳ ಮೀಸಲಾತಿ ಜಾರಿಗೊಳಿಸಿ ರಾಜ್ಯ ಸರ್ಕಾರ ಸೋಮವಾರ ಆದೇಶ ಹೊರಡಿಸಿದೆ.

101 ಜಾತಿಗಳನ್ನು 'ಎ', 'ಬಿ', 'ಸಿ' ಎಂದು ಮೂರು ಪ್ರವರ್ಗಗಳಾಗಿ ವಿಂಗಡಿಸಲಾಗಿದೆ. ಸರ್ಕಾರಿ ಹುದ್ದೆಗಳಿಗೆ ಒಳ ಮೀಸಲಾತಿ ಕಾರಣಕ್ಕೆ ತಡೆ ಹಿಡಿಯಲಾಗಿದ್ದ ನೇರ ನೇಮಕಾತಿ ಪ್ರಕ್ರಿಯೆಯನ್ನು ಆರಂಭಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಕ್ರಮ ವಹಿಸಬೇಕು. ಎಲ್ಲ ಇಲಾಖೆಗಳು ಮತ್ತು ಅವುಗಳ ಅಧೀನದ ಎಲ್ಲ ನಿಗಮ, ಮಂಡಳಿ, ಸಂಸ್ಥೆಗಳಲ್ಲಿ ಮುಂಬಡ್ತಿ ಪ್ರಕ್ರಿಯೆಯನ್ನೂ ಮುಂದುವರಿಸಬಹುದು ಎಂದೂ ಆದೇಶದಲ್ಲಿ ತಿಳಿಸಲಾಗಿದೆ.

▶8

'ಸುಂಕ: ತೊಂದರೆ ಆಗುವ ಕ್ಷೇತ್ರಕ್ಕೆ ನೆರವು'

ನವದೆಹಲಿ: ಅಮೆರಿಕವು ಭಾರತದ ಸರಕುಗಳ ಮೇಲೆ ವಿಧಿಸಿರುವ ಭಾರಿ ಪ್ರಮಾಣದ ಸುಂಕದ ಕಾರಣದಿಂದಾಗಿ ತೊಂದರೆಗೆ ಒಳಗಾಗಬಹುದಾದ ಹವಳ ಮತ್ತು ಆಭರಣ, ಜವಳಿ, ಸೀಗಡಿ ಹಾಗೂ ಎಂಎಸ್‌ಎಂಇ ವಲಯಕ್ಕೆ ಬೆಂಬಲವಾಗಿ ನಿಲ್ಲಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಕ್ರಮ ಕೈಗೊಳ್ಳಲಿದೆ ಎಂದು ಗವರ್ನರ್ ಸಂಜಯ್ ಮಲ್ಹೋತ್ರಾ ಸೋಮವಾರ ಹೇಳಿದ್ದಾರೆ.

ವಿವರ ▶8

ಚಿನಕುರುಳಿ — ಪ್ರಕಾಶ್ ಶೆಟ್ಟಿ



ಅಸ್ತಿತ್ವ ಕಳೆದುಕೊಳ್ಳಲಿದೆ ಬಿಬಿಎಂಪಿ

ಜಿಬಿಎ, 5 ನಗರ ಪಾಲಿಕೆಗಳ ಅಂತಿಮ ಅಧಿಸೂಚನೆ ಸೆ.2ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) 18 ವರ್ಷಗಳ ನಂತರ ಅಸ್ತಿತ್ವ ಕಳೆದುಕೊಳ್ಳುವ ದಿನ ಹತ್ತಿರವಾಗುತ್ತಿದೆ. ಸೆಪ್ಟೆಂಬರ್ 2ರಂದು ಐದು ನಗರ ಪಾಲಿಕೆಗಳ ಅಂತಿಮ ಅಧಿಸೂಚನೆ ಹೊರಬೀಳುತ್ತಿದಂತೆಯೇ ಬಿಬಿಎಂಪಿ ಹೆಸರು ಇಲ್ಲವಾಗಲಿದೆ.

ಐದು ನಗರ ಪಾಲಿಕೆಗಳ ಅಂತಿಮ ಅಧಿಸೂಚನೆ ಜೊತೆಗೆ ಅಥವಾ ಅದಕ್ಕೂ ಮುನ್ನ, ಮುಖ್ಯಮಂತ್ರಿಯವರ ನೇತೃತ್ವದ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ' (ಜಿಬಿಎ) ರಚನೆಯಾಗಲಿದೆ. ಬಿಬಿಎಂಪಿ ಮುಖ್ಯ ಆಯುಕ್ತರು ಜಿಬಿಎ ಮುಖ್ಯ ಆಯುಕ್ತರಾಗಲಿದ್ದು, ಬಿಡಿಎ, ಜಲಮಂಡಳಿ, ಬೆಸ್ಕಾಂ, ಪೊಲೀಸ್ ಸೇರಿದಂತೆ ವಿವಿಧ ಇಲಾಖೆಗಳ ಮುಖ್ಯಸ್ಥರು ಜಿಬಿಎ ಸದಸ್ಯರಾಗಲಿದ್ದಾರೆ.

ಬೆಂಗಳೂರು ಕೇಂದ್ರ ನಗರ ಪಾಲಿಕೆ, ಬೆಂಗಳೂರು ಉತ್ತರ ನಗರ ಪಾಲಿಕೆ, ಬೆಂಗಳೂರು ದಕ್ಷಿಣ ನಗರ ಪಾಲಿಕೆ, ಬೆಂಗಳೂರು ಪೂರ್ವ ನಗರ ಪಾಲಿಕೆ, ಬೆಂಗಳೂರು ಪಶ್ಚಿಮ ನಗರ ಪಾಲಿಕೆಗಳಿಗೆ ಆಯುಕ್ತರನ್ನು ಸರ್ಕಾರ ನೇಮಿಸಲಿದೆ ಎಂದು ಬಿಬಿಎಂಪಿಯ ಅಧಿಕಾರಿಗಳು ಮಾಹಿತಿ ನೀಡಿದರು.

▶3B

ಎನ್.ಆರ್.ಚೌಕದಲ್ಲಿರುವ ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿರುವ ಮೇಯರ್ ಕಚೇರಿಯನ್ನು ಮರು ವಿನ್ಯಾಸಗೊಳಿಸಲಾಗುತ್ತಿದೆ

ಸಿ.ಎಂಗೆ ಮೇಯರ್ ಕಚೇರಿ

ಎನ್.ಆರ್. ಚೌಕದಲ್ಲಿರುವ ಪಾಲಿಕೆಯ ಕೇಂದ್ರ ಕಚೇರಿಯಲ್ಲಿ 1958ರಿಂದ ಇರುವ ನಗರದ ಮೇಯರ್ ಅವರು ಅಥವಾ ಚುನಾಯಿತ ಪ್ರತಿನಿಧಿಗಳು ಇಲ್ಲದಾಗ ಆಡಳಿತಾಧಿಕಾರಿಯ ಕಚೇರಿ ಇನ್ನು ಮುಂದೆ ಜಿಬಿಎ ಅಧ್ಯಕ್ಷರಾಗುವ ಮುಖ್ಯಮಂತ್ರಿಯವರ ಕಚೇರಿಯಾಗಲಿದೆ. ನಗರದ 53 ಮೇಯರ್‌ಗಳ ಭಾವಚಿತ್ರಗಳು ಹಾಗೂ ಮೇಯರ್‌ಗಳ ಅವಧಿಯ ಫಲಕಗಳನ್ನು ಕಚೇರಿಯಿಂದ ತೆರವು ಮಾಡಲಾಗಿದೆ. ಮುಖ್ಯಮಂತ್ರಿಯವರಿಗಾಗಿಯೇ ಅತ್ಯಾಧುನಿಕವಾಗಿ ಕಚೇರಿಯನ್ನು ಸಜ್ಜುಗೊಳಿಸುವ ಕೆಲಸ ಆರಂಭವಾಗಿದೆ. ಹಗಲು ರಾತ್ರಿ ಮರುವಿನ್ಯಾಸ ಕೆಲಸ ನಡೆಯುತ್ತಿದೆ.

ಪಾಲಿಕೆಯ ಹಿಂದಿನ ಮೇಯರ್‌ಗಳ ಭಾವಚಿತ್ರಗಳನ್ನು ತೆರವು ಮಾಡಲಾಗಿದೆ. ಅವುಗಳೆಲ್ಲವನ್ನು ಸದ್ಯದ ಮಟ್ಟಿಗೆ, ಪಾಲಿಕೆ ಆವರಣದಲ್ಲೇ ಇರುವ ಕೌನ್ಸಿಲ್ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ.

ಬಾನು ಮುಷ್ತಾಕ್‌ಗೆ ದಸರಾ ಉದ್ಘಾಟಿಸಲು ಆಹ್ವಾನ –ಸಂಸದ ಯದುವೀರ್ ಪ್ರತಿಕ್ರಿಯೆ

'ಭಿನ್ನಾಭಿಪ್ರಾಯವಿಲ್ಲ, ಸಮಸ್ಯೆಯೂ ಇಲ್ಲ'

ಪ್ರಜಾವಾಣಿ ವಾರ್ತೆ

ಯದುವೀರ್ ಒಡೆಯರ್

ಮೈಸೂರು: 'ಬಾನು ಮುಷ್ತಾಕ್ ಅವರನ್ನು ದಸರಾ ಉದ್ಘಾಟನೆಗೆ ಆಹ್ವಾನಿಸಿದ್ದರಲ್ಲಿ ನಮಗೆ ಸಮಸ್ಯೆ ಇಲ್ಲ; ಭಿನ್ನಾಭಿಪ್ರಾಯವೂ ಇಲ್ಲ. ಆದರೆ, ಧಾರ್ಮಿಕ ಭಾವನೆಗೆ ಧಕ್ಕೆ ಆಗದಂತೆ ನೋಡಿಕೊಳ್ಳಬೇಕು ಎಂಬುದು ನನ್ನ ಒತ್ತಾಯ' ಎಂದು ರಾಜವಂಶಸ್ಥ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಸೋಮವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಅವರು, 'ಬಾನು ಮುಷ್ತಾಕ್ ಅವರು ಕನ್ನಡ ಸಾಹಿತ್ಯ ಹಾಗೂ ಭಾಷೆಗೆ ನೀಡಿರುವ ಕೊಡುಗೆ ಅಪಾರ. ಅದರಲ್ಲಿ ಅನುಮಾನವಿಲ್ಲ. ಸಾಮಾಜಿಕ ಹೋರಾಟ ಮಾಡಿದ್ದಾರೆ. ಮುಸ್ಲಿಂ ಮಹಿಳೆಯರ ಸಮಾನ ಹಕ್ಕುಗಳು ಸಿಗುವಂತಾಗಲು, ಮಹಿಳೆಗೆ ಮಸೀದಿಗೆ ಪ್ರವೇಶ ಕಲ್ಪಿಸಲು ಶ್ರಮಿಸಿದ್ದಾರೆ' ಎಂದರು.

▶5

'ಎಲ್ಲರ ಭಾವ ಗೌರವಿಸುವೆ'

ಬಾನು ಮುಷ್ತಾಕ್

ಹಾಸನ: 'ನೀವು ಚಾಮುಂಡೇಶ್ವರಿ ತಾಯಿ ಎನ್ನುತ್ತೀರಿ. ನಿಮ್ಮ ಭಾವವನ್ನು ಗೌರವಿಸುತ್ತೇನೆ. ಅನೇಕರು ದಸರಾ ಉತ್ಸವವನ್ನು ನಾಡಹಬ್ಬ ಎನ್ನುತ್ತಾರೆ, ಅದನ್ನೂ ಗೌರವಿಸುತ್ತೇನೆ' ಎಂದು ಲೇಖಕಿ ಬಾನು ಮುಷ್ತಾಕ್ ಹೇಳಿದರು.

ದಸರಾ ಉದ್ಘಾಟನೆಗೆ ಆಯ್ಕೆಯಾಗಿರುವ ಪ್ರಯುಕ್ತ ಬೆಂಗಳೂರಿನ 'ಅಮ್ಮನ ಮಡಿಲು' ಸಂಸ್ಥೆ ಸಂಸ್ಥಾಪಕಿ, ಕಲಾವಿದೆ ಶಶಿಕಲಾ ಅವರಿಂದ ಬಾಗಿನ ಸ್ವೀಕರಿಸಿ ಅವರು ಮಾತನಾಡಿದರು. 'ನಾಡ ಹಬ್ಬ, ಚಾಮುಂಡೇಶ್ವರಿ ತಾಯಿ ಎಂದು ಪ್ರೀತಿ, ಅಭಿಮಾನದಿಂದ ಕರೆಯುವುದೂ ನಮ್ಮ ಸಂಸ್ಕೃತಿಯ ಭಾಗವೇ ಆಗಿದೆ. ಹಾಗಾಗಿ ಇದು ನನಗೂ ಪ್ರಿಯವಾಗಿದೆ' ಎಂದು ಹೇಳಿದರು.

'ದಸರಾ ನಾನು ಪ್ರೀತಿಯಿಂದ ಭಾಗಿಯಾಗುವ ಹಬ್ಬ. ತಂದೆ-ತಾಯಿ ಜೊತೆ ಹಲವು ಬಾರಿ ಜಂಬೂಸವಾರಿ ನೋಡಲು ಹೋಗಿದ್ದೆ. ಈಗ ನನಗೇ ಉದ್ಘಾಟನೆಗೆ ಆಹ್ವಾನ ಬಂದಿರುವುದು ಸಂತೋಷವಾಗಿದೆ' ಎಂದರು.

'ವಿರೋಧಿಸುವವರಿಗೆ ಏನು ಹೇಳಬೇಕು?'

'ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿರುವುದನ್ನು ವಿರೋಧಿಸುವವರ ಮಾತಿಗೆ ಏನು ಹೇಳಬೇಕು? ಧಾರ್ಮಿಕ, ಸಾಮಾಜಿಕವಾಗಿ ಎಲ್ಲರೂ ಒಂದೇ ಎಂದು ನಮ್ಮ ಸಂವಿಧಾನದ ಪೀಠಿಕೆಯಲ್ಲಿಯೇ ಇದೆ. ದಸರಾ ಸಾಂಸ್ಕೃತಿಕ ಜೀವನ ಅಭಿವ್ಯಕ್ತಿಗೊಳಿಸುವ ಹಬ್ಬ' ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ. ಮಹದೇವಪ್ಪ ಹೇಳಿದರು.

▶5

'ಚಾಮುಂಡಿ ಬೆಟ್ಟ ಬಾನು ಹತ್ತಬಾರದು'

ಬೆಂಗಳೂರು: 'ಬಾನು ಮುಷ್ತಾಕ್ ಅವರು ಚಾಮುಂಡಿ ಬೆಟ್ಟ ಹತ್ತಬಾರದು. ಅವರಿಗೆ ನೀಡಿರುವ ಆಹ್ವಾನವನ್ನು ಕೂಡಲೇ ವಾಪಸ್ ಪಡೆಯಬೇಕು' ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ಆಗ್ರಹಿಸಿದ್ದಾರೆ.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ದಸರಾ ಮಹೋತ್ಸವವು ಮಹಿಷಾಸುರನನ್ನು ಸಂಹಾರ ಮಾಡಿದ ಚಾಮುಂಡೇಶ್ವರಿಯ ವಿಜಯದ ಸಂಕೇತ. ಅದನ್ನು ಒಪ್ಪದವರಿಗೆ ಆಹ್ವಾನ ನೀಡುವ ಮೂಲಕ ಈ ಆಚರಣೆಗೆ ಮತ್ತು ದೇವಸ್ಥಾನಕ್ಕೆ ಅಪಮಾನ ಮಾಡುವ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡಿದೆ' ಎಂದು ದೂರಿದರು.

▶5

ಹವಾಮಾನ ಮುನ್ಸೂಚನೆ: ನಗರದಲ್ಲಿ ಸಾಮಾನ್ಯವಾಗಿ ಮೋಡ ಕವಿದ ವಾತಾವರಣವಿದ್ದು, ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ

ಹೂವುಗಳ ದರ ಪ್ರತಿ ಕೆ.ಜಿ.ಗೆ (₹ಗಳಲ್ಲಿ)

	ಕಳೆದ ವಾರ	ಈ ವಾರ
ಕನಕಾಂಬರ	600	2,500
ಮಲ್ಲಿಗೆ	400	1,000
ಗುಲಾಬಿ	150	250
ಸೇವಂತಿಗೆ	100	250
ಸುಗಂಧರಾಜ	100	300
ಹಣ್ಣುಗಳ ದರ ಪ್ರತಿ ಕೆ.ಜಿಗೆ		
ಸೇಬು	120	200
ದಾಳಿಂಬೆ	80	100
ಏಲಕ್ಕಿ ಬಾಳೆ	60	80
ಸೀತಾಫಲ	80	100
ಸಪೋಟ	80	100
ಅನಾನಸ್	70ಕ್ಕೆ ಎರಡು	
ತರಕಾರಿ ದರಗಳು ಪ್ರತಿ ಕೆಜಿಗೆ		
ಕ್ಯಾರೆಟ್	60	70
ಕ್ಯಾಪ್ಸಿಕಮ್	40	60
ಈರುಳ್ಳಿ	20	20
ಬೀನ್ಸ್	50	80
ಟೊಮೆಟೊ	20	40
ಆಲೂಗಡ್ಡೆ	25	30
ಹಿರೇಕಾಯಿ	50	60
ಚವಳಿಕಾಯಿ	40	62
ಮೆಣಸಿನಕಾಯಿ	100	80
ಕುಂಬಳಕಾಯಿ	30	40
ಬೆಳ್ಳುಳ್ಳಿ	100	140
ಪ್ರತಿ ಕಟ್ಟಿಗೆ		
ಕೊತ್ತಂಬರಿ	20	20
ಪಾಲಕ್	10	20
ಸಬ್ಬಸಿಗೆ	20	30
ಮೆಂತ್ಯೆ	20	20
ಪುದೀನ	10	20
ಬಾಳೆಕಂಬ ಜೋಡಿಗೆ (ದೊಡ್ಡ ಗಾತ್ರದ್ದು)	100	
ಮಾವಿನ ಎಲೆಯ ಕಟ್ಟು	30	

ಕನಕಾಂಬರ ಪ್ರತಿ ಕೆ.ಜಿಗೆ ₹2,500

ಗೌರಿ–ಗಣೇಶ ಹಬ್ಬಕ್ಕೆ ನಗರದ ವಿವಿಧ ಮಾರುಕಟ್ಟೆಗಳಲ್ಲಿ ಖರೀದಿ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೌರಿ–ಗಣೇಶ ಹಬ್ಬವನ್ನು ಸಂಭ್ರಮ- ಸಡಗರದಿಂದ ಆಚರಿಸಲು ನಗರದ ಜನರು ಸಜ್ಜಾಗಿದ್ದಾರೆ.

ಹಬ್ಬಕ್ಕೆ ಬೇಕಾಗಿರುವ ಗೌರಿ–ಗಣೇಶನ ಮೂರ್ತಿ, ಹೂವು, ಹಣ್ಣು, ಪೂಜಾ ಸಾಮಗ್ರಿಗಳ ಖರೀದಿ ಸಂಭ್ರಮ ಸೋಮವಾರ ಜೋರಾಗಿತ್ತು.

ವರಮಹಾಲಕ್ಷ್ಮಿ ಹಬ್ಬದ ವೇಳೆ ಗಗನಕ್ಕೇರಿದ್ದ ಹೂವು -ಹಣ್ಣು ಬೆಲೆ ಈಗ ಸ್ವಲ್ಪ ಇಳಿದಿದೆ. ವರ ಮಹಾಲಕ್ಷ್ಮಿ ಹಬ್ಬದಲ್ಲಿ ಹೂವಿನ ದರ ಹೆಚ್ಚಿತ್ತು, ಈಗ ತುಸು ಇಳಿದಿದೆ.

ಕೆ.ಆರ್. ಮಾರುಕಟ್ಟೆಯಲ್ಲಿ ಸೋಮವಾರ ಮುಂಜಾನೆಯೇ ಗ್ರಾಹಕರು ಸೇರಿದ್ದರು. ಚಿಕ್ಕಪೇಟೆಯ ಅವೆನ್ಯೂ ರಸ್ತೆ ಸೇರಿ ಹಲವು ರಸ್ತೆಗಳಲ್ಲಿ ಜನದಟ್ಟಣೆ ಹೆಚ್ಚಿತ್ತು. ಸಂಚಾರ ದಟ್ಟಣೆ ನಿವಾರಣೆಗೆ ಪೊಲೀಸರು ಹರಸಾಹಸ ಪಟ್ಟರು.

ಕನಕಾಂಬರ ಈಗಲೂ ದುಬಾರಿ: ವರಮಹಾಲಕ್ಷ್ಮಿ ಹಬ್ಬದ ಅವಧಿಯಲ್ಲಿನ ದರಕ್ಕೆ ಹೋಲಿಸಿದರೆ ಗೌರಿ-ಗಣೇಶನ ಹಬ್ಬಕ್ಕೆ ಹೂವಿನ ದರ ಕಡಿಮೆಯಾಗಿದೆ. ಆದರೆ, ಕನಕಾಂಬರ ಮಾತ್ರ ಕೆ.ಜಿ.ಗೆ ₹2,500ರಂತೆ ಮಾರಾಟವಾಗುತ್ತಿದೆ.

‘ವರಮಹಾಲಕ್ಷ್ಮಿ ಹಬ್ಬದ ವೇಳೆ ಪ್ರತಿ ಕೆ.ಜಿ. ಕನಕಾಂಬರ ಹೂವಿನ ದರ ₹3,000ಕ್ಕೆ ತಲುಪಿತ್ತು. ನಂತರ ಪ್ರತಿ ಕೆ.ಜಿ.ಗೆ ₹ 600ಕ್ಕೆ ಕುಸಿದಿತ್ತು. ಹಬ್ಬ ಸಮೀಪಿಸುತ್ತಿದ್ದಂತೆ ಮತ್ತೆ ಭಾರಿ ಜಿಗಿತ ಕಂಡಿದೆ’ ಎಂದು ಕೆ.ಆರ್. ಮಾರುಕಟ್ಟೆಯ ಹೂವಿನ ವ್ಯಾಪಾರಿಗಳಾದ ಸಾಹಿಲ್ ಹಾಗೂ ಮಂಜುನಾಥ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮಲ್ಲಿಗೆ ಹೂವು ಕೆ.ಜಿಗೆ ₹1,000 ರಂತೆ ಮಾರಾಟ ಆಗುತ್ತಿದೆ. ಹೂವಿನ ದರಗಳಲ್ಲಿ ಬುಧವಾರ ಕೊಂಚ ಏರಿಕೆಯಾಗುವ ಸಾಧ್ಯತೆ ಇದೆ’ ಎಂದು ಅವರು ತಿಳಿಸಿದರು.

ಗರಿಕೆ, ಬೇಲದ ಹಣ್ಣು, ಎಕ್ಕದ ಹೂವಿನಹಾರಕ್ಕೆ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆಯಿತ್ತು. ಜತೆಗೆ ಬಾಳೆಕಂದು, ಹೂವಿನಹಾರ, ಪೂಜಾ ಸಾಮಗ್ರಿಗಳ ಖರೀದಿ ಭರಾಟೆ ಹೆಚ್ಚಾಗಿತ್ತು. ಎಕ್ಕದ ಹಾರಕ್ಕೆ ₹50, ಗರಿಕೆ ಕಟ್ಟು ಒಂದಕ್ಕೆ ₹30 ಇತ್ತು. ಪ್ರದೇಶವಾರು ದರಗಳಲ್ಲಿ ವ್ಯತ್ಯಾಸವಿದೆ.

ಗಾಂಧಿ ಬಜಾರ್, ಜಯನಗರ, ಬಸವನಗುಡಿ, ಬನಶಂಕರಿ, ರಾಜಾಜಿನಗರ, ಮಲ್ಲೇಶ್ವರ ಸೇರಿ ನಗರದ ವಿವಿಧ ಭಾಗಗಳಲ್ಲಿ ಹೂವು, ಹಣ್ಣಿನ ತಾತ್ಕಾಲಿಕ ಮಳಿಗೆಗಳು, ಗಣಪತಿ ವಿಗ್ರಹಗಳನ್ನು ಮಾರಾಟ ಮಾಡುವ ಅಂಗಡಿಗಳು ತಲೆಎತ್ತಿವೆ.

ಮಾರುಕಟ್ಟೆಗೆ ಬಗೆ-ಬಗೆಯ ಗೌರಿ-ಗಣೇಶ ಮೂರ್ತಿಗಳು ಬಂದಿವೆ. ಸೋಮವಾರದಿಂದಲೇ ಗೌರಿ, ಗಣೇಶ-ಮೂರ್ತಿಗಳ ಮಾರಾಟ ಜೋರಾಗಿತ್ತು. ಗೌರಿ ಹಬ್ಬ ಆಚರಿಸುವವರು ಗಜಗೌರಿ, ಮಡಿಗೌರಿ ಮತ್ತಿತರ ಬಗೆಯ ಗೌರಿಯ ಮೂರ್ತಿಗಳನ್ನು ಮಹಿಳೆಯರು ಖರೀದಿಸಿದರು.

ಗಾಂಧಿ ಬಜಾರ್ ಮುಖ್ಯ ರಸ್ತೆಯಲ್ಲಿ ಗೌರಿ ಹಬ್ಬದ ಅಂಗವಾಗಿ ಹೂ ಹಣ್ಣು ಖರೀದಿಯಲ್ಲಿ ತೊಡಗಿರುವ ಮಹಿಳೆಯರು –ಪ್ರಜಾವಾಣಿ ಚಿತ್ರ/ ರಂಜು ಪಿ

ನಗರದಾದ್ಯಂತ ಸೂಕ್ತ ಬಂದೋಬಸ್ತ್ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಸೀಮಂತ್ ಕುಮಾರ್

ಬೆಂಗಳೂರು: ನಗರದಲ್ಲಿ ಗೌರಿ–ಗಣೇಶ ಹಬ್ಬದ ಸಂಭ್ರಮ ಮನೆ ಮಾಡಿದ್ದು, ಗಣೇಶಮೂರ್ತಿಯ ಪ್ರತಿಷ್ಠಾಪನೆ ಹಾಗೂ ವಿಸರ್ಜನಾ ಮೆರವಣಿಗೆಗೆ ಸೂಕ್ತ ಬಂದೋಬಸ್ತ್ ಕೈಗೊಳ್ಳುವಂತೆ ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಅವರು ನಗರದ ಎಲ್ಲ ಉಪ ವಿಭಾಗಗಳ ಡಿಸಿಪಿಗಳು, ಎಸಿಪಿಗಳು ಹಾಗೂ ಠಾಣಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಈದ್ ಮಿಲಾದ್ ಹಬ್ಬವೂ ಸಮೀಪಿಸುತ್ತಿದ್ದು, ನಗರದಾದ್ಯಂತ ಬಂದೋಬಸ್ತ್ ಕೈಗೊಳ್ಳಬೇಕು ಎಂದು ಪೊಲೀಸ್ ಕಮಿಷನರ್ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಸೂಚನೆ ನೀಡಿದ್ದಾರೆ.

ಬೆಸ್ಕಾಂ ಅಧಿಕಾರಿಗಳ ಜೊತೆ ಸಂಪರ್ಕದಲ್ಲಿ ಇರಬೇಕು. ಈ ಹಿಂದೆ ಗಣೇಶಮೂರ್ತಿ ಪ್ರತಿಷ್ಠಾಪನಾ ಸ್ಥಳದಲ್ಲಿ ಯಾವುದಾದರೂ ಘಟನೆಗಳು ನಡೆದಿದ್ದರೆ ಅಂತಹ ಸ್ಥಳಗಳಲ್ಲಿ ಹೆಚ್ಚಿನ ಕಟ್ಟೆಚ್ಚರ ವಹಿಸಬೇಕು. ಅದೇ ರೀತಿ ಈದ್ ಮಿಲಾದ್ ಹಬ್ಬದ ಸಂದರ್ಭದಲ್ಲೂ ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡಿಕೊಳ್ಳಬೇಕು. ಅಹಿತಕರ ಘಟನೆಗಳು ನಡೆಯದಂತೆ ನಿಗಾ ವಹಿಸಬೇಕು ಎಂದರು.

677 ಪ್ರಕರಣ ದಾಖಲು

ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಿದ ಸಂಚಾರ ಪೊಲೀಸರು, ನಿಯಮ ಉಲ್ಲಂಘಿಸಿದ 667 ಚಾಲಕರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ಶ್ರೀ ಲಕ್ಷ್ಮೀನಾರಾಯಣ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ನಂ. 1627/2 ಪಾರ್ಕ್ ರಸ್ತೆ, ರಾಮಮೋಹನಪುರ ಬೆಂಗಳೂರು -560021
E-Mail: slncbank@gmail.com website: www.slncb.com

ಪ್ರಕಟಣೆ

ಮೇಲ್ಕಂಡ ಬ್ಯಾಂಕಿನ ಸರ್ವಸದಸ್ಯರ **53ನೇ ವಾರ್ಷಿಕ ಮಹಾ ಸಭೆಯು** ದಿನಾಂಕ **07.09.2025**ರ ಭಾನುವಾರ ಬೆಳಿಗ್ಗೆ 9.00 ಘಂಟೆಗೆ **ರಾಜರಾಜೇಶ್ವರಿ ಕಲ್ಯಾಣ ಮಂಟಪ** 608/ಡಿ, 2ನೇ ಬ್ಲಾಕ್, ರಾಜಾಜಿನಗರ, ಡಾ:ರಾಜ್ ಕುಮಾರ್ ರಸ್ತೆ, ಬೆಂಗಳೂರು–560010. ಇಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ನಂಜೇಗೌಡರವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಸದಸ್ಯರುಗಳಿಗೆ ಪ್ರತ್ಯೇಕವಾಗಿ ಸಭೆಯ ನೋಟೀಸು ಈಗಾಗಲೇ ಅಂಚೆ ಮೂಲಕ ಕಳುಹಿಸಲಾಗಿದೆ, ಮಹಾಸಭೆಯ ನೋಟೀಸು ತಲುಪದೇ ಇದ್ದಲ್ಲಿ ಈ ಪ್ರಕಟಣೆಯನ್ನೇ ಅಧಿಕೃತ ನೋಟೀಸು ಎಂದು ಭಾವಿಸಿ ಮಾನ್ಯ ಸದಸ್ಯರು ಸಭೆಗೆ ಸಕಾಲಕ್ಕೆ ಹಾಜರಾಗಬೇಕಾಗಿ ವಿನಂತಿಸಲಾಗಿದೆ.

ವಿ.ಸೂ: ಸಭೆಗೆ ಹಾಜರಾಗುವಾಗ ಬ್ಯಾಂಕಿನಿಂದ ನೀಡಿರತಕ್ಕ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕಾಗಿ ವಿನಂತಿ.

ಆಡಳಿತ ಮಂಡಳಿ ಅನುಮತಿ ಮೇರೆಗೆ,
ಸಹಿ/– ಬಿ.ಎಂ.ಮಹೇಶ್ ಕುಮಾರ್
ಮುಖ್ಯ ಕಾರ್ಯನಿರ್ವಾಹಣಾಧಿಕಾರಿ (CEO)

ನೈಋತ್ಯ ರೈಲ್ವೆ

ಅಧಿಸೂಚನೆ
ಬೆಂಗಳೂರು, 18 ಆಗಸ್ಟ್, 2025

S. O. 3783(E) – ರೈಲ್ವೆ ಕಾಯ್ದೆ, 1989 (1989 ರ 24) ರ ಸೆಕ್ಷನ್ 20F ನ ಷರತ್ತು (6) ಮತ್ತು ಸೆಕ್ಷನ್ 2 ರ ಷರತ್ತು 7A ಯಿಂದ ನೀಡಲಾದ ಅಧಿಕಾರಗಳನ್ನು ಚಲಾಯಿಸುವಾಗ, ರೈಲ್ವೆ ಸಚಿವಾಲಯ (ನೈಋತ್ಯ ರೈಲ್ವೆ, ನಿರ್ಮಾಣ ಸಂಸ್ಥೆ, ಬೆಂಗಳೂರು ಕಂಟೋನ್ಮೆಂಟ್) ಕೆಳಗಿನ ಕೋಷ್ಟಕದ ಕಾಲಮ್ (4) ರಲ್ಲಿ ಉಲ್ಲೇಖಿಸಲಾದ ಅಧಿಕಾರಿಗಳಿಗೆ 'ಸಮರ್ಥ ಪ್ರಾಧಿಕಾರ' ಎಂದು ಮತ್ತು ಕೆಳಗಿನ ಕೋಷ್ಟಕದ ಕಾಲಮ್ (5) ರಲ್ಲಿ ಉಲ್ಲೇಖಿಸಲಾದ ಅಧಿಕಾರಿಗಳಿಗೆ 'ಮಧ್ಯಸ್ಥಿಕೆದಾರರು' ಎಂದು ಅಧಿಕಾರ ನೀಡುತ್ತದೆ, ಈ ಅಧಿಸೂಚನೆಯನ್ನು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಭೂಸ್ವಾಧೀನಕ್ಕಾಗಿ ಸಾರ್ವಜನಿಕ ಉದ್ದೇಶಕ್ಕಾಗಿ ಕೆಳಗಿನ ಕೋಷ್ಟಕದ ಕಾಲಮ್ (3) ರಲ್ಲಿ ಉಲ್ಲೇಖಿಸಲಾದ ಜಿಲ್ಲೆಗೆ ಸಂಬಂಧಿಸಿದಂತೆ.

ಕ್ರ. ಸಂ.	ಯೋಜನೆಯ ಹೆಸರು	ಜಿಲ್ಲೆ	ಸಕ್ಷಮ ಪ್ರಾಧಿಕಾರ	ಮಧ್ಯಸ್ಥಗಾರ
1	ತೋರಣಗಲ್ಲು – ರಣಜಿತ್‌ಪುರ ಜೋಡಿ ಮಾರ್ಗ ನಿರ್ಮಾಣ (23 ಕಿ.ಮೀ)	ಬಳ್ಳಾರಿ	ಸಹಾಯಕ ಆಯುಕ್ತರು, ಬಳ್ಳಾರಿ	ಪ್ರಾದೇಶಿಕ ಆಯುಕ್ತರು, ಕಲಬುರ್ಗಿ

ನಂ.ಡಬ್ಲ್ಯೂ.271/ಸಿಎನ್/ಬಿಎನ್‌ಸಿ/2025–26/ಲ್ಯಾಂಡ್ ಎಸ್‌ಆರ್‌ಪಿ/1727

ಹೆಚ್ಚಿನ ವಿವರಗಳಿಗೆ https://egazette.gov.in ಗೆ ಲಾಗ್‌ಆನ್ ಮಾಡಿ.

ಪ್ರದೀಪ್ ಪುರಿ,
ಮುಖ್ಯ ಎಂಜಿನಿಯರ್–III / ನಿರ್ಮಾಣ
ನೈಋತ್ಯ ರೈಲ್ವೆ,ಬೆಂಗಳೂರು ಕಂಟೋನ್ಮೆಂಟ್,

ಪಿಯುಬಿ/407/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26

ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ

South Western Railway-SWR | SWRRLY | @SWRAILWAYHQ | @sw_railways

ನಗರಸಭಾ ಕಾರ್ಯಾಲಯ ನೆಲಮಂಗಲ
ಬೆಂಗಳೂರು ಗ್ರಾಮಾಂತರ ಜಿಲ್ಲೆ–562123, ದೂರವಾಣಿ: 080–27722135,
Email : itstaff_ulb_nelamangala@yahoo.com

ಸಂಖ್ಯೆ: ನಸನೆ/ತಾಂತ್ರಿಕ(ವಿ)/ಟೆಂಡರ್/16/2025–26 ದಿನಾಂಕ: 25.08.2025

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)
(ಸ್ಟಾಂಡರ್ಡ್ ಡಾಕ್ಯೂಮೆಂಟ್ KW 1&2ರ & KG ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)

2024–25ನೇ ಸಾಲಿನ 15ನೇ ಹಣಕಾಸು ಯೋಜನೆ, 2023–24ನೇ ಹಾಗೂ 2024–25ನೇ ಸಾಲಿನ 24.10% ನಗರಸಭಾ ನಿಧಿ ಯೋಜನೆ, ಹಾಗೂ 2025–26ನೇ ಸಾಲಿನ ನಗರಸಭಾ ನಿಧಿ ಅನುದಾನದಡಿ ಕಾಮಗಾರಿಗಳ ಟೆಂಡರ್ ಹಾಗೂ ಮರು ಟೆಂಡರ್ ಕಾಮಗಾರಿಗಳನ್ನು ಕೈಗೊಳ್ಳಲು ಒಟ್ಟು ಮೊತ್ತ **ರೂ: 348.92 ಲಕ್ಷ**ಗಳ ಕಾಮಗಾರಿಗಳ ಐಟಾಂವಾರು ಇ–ಪ್ರಕ್ಯೂರ್‌ಮೆಂಟ್ ನ ಕೆಪಿಪಿ ಪೋರ್ಟಲ್ ಏಕ ಲಕೋಟೆ ಹಾಗೂ ದ್ವಿ ಲಕೋಟ ಪದ್ಧತಿಯಡಿ ಅರ್ಹ ದರ್ಜೆಯ ನೊಂದಾಯಿತ ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದೆ.

ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ತೆರೆಯುವ ದಿನಾಂಕ ಮುಂತಾದ ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್: https://kppp.karnataka.gov.in/ ಹಾಗೂ ನಗರಸಭೆಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/–	ಸಹಿ/–	ಸಹಿ/–	ಸಹಿ/–
ಮಾನ್ಯ ಅಧ್ಯಕ್ಷರು ನಗರಸಭೆ, ನೆಲಮಂಗಲ	ಮಾನ್ಯ ಉಪಾಧ್ಯಕ್ಷರು ನಗರಸಭೆ, ನೆಲಮಂಗಲ	ಮಾನ್ಯ ಸ್ಥಾಯಿ ಸಮಿತಿ ಅಧ್ಯಕ್ಷರು ನಗರಸಭೆ, ನೆಲಮಂಗಲ	ಪೌರಾಯುಕ್ತರು ನಗರಸಭೆ, ನೆಲಮಂಗಲ

ವಾ.ಸಾ.ಸಂ.ಇ/ವಾಪ್ರ/2471/ಎಸ್‌ಎಸ್‌ಸಿ/2025–26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU–233/2001/2025–26 ದಿನಾಂಕ:22.08.2025

ಪ್ರಕಟಣೆ
(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರನ್ವಯ)

ಕಾರ್ಯದರ್ಶಿಗಳು, ದಲಿತ ವಿವಿಧ ಗ್ರಾಮೋದ್ಯೋಗ ಕೈಗಾರಿಕಾ ಸಹಕಾರ ನಿಯಮಿತ(ರಿ) ರವರು ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಲಕ್ಷ್ಮೀಪುರ ಗ್ರಾಮದ ಸರ್ವೆ ನಂ.130ರಲ್ಲಿ 8 ಎಕರೆ 0 ಗುಂಟೆ ವಿಸ್ತೀರ್ಣದ ಪೈಕಿ 0–12.25 ಗುಂ ಪ್ರದೇಶವನ್ನು RMP-2015 ರಲ್ಲಿ ತಪ್ಪಾಗಿ ಜಲಾವೃತ ಪ್ರದೇಶ ಎಂದು ಗುರುತಿಸಲಾಗಿದ್ದು, ಗ್ರಾಮ ನಕ್ಷೆಯಂತೆ ಹಾಗೂ ಕಂದಾಯ ದಾಖಲೆಗಳಂತೆ ಪ್ರಶ್ನಿತ ಜಮೀನು ಜಲಾವೃತ ಪ್ರದೇಶ ಆಗಿಲ್ಲದೇ ಇರುವುದರಿಂದ ಸರಿಪಡಿಸುವಂತೆ ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–A ರಲ್ಲಿನ Cartographical Error ಅವಕಾಶದಡಿಯಲ್ಲಿ ತಿದ್ದುಪಡಿ ಮಾಡಲು ಅವಕಾಶವಿರುತ್ತದೆ. ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಲಕ್ಷ್ಮೀಪುರ ಗ್ರಾಮದ ಸರ್ವೆ ನಂ.130 ರಲ್ಲಿ 8 ಎಕರೆ–0 ಗುಂಟೆ ವಿಸ್ತೀರ್ಣದ ಪೈಕಿ 0–12.25ಗುಂ ಪ್ರದೇಶವನ್ನು RMP-2015 ರಲ್ಲಿ ತಪ್ಪಾಗಿ ಜಲಾವೃತ ಪ್ರದೇಶ ಎಂದು ಗುರುತಿಸಲಾಗಿರುತ್ತದೆ. ಗ್ರಾಮ ನಕ್ಷೆಯಂತೆ ಪ್ರಶ್ನಿತ ಜಮೀನು ಜಲಾವೃತ ಪ್ರದೇಶ ಆಗಿಲ್ಲದೇ ಇರುವುದರಿಂದ, ಅರ್ಜಿದಾರರ ಜಮೀನನ್ನು ಜಲಾವೃತ ಪ್ರದೇಶ ವಲಯದಿಂದ ವ್ಯವಸಾಯ ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡಬೇಕಾಗಿರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

AstraZeneca
ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್
(CIN: L24231KA1979PLC003563)
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045
ಈಮೇಲ್: comp.secy@astrazeneca.com, ವೆಬ್: www.astrazeneca.com/india
ದೂ.: +91 80 6774 8000, ಫ್ಯಾಕ್ಸ್: 080 6774 8857

ಷೇರು ಪ್ರಮಾಣಪತ್ರಗಳು ಕಳೆದಿರುವ ಬಗ್ಗೆ ಸೂಚನೆ

ಈ ಕೆಳಗೆ ತಿಳಿಸಿರುವ ಕಂಪನಿಯ ಷೇರು ಪ್ರಮಾಣಪತ್ರ ಕಳೆದಿವೆ ಎಂದು ಷೇರುದಾರ ವರದಿ ಮಾಡಿದ್ದಾರೆ ಮತ್ತು ಮುಖ ಬೆಲೆ ರೂ. 2/– ರಂತೆ ಹೊಸ ಷೇರು ಪ್ರಮಾಣಪತ್ರ ನೀಡುವಂತೆ ಷೇರುದಾರ ಕಂಪನಿಯನ್ನು ಕೋರಿದ್ದಾರೆ ಎಂದು ಈ ಮೂಲಕ ಸೂಚನೆಯನ್ನು ನೀಡುತ್ತಿದ್ದೇವೆ.

ಖಾತೆಪುಟ ಸಂಖ್ಯೆ	ಷೇರುಗಳ ಸಂಖ್ಯೆ (ಮುಖ ಬೆಲೆ ರೂ.10)	ಕಳೆದು ಹೋಗಿರುವ ಷೇರು ಪ್ರಮಾಣಪತ್ರಗಳ ವಿವರಗಳು		ಷೇರುದಾರರ ಹೆಸರು
		ಷೇರು ಪ್ರಮಾಣಪತ್ರ ಸಂಖ್ಯೆ	ವಿಶಿಷ್ಟ ಸಂಖ್ಯೆಗಳು	
M001383	50	17418	2044101 - 2044150	ಮೃದುಲಾ ಸಿ ವೋರಾ
	50	17419	2044151 - 2044200	

ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಯು ಸ್ವೀಕರಿಸದಿದ್ದಲ್ಲಿ, ಕಂಪನಿಯು ದಿನಾಂಕ 25ನೇ ಜನವರಿ 2022ರ ಸೆಬಿ ಸುತ್ತೋಲೆ ಸಂಖ್ಯೆ SEBI/HO/MIRSD/MIRSD_RTAMB/ P/CIR/ 2022/8ರಂತೆ ಷೇರುದಾರರಿಂದ ಮುಖ ಬೆಲೆ ರೂ 10ರ ಹಳೆಯ ಷೇರು ಪ್ರಮಾಣ ಪತ್ರಗಳನ್ನು ಹಿಂಪಡೆಯದ ಹೊರತಾಗಿಯು ದೃಢಿಕರಣ ಪತ್ರವನ್ನು ನೀಡಲು ಮುಂದುವರೆಯುತ್ತದೆ.

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್ ಪರವಾಗಿ
ಸ್ಥಳ: ಬೆಂಗಳೂರು
ದಿನಾಂಕ: ಆಗಸ್ಟ್ 25, 2025
ಮಾನಸ. ಆರ್
ಕಂಪನಿ ಸೆಕ್ರಟರಿ

ಸ್ಕೈವಾಕ್ ಸ್ವಚ್ಛಗೊಳಿಸಿದ ಪೌರಕಾರ್ಮಿಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿರುವ ಪಾದಚಾರಿ ಮೇಲ್ಸೇತುವೆಗಳಲ್ಲಿ (ಸ್ಕೈವಾಕ್) ಸೋಮವಾರ ಪೌರ ಕಾರ್ಮಿಕರು ಸ್ವಚ್ಛತಾ ಕಾರ್ಯ ನಡೆಸಿದರು.

ನಗರದ ಜನನಿಬಿಡ ಪ್ರದೇಶ, ಪ್ರಮುಖ ಜಂಕ್ಷನ್, ಬಸ್ ನಿಲ್ದಾಣಗಳ ಬಳಿ ಸೇರಿ 81 ಪಾದಚಾರಿ ಮೇಲ್ಸೇತುವೆಗಳಿವೆ. ಇಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಲು ಕ್ರಮ ವಹಿಸುವಂತೆ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಕರೀಗೌಡ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು.

ಹೆಬ್ಬಾಳದ ಬ್ಯಾಪ್ಟಿಸ್ಟ್ ಆಸ್ಪತ್ರೆ ಬಳಿ, ಹೊಸೂರು ರಸ್ತೆ, ಹಳೆ ಮದ್ರಾಸ್ ರಸ್ತೆ, ಮಣಿಪಾಲ್ ಆಸ್ಪತ್ರೆ, ಮಾಗಡಿ ರಸ್ತೆ, ನಾಗರಭಾವಿ ಮುಖ್ಯ ರಸ್ತೆ, ಮೈಸೂರು ರಸ್ತೆ, ಟಿನ್ ಫ್ಯಾಕ್ಟರಿ, ಬೆಳ್ಳಂದೂರು ಸಿಂಗಸಂದ್ರ ಸೇರಿದಂತೆ 77 ಸ್ಕೈವಾಕ್‌ಗಳಲ್ಲಿ ಪೌರಕಾರ್ಮಿಕರು ಸ್ವಚ್ಛತಾ ಕಾರ್ಯ ನಡೆಸಿದರು.

ಪ್ಲಾಸ್ಟಿಕ್ ಕವರ್, ಬಾಟಲ್‌ಗಳನ್ನು ಬಿಸಾಡುವುದು, ಉಗುಳುವುದು, ಭಿತ್ತಿಪತ್ರಗಳನ್ನು ಅಂಟಿಸುವುದು ಸೇರಿದಂತೆ ಸ್ವಚ್ಛತೆಗೆ ತೊಡಕು ಉಂಟಾಗುವ ಕ್ರಿಯೆಗಳನ್ನು ಪಾದಚಾರಿ ಮೇಲ್ಸೇತುವೆ ಬಳಕೆದಾರರು ಮಾಡಬಾರದು ಎಂದು ಮನವಿ ಮಾಡಲಾಯಿತು.

ನಗರದ ಪಾದಚಾರಿ ಮೇಲ್ಸೇತುವೆಗಳಲ್ಲಿ (ಸ್ಕೈವಾಕ್) ಸೋಮವಾರ ಪೌರಕಾರ್ಮಿಕರು ಸ್ವಚ್ಛತಾ ಕಾರ್ಯ ನಡೆಸಿದರು

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ,
ಎಲೆಕ್ಟ್ರೋ–ಆಪ್ಟಿಕ್ಸ್ ಸಿಸ್ಟಮ್‌ಗಳಿಗಾಗಿ ಪ್ರಯೋಗಾಲಯ (ಎಲ್‌ಇಒಎಸ್)
ಪೀಣ್ಯ, ಬೆಂಗಳೂರು–560058, ಎಲ್‌ಇಒಎಸ್ ನಿರ್ಮಾಣ ಮತ್ತು ನಿರ್ವಹಣಾ ವಿಭಾಗ (ಎಲ್‌ಸಿಎಂಡಿ)
ದೂರವಾಣಿ : (080)-22685088, 5047, 5094, 5086, 5087, ಫ್ಯಾಕ್ಸ್ : (080)-28392310]

ಸಂಕ್ಷಿಪ್ತ ಇ-ಟೆಂಡರ್ (ಎನ್.ಐ.ಇ.ಟಿ.) ಆಹ್ವಾನ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಕ್ಕಾಗಿ ಐಟಂ ದರದ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕೆಲಸದ ಹೆಸರು : ಎನ್.ಐ.ಡಿ. ನಂ. & ದಿನಾಂಕ : 30 ಕೆ.ಡಬ್ಲ್ಯೂ.ಪಿ. ನಿಂದ 150 ಕೆ.ಡಬ್ಲ್ಯೂ.ಪಿ. ಸಾಮರ್ಥ್ಯದ (ಒಟ್ಟು 310 ಕೆ.ಡಬ್ಲ್ಯೂ.ಪಿ. ವರೆಗೆ) ಮೇಲ್ಛಾವಣಿ ಸೌರ ವಿದ್ಯುತ್ ಸ್ಥಾವರ ಸ್ಥಾಪನೆ, ಎಲ್.ಇ.ಓ.ಎಸ್. ಕ್ಯಾಂಪಸ್‌ಗಳು, ಪೀಣ್ಯ, ಬೆಂಗಳೂರು–560058 ರ ವಿವಿಧ ಸ್ಥಳಗಳಲ್ಲಿ. ಎನ್.ಐ.ಇ.ಟಿ. ನಂ. LEOS/CMG/EMW-03/2025-26, ದಿನಾಂಕ: 19-08-2025, **ನಂ. ಟೆಂಡರ್‌ಗೆ ಇಡಲಾದ ಅಂದಾಜು ವೆಚ್ಚ** : ರೂ. 170.49 ಲಕ್ಷ; **ಇ.ಎಂ.ಡಿ.** ರೂ. 3,40,980/-; **ಪೂರ್ಣಗೊಳಿಸುವ ಅವಧಿ ತಿಂಗಳು** : 06 ತಿಂಗಳು, ಟೆಂಡರ್ ದಾಖಲೆಯನ್ನು ಮಾಡಬಹುದಾದ ಅವಧಿ : ತೆರೆಯುವ ದಿನಾಂಕ : 28-08-2025, ಮುಕ್ತಾಯವಾಗುವ ದಿನಾಂಕ : 22-09-2025

ಕೆಲಸದ ಹೆಸರು : ಎನ್.ಐ.ಡಿ. ನಂ. & ದಿನಾಂಕ : ಎಲ್.ಇ.ಓ.ಎಸ್. ಕ್ಯಾಂಪಸ್, ಪೀಣ್ಯ, ಬೆಂಗಳೂರು–58 ನಲ್ಲಿ ವಿವಿಧ ರಚನಾತ್ಮಕ ಉಕ್ಕಿನ ಕೆಲಸಗಳು ಮತ್ತು ಸಂಬಂಧಿತ ಕೆಲಸಗಳನ್ನು ಕೈಗೊಳ್ಳುವ ಒಪ್ಪಂದ. ಎನ್.ಐ.ಇ.ಟಿ. ನಂ. CMG/LEOS/2025-26/LMN-04; ದಿನಾಂಕ : 21-08-2025; **ಟೆಂಡರ್‌ಗೆ ಇಡಲಾದ ಅಂದಾಜು ವೆಚ್ಚ** : ರೂ. 13.86 ಲಕ್ಷ; **ಇ.ಎಂ.ಡಿ.** ರೂ. 27,720/-; **ಪೂರ್ಣಗೊಳಿಸುವ ಅವಧಿ ತಿಂಗಳು** : 1 ವರ್ಷ; ಟೆಂಡರ್ ದಾಖಲೆಯನ್ನು ಮಾಡಬಹುದಾದ ಅವಧಿ : ತೆರೆಯುವ ದಿನಾಂಕ : 25-08-2025; ಮುಕ್ತಾಯವಾಗುವ ದಿನಾಂಕ : 10-09-2025

ಕೆಲಸದ ಹೆಸರು : ಎನ್.ಐ.ಡಿ. ನಂ. & ದಿನಾಂಕ : ಎಲ್.ಇ.ಓ.ಎಸ್. ಆರ್ಯಭಟ, ಅತಿಥಿ ಗೃಹ ಮತ್ತು ಐ.ಎಸ್.ಆರ್.ಎ.ಡಿ. ಕ್ಯಾಂಪಸ್, ಪೀಣ್ಯ, ಬೆಂಗಳೂರು –58 ರಲ್ಲಿ ಕಟ್ಟಡದ ಅವಶೇಷಗಳು / ಒಣಗಿದ ಸಸ್ಯಗಳು / ಹೆಚ್ಚುವರಿ ಅಗೆದ ಮಣ್ಣು ಇತ್ಯಾದಿಗಳನ್ನು ತೆಗೆಯುವ ಒಪ್ಪಂದ. ಎನ್.ಐ.ಇ.ಟಿ. ನಂ. CMG/LEOS/2025-26/LMN-03, ದಿನಾಂಕ : 21-08-2025; **ಟೆಂಡರ್‌ಗೆ ಇಡಲಾದ ಅಂದಾಜು ವೆಚ್ಚ** : ರೂ. 18.54 ಲಕ್ಷ; **ಇ.ಎಂ.ಡಿ.** ರೂ. 37,080/-; **ಪೂರ್ಣಗೊಳಿಸುವ ಅವಧಿ ತಿಂಗಳು** : 1 ವರ್ಷ; ಟೆಂಡರ್ ದಾಖಲೆಯನ್ನು ಮಾಡಬಹುದಾದ ಅವಧಿ : ತೆರೆಯುವ ದಿನಾಂಕ : 25-08-2025; ಮುಕ್ತಾಯವಾಗುವ ದಿನಾಂಕ : 10-09-2025

ಆಸಕ್ತ ಟೆಂಡರುದಾರರು ಇ–ಟೆಂಡರ್ (ಎನ್.ಐ.ಇ.ಟಿ.) ಆಹ್ವಾನ ಪ್ರಕಟಣೆಯ ಅರ್ಹತಾ ಮಾನದಂಡ ಮತ್ತು ಇತರೆ ವಿವರಗಳನ್ನು ವೆಬ್‌ಸೈಟ್ : www.isro.gov.in ನಲ್ಲಿ ಪರಿಶೀಲಿಸಬಹುದು ಮತ್ತು ಟೆಂಡರ್ ದಾಖಲೆಗಳನ್ನು www.tenderwizard.com/ISRO ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ಸಮೂಹ ನಿರ್ದೇಶಕರು
(ನಿರ್ಮಾಣ ಮತ್ತು ನಿರ್ವಹಣಾ ವಿಭಾಗ) (ಸಿ&ಎಂಡಿ)
ಯುಆರ್‌ಎಸ್‌ಸಿ., ಬೆಂಗಳೂರು

COFFEE DAY Brewing new possibilities.

ಕಾಫಿ ಡೇ ಎಂಟರ್‌ಪ್ರೈಸಸ್ ಲಿ.
ನೋಂದಾಯಿತ ಮತ್ತು ಕಾರ್ಪೊರೇಟ್ ಕಚೇರಿ: 165, ಆರ್ ವಿ ರೋಡ್ (ಮಿನರ್ವಾ ವೃತ್ತದ ಹತ್ತಿರ), ಬೆಂಗಳೂರು 560004, ಕರ್ನಾಟಕ, ಭಾರತ
ದೂ.: 080–4001 2345; **ಫ್ಯಾಕ್ಸ್:** 080–4001 2650
ವೆಬ್‌ಸೈಟ್: www.coffeeday.com; ಇಮೇಲ್: Investors@coffeedaygroup.com
ಕಾರ್ಪೊರೇಟ್ ಗುರುತಿನ ಸಂಖ್ಯೆ: L55101KA2008PLC046866

ಕಾಫಿ ಡೇ ಎಂಟರ್‌ಪ್ರೈಸಸ್ ಲಿ. 17ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ

ಈ ಮೂಲಕ ಸೂಚನೆ ನೀಡುತ್ತಿರುವುದೇನೆಂದರೆ

1. ಕಾಫಿ ಡೇ ಎಂಟರ್‌ಪ್ರೈಸಸ್ ಲಿಮಿಟೆಡ್ ("ಕಂಪನಿ") ಯ 17ನೇ ವಾರ್ಷಿಕ ಸಾಮಾನ್ಯ ಸಭೆ (ಎಜಿಎಂ) ಯು ಗುರುವಾರ, ಸೆಪ್ಟೆಂಬರ್ 18, 2025 ರಂದು ಬೆಳಿಗ್ಗೆ 11:00 ಗಂಟೆಗೆ (ಭಾರತೀಯ ಕಾಲಮಾನ) ವೀಡಿಯೊ ಕಾನ್ಫರೆನ್ಸಿಂಗ್ (ವಿಸಿ) ಅಥವಾ ಇತರೆ ಧ್ವನಿ ದೃಶ್ಯ ವಿಧಾನದ (ಒಎವಿಎಂ) ಮೂಲಕ ನಡೆಯಲಿದ್ದು, ಎಜಿಎಂ ಸೂಚನೆಯಲ್ಲಿ ("ಸೂಚನೆ") ತಿಳಿಸಿರುವಂತೆ ಸಾಮಾನ್ಯ ವ್ಯವಹಾರಗಳನ್ನು ನಿರ್ವಹಿಸಲು, ಸಭೆಯ ಸಾಮಾನ್ಯ ಸ್ಥಳದಲ್ಲಿ ಸದಸ್ಯರ ಭೌತಿಕ ಉಪಸ್ಥಿತಿಯಿಲ್ಲದೆ, ಈ–ಎಜಿಎಂ ಅನ್ನು ನಡೆಸಲಾಗುತ್ತಿದೆ.
2. ಕಂಪನಿ ಕಾಯಿದೆ, 2013 ರ ಸೆಕ್ಷನ್ 108, ಕಂಪನಿಗಳು (ವ್ಯವಸ್ಥಾಪನೆ ಮತ್ತು ಆಡಳಿತ) ನಿಯಮಗಳು, 2014 ರ ನಿಯಮ 20, ಭಾರತೀಯ ಷೇರು ಮತ್ತು ವಿನಿಮಯ ಮಂಡಳಿ ('ಸೆಬಿ') (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆ ಅಗತ್ಯತೆಗಳು) ನಿಯಮಗಳು, 2015 ರ ನಿಯಂತ್ರಣ 44, ಮತ್ತು ಯಾವುದೇ ಇತರ ಅನ್ವಯವಾಗುವ ನಿಬಂಧನೆಗಳಿಗೆ ಅನುಸಾರವಾಗಿ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ('ಎಂಸಿಎ ಸುತ್ತೋಲೆಗಳು') ಹೊರಡಿಸಿದ ಮೇ 5, 2020 ರ ಸುತ್ತೋಲೆ, ಏಪ್ರಿಲ್ 8, 2020, ಏಪ್ರಿಲ್ 13, 2020, ಮತ್ತು ಡಿಸೆಂಬರ್ 28, 2022 ರ ಸುತ್ತೋಲೆಗಳೊಂದಿಗೆ, ಹಾಗೂ ಸೆಬಿ ಹೊರಡಿಸಿದ ಮೇ 12, 2020 ರ ಸುತ್ತೋಲೆ, ದಿನಾಂಕ 13.01.2021 ರ ಸಾಮಾನ್ಯ ಸುತ್ತೋಲೆ ನಂ.02/2021 ಮತ್ತು ದಿನಾಂಕ ಜನವರಿ 5, 2023 ರ SEBI/HO/CFD/PoD-2/P/CIR/2023/4 ('ಸೆಬಿ ಸುತ್ತೋಲೆಗಳು') ಸುತ್ತೋಲೆಗಳೊಂದಿಗೆ, ಈ ಎಜಿಎಂ ಅನ್ನು ಕರೆಯಲಾಗಿದೆ.
3. [illegible]
4. [illegible]
5. [illegible]
6. [illegible]
7. [illegible]
8. [illegible]
9. [illegible]
10. [illegible]
11. [illegible]

ನಿರ್ದೇಶಕ ಮಂಡಳಿಯ ಆದೇಶದ ಪ್ರಕಾರ
ಕಾಫಿ ಡೇ ಎಂಟರ್‌ಪ್ರೈಸಸ್ ಲಿಮಿಟೆಡ್ ಪರವಾಗಿ
ದಿನಾಂಕ: 25 ಆಗಸ್ಟ್ 2025
ಸ್ಥಳ: ಬೆಂಗಳೂರು
ಸದಾನಂದ ಪೂಜಾರಿ
ಕಂಪನಿ ಕಾರ್ಯದರ್ಶಿ

‘ಕ್ರಮಕ್ಕೆ ಸಿ.ಎಂ ಸೂಚನೆ’

ಬೆಂಗಳೂರು: ಕಾಡುಗೋಡಿ ಸಮೀಪದ ದಿಣ್ಣೂರಿನಲ್ಲಿ ಬಡ ದಲಿತರ ಮನೆ ಧ್ವಂಸ ಮಾಡಿದ್ದ ಅರಣ್ಯ ಇಲಾಖೆ ಅಧಿಕಾರಿಗಳ ಮೇಲೆ ಪ್ರಕರಣ ದಾಖಲಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಒಪ್ಪಿಕೊಂಡಿದ್ದು, ಈ ಸಂಬಂಧ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ಸೂಚನೆ ನೀಡಿದ್ದಾರೆ ಎಂದು ವಿಧಾನ ಪರಿಷತ್‌ನ ವಿಪಕ್ಷ ನಾಯಕ ತಿಳಿಸಿದ್ದಾರೆ.

ನಗರದಲ್ಲಿ ಇಂದು

ಪೌರಾಣಿಕ ನಾಟಕೋತ್ಸವ: ‘ಕೃಷ್ಣ ಸಂಧಾನ’ ನಾಟಕ ಪ್ರದರ್ಶನ: ಆಯೋಜನೆ: ಕುಶಲ ಕಲಾವೃಂದ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11

ಮನುಷ್ಯತ್ವದೆಡೆಗೆ ಸಮುದಾಯ-50 ಜಾಥಾ, ನಾಟಕೋತ್ಸವ: ಸದ್ಭಾವನಾ ಗೀತೆಗಳ ಗಾಯನ: ಪಿಚ್ಚಳ್ಳಿ ಶ್ರೀನಿವಾಸ ಮತ್ತು ತಂಡ, ಸಮುದಾಯ 50ರ ರಂಗಗೌರವ: ಬಿ.ಐ. ಈಳಿಗೇರ, ಅಚ್ಯುತ, ಟಿ.ಎಸ್. ನಾಗಾಭರಣ, ಬಿ.ವಿ. ರಾಜಾರಾಂ, ಎಚ್.ಜಿ. ದತ್ತಾತ್ರೇಯ, ಅತಿಥಿ: ಎಲ್. ಹನುಮಂತಯ್ಯ, ಅಧ್ಯಕ್ಷತೆ: ಬಿ.ಆರ್. ಮಂಜುನಾಥ್, ‘ಬುದ್ಧ ಪ್ರಬುದ್ಧ’ ನಾಟಕ ಪ್ರದರ್ಶನ: ನಿರ್ದೇಶನ: ವಾಸುದೇವ ಗಂಗೇರ, ಆಯೋಜನೆ: ಸಮುದಾಯ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ನೈಋತ್ಯ ರೈಲ್ವೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಇ–ಟೆಂಡರ್ ಪ್ರಕಟಣೆ ಸಂ. ವೈ/ಇ.29/2025–26/37
ದಿನಾಂಕ : 14–08–2025

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಎಸ್‌ಎಸ್‌ಇ/ಇ/ಮೈಸೂರು ವ್ಯಾಪ್ತಿಗಾಗಿ ವಿದ್ಯುತ್ ಬಿಡಿ ಕಾಮಗಾರಿ (ವಲಯ ಕಾಮಗಾರಿ) [illegible]	ರೂ. 18,59,999.35

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 04-09-2025 ರಂದು 11:00 ಗಂಟೆಯವರೆಗೆ

ಇ–ಟೆಂಡರ್ ಪ್ರಕಟಣೆ ಸಂ. ವೈ/ಇ.29/2025–26/38
ದಿನಾಂಕ : 14–08–2025

[illegible]

ಇ–ಟೆಂಡರ್ ಪ್ರಕಟಣೆ ಸಂ. ವೈ/ಇ.29/2025–26/39
ದಿನಾಂಕ : 14–08–2025

[illegible]

ಇ–ಟೆಂಡರ್ ಪ್ರಕಟಣೆ ಸಂ. ವೈ/ಇ.29/2025–26/40
ದಿನಾಂಕ : 14–08–2025

[illegible]

ಇ–ಟೆಂಡರ್ ಪ್ರಕಟಣೆ ಸಂ. ವೈ/ಇ.29/2025–26/41
ದಿನಾಂಕ : 14–08–2025

[illegible]

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಮಾಡಿ.

South Western Railway-SWR | SWRRLY | @SWRAILWAYHQ | @sw_railways

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

Adv. Satyajit S. Kulkarni
Civil Misc. Application no.186/2025
PUBLIC NOTICE Exhibit-7
In the court of Hon'ble Civil Judge Senior Division, Sangli,
1) **Anirudha Somanath Shete,** Age - 52 years, Occupation - Dentist, R/o. Adinath nagar society, duplex Flat no. F-2, near Amrai, Sangli - 416 416.
2) **Pallavi Sanjay Charati,** Age - 54 years, Occupation - Household, R/o. E-51, Kalpataru Jade Residencies, Pancard club Road, Baner, Pune - 411 045. ...Applicant
Versus
Nobody - ....Opponent
Application for Succession Certificate u/sec. 372 of Indian Succession Act, 1925
1) Applicant no.1 are permanent resident of Adinath nagar society, duplex Flat no.F-2, near Amrai, Sangli and applicant No 2 E-5 1,Kalpataru Jade Residencies, Pancard club road, Baner, Pune-411045.
2) Mr. Abhijit Somanath Shete expired on 30/5/2023 at Sangli. His ordinary residence at the time of death was at Adinath Nagar Society, Duplex Flat no. F 2, near Amrai, Sangli, Taluka Miraj, District Sangli. Applicant No. 1 and 2 are only Class-1 legal heirs of Late Abhijit Somanath Shete as per Indian Succession Act. Applicant have filed present application to get Succession Certificate in this court.
Therefore if anyone has any objection in this respect those shall be present in this court himself/herself or through his/her legal representative on 29-09-2025 at 11.00 a.m. This court will decided order if no objection received from anyone within stipulated period as per law.
Handed over today dt. 14-08-2025 with stamp and signature of this court.
Sd/- Junior clerk, Civil Court Sr. Dv. Sangali (Seal) Sd/- Superintendent, Civil Court Sr. Dv. Sangali
Place: Sangli, Date: 14-08-2025

PERSONAL

Change of Name

I, ADITI RAJESHWAR JEWLIKAR, have changed to New name ADITI JEWLIKAR, residing at G106, Shriram Spurthi Apartments, AECS Layout, Kundalahalli, Bengaluru- 560037, vide affidavit dated 25/08/2025 before Veena J., notary Bangalore .

I NAMA KRISHNAMURTHY NARENDRA KUMAR ALIAS SANDEEP. R/a, S1 Sai Kausthubha , #739, 10th main, Jayanagar 4th block, Bengaluru -560011 Have Changed My Name From NAMA KRISHNAMURTHY NARENDRA KUMAR ALIAS SANDEEP To NAMA KRISHNAMURTHY NARENDRA KUMAR vide Affidavit Dated 25/08/2025 before Notary Mamatha N.K Bangalore

I, GIREESHA._D.V. S/o.Late. Venkatesh R/a#302, 18, Nagamangala Taluk Bellur Hobali Doddagatta Mudalamellahalli Post Mandya_District 571418 have`changed my`Name to GIRISH._D.V. vide`Affidavit dated:21.8.2025 before`Notary DEEPA.M. Bengaluru

I , TIPPERUDRASWAMY HEDNE MANJUNATHA R/a.Flat.#104 Punnami Bliss`Annex Bellandur Railway Station`Road Opposite to JP Morgan Bengaluru-103, have`changed name THIPPERUDRASWAMY HEDNE MANJUNATHA vide`affidavit 25.08.2025 before`Notary Hemalatha Bengaluru.

I, GHOUSE SHARIFF residing at No.20, 4th Cross, VinayakaNagar, old Guddadahalli, Bangalore South, Bangalore -560026 hereby state that in my Aadhar card my fathers name ISMAIL SHARIFF and in my passport it has mentioned as ISMAIL SHAREF. I hereby further declare that his actual name is ISMAIL SHARIFF Vide affidavit dated 25-08-2025 before Notary C Sharada, Bangalore.

I, SHANTHARAJU_N.S R/a#16/19 Platinum Arch, 1st`Cross 1st`Main, Old Gurappanapalya Main Road, BTM 1st`Stage Bengaluru-29, have changed name MUHAMMAD HATIM vide`affidavit 25.08.2025 before`Notary Hemalatha Bengaluru.

JOB To Place your Classified Ads Contact: 9886213331

Lost

DOCUMENT LOST
I, Lakshman Murthy G, Residing at Beeraiahnapalya, Kanasavadi, Doddaballapura Tq, have lost my **Original Sale Deed and Gift Deed, Document No./ Identification: Beeraiahnapalya, Survey No. 169/15** While transit. If found please contact: **9480320724**

REAL ESTATE SELLING

Villas/Bunglows

General

SALE PROPERTY Berlie Street, Langford Town, Site 3450sft, Builtup Two Floors, Details Email: johncurtis@rediffmail.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

ಅರಣ್ಯ ರಕ್ಷಕ ಸೇರಿ ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಕೆಂಪಣ್ಣ

ರಾಜಣ್ಣ

ದಾಬಸ್‌ಪೇಟೆ: ರಾಷ್ಟ್ರೀಯ ಹೆದ್ದಾರಿ-48ರ ಹನುಮಂತಪುರ ಗೇಟ್ ಬಳಿ, ಬೈಕ್ ಮತ್ತು ಕ್ಯಾಂಟರ್ ವಾಹನದ ನಡುವೆ ಸಂಭವಿಸಿದ ಅಪಘಾತದಲ್ಲಿ ಅರಣ್ಯ ರಕ್ಷಕ ಸೇರಿ ಇಬ್ಬರು ಮೃತಪಟ್ಟಿದ್ದಾರೆ.

ಕತ್ತಿಗನೂರು ಬಳಿಯ ಮಾರುತಿ ನಗರದ ಕೆಂಪಣ್ಣ (52) ಮತ್ತು ಕುಲವನ ಹಳ್ಳಿಯ ರಾಜಣ್ಣ ಮೃತರು. ದಾಬಸ್‌ಪೇಟೆ ಪಟ್ಟಣದಿಂದ ಊರಿಗೆ ತೆರಳುತ್ತಿದ್ದಾಗ ಹನುಮಂತಪುರದ ಬಳಿ ಹಿಂಬದಿಯಿಂದ ವೇಗವಾಗಿ ಬಂದ ಕ್ಯಾಂಟರ್‌ವೊಂದು ಬೈಕ್‌ಗೆ ಡಿಕ್ಕಿಯಾಗಿದೆ. ಹಿಂಬದಿ ಸವಾರ ಕೆಂಪಣ್ಣ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ರಾಜಣ್ಣ ಆಸ್ಪತ್ರೆಯಲ್ಲಿ ಮೃತಪಟ್ಟರು.

ಕೆಂಪಣ್ಣ ಅವರು ಅರಣ್ಯ ರಕ್ಷಕರಾಗಿ ಕೆಲಸ ಮಾಡುತ್ತಿದ್ದರು. ರಾಜಣ್ಣ ಸೆಂಟ್ರಿಂಗ್ ಕೆಲಸ ಮಾಡುತ್ತಿದ್ದರು. ನೆಲಮಂಗಲ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಚಾಲಕನನ್ನು ಬಂಧಿಸಿದ್ದು, ಕ್ಯಾಂಟರ್ ವಾಹನ ಜಪ್ತಿ ಮಾಡಲಾಗಿದೆ.

ಬೈಕ್ ಸವಾರ ಸಾವು

ಲಕ್ಷ್ಮಿಕಾಂತ್

ನೆಲಮಂಗಲ: ಟಿ.ಬೇಗೂರು ಬಳಿ ಖಾಸಗಿ ಬಸ್, ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಸವಾರ, ಪಟ್ಟಣದ ಸುಭಾಷ್‌ನಗರ ನಿವಾಸಿ ಲಕ್ಷ್ಮಿಕಾಂತ್ (68) ಮೃತಪಟ್ಟಿದ್ದಾರೆ.

ಲಕ್ಷ್ಮಿಕಾಂತ್ ಅವರು ತಾಲ್ಲೂಕಿನ ಮಿಣ್ಣಾಪುರದಲ್ಲಿ ಇರುವ ತಮ್ಮ ಜಮೀನಿಗೆ ಸೋಮವಾರ ಬೆಳಿಗ್ಗೆ ಹೋಗುತಿದ್ದರು. ರಾಷ್ಟ್ರೀಯ ಹೆದ್ದಾರಿ 48ರ ಟಿ.ಬೇಗೂರು ಬಳಿ ಖಾಸಗಿ ಕಂಪನಿ ಬಸ್ ಹಿಂದಿನಿಂದ ಗುದ್ದಿದ ಪರಿಣಾಮ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ನೆಲಮಂಗಲ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಎಂಟಿಸಿ: 20 ತಿಂಗಳಲ್ಲಿ 80 ಸಾವು

2024ರಲ್ಲಿ 190, 2025ರಲ್ಲಿ 121 ಅಪಘಾತ • 246 ಜನ ಗಾಯಗೊಂಡವರು

• ಅಮೂಲ್ಯ ಶಿವಶಂಕರ್

ಬೆಂಗಳೂರು: ಬಿಎಂಟಿಸಿ ಬಸ್ ಅಪಘಾತಗಳಲ್ಲಿ 2024ರಿಂದ ಇಲ್ಲಿಯವರೆಗೆ 80 ಜನರು ಮೃತಪಟ್ಟಿದ್ದಾರೆ ಎಂಬುದನ್ನು ಬೆಂಗಳೂರು ಸಂಚಾರ ಪೊಲೀಸರ (ಬಿಟಿಪಿ) ಅಂಕಿಅಂಶಗಳು ದೃಢಪಡಿಸಿವೆ.

2024ರಲ್ಲಿ ಬಿಎಂಟಿಸಿ ಬಸ್‌ಗಳು ಒಳಗೊಂಡ 190 ರಸ್ತೆ ಅಪಘಾತಗಳು ವರದಿಯಾಗಿವೆ. 42 ಜನರು ಮೃತಪಟ್ಟಿದ್ದು, 155 ಜನರು ಗಾಯಗೊಂಡಿದ್ದರು. ಈ ವರ್ಷ 121 ಅಪಘಾತಗಳು ಸಂಭವಿಸಿದ್ದು, 38 ಜನರು ಮೃತಪಟ್ಟಿದ್ದಾರೆ. 91 ಜನರು ಗಾಯಗೊಂಡಿದ್ದಾರೆ.

ಇದೇ ಅವಧಿಯಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳು ಒಳಗೊಂಡ ಅಪಘಾತಗಳಲ್ಲಿ 20 ಜನರು ಮೃತಪಟ್ಟಿದ್ದಾರೆ. 32 ಜನರು ಗಾಯಗೊಂಡಿದ್ದಾರೆ. ಖಾಸಗಿ ಬಸ್‌ಗಳು ಒಳಗೊಂಡ ಅಪಘಾತಗಳಲ್ಲಿ 48 ಜನರು ಸಾವಿಗೀಡಾಗಿದ್ದಾರೆ. 203 ಜನರು ಗಾಯಗೊಂಡಿದ್ದಾರೆ ಎಂದು ದತ್ತಾಂಶಗಳಿಂದ ಗೊತ್ತಾಗಿದೆ.

ಈ ಬಾರಿ ಆಗಸ್ಟ್‌ನಲ್ಲಿ ಇಬ್ಬರು ಮಕ್ಕಳು ಸೇರಿ ಐದು ಮಂದಿ ಮೃತಪಟ್ಟಿದ್ದಾರೆ. ಅದರಲ್ಲಿ ನಾಲ್ವರು ದ್ವಿಚಕ್ರ ವಾಹನದಲ್ಲಿ ಸಂಚರಿಸುತ್ತಿದ್ದವರು.

ಭಾನುವಾರ, ಕೆ.ಆರ್. ಮಾರುಕಟ್ಟೆ ಬಳಿಯ ಎಸ್‌ಜೆಪಿ ರಸ್ತೆಯಲ್ಲಿ 11 ವರ್ಷದ ಬಾಲಕ ತನ್ನ ಚಿಕ್ಕಪ್ಪನೊಂದಿಗೆ ದ್ವಿಚಕ್ರ ವಾಹನದಲ್ಲಿ ಪ್ರಯಾಣಿಸುತ್ತಿದ್ದ. ಬಿಎಂಟಿಸಿ ಬಸ್ ಅನ್ನು ಹಿಂದಿಕ್ಕಲು ಪ್ರಯತ್ನಿಸಿದಾಗ ಸ್ಕೂಟರ್ ಸ್ಕಿಡ್ ಆಗಿ ಪಲ್ಟಿಯಾಗಿದ್ದರಿಂದ ಬಾಲಕ ಬಸ್‌ನ ಚಕ್ರದ ಅಡಿಗೆ ಬಿದ್ದು ಮೃತಪಟ್ಟಿದ್ದ.

ಈ ತಿಂಗಳು ಸಂಭವಿಸಿದ ಐದು ಮಾರಕ ಅಪಘಾತಗಳಲ್ಲಿ ನಾಲ್ಕರಲ್ಲಿ ಬಿಎಂಟಿಸಿ ಚಾಲಕರ ತಪ್ಪಿರಲಿಲ್ಲ. ಎಲೆಕ್ಟ್ರಿಕ್ ಬಸ್‌ನಲ್ಲಿ ಉಂಟಾದ ಅಪಘಾತ ಮಾತ್ರ ಬಸ್ ಚಾಲಕನ ನಿಯಂತ್ರಣ ತಪ್ಪಿ ಉಂಟಾಗಿದ್ದು ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಚಾಲಕರಿಗೆ ತರಬೇತಿ ನೀಡಲಾಗಿದೆ. ಘಟಕಗಳಲ್ಲಿ 'ಬದುಕು ಬದುಕಿಸು' ಹಾಗೂ ಬಸ್ ನಿಲ್ದಾಣಗಳಲ್ಲಿ 'ಬಸ್ ಬಂತು ಬಸ್' ಬೀದಿ ನಾಟಕಗಳ ಮೂಲಕ ಸಾರ್ವಜನಿಕರಲ್ಲಿ ರಸ್ತೆ ಸುರಕ್ಷತಾ ಜಾಗೃತಿ ಮೂಡಿಸಲಾಗಿದೆ. ಚಾಲಕರ ಒತ್ತಡ ಕಡಿಮೆ ಮಾಡಲು 2000 ಟ್ರಿಪ್‌ಗಳ ಸಮಯ ಪರಿಷ್ಕರಣೆ ಮಾಡಿ ರನ್ನಿಂಗ್ ಟೈಮ್ ಹೆಚ್ಚಿಸಲಾಗಿದೆ. ಅಪಘಾತರಹಿತ ಚಾಲನೆ ಮಾಡಿದವರಿಗೆ ಚಿನ್ನ, ಬೆಳ್ಳಿ ಪದಕ ನೀಡಿ ಗೌರವಿಸಲಾಗುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

ಆದರೂ ಅಪಘಾತ ನಡೆದರೆ ಮೊದಲ ಬಾರಿಯಾಗಿದ್ದರೆ ಚಾಲಕ ಅಮಾನತು, ಎರಡನೇ ಬಾರಿ ಅಪಘಾತ ಮಾಡಿದರೆ ಕೆಲಸದಿಂದ ವಜಾ ಮಾಡಲು ನಿರ್ಧರಿಸಲಾಗಿದೆ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

'ಬಿಎಂಟಿಸಿ ಬಸ್‌ಗಳು ದೊಡ್ಡ ವಾಹನಗಳಾಗಿದ್ದು, ತಕ್ಷಣ ನಿಲ್ಲಿಸಲು ಸಾಧ್ಯವಿಲ್ಲ. ಇದರಿಂದಾಗಿ ಕೆಳಗೆ ಬಿದ್ದವರು ಚಕ್ರದಡಿಗೆ ಸಿಲುಕುತ್ತಿದ್ದಾರೆ' ಎಂದು ಸಂಚಾರ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಚಾಲಕರನ್ನು ದೂರಬೇಡಿ'

'ಎಲ್ಲ ಅಪಘಾತಗಳು ಬಿಎಂಟಿಸಿ ಚಾಲಕರ ತಪ್ಪಿನಿಂದಲೇ ನಡೆಯುತ್ತಿದೆ ಎಂಬ ತಪ್ಪು ಕಲ್ಪನೆ ಜನರಲ್ಲಿದೆ. ಶೇ 60ರಷ್ಟು ಅಪಘಾತಕ್ಕೆ ಚಾಲಕರು ಕಾರಣರಾಗಿರುವುದಿಲ್ಲ. ನಮ್ಮ ಚಾಲಕರು ಉತ್ತಮ ತರಬೇತಿ ಪಡೆದವರು ಮತ್ತು ವೃತ್ತಿಪರರು' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

ಭಾರತದ ಅತ್ಯಂತ ಸ್ಥಿರ ಮತ್ತು ವಿಶ್ವಾಸಾರ್ಹ ಬ್ಯಾಟ್ಸ್‌ಮನ್ ಚೇತೇಶ್ವರ್ ಪೂಜಾರ ಕ್ರಿಕೆಟ್ ಗೆ ವಿದಾಯ ಹೇಳಿದ್ದಾರೆ!

₹11.63 ಕೋಟಿ ದಂಡ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಶೇ 50ರ ರಿಯಾಯಿತಿ ಅಡಿ ದಂಡ ಪಾವತಿಸಲು ಸರ್ಕಾರವು ಅವಕಾಶ ಕಲ್ಪಿಸಿದ್ದು, ಆ.23ರಿಂದ ಆ.25ರವರೆಗೆ ಒಟ್ಟು 4,13,204 ಪ್ರಕರಣಗಳು ಇತ್ಯರ್ಥಗೊಂಡು, ₹11.63 ಕೋಟಿ ದಂಡ ಸಂಗ್ರಹವಾಗಿದೆ.

ಪೊಲೀಸ್ ಇಲಾಖೆಯಲ್ಲಿ ಸಂಚಾರ ಇ-ಚಲನ್‌ನಲ್ಲಿ ದಾಖಲಾದ ಪ್ರಕರಣಗಳಿಗೆ ದಂಡ ಪಾವತಿಸದೇ ಬಾಕಿ ಉಳಿಸಿಕೊಂಡಿರುವ ಪ್ರಕರಣಗಳಲ್ಲಿ ದಂಡ ಪಾವತಿಸಲು ರಿಯಾಯಿತಿ ನೀಡಿ ಆದೇಶಿಸಲಾಗಿತ್ತು. ಈ ಆದೇಶವು ಆ.23ರಿಂದ ಜಾರಿಗೆ ಬಂದಿದ್ದು, ಸೆ.12ರ ವರೆಗೆ ರಿಯಾಯಿತಿ ಇರಲಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಚಿಟಿಕೆ ಸುದ್ದಿ

ವಿಮಾನ ನಿಲ್ದಾಣ: ಭದ್ರತಾ ತಪಾಸಣೆ ವೇಳೆ ವಾಚ್ ಕಳವು

ಬೆಂಗಳೂರು: ದೇವನಹಳ್ಳಿಯಲ್ಲಿರುವ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭದ್ರತಾ ತಪಾಸಣೆ ವೇಳೆ ಪ್ರಯಾಣಿಕರೊಬ್ಬರ ₹10 ಸಾವಿರ ಮೌಲ್ಯದ ವಾಚ್ ಅನ್ನು ಕಳ್ಳತನ ಮಾಡಲಾಗಿದೆ.

ಈ ಸಂಬಂಧ ನೇಹಾ ಕುಶ್ವಾ ಅವರು ಬಿಐಎಎಲ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ. 'ಬೆಂಗಳೂರಿನಿಂದ ಗ್ವಾಲಿಯರ್‌ಗೆ ಏರ್ ಇಂಡಿಯಾ ವಿಮಾನದ ಮೂಲಕ ಪ್ರಯಾಣಿಸಲು ಕೆಐಎಎಲ್‌ನ ಟರ್ಮಿನಲ್ 2ಕ್ಕೆ ತೆರಳಿ ಭದ್ರತಾ ತಪಾಸಣೆಗೆಂದು ಕೈಗಡಿಯಾರವನ್ನು ಟ್ರೇನಲ್ಲಿ ಇಟ್ಟಿದ್ದೆ. ಭದ್ರತಾ ತಪಾಸಣೆ ಮುಗಿಸಿಕೊಂಡು ತೆರಳುವಾಗ ವಾಚ್ ತೆಗೆದುಕೊಳ್ಳುವುದನ್ನು ಮರೆತಿದ್ದೆ. ಅಲ್ಲಿಗೆ ಬಂದಿದ್ದ ಉಷಾ ಗಂಗಾಧರ್ ಎಂಬುವವರು ವಾಚ್ ತೆಗೆದುಕೊಂಡು ಹೋಗಿದ್ದಾರೆ' ಎಂದು ನೇಹಾ ಅವರು ದೂರು ನೀಡಿದ್ದಾರೆ.

ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗತ್ತಿದೆ ಎಂದು ಪೊಲೀಸರು ಹೇಳಿದರು.

ಉದ್ಯಮಿ ಕುಟುಂಬದ ಐವರ ವಿರುದ್ಧ ಎಫ್‌ಐಆರ್

ಲಾಭದ ಆಮಿಷ: ₹8 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ತುಮಕೂರು: ಚಿನ್ನದ ವ್ಯಾಪಾರದಲ್ಲಿ ಹಣ ಹೂಡಿಕೆ ಮಾಡಿದರೆ ಪ್ರತಿ ತಿಂಗಳು ಅಧಿಕ ಲಾಭಾಂಶ ನೀಡಲಾಗುವುದು ಎಂಬ ಬೆಂಗಳೂರು ಉದ್ಯಮಿಯೊಬ್ಬರ ಮಾತಿಗೆ ಮರುಳಾದ ನಗರದ ನಾಲ್ವರು ಉದ್ಯಮಿಗಳು ₹7.75 ಕೋಟಿ ಕಳೆದುಕೊಂಡಿದ್ದಾರೆ.

ನಗರದ ಬಾರ್‌ಲೈನ್ ರಸ್ತೆಯ ಅಕ್ಬರ್ ಇಲಿಯಾಜ್ ಅಹ್ಮದ್ ನೀಡಿದ ದೂರಿನ ಮೇರೆಗೆ ಬೆಂಗಳೂರಿನ ಉದ್ಯಮಿ ಅಬ್ದುಲ್ ಕರೀಂ, ಪತ್ನಿ ಜೀನತ್, ಮಗ ಮಹ್ಮದ್ ಇಬ್ರಾಹಿಂ, ಮಗಳು ಖತೀಜಾ ಫಿಜಾ, ಅಳಿಯ ರಿಜ್ವಾನ್ ವಿರುದ್ಧ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಅಬ್ದುಲ್ ಕರೀಂ 2023ರಲ್ಲಿ ಆಕಸ್ಮಿಕವಾಗಿ ಪರಿಚಯವಾದರು. ನಂತರದ ದಿನಗಳಲ್ಲಿ ಇಬ್ಬರ ಮಧ್ಯೆ ಒಡನಾಟ ಬೆಳೆಯಿತು. ದುಬೈನಲ್ಲಿ ಚಿನ್ನದ ವಹಿವಾಟು ನಡೆಸುತ್ತಿರುವ ಬಗ್ಗೆ ತಿಳಿಸಿದ್ದರು. ₹10 ಕೋಟಿ ಅವಶ್ಯಕತೆ ಇದ್ದು, ನೀವು ಹಣ ನೀಡಿದರೆ ಪ್ರತಿ ತಿಂಗಳು ಲಾಭಾಂಶ ನೀಡಲಾಗುವುದು ಎಂದು ಭರವಸೆ ನೀಡಿದ್ದರು. ನನ್ನ ಬಳಿ ಅಷ್ಟೊಂದು ಹಣವಿಲ್ಲ ಎಂದು ತಿಳಿಸಿದ್ದೆ. ನಿಮ್ಮ ಸ್ನೇಹಿತರನ್ನು ಒಂದು ಕಡೆ ಸೇರಿಸಿ ನಾನು ಮಾತನಾಡುತ್ತೇನೆ ಎಂದು ಹೇಳಿದ್ದರು' ಎಂದು ಅಕ್ಬರ್ ಇಲಿಯಾಜ್ ಅಹ್ಮದ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಇದಾದ ಬಳಿಕ ಅಬ್ದುಲ್ ಕರೀಂ ತನ್ನ ಹೆಂಡತಿ, ಮಗ, ಮಗಳು, ಅಳಿಯನ ಜತೆಗೆ ನಮ್ಮ ಮನೆಗೆ ಬಂದು ಹಣ ಹೂಡಿಕೆ ಬಗ್ಗೆ ಚರ್ಚಿಸಿದ್ದರು. ಈ ವೇಳೆ ನನ್ನ ಸ್ನೇಹಿತರಾದ ಮುಸದ್ದೀಕ್ ನಯಾಜ್, ಮೊಹ್ಮದ್ ಇಕ್ಬಾಲ್, ಲೋಕೇಶ್ ಸಹ ಇದ್ದರು. ಅವರ ಮಾತು ನಂಬಿ ಹಣ ಹೂಡಿಕೆ ಮಾಡಲು ಒಪ್ಪಿಗೆ ನೀಡಿದ್ದೆವು' ಎಂದು ಅವರು ತಿಳಿಸಿದ್ದಾರೆ.

'ನಾನು ಮೂರು ಹಂತದಲ್ಲಿ ಒಟ್ಟು ₹47.42 ಲಕ್ಷವನ್ನು ಅಬ್ದುಲ್ ಕರೀಂ ಹೇಳಿದ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿದ್ದೆ. ಕೆಲ ದಿನಗಳ ನಂತರ ಲಾಭಾಂಶದ ಹಣವೆಂದು ₹1 ಕೋಟಿಯನ್ನು ನನ್ನ ಖಾತೆಗೆ ವರ್ಗಾಯಿಸಿದ್ದರು. ಇದನ್ನು ನಂಬಿ ಹಂತ ಹಂತವಾಗಿ ಒಟ್ಟು ₹3 ಕೋಟಿ ನೀಡಿದ್ದೇನೆ' ಎಂದು ದೂರಿನಲ್ಲಿ ನಮೂದಿಸಿದ್ದಾರೆ.

'ನನ್ನ ಸಂಬಂಧಿ ಮುಸದ್ದೀಕ್ ನಯಾಜ್ ₹1.20 ಕೋಟಿ, ಸ್ನೇಹಿತ ಮೊಹ್ಮದ್ ಇಕ್ಬಾಲ್ ₹10 ಲಕ್ಷ, ಲೋಕೇಶ್ ₹12.49 ಲಕ್ಷ ಮತ್ತು ಆತನ ಸ್ನೇಹಿತರಿಂದ ₹3.50 ಕೋಟಿ ವರ್ಗಾವಣೆ ಮಾಡಿಸಿದ್ದಾರೆ. ಒಟ್ಟು ₹8.76 ಕೋಟಿ ಹೂಡಿಕೆಗೆ ಲಾಭಾಂಶವಾಗಿ ₹1 ಕೋಟಿ ವಾಪಸ್ ನೀಡಿದ್ದಾರೆ. ಇದರ ನಂತರ ಅಸಲು, ಲಾಭಾಂಶ ನೀಡದೆ ಸಂಪರ್ಕಕ್ಕೆ ಸಿಗದೆ ತಲೆಮರೆಸಿಕೊಂಡಿದ್ದಾರೆ' ಎಂದು ದೂರಿದ್ದಾರೆ. ಲಾಭಾಂಶ ನೀಡುವುದಾಗಿ ನಂಬಿಸಿ ಹಣ ಪಡೆದು, ಮೋಸ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿದ್ದಾರೆ.

ದುಬೈನಲ್ಲಿ ಆರೋಪಿ

ವಂಚನೆ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಬ್ಯಾಂಕ್ ವಿವರ ಪಡೆಯಲಾಗುವುದು. ವಂಚಿಸಿದ ಉದ್ಯಮಿ ದುಬೈನಲ್ಲಿ ಇರುವುದು ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಆರೋಪಿ ಚಿನ್ನದ ವ್ಯಾಪಾರದಲ್ಲಿ ಹೂಡಿಕೆ ಮಾಡಲು ಹಣ ಕೇಳಿದ್ದಾರೆ. ಹೆಚ್ಚಿನ ಲಾಭ ನೀಡಲಾಗುವುದು ಎಂದು ನಂಬಿಸಲು ಮೊದಲು ಒಂದಷ್ಟು ಹಣ ವಾಪಸ್ ಕೊಟ್ಟಿದ್ದಾರೆ. ಇದನ್ನು ನೋಡಿ ಉಳಿದವರು ಸಹ ಹೂಡಿಕೆ ಮಾಡಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದರು.

ಕೊಲೆ: ಇಬ್ಬರು ಆರೋಪಿಗಳ ಬಂಧನ

ಮದ್ಯದ ಅಮಲಿನಲ್ಲಿ ಕೃತ್ಯ: ಕುಂಬಳಗೋಡು ಠಾಣೆಯಲ್ಲಿ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಆಕಾಶ್

ರವಿ

ಬೆಂಗಳೂರು: ಕುಂಬಳಗೋಡು ಕೈಗಾರಿಕಾ ಪ್ರದೇಶದ ಎಸ್.ವಿ. ಕಾಂಕ್ರೀಟ್ ಪ್ಲಾಂಟ್ ಬಳಿ ನಡೆದ ಕೊಲೆ ಪ್ರಕರಣದ ಸಂಬಂಧ ಇಬ್ಬರು ಆರೋಪಿಗಳನ್ನು ಕುಂಬಳಗೋಡು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಉತ್ತರ ಪ್ರದೇಶದ ಅಮಿತ್ (25) ಕೊಲೆಯಾದ ವ್ಯಕ್ತಿ.

ಕೊಲೆ ಆರೋಪದಡಿ ಆಕಾಶ್ ಹಾಗೂ ರವಿ ಎಂಬುವವರನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ಲಾಂಟ್‌ನ ಉಸ್ತುವಾರಿ ಎಚ್.ಎನ್. ರೋಹಿತ್ ಅವರು ನೀಡಿದ ದೂರು ಆಧರಿಸಿ ಪ್ರಕರಣದ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಭಾನುವಾರ ರಜೆಯಿದ್ದ ಕಾರಣಕ್ಕೆ ಕೆಲಸಕ್ಕೆ ತೆರಳಿರಲಿಲ್ಲ. ನಗರದ ಜ್ಞಾನಭಾರತಿ ಸಮೀಪ ತೆರಳುತ್ತಿರುವಾಗ ಪ್ಲಾಂಟ್‌ನ ದಾಸ್ತಾನು ವಿಭಾಗದ ಉಸ್ತುವಾರಿ ವಿಜಯ್ ಅವರು ಕರೆ ಮಾಡಿದ್ದರು. ಪ್ಲಾಂಟ್‌ನ ಕೆಲಸಗಾರ ರವಿಯೊಂದಿಗೆ ಇಬ್ಬರು ಬಂದು ಗಲಾಟೆ ನಡೆಸುತ್ತಿದ್ದಾರೆ. ಮದ್ಯ ಸೇವನೆ ಮಾಡಿರುವಂತೆ ಕಂಡುಬರುತ್ತಿದೆ ಎಂಬುದಾಗಿ ಮಾಹಿತಿ ನೀಡಿದ್ದರು. ತಕ್ಷಣವೇ ಆರೋಪಿ ರವಿಗೆ ಕರೆ ಮಾಡಿ, 'ನಿನ್ನ ಜತೆಗೆ ಬಂದಿರುವ ಇಬ್ಬರನ್ನು ಹೊರಕ್ಕೆ ಕಳುಹಿಸುವಂತೆ ಸೂಚಿಸಿದ್ದೆ'. ಪ್ಲಾಂಟ್‌ನ ಗುಣಮಟ್ಟ ವಿಭಾಗದ ಎಂಜಿನಿಯರ್ ನವನೀತ್ ಅವರು ಮತ್ತೆ ಕರೆ ಮಾಡಿ, ರವಿಯೊಂದಿಗೆ ಬಂದಿರುವವರ ಪೈಕಿ ಒಬ್ಬನಿಗೆ ಗಾಯವಾಗಿದೆ ಎಂದು ತಿಳಿಸಿದ್ದರು. ತಕ್ಷಣವೇ ಸ್ಥಳಕ್ಕೆ ಬಂದು ಪರಿಶೀಲಿಸಿದಾಗ ಅಮಿತ್ ಎಂಬಾತ ರಕ್ತದ ಮಡುವಿನಲ್ಲಿ ಬಿದ್ದಿರುವುದು ಕಂಡುಬಂದಿತ್ತು' ಎಂದು ರೋಹಿತ್ ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಆಯುಧದಿಂದ ಹಲ್ಲೆ ನಡೆಸಿ ಕೊಲೆ ಮಾಡಲಾಗಿದೆ. ಸದ್ಯ ಇಬ್ಬರನ್ನು ಬಂಧಿಸಲಾಗಿದೆ. ಯಾವ ಕಾರಣದಿಂದ ಕೊಲೆ ಮಾಡಿದ್ದಾರೆ ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ. ಮದ್ಯದ ಅಮಲಿನಲ್ಲಿ ಗಲಾಟೆ ನಡೆದು ಕೃತ್ಯ ಎಸಗಿರುವಂತೆ ಕಾಣಿಸುತ್ತಿದೆ' ಎಂದು ಪೊಲೀಸರು ಹೇಳಿದರು.

ಮುಖ್ಯಾಂಶಗಳು

- ಆಯುಧದಿಂದ ಹಲ್ಲೆ ನಡೆಸಿ ಕೊಲೆ
- ಮೃತ ವ್ಯಕ್ತಿಯ ಮೂಲ ಉತ್ತರ ಪ್ರದೇಶ
- ಕೊಲೆಯ ಹಿಂದಿನ ನಿಖರ ಕಾರಣ ಪತ್ತೆಯಾಗಿಲ್ಲ

ಅಪರಾಧ ಸುದ್ದಿ

ಎರಡು ಗುಂಪುಗಳ ಮಧ್ಯೆ ಗಲಾಟೆ: ಮೂವರು ವಶಕ್ಕೆ

ಬೆಂಗಳೂರು: ಗಣೇಶನ ಮೂರ್ತಿಯನ್ನು ಕೊಂಡೊಯ್ಯುವ ವೇಳೆ ಎರಡು ಗುಂಪಿನ ನಡುವೆ ಗಲಾಟೆ ನಡೆದಿದ್ದು, ಮೂವರು ಗಾಯಗೊಂಡಿದ್ದಾರೆ. ಕೊತ್ತನೂರು ಠಾಣೆ ವ್ಯಾಪ್ತಿಯ ಖಾಸಗಿ ಕಾಲೇಜು ಎದುರು ಗಲಾಟೆ ನಡೆದಿದೆ.

ಶೇಷಾದ್ರಿ (23), ಪ್ರಣವ್‌ಗೌಡ (19) ಮತ್ತು ಭಾರ್ಗವ್ (18) ಎಂಬುವರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಭಾನುವಾರ ರಾತ್ರಿ 10 ಗಂಟೆ ಸುಮಾರಿಗೆ ಘಟನೆ ನಡೆದಿದೆ ಎಂದು ಪೊಲೀಸರು ಹೇಳಿದರು.

30ಕ್ಕೂ ಹೆಚ್ಚು ಯುವಕರ ಗುಂಪು ಗಣಪತಿ ಮೂರ್ತಿ ಕೊಂಡೊಯ್ಯುತ್ತಿದ್ದರು. ಆಗ ಎರಡು ಗುಂಪುಗಳ ನಡುವೆ ಗಲಾಟೆ ಆಗಿತ್ತು. ಅದು ವಿಕೋಪಕ್ಕೆ ಹೋದಾಗ ಪರಸ್ಪರ ಹೊಡೆದಾಡಿಕೊಂಡಿದ್ದರು. ಬಳಿಕ ಹೊಯ್ಸಳ ವಾಹನ ಸಿಬ್ಬಂದಿ ಸ್ಥಳಕ್ಕೆ ತೆರಳಿ ಮೂವರನ್ನು ವಶಕ್ಕೆ ಪಡೆದು ಹೇಳಿಕೆ ದಾಖಲಿಸಿಕೊಂಡು ವಾಪಸ್ ಕಳುಹಿಸಿದ್ದಾರೆ. ಆದರೆ, ಪ್ರಕರಣದಲ್ಲಿ ಕೆಲವೊಂದು ಅನುಮಾನಗಳು ಕಂಡಬಂದ ಕಾರಣಕ್ಕೆ ಸೋಮವಾರ ಸಹ ಮತ್ತೆ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಈ ಸಂಬಂಧ ಕೊತ್ತನೂರು ಠಾಣೆಯಲ್ಲಿ ದೂರು ದಾಖಲಾಗಿದೆ.

ಗಣೇಶ ಹಬ್ಬ: ಕಾಣದ ವಾಹನ ದಟ್ಟಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯೋಗ ಇನ್ನಿತರ ಕಾರಣಗಳಿಗಾಗಿ ಊರು ಬಿಟ್ಟು ನಗರಕ್ಕೆ ಬಂದಿರುವ ಜನರು ಗೌರಿ-ಗಣೇಶ ಹಬ್ಬದ ನಿಮಿತ್ತ ಎರಡು ದಿನಗಳ ಹಿಂದೆಯೇ ತಮ್ಮ ಊರುಗಳಿಗೆ ಹೋಗಿರುವುದರಿಂದ ನಗರದ ಬಸ್ ನಿಲ್ದಾಣಗಳಲ್ಲಿ ಅಷ್ಟೊಂದು ಜನದಟ್ಟಣೆ, ವಾಹನ ದಟ್ಟಣೆ ಉಂಟಾಗಿಲ್ಲ. ಕೆಎಸ್‌ಆರ್‌ಟಿಸಿಯು ಹಬ್ಬದ ಪ್ರಯುಕ್ತ ಹೆಚ್ಚುವರಿಯಾಗಿ 1500 ಬಸ್‌ಗಳನ್ನು ಸೋಮವಾರ ರಸ್ತೆಗಿಳಿಸಿದೆ.

ಬೆಂಗಳೂರಿನಿಂದ ಹೊರಗೆ ಹೋಗುವವರ ಸಂಖ್ಯೆ ಶುಕ್ರವಾರ, ಶನಿವಾರ ಹೆಚ್ಚಿತ್ತು. ಭಾನುವಾರ, ಸೋಮವಾರ ಬೇರೆ ದಿನಗಳಿಗಿಂತ ಸ್ವಲ್ಪ ಅಧಿಕವಾಗಿದ್ದರೂ, ಹಬ್ಬದ ಹಿಂದಿನ ದಿನಗಳಲ್ಲಿ ಕಾಣುವಷ್ಟು ದಟ್ಟಣೆ ಕಂಡು ಬಂದಿಲ್ಲ. ಲಗೇಜುಗಳೊಂದಿಗೆ ಮೆಜೆಸ್ಟಿಕ್ ಕೇಂದ್ರ ಬಸ್ ನಿಲ್ದಾಣ, ರೈಲು ನಿಲ್ದಾಣ, ಶಾಂತಿನಗರ ಬಸ್ ನಿಲ್ದಾಣ, ಮೈಸೂರು ರಸ್ತೆ ಸ್ಯಾಟಲೈಟ್ ಬಸ್ ನಿಲ್ದಾಣಗಳ ಕಡೆಗೆ ಒಂದಷ್ಟು ಜನರು ಬರುತ್ತಿರುವುದು ಕಂಡುಬಂತು.

ವಾರಾಂತ್ಯದ ರಜೆಗಳೊಂದಿಗೆ ಸೋಮವಾರ ಒಂದು ರಜೆ ಹಾಕಿಕೊಂಡರೆ ಗೌರಿ ಗಣೇಶ ಹಬ್ಬಕ್ಕೆ ಐದು ದಿನ ರಜೆ ಸಿಗುವುದರಿಂದ ಅನೇಕರು ಬೇಗನೇ ಊರಿಗೆ ಹೊರಟಿದ್ದರಿಂದ ಈ ಬಾರಿ ದಟ್ಟಣೆ ಕಂಡು ಬಂದಿಲ್ಲ. ಇಲ್ಲದೇ ಇದ್ದರೆ ಹಬ್ಬದ ಹಿಂದಿನ ಎರಡು ದಿನಗಳಲ್ಲಿ ವಿಪರೀತ ಜನಸಂಚಾರ ಇರುತ್ತಿತ್ತು ಎಂದು ಕೆಎಸ್‌ಆರ್‌ಟಿಸಿ ಚಾಲಕರೊಬ್ಬರು ತಿಳಿಸಿದರು.

ಹೆಚ್ಚುವರಿ ಬಸ್: ಪ್ರಯಾಣಿಕರ ಸಂಖ್ಯೆ ಹೆಚ್ಚಿದ್ದರಿಂದ ಕೆಎಸ್‌ಆರ್‌ಟಿಸಿ, ಹೆಚ್ಚುವರಿಯಾಗಿ 1,500 ಬಸ್‌ಗಳ ವ್ಯವಸ್ಥೆ ಮಾಡಿದೆ. ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರಗಿ, ಬಳ್ಳಾರಿ, ಕೊಪ್ಪಳ, ಯಾದಗಿರಿ, ಬೀದರ್, ಮೈಸೂರು, ಹುಣಸೂರು, ಪಿರಿಯಾಪಟ್ಟಣ, ವಿರಾಜಪೇಟೆ, ಕುಶಾಲನಗರ, ಮಡಿಕೇರಿ ಹಾಗೂ ಹೊರರಾಜ್ಯಗಳ ಮಧುರೈ, ಕುಂಭಕೋಣಂ, ಚೆನ್ನೈ, ಕೊಯಮತ್ತೂರು, ತಿರುಚ್ಚಿ, ಪಾಲಕ್ಕಾಡ್, ಎರ್ನಾಕುಲಂ, ತಿರುಪತಿ, ವಿಜಯವಾಡ ಸಹಿತ ವಿವಿಧೆಡೆ ವಿಶೇಷ ಬಸ್‌ಗಳು ಸಂಚರಿಸುತ್ತಿವೆ. ಎಲ್ಲ ತಾಲ್ಲೂಕು, ಜಿಲ್ಲಾ ಬಸ್ ನಿಲ್ದಾಣಗಳಿಂದ ಸಂಚಾರ ಒತ್ತಡಕ್ಕೆ ಅನುಗುಣವಾಗಿ ವಿಶೇಷ ಬಸ್ ಸಂಚರಿಸಲಿವೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಮಾಹಿತಿ ನೀಡಿದರು.

ನಗರದಿಂದ ಹೊರಗೆ ಸಂಚರಿಸಲು ಬಿಎಂಟಿಸಿ ಬಸ್‌ಗಳನ್ನು ಕೂಡ ಬಳಸಿಕೊಳ್ಳಲಾಗಿದೆ. ಖಾಸಗಿ ಕಂಪನಿಗಳು ಸಹ ಹೆಚ್ಚುವರಿ ಬಸ್‌ಗಳನ್ನು ರಸ್ತೆಗೆ ಇಳಿಸಿದ್ದವು.

ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಸೋಮವಾರ ಪ್ರಯಾಣಿಕರ ಸಂಖ್ಯೆ ಎಂದಿನಂತೆ ಇತ್ತು ಪ್ರಜಾವಾಣಿ ಚಿತ್ರ

ಖಾಸಗಿ ಬಸ್ ದರ ಏರಿಕೆ: ದಾಳಿ

ಗೌರಿ-ಗಣೇಶ ಹಬ್ಬಗಳ ಪ್ರಯುಕ್ತ ಪ್ರಯಾಣಿಕರಿಂದ ಅಧಿಕ ದರ ವಸೂಲಿ ಮಾಡುತ್ತಿರುವ ಖಾಸಗಿ ಬಸ್‌ಗಳ ಮೇಲೆ ಸಾರಿಗೆ ಇಲಾಖೆ ದಾಳಿ ಮಾಡಿದೆ. 497 ಬಸ್‌ಗಳಿಗೆ ₹ 5.51ಲಕ್ಷ ದಂಡ ವಿಧಿಸಿದೆ.

ಶುಕ್ರವಾರ ರಾತ್ರಿ ಕಾರ್ಯಾಚರಣೆ ಆರಂಭಿಸಿದ್ದು, ಭಾನುವಾರ ರಾತ್ರಿವರೆಗೆ 1000ಕ್ಕೂ ಅಧಿಕ ವಾಹನಗಳನ್ನು ತಪಾಸಣೆ ನಡೆಸಲಾಗಿದೆ. ಅಧಿಕ ಟಿಕೆಟ್ ದರ ವಿಧಿಸುತ್ತಿದ್ದ ವಾಹನಗಳ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ದಂಡ ವಿಧಿಸಲಾಗಿದೆ ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಂ. ಯೋಗೀಶ್ ತಿಳಿಸಿದ್ದಾರೆ.

ಜಂಟಿ ಸಾರಿಗೆ ಆಯುಕ್ತರ ನೇತೃತ್ವದಲ್ಲಿ ವಿವಿಧ ಪ್ರಾದೇಶಿಕ ಸಾರಿಗೆ ಕಚೇರಿ ವ್ಯಾಪ್ತಿಗಳಲ್ಲಿ ವಿಶೇಷ ಕಾರ್ಯಾಚರಣೆ ನಡೆದಿದೆ. ಇನ್ನೆರಡು ದಿನ ಪರಿಶೀಲನೆ ಮುಂದುವರಿಯಲಿದೆ ಎಂದು ಮಾಹಿತಿ ನೀಡಿದ್ದಾರೆ.

ಬೆಂಗಳೂರು ಫೌಂಡೇಷನ್‌ನಿಂದ ಆಯೋಜನೆ

'ನಮ್ಮ ಬೆಂಗಳೂರು ಪ್ರಶಸ್ತಿ' ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಕ್ಷೇತ್ರಗಳಲ್ಲಿ ಗಣನೀಯವಾಗಿ ಕೆಲಸ ಮಾಡಿರುವ ಸಾಧಕರಿಗೆ 'ನಮ್ಮ ಬೆಂಗಳೂರು ಪ್ರಶಸ್ತಿ'ಯನ್ನು ಸೋಮವಾರ ಪ್ರದಾನ ಮಾಡಲಾಯಿತು.

ಕೋರಮಂಗಲದಲ್ಲಿ ನಮ್ಮ ಬೆಂಗಳೂರು ಫೌಂಡೇಷನ್ ಆಯೋಜಿಸಿದ್ದ ಸಮಾರಂಭದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ 14ನೇ ಆವೃತ್ತಿಯ ಪ್ರಶಸ್ತಿ ಪ್ರದಾನ ಮಾಡಿದರು.

ಎಸ್.ಜಿ.ಸುಶೀಲಮ್ಮ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಲಾಯಿತು. ವರ್ಷದ ವ್ಯಕ್ತಿ ವಿಭಾಗದಲ್ಲಿ ಡಾ.ಅಲೆಕ್ಸಾಂಡರ್ ಥಾಮಸ್ ಮತ್ತು ಡಾ.ಪಿ. ಶ್ರೀರಾಮ್, ವರ್ಷದ ಸರ್ಕಾರಿ ಅಧಿಕಾರಿ ವಿಭಾಗದಲ್ಲಿ ಎಚ್.ಎಲ್.ಪ್ರಭಾಕರ, ವರ್ಷದ ಸಾಮಾಜಿಕ ಉದ್ಯಮಿ ವಿಭಾಗದಲ್ಲಿ ವಿಕಾಸ್ ಬ್ರಹ್ಮಾವರ್ ಮತ್ತು ಗೌತಮ್ ದೇಸಿಂಗ್, ವರ್ಷದ ಉದಯೋನ್ಮುಖ ತಾರೆ ವಿಭಾಗದಲ್ಲಿ ಮಾಳವಿಕಾ ಆರ್.ನಾಯರ್ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಬೆಂಗಳೂರಿನ ಬೆಳವಣಿಗೆಯಲ್ಲಿ ಹಲವರ ಪಾತ್ರ ಇದೆ. ಅಂತಹ ಸಾಧಕರನ್ನು ಗುರುತಿಸಿ ಪ್ರಶಸ್ತಿ ನೀಡುವ ಕ್ರಮ ಶ್ಲಾಘನೀಯ. ಸಮುದಾಯಗಳು ಒಟ್ಟಿಗೆ ಸೇರಿದಾಗ ಸಮಾಜದಲ್ಲಿ ಅರ್ಥಪೂರ್ಣ ಬದಲಾವಣೆ ಸಾಧ್ಯ. ಇದಕ್ಕೆ ಈ ಸಾಧಕರೇ ಉದಾಹರಣೆ ಎಂದು ಗೆಹಲೋತ್ ಹೇಳಿದರು.

ತೀರ್ಪುಗಾರರ ಸಮಿತಿ ಅಧ್ಯಕ್ಷ ಪ್ರದೀಪ್‌ಕರ್ ಮಾತನಾಡಿ, 'ಈ ಬಾರಿ ಪ್ರಶಸ್ತಿಗೆ 3,000ಕ್ಕೂ ಹೆಚ್ಚು ನಾಮ ನಿರ್ದೇಶನಗಳನ್ನು ಸ್ವೀಕರಿಸಲಾಗಿತ್ತು. ಇದರಲ್ಲಿ ಅರ್ಹರನ್ನು ತೀರ್ಪುಗಾರರ ತಂಡ ಆಯ್ಕೆ ಮಾಡಿದೆ' ಎಂದರು.

ನಮ್ಮ ಬೆಂಗಳೂರು ಫೌಂಡೇಷನ್‌ನ ಪ್ರಧಾನ ವ್ಯವಸ್ಥಾಪಕ ವಿನೋದ್ ಜಾಕೋಬ್ ಹಾಜರಿದ್ದರು.


ವಿವಿಧ ಕ್ಷೇತ್ರಗಳ ಸಾಧಕರಿಗೆ ನಮ್ಮ ಬೆಂಗಳೂರು ಪ್ರಶಸ್ತಿಯನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಪ್ರದಾನ ಮಾಡಿದರು

ಮೊದಲನೆಯ ಬಹುಮಾನ - ₹10,000
ಎರಡನೆಯ ಬಹುಮಾನ - ₹5,000
ಮೂರನೆಯ ಬಹುಮಾನ - ₹3,000

ಅಗ್ರ ಶೆಫ್‌ಗಳೊಡನೆ ಒಡನಾಟ, ಮೋಜು ಮಜಾ, ಅಲ್ಲದೆ ನಿಮ್ಮ ಪಾಕ ಪ್ರಾವಿಣ್ಯವನ್ನು ಪ್ರದರ್ಶಿಸುವ ಸುಸಂಧಿ

ಬೆಂಗಳೂರು ಮನೆ ಶೆಫ್‌ಗಳೆ, ನಿಮಗೊಂದು ಸುವರ್ಣಾವಕಾಶ! ಕರುನಾಡ ಸವಿಯೂಟ ನಿಮ್ಮ ಮನೆ ಬಾಗಿಲಿಗೆ ಬಂದಿದೆ. **ಒಗ್ಗರಣೆ ಡಬ್ಬಿ ಮುರಳಿ ಮತ್ತು ಸುಚಿತ್ರಾ** ಅವರೊಡನೆ ಮಾಸ್ಟರ್ ಕ್ಲಾಸ್‌ನಲ್ಲಿ ಕಲಿಯುವ ಸುಯೋಗ ನಿಮಗಿದೆ. ಪಾಕ ಕೌಶಲ್ಯವನ್ನು ಪ್ರದರ್ಶಿಸಿ, ದೊಡ್ಡ ಬಹುಮಾನಗಳನ್ನು ಗೆದ್ದು, ಸುಧಾ ವಾರಪತ್ರಿಕೆಯಲ್ಲಿ ನಿಮ್ಮ ಹೆಸರು ಪ್ರಕಟವಾದ ಹೆಮ್ಮೆ ನಿಮ್ಮದಾಗಲಿದೆ. ನಿಮ್ಮ ಪರಿವಾರ, ಮಿತ್ರರೊಡಗೂಡಿ ಬನ್ನಿ ಹಾಗೂ ಈ ಆನಂದದ ಕ್ಷಣದಲ್ಲಿ ಭಾಗಿಯಾಗಿ.

1. ನಿಗದಿ ಪಡಿಸಿದ ಸ್ಥಾನಕ್ಕೆ ನೀವು ಮನೆಯಲ್ಲಿ ತಯಾರು ಮಾಡಿದ ಖಾದ್ಯ ಪದಾರ್ಥದೊಂದಿಗೆ ಮುಂಜಾನೆ **9.30** ಕ್ಕೆ ಹಾಜರಿರಿ. **ಒಗ್ಗರಣೆ ಡಬ್ಬಿ ಮುರಳಿ ಮತ್ತು ಸುಚಿತ್ರಾ** ಅವರು ಈ ಸ್ಪರ್ಧೆಯಲ್ಲಿ ತೀರ್ಪು ನೀಡುತ್ತಾರೆ.
2. ನೀವು ಪ್ರಸ್ತುತಪಡಿಸುವ ವ್ಯಂಜನವು ಕರ್ನಾಟಕದ್ದಾಗಿರಬೇಕು.
3. ಸ್ವಾದ, ನಾವಿನ್ಯತೆ ಮತ್ತು ತಿನಿಸಿನ ಪ್ರಸ್ತುತಪಡಿಸುವಿಕೆ ಯಂತಹ ಮಾನದಂಡಗಳನ್ನು ಆಧರಿಸಿ ತೀರ್ಪು ನೀಡಲಾಗುವುದು.
4. ಸ್ಪರ್ಧಿಗಳು ತಮ್ಮ ಖಾದ್ಯಾಲಂಕಾರದ ವಸ್ತುಗಳು ಮತ್ತು ಪ್ಲೇಟಿಂಗ್‌ನ ಸಾಮಗ್ರಿಗಳನ್ನು ತಾವೇ ತರಬೇಕು.
5. ಸ್ಥಳದಲ್ಲೇ ನೋಂದಾಯಿಸುವ ಸಮಯ ಮುಂಜಾನೆ **9 ರಿಂದ 10 ರ ವರೆಗೆ.**

ದಿನಾಂಕ: ಅಗಸ್ಟ್ 31, 2025
ಸ್ಥಳ: ಲುಲು ಮಾಲ್, ಸುಜಾತಾ ಥಿಯೇಟರ್ ಎದುರು, ರಾಜಾಜಿ ನಗರ

ಕರ್ನಾಟಕದ ಅತಿ ದೊಡ್ಡ ಪಾಕ ಕಲೆಯ ಕಾರ್ಯಕ್ರಮದಲ್ಲಿ ಭಾಗವಹಿಸಲು ಸ್ಕ್ಯಾನ್ ಮಾಡಿ ಮತ್ತು ನೋಂದಾಯಿಸಿಕೊಳ್ಳಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: **73380 18541**

ನಿಯಮಗಳು ಮತ್ತು ಷರತ್ತುಗಳಿಗೆ ನೋಡಿ: https://www.prajavani.net/cok2025tnc

COLLATERAL

LPG Partner: IndianOil Indane | Kitchen Partner: Prestige | Special Partner: BHIMA | Snacks Partner: Lay's | Associate Sponsors: SBI card, Vencobb, eco crystal WATER TREATMENT

278 ಎಕರೆ ಭೂ ಒತ್ತುವರಿ ತೆರವು

ಭೂಗಳ್ಳರ ವಿರುದ್ಧ ಜಿಲ್ಲಾಡಳಿತದ ಕಠಿಣ ಕ್ರಮ; ₹912 ಕೋಟಿ ಮೌಲ್ಯದ ಜಾಗ ವಶ

• ಎ.ಎಂ.ಸುರೇಶ

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಒತ್ತುವರಿಯಾಗಿರುವ ಸರ್ಕಾರಿ ಜಾಗವನ್ನು ತೆರವುಗೊಳಿಸುವ ಪ್ರಕ್ರಿಯೆ ವೇಗ ಪಡೆದುಕೊಂಡಿದ್ದು, ಆರು ತಿಂಗಳಿನಿಂದ ಈಚೆಗೆ 278.19 ಎಕರೆ ಒತ್ತುವರಿ ತೆರವು ಮಾಡಲಾಗಿದೆ.

ಮಾರ್ಗಸೂಚಿ ಪ್ರಕಾರ ಇದರ ಮೌಲ್ಯ ₹912.48 ಕೋಟಿ. ಆದರೆ, ಮಾರುಕಟ್ಟೆಯಲ್ಲಿನ ಮೌಲ್ಯ ₹7,299.84 ಕೋಟಿ ಎಂದು ಅಂದಾಜಿಸಲಾಗಿದೆ.

'ಬೆಂಗಳೂರು ಸುತ್ತಮುತ್ತ ನಡೆದಿರುವ ಸರ್ಕಾರಿ ಭೂಮಿಯ ಒತ್ತುವರಿ ತೆರವುಗೊಳಿಸುವುದಕ್ಕೆ ಮೊದಲ ಆದ್ಯತೆ ನೀಡಿದ್ದೇವೆ. ಎಲ್ಲೆಲ್ಲಿ ಒತ್ತುವರಿ ಆಗಿದೆ ಎಂದು ತಹಶೀಲ್ದಾರ್‌ಗಳ ಮೂಲಕ ಗುರುತಿಸಿ, ಅದನ್ನು ತೆರವುಗೊಳಿಸುವ ಕಾರ್ಯವನ್ನು ಪ್ರತಿವಾರ ಮಾಡುತ್ತಿದ್ದೇವೆ' ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಸರ್ಕಾರಿ ಭೂಮಿ ಒತ್ತುವರಿಗೆ ಸಂಬಂಧಪಟ್ಟಂತೆ ಎ.ಟಿ.ರಾಮಸ್ವಾಮಿ ನೇತೃತ್ವದ ಸಮಿತಿ ಮತ್ತು ಸರ್ಕಾರಿ ಜಮೀನುಗಳ ಸಂರಕ್ಷಣೆ ಕಾರ್ಯಪಡೆ ಅಧ್ಯಕ್ಷರಾಗಿದ್ದ ವಿ.ಬಾಲಸುಬ್ರಮಣಿಯನ್ ಸಮಿತಿ ನೀಡಿರುವ ವರದಿಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಹೀಗಾಗಿ ಎಷ್ಟು ಭೂಮಿ ಒತ್ತುವರಿಯಾಗಿದೆ ಎಂದು ಖಚಿತವಾಗಿ ಹೇಳಲು ಆಗುವುದಿಲ್ಲ. ಈ ವರದಿಗಳಲ್ಲಿ ಪ್ರಸ್ತಾಪವಾಗಿರುವ ಸರ್ವೆ ನಂಬರ್‌ಗಳನ್ನು ಆಧರಿಸಿ, ತಹಶೀಲ್ದಾರ್‌ಗಳಿಂದ ವರದಿ ಪಡೆದು ಒತ್ತುವರಿ ತೆರವು ಮಾಡುತ್ತಿದ್ದೇವೆ' ಎಂದು ಅವರು ವಿವರಿಸಿದರು.

> ಒತ್ತುವರಿ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿದ್ದೇವೆ. ಎಷ್ಟೇ ಪ್ರಭಾವಿಗಳು ಇದ್ದರೂ ಮಣಿಯುವುದಿಲ್ಲ, ಕಾನೂನು ಕ್ರಮಗಳ ಮೂಲಕ ಸರ್ಕಾರಿ ಜಾಗವನ್ನು ವಶಕ್ಕೆ ಪಡೆಯುತ್ತೇವೆ
> **ಜಿ.ಜಗದೀಶ್,** ಬೆಂಗಳೂರು ನಗರ ಜಿಲ್ಲಾಧಿಕಾರಿ

'ಸರ್ಕಾರಿ ಜಾಗದಲ್ಲಿ ಶಾಲೆಗಳು, ಅಂಗನವಾಡಿಗಳು, ಬಸ್ ನಿಲ್ದಾಣಗಳು ತಲೆ ಎತ್ತಿವೆ. ಬಾಣಸವಾಡಿ ಕೆರೆ ಜಾಗದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು (ಬಿಡಿಎ) ಬಡಾವಣೆ ಮಾಡಿದ್ದಾರೆ. ಇಂತಹ ನೂರಾರು ಪ್ರಕರಣಗಳು ಇವೆ. ಇವುಗಳನ್ನು ಯಾವ ರೀತಿ ಇತ್ಯರ್ಥಪಡಿಸಬೇಕು ಎಂಬುದು ಸರ್ಕಾರದ ಮಟ್ಟದಲ್ಲೇ ನಿರ್ಧಾರವಾಗಬೇಕು' ಎನ್ನುತ್ತಾರೆ ಜಗದೀಶ್.

ಒತ್ತುವರಿ ತೆರವು ಎಲ್ಲೆಲ್ಲಿ?

ತಾಲ್ಲೂಕು	ತೆರವುಗೊಳಿಸಿದ ಜಾಗ(ಎಕರೆಗಳಲ್ಲಿ)	ಮಾರ್ಗಸೂಚಿ ಮೌಲ್ಯ (ಕೋಟಿಗಳಲ್ಲಿ)
ಬೆಂಗಳೂರು ಪೂರ್ವ	34.23	₹164.77
ಆನೇಕಲ್	53.33	₹85.83
ಬೆಂಗಳೂರು ದಕ್ಷಿಣ	45.41	₹207.05
ಯಲಹಂಕ	60.26	₹209.92
ಬೆಂಗಳೂರು ಉತ್ತರ	82.15	₹243.56
ಒಟ್ಟು	278.19	₹912.48

ಕೆರೆಗಳ ಒತ್ತುವರಿ ತೆರವು ಮಾಹಿತಿ

ತಾಲ್ಲೂಕು	ಒಟ್ಟು ಕೆರೆಗಳು	ಒತ್ತುವರಿಯಾಗಿರುವ ಕೆರೆಗಳು	ತೆರವುಗೊಳಿಸಿರುವ ಕೆರೆಗಳು
		ಎ-ಎಕರೆ, ಗು- ಗುಂಟೆ	
ಯಲಹಂಕ	128	105 (1,098 ಎ. 34 ಗುಂ)	82 (1,007 ಎ. 6 ಗುಂ)
ಬೆಂಗಳೂರು ದಕ್ಷಿಣ	209	179 (826 ಎ. 38 ಗುಂ)	95 (402 ಎ. 34 ಗುಂ)
ಬೆಂಗಳೂರು ಉತ್ತರ	136	123 (1,248 ಎ. 10 ಗುಂ)	76 (249 ಎ. 11 ಗುಂ)
ಆನೇಕಲ್	254	217 (719 ಎ. 11 ಗುಂ)	184 (623 ಎ. 29 ಗುಂ)
ಬೆಂಗಳೂರು ಪೂರ್ವ	110	100 (677 ಎ. 34 ಗುಂ)	47 (214 ಎ. 19 ಗುಂ)

'ಬಾಗಲೂರಿನಲ್ಲಿ 30 ಎಕರೆ ಸರ್ಕಾರಿ ಭೂಮಿ ಒತ್ತುವರಿ ಮಾಡಿಕೊಂಡು ಖಾಸಗಿಯವರು ಬಡಾವಣೆ ನಿರ್ಮಿಸಿದ್ದಾರೆ. ಅಲ್ಲಿ ಖಾಸಗಿ ಜಾಗ ಇರುವುದು 12 ಎಕರೆ ಮಾತ್ರ. ಸರ್ಕಾರಿ ಭೂಮಿ ತೆರವುಗೊಳಿಸುವ ಸಂಬಂಧ ನೋಟಿಸ್ ನೀಡಲಾಗಿತ್ತು. ಆದರೆ, ನ್ಯಾಯಾಲಯಕ್ಕೆ ಹೋಗಿ ರಜಾ ದಿನವಾದ ಭಾನುವಾರ ತಡೆಯಾಜ್ಞೆ ತಂದಿದ್ದಾರೆ. ಇಂತಹ ಹಲವು ಪ್ರಕರಣಗಳು ಇವೆ. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ವಿಶೇಷ ವಕೀಲರನ್ನು ನೇಮಕ ಮಾಡಿ, ತಡೆಯಾಜ್ಞೆ ತೆರವಿಗೆ ಪ್ರಯತ್ನ ಮಾಡುತ್ತಿದ್ದೇವೆ' ಎಂದು ಹೇಳಿದರು.

ಮಂಜೂರು ಮಾಡಲು ಬರಲ್ಲ: ಬಿಬಿಎಂಪಿಯಿಂದ 18 ಕೀ.ಮೀ. ವ್ಯಾಪ್ತಿಯ ಒಳಗೆ ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ಜಾಗವನ್ನು ರೈತರಿಗೆ ಮಂಜೂರು ಮಾಡಿಕೊಡಲು ಬರುವುದಿಲ್ಲ. ಆದರೂ, ರೈತರು ಅರ್ಜಿ ಹಾಕಿದ್ದಾರೆ. ಈ ರೀತಿ ಸಾಗುವಳಿ ಮಾಡುತ್ತಿರುವ ನಾಲ್ಕು ಸಾವಿರ ಎಕರೆ ಜಮೀನನ್ನು ಗುರುತಿಸಲಾಗಿದೆ. ಈ ಪ್ರಕರಣಗಳನ್ನು ಯಾವ ರೀತಿ ಇತ್ಯರ್ಥ ಮಾಡಬೇಕು ಎಂದು ಸರ್ಕಾರದ ಮಟ್ಟದಲ್ಲಿ ತೀರ್ಮಾನವಾಗಬೇಕಾಗುತ್ತದೆ ಎಂದು ಅವರು ವಿವರಿಸಿದರು.

ಕೆರೆಗಳ ಒತ್ತುವರಿ ತೆರವು: ನಗರ ಜಿಲ್ಲೆಯಲ್ಲಿ ಎಲ್ಲ ಕೆರೆಗಳ ಅಳತೆ ಮಾಡಿದ್ದು 837 ಕೆರೆಗಳ ಪೈಕಿ 724 ಕೆರೆಗಳು ಒತ್ತುವರಿಯಾಗಿವೆ. ಈಗಾಗಲೇ 484 ಕೆರೆಗಳ ಒತ್ತುವರಿ ತೆರವುಗೊಳಿಸಲಾಗಿದೆ. 240 ಕೆರೆಗಳ ಒತ್ತುವರಿ ತೆರವು ಬಾಕಿ ಇದ್ದು, ಹಂತ ಹಂತವಾಗಿ ತೆರವು ಮಾಡಲು ಜಿಲ್ಲಾಡಳಿತ ಯೋಜನೆ ರೂಪಿಸಿದೆ.

ಚಿಟಿಕೆ ಸುದ್ದಿ

ಮಾಂಸ ಮಾರಾಟ ನಾಳೆ ನಿಷೇಧ

ಬೆಂಗಳೂರು: ಗಣೇಶ ಚತುರ್ಥಿ ಹಬ್ಬದ ಪ್ರಯುಕ್ತ ಆ.27ರಂದು ಮಾಂಸ ಮಾರಾಟವನ್ನು ನಿಷೇಧಿಸಿ ಬಿಬಿಎಂಪಿ ಆದೇಶ ಹೊರಡಿಸಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕಸಾಯಿಖಾನೆಗಳಲ್ಲಿ ಅಂದು ಪ್ರಾಣಿವಧೆ ಮಾಡಬಾರದು. ಮಾರಾಟ ಮಳಿಗೆಗಳಲ್ಲಿ ಮಾಂಸ ಮಾರಾಟ ಮಾಡಬಾರದು ಎಂದು ಬಿಬಿಎಂಪಿ ಪಶುಪಾಲನೆ ವಿಭಾಗದ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಕುಂಭ ಕಳಸ ಪ್ರತಿಷ್ಠಾಪನೆ ನಾಳೆ

ಬೆಂಗಳೂರು: ಜ್ಞಾನಭಾರತಿ ವ್ಯಾಪ್ತಿಯ ಮರಿಯಪ್ಪನಪಾಳ್ಯ ಗ್ರಾಮದಲ್ಲಿ ಇದೇ 27ರಂದು ಆದಿಶಕ್ತಿ ದೊಡ್ಡಮ್ಮ, ಗಂಗಮ್ಮ, ಮಾರಮ್ಮ, ಸೂಲ್ಲಾಪುರದಮ್ಮ ಮತ್ತು ನಂದಿ ಈಶ್ವರ ದೇವಾಲಯಗಳ ಆವರಣದಲ್ಲಿ ಆದಿಶಕ್ತಿ ದೊಡ್ಡಮ್ಮನ ಕುಂಭ ಕಳಸ ಪ್ರತಿಷ್ಠಾಪನೆ ಆಯೋಜಿಸಲಾಗಿದೆ.

ನಾಲ್ಕನೇ ಕುಂಭಾಭಿಷೇಕದ ವಾರ್ಷಿಕೋತ್ಸವದ ಅಂಗವಾಗಿ ಬೆಳಿಗ್ಗೆ 9ಕ್ಕೆ ಗಣಪತಿ, ಗಂಗಾ ಪೂಜೆ, ರಕ್ಷಾ ಬಂಧನ, ಕಳಶ ಆರಾಧನೆ, ದುರ್ಗಾ ಹೋಮ, ಪೂರ್ಣಾಹುತಿ, ಕುಂಭಾಭಿಷೇಕ ಅಲಂಕಾರ ಸೇವೆ, ಮಹಾ ಮಂಗಳಾರತಿ ಹಾಗೂ ತೀರ್ಥ ಪ್ರಸಾದ ವಿನಿಯೋಗ ಮಾಡಲಾಗುತ್ತಿದೆ. ಇದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಳ್ಳುವಂತೆ ಪ್ರಕಟಣೆ ತಿಳಿಸಿದೆ.

'ಆರ್‌ಎಸ್‌ಎಸ್ ವಿಷಕಂಠನಂತೆ'

ಬೆಂಗಳೂರು: ಆರ್‌ಎಸ್‌ಎಸ್ ವಿರುದ್ಧ ಕೆಲವರು ನಿತ್ಯವೂ ವಿಷ ಕಕ್ಕುತ್ತಿದ್ದಾರೆ. ವಿಷಕಂಠನಂತಿರುವ ಆರ್‌ಎಸ್‌ಎಸ್‌ಗೆ ಅದನ್ನು ಅರಗಿಸಿಕೊಳ್ಳುವ ಶಕ್ತಿ ಇದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ವಿಜಯೇಂದ್ರ

ಹಿಂದಿನಿಂದಲೂ ಆರ್‌ಎಸ್‌ಎಸ್ ವಿರುದ್ಧ ಕೆಲವರು ಕಿಡಿ ಕಾರುತ್ತಲೇ ಬರುತ್ತಿದ್ದಾರೆ. ಇದಕ್ಕೆ ತಲೆ ಕೆಡಿಸಿಕೊಳ್ಳದೇ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿದೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಕಾಂಗ್ರೆಸ್‌ನ ಕೆಲವು ಮುಖಂಡರು ಅರ್ಥಹೀನ ಹೇಳಿಕೆ ನೀಡುವ ಮೂಲಕ ವಿಷ ಕಕ್ಕುತ್ತಿದ್ದಾರೆ. 100 ವರ್ಷಗಳಿಂದ ಸೇವಾ ಕಾರ್ಯ ಮತ್ತು ಹಿಂದೂಗಳನ್ನು ಸಂಘಟಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದೆ ಎಂದು ಹೇಳಿದರು.

'ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ನಮಸ್ತೇ ಸದಾ ವತ್ಸಲೆ ಹಾಡಿದ್ದಾರೆ ಎಂದರೆ ಅವರಿಗೂ ಜ್ಞಾನೋದಯ ಆಗಿದೆ ಎಂದು ಭಾವಿಸಿದ್ದೇನೆ' ಎಂದು ವಿಜಯೇಂದ್ರ ತಿಳಿಸಿದರು.

'ಆರ್‌ಎಸ್‌ಎಸ್ ಸಿದ್ಧಾಂತಕ್ಕೆ ಕಾಂಗ್ರೆಸ್ ನಿರಂತರ ವಿರೋಧ'

ಬೆಂಗಳೂರು: 'ಆರ್‌ಎಸ್‌ಎಸ್‌ಗೆ ಪ್ರತ್ಯೇಕವಾದ ಕಾರ್ಯಸೂಚಿಯಿದೆ. ಹಾಗೆಂದು, ಆರ್‌ಎಸ್‌ಎಸ್ ಪ್ರಾರ್ಥನಾ ಗೀತೆ ಹಾಡಿದ ಡಿ.ಕೆ. ಶಿವಕುಮಾರ್ ಅವರು ಬಿಜೆಪಿಗೆ ಹೋಗುತ್ತಾರೆ ಎಂದರ್ಥವಲ್ಲ' ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಆರೆಸ್ಸೆಸ್ ಸಿದ್ಧಾಂತವನ್ನು ಕಾಂಗ್ರೆಸ್ ಪಕ್ಷ ನಿರಂತರವಾಗಿ ವಿರೋಧಿಸುತ್ತಲೇ ಬಂದಿದೆ. ಆ ಸಿದ್ಧಾಂತವನ್ನು ಜಾತ್ಯತೀತರು ವಿರೋಧಿಸುತ್ತಾರೆ' ಎಂದರು.

ಅಪಘಾತ: 11 ಮಂದಿ ಸಾವು

ಬುಲಂದ್‌ಶಹರ್ (ಉತ್ತರ ಪ್ರದೇಶ) (ಪಿಟಿಐ): ಉತ್ತರ ಪ್ರದೇಶದ ಬುಲಂದ್‌ಶಹರ್ ಜಿಲ್ಲೆಯಲ್ಲಿ ಯಾತ್ರಾರ್ಥಿಗಳು ಪ್ರಯಾಣಿಸುತ್ತಿದ್ದ ಟ್ರ್ಯಾಕ್ಟರ್ ಟ್ರಾಲಿಗೆ ಟ್ರಕ್‌ವೊಂದು ಸೋಮವಾರ ಡಿಕ್ಕಿ ಹೊಡೆದ ಪರಿಣಾಮ 11 ಮಂದಿ ಮೃತಪಟ್ಟಿದ್ದಾರೆ ಮತ್ತು 40 ಜನರು ಗಾಯಗೊಂಡಿದ್ದಾರೆ.

ರಾಜಸ್ಥಾನದ ಜಹರ್‌ವೀರ ತೀರ್ಥಯಾತ್ರೆಗೆ ಹೊರಟಿದ್ದ 61 ಜನರು ಟ್ರ್ಯಾಕ್ಟರ್ ಟ್ರಾಲಿಯಲ್ಲಿ ಇದ್ದರು. ಕ್ಯಾಂಟರ್ ಟ್ರಕ್ ಹಿಂದಿನಿಂದ ಟ್ರ್ಯಾಕ್ಟರ್ ಟ್ರಾಲಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಟ್ರಾಲಿ ಪಲ್ಟಿಯಾಗಿದೆ.

'ಮೃತಪಟ್ಟವರಲ್ಲಿ ಇಬ್ಬರು ಅಪ್ರಾಪ್ತ ವಯಸ್ಸಿನವರು. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ದಿನೇಶ್ ಕುಮಾರ್ ಸಿಂಗ್ ಅವರು ತಿಳಿಸಿದ್ದಾರೆ.

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಅಪಘಾತದಲ್ಲಿ ಮೃತಪಟ್ಟವರ ಕುಟುಂಬದವರಿಗೆ ತಲಾ ₹2 ಲಕ್ಷ ಮತ್ತು ಗಾಯಗೊಂಡವರಿಗೆ ₹50,000 ಪರಿಹಾರವನ್ನು ಘೋಷಿಸಿದ್ದಾರೆ.

'ಈಜಿಪುರ ಮೇಲ್ಸೇತುವೆಯಲ್ಲಿ ಬಿರುಕು: ದೊಡ್ಡ ಸಮಸ್ಯೆಯಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರ್ಮಾಣ ಹಂತದಲ್ಲಿರುವ ಈಜಿಪುರ ಮೇಲ್ಸೇತುವೆಯಲ್ಲಿ ಇತ್ತೀಚೆಗೆ ಸಣ್ಣ ಬಿರುಕು ಪತ್ತೆಯಾಗಿತ್ತು. ಇದು, ಮೇಲ್ಸೇತುವೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ದೊಡ್ಡ ಸಮಸ್ಯೆ ಅಲ್ಲ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಪ್ರಾಧ್ಯಾಪಕರೊಬ್ಬರು ಸಲ್ಲಿಸಿರುವ ಮಧ್ಯಂತರ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಮೇಲ್ಸೇತುವೆ ನಿರ್ಮಾಣಕ್ಕೆ ಬಳಸಿರುವ ಪದಾರ್ಥಗಳಲ್ಲಿ ಯಾವುದೇ ದೋಷಗಳು ಇಲ್ಲ. ನಿರ್ದಿಷ್ಟ ಭಾಗದಲ್ಲಿ ಬಿರುಕು ಕಾಣಿಸಿಕೊಳ್ಳುವುದಕ್ಕೆ ಅಲ್ಲಿ ಕೈಗೊಂಡಿದ್ದ 'ಪಂಚಿಂಗ್' ಕಾರ್ಯದಲ್ಲಿನ ವೈಫಲ್ಯವೇ ಕಾರಣ. ಗುಣಮಟ್ಟದ ಕಾಂಕ್ರೀಟ್ ಮಿಶ್ರಣ ಹಾಕುವ ಮೂಲಕ ಇದನ್ನು ಸರಿಪಡಿಸಬಹುದು ಎಂದೂ ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ಈಜಿಪುರ ಮೇಲ್ಸೇತುವೆಯಲ್ಲಿ ಅಳವಡಿಸಲಾಗಿದ್ದ ಸೆಗ್‌ಮೆಂಟ್‌ನಲ್ಲಿ ಬಿರುಕು ಕಾಣಿಸಿಕೊಂಡ ಬಗ್ಗೆ ಪರೀಕ್ಷೆ ನಡೆಸಿರುವ ಐಐಎಸ್‌ಸಿ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಪ್ರೊ. ಜೆ.ಎಂ.ಚಂದ್ರ ಕಿಶನ್ ಅವರು 'ಎಲ್ಲ ರೀತಿಯ ಪರೀಕ್ಷೆಗಳನ್ನು ಕೈಗೊಂಡೇ ಸೆಗ್‌ಮೆಂಟ್‌ಗಳನ್ನು ಅಳವಡಿಸಬೇಕು. ಹಾನಿಗೊಳಗಾದ ಕಾಂಕ್ರೀಟ್ ಅನ್ನು ತೆಗೆದುಹಾಕುವ ಮೂಲಕ ತಕ್ಷಣದ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಬೇಕು' ಎಂದು ಸಲಹೆ ನೀಡಿದ್ದಾರೆ.

ಬಿಬಿಎಂಪಿ ರಸ್ತೆ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ರಾಘವೇಂದ್ರ ಪ್ರಸಾದ್, 'ಬಿರುಕು ಬಿಟ್ಟಿರುವುದು ದೊಡ್ಡ ಸಮಸ್ಯೆಯಲ್ಲ. ಗೊಂದಲಗಳು ನಿವಾರಣೆಯಾಗಿದೆ. ಶೀಘ್ರದಲ್ಲೇ ಕೆಲಸ ಆರಂಭಿಸಲಾಗುವುದು' ಎಂದರು.

ಈಜಿಪುರ ಮುಖ್ಯರಸ್ತೆಯಲ್ಲಿ 2.38 ಕಿ.ಮೀ. ಉದ್ದದ ಮೇಲ್ಸೇತುವೆ ನಿರ್ಮಿಸಲಾಗುತ್ತಿದೆ. ಒಟ್ಟು 762 ಸೆಗ್ಮೆಂಟ್ ಕಾಸ್ಟಿಂಗ್‌ಗಳನ್ನು ಅವಳಡಿಸಬೇಕಿದ್ದು, 437 ಸೆಗ್ಮೆಂಟ್ ಕಾಸ್ಟಿಂಗ್ ಅಳವಡಿಸಲಾಗಿದೆ. 2026ರ ವೇಳೆಗೆ ಕಾಮಗಾರಿ ಪೂರ್ಣಗೊಳ್ಳಲಿದೆ.

ತಕರಾರು ಇತ್ಯರ್ಥ: 90 ದಿನ ಗಡುವು

ವಿಲೇವಾರಿ ಮಾಡದ ತಹಶೀಲ್ದಾರರಿಗೆ ಸಚಿವರ ಕಟ್ಟೆಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಹಶೀಲ್ದಾರ್ ನ್ಯಾಯಾಲಯಗಳಲ್ಲಿನ ತಕರಾರು ಪ್ರಕರಣಗಳನ್ನು 90 ದಿನಗಳ ಒಳಗೆ ಇತ್ಯರ್ಥ ಮಾಡದಿದ್ದರೆ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಎಚ್ಚರಿಕೆ ನೀಡಿದರು.

ಮುಖ್ಯಾಂಶಗಳು
- 'ಕೆಲಸ ವೇಗ ಕಳೆದುಕೊಳ್ಳುತ್ತಿರುವುದನ್ನು ಒಪ್ಪಲು ಸಾಧ್ಯವಿಲ್ಲ'
- ಕನಿಷ್ಠ 3 ದಾಖಲೆ ಇದ್ದರೂ ಪೋಡಿ ಮಾಡಿಕೊಡಲು ಸೂಚನೆ

ವಿಡಿಯೊ ಸಂವಾದದ ಮೂಲಕ ರಾಜ್ಯದ ಎಲ್ಲ ತಹಶೀಲ್ದಾರರ ಜತೆ ಸೋಮವಾರ ಪ್ರಗತಿ ಪರಿಶೀಲನಾ ಸಭೆ ನಡೆಸಿ ಅವರು ಮಾತನಾಡಿದರು.

ಕೃಷ್ಣ ಬೈರೇಗೌಡ

'ಕಳೆದ ಎರಡು ವರ್ಷಗಳಿಂದ ತಹಶೀಲ್ದಾರ್ ನ್ಯಾಯಾಲಯಗಳಲ್ಲಿ ತಕರಾರು ಅರ್ಜಿಗಳ ವಿಲೇವಾರಿ ಕೆಲಸ ಗಮನಾರ್ಹ ರೀತಿಯಲ್ಲಿ ಪ್ರಗತಿ ಕಂಡಿತ್ತು. ಈ ಮೊದಲು ಒಂದು ಪ್ರಕರಣದ ಇತ್ಯರ್ಥಕ್ಕೆ 212 ದಿನ ತೆಗೆದುಕೊಳ್ಳುತ್ತಿದ್ದರೆ, ಈಗ 82 ದಿನಕ್ಕೆ ಇಳಿಸಲಾಗಿತ್ತು. ಆದರೆ, ದಿನ ಕಳೆದಂತೆ ತಕರಾರು ಅರ್ಜಿಗಳ ಇತ್ಯರ್ಥದ ಕೆಲಸ ಮತ್ತೆ ವೇಗ ಕಳೆದುಕೊಳ್ಳುತ್ತಿದೆ. ಇದನ್ನು ಒಪ್ಪಲು ಸಾಧ್ಯವಿಲ್ಲ' ಎಂದು ಹೇಳಿದರು.

'ತಕರಾರು ಅರ್ಜಿಗಳ ವಿಲೇಗಾಗಿ ಜನಸಾಮಾನ್ಯರು ಪ್ರತಿ ದಿನ ತಹಶೀಲ್ದಾರ್ ಕಚೇರಿಗೆ ಅಲೆಯುವುದನ್ನು ಶಾಶ್ವತವಾಗಿ ತಡೆಯಬೇಕು ಎಂಬ ಕಾರಣದಿಂದ ವಿಶೇಷ ಅಭಿಯಾನ ಆರಂಭಿಸಲಾಗಿತ್ತು. ಹಲವು ಅಧಿಕಾರಿಗಳು ಉತ್ತಮವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಆದರೆ, ಕೆಲವು ಅಧಿಕಾರಿಗಳ ಅಸಡ್ಡೆ, ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿತನದಿಂದ ಇಲಾಖೆ ಮತ್ತು ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತಿದೆ' ಎಂದರು.

ಅಧಿಕಾರಿಗಳ ಇಂತಹ ವರ್ತನೆ ಸಹಿಸಲು ಸಾಧ್ಯವಿಲ್ಲ. ಆದ್ದರಿಂದ ಮುಂದಿನ ದಿನಗಳಲ್ಲಿ ಅಧಿಕಾರಿಗಳು 90 ದಿನ ಮೀರಿ ಒಂದು ಪ್ರಕರಣವನ್ನು ಉಳಿಸಿಕೊಂಡಿದ್ದರೆ ಅವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

ರಾಜ್ಯದಾದ್ಯಂತ ಪೋಡಿ ದುರಸ್ತಿ ಅಭಿಯಾನಕ್ಕೆ ಚಾಲನೆ ನೀಡಿದ್ದರೂ ಈ ಕೆಲಸ ನಿರೀಕ್ಷಿತ ವೇಗ ಪಡೆದಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ದಕ್ಷಿಣ ಕನ್ನಡ ಮತ್ತು ತುಮಕೂರು ಜಿಲ್ಲೆಯಲ್ಲಿ ಪೋಡಿ ದುರಸ್ತಿ ಕೆಲಸ ಚುರುಕುಗೊಂಡಿರುವ ಬಗ್ಗೆ ಅಧಿಕಾರಿಗಳ ಶ್ರಮಕ್ಕೆ ಪ್ರಶಂಸೆ ವ್ಯಕ್ತಪಡಿಸಿದ ಅವರು, ಇತರೆ ಜಿಲ್ಲೆಗಳೂ ಪೋಡಿ ದುರಸ್ತಿ ಕೆಲಸಕ್ಕೆ ವೇಗ ನೀಡಬೇಕು. ಅಲ್ಲದೇ, ರೈತರ ಬಳಿ ಭೂಮಂಜೂರಿಗೆ ಸಂಬಂಧಿಸಿ ಕನಿಷ್ಠ 3 ದಾಖಲೆ ಇದ್ದರೂ ಅಂತಹ ಪ್ರಕರಣಗಳನ್ನು ಪೋಡಿ ಮಾಡಿಕೊಡಬೇಕು ಎಂದು ಕೃಷ್ಣ ಬೈರೇಗೌಡ ಸೂಚಿಸಿದರು.

ಪ್ರಾಣಿ ತ್ಯಾಜ್ಯ ಸಂಸ್ಕರಣೆ ಘಟಕ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕಾಂಗ್ರೆಸ್ ಕಾರ್ಯಕರ್ತರ ವಿರೋಧದ ನಡುವೆ ಬಂಡೆ ಹೊಸೂರು ಗ್ರಾಮದಲ್ಲಿ ನಿರ್ಮಿಸಿರುವ ಪ್ರಾಣಿ ತ್ಯಾಜ್ಯ ಸಂಸ್ಕರಣೆ ಘಟಕವನ್ನು ಸೋಮವಾರ ಉದ್ಘಾಟಿಸಲಾಯಿತು.

ಘಟಕ ಉದ್ಘಾಟನೆ ವೇಳೆ ಶಾಸಕಿ ಮಂಜುಳಾ ಲಿಂಬಾವಳಿ, ಮಾಜಿ ಶಾಸಕ ಅರವಿಂದ ಲಿಂಬಾವಳಿಗೆ ಕಾರ್ಯಕರ್ತರು ಅಡ್ಡಿಪಡಿಸಲು ಯತ್ನಿಸಿದರು. ಈ ವೇಳೆ ಪೊಲೀಸರು ಮಧ್ಯ ಪ್ರವೇಶಿಸಿ, ಸಮಾಧಾನಪಡಿಸಿದರು.

ಮಹದೇವಪುರ ಕ್ಷೇತ್ರದ ಕಣ್ಣೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಬಂಡೆ ಹೊಸೂರು ಗ್ರಾಮದಲ್ಲಿ ಬಿಬಿಎಂಪಿ ಸಹಯೋಗದಲ್ಲಿ ಬನಾ ಇಕೋ ವರ್ಕ್ ಸಂಸ್ಥೆ ನಿರ್ಮಿಸಿರುವ ಪ್ರಾಣಿ ಸಂಸ್ಕರಣೆ ಘಟಕವನ್ನು ಗ್ರಾಮ ಪಂಚಾಯಿತಿಯಿಂದ ಅಧಿಕೃತವಾಗಿ ಅನುಮತಿ ಪಡೆಯದೆ ನಿರ್ಮಿಸಲಾಗಿದೆ ಎಂದು ಕಾಂಗ್ರೆಸ್ ಕಾರ್ಯಕರ್ತರು ದೂರಿದರು.

ಪ್ರಾಣಿ ತ್ಯಾಜ್ಯ ಸಂಸ್ಕರಣೆ ಘಟಕ ಉದ್ಘಾಟನೆಗೆ ಅಡ್ಡಿಪಡಿಸಲು ಮುಂದಾದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು

'ಈಗಾಗಲೇ ಪಕ್ಕದಲ್ಲಿಯೇ ಇರುವ ಮಿಟ್ಟಗಾನಹಳ್ಳಿ- ಕಣ್ಣೂರು ಕಸ ವಿಲೇವಾರಿ ಘಟಕದಿಂದ ಅನೇಕ ಸಮಸ್ಯೆಗಳು ಉದ್ಭವವಾಗಿವೆ. ಕಸದಿಂದ ಉತ್ಪತ್ತಿಯಾಗುವ ವಿಷಯುಕ್ತ ರಾಸಾಯನಿಕದಿಂದ ಸುತ್ತಮುತ್ತಲ ಗ್ರಾಮಗಳಲ್ಲಿ ಜಲಮೂಲಗಳಿಗೆ ಕಂಟಕ ಎದುರಾಗಿದೆ' ಎಂದು ಕಾಂಗ್ರೆಸ್ ಮುಖಂಡ ಬಿದರಹಳ್ಳಿ ವರುಣ್ ಆಕ್ರೋಶ ವ್ಯಕ್ತಪಡಿಸಿದರು.

'ಅಧಿಕಾರಿಗಳಿಗೆ ಜನರ ಬಗ್ಗೆ ಕಾಳಜಿ ಇಲ್ಲದಂತಾಗಿದೆ. ಪಂಚಾಯಿತಿ ಅಧಿಕಾರಿಗಳನ್ನು ಗಣನೆಗೆ ತೆಗೆದುಕೊಂಡಿಲ್ಲ. ಗ್ರಾಮ ಪಂಚಾಯಿತಿ ಸಭೆಯಲ್ಲಿ ನಿರ್ಣಯ ಕೈಗೊಳ್ಳದೆ ಘಟಕ ನಿರ್ಮಿಸಲಾಗಿದೆ' ಎಂದು ಕಾಂಗ್ರೆಸ್ ಮುಖಂಡ ಕಣ್ಣೂರು ನಾರಾಯಣಸ್ವಾಮಿ ಆರೋಪಿಸಿದರು.

ಮಾಜಿ ಶಾಸಕ ಅರವಿಂದ ಲಿಂಬಾವಳಿ ಮಾತನಾಡಿ, 'ಬೆಂಗಳೂರಿನಲ್ಲಿ ದೊಡ್ಡ ಪ್ರಮಾಣದಲ್ಲಿ ಮಾಂಸ ತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ಒಣ ತ್ಯಾಜ್ಯ, ಹಸಿ ತ್ಯಾಜ್ಯ ಮತ್ತು ಪ್ಲಾಸ್ಟಿಕ್‌ನಂತೆ ಮಾಂಸ ತ್ಯಾಜ್ಯವನ್ನು ಸಂಸ್ಕರಣೆ ಮಾಡುವ ಉದ್ದೇಶದಿಂದ ಅಭಿವೃದ್ಧಿ ಪರವಾಗಿರುವ ಯೋಜನೆಯನ್ನು ಬನಾ ಇಕೋ ವರ್ಕ್ ಸಂಸ್ಥೆ ನಿರ್ಮಿಸಿದೆ. ಇದು ತುಂಬಾ ಉಪಯುಕ್ತ ಯೋಜನೆ. ಮೊದಲಿಗೆ ಕಣ್ಣೂರು ಪಂಚಾಯಿತಿ ವ್ಯಾಪ್ತಿಯಲ್ಲಿ ಸಂಗ್ರಹಗೊಳ್ಳುವ ಮಾಂಸ ತ್ಯಾಜ್ಯವನ್ನು ಸಂಸ್ಕರಣೆ ಮಾಡಲು ಯೋಜನೆ ರೂಪಿಸಿದೆ. ಸಂಸ್ಕರಣಗೊಂಡ ಮಾಂಸ ತ್ಯಾಜ್ಯದಿಂದ ಆಹಾರದ ಪೊಟ್ಟಣ ತಯಾರಿಸಿ ನಾಯಿ ಮತ್ತು ಮೀನುಗಳಿಗೆ ಆಹಾರವಾಗಿ ನೀಡುವ ಕ್ರಮ ಘಟಕದಿಂದ ಆಗಲಿದೆ' ಎಂದು ವಿವರಿಸಿದರು.

ರಾಜ್ಯದ ವಿವಿಧೆಡೆ ಆಗಸ್ಟ್ ತಿಂಗಳು ಉತ್ತಮ ಮಳೆ • ನೈರುತ್ಯ ಮುಂಗಾರಿನಲ್ಲಿ ಈ ವರ್ಷ ವಾಡಿಕೆಯಷ್ಟು ಮಳೆ

ಒಳನಾಡಿನಲ್ಲಿ ಚುರುಕು, ಕರಾವಳಿಯಲ್ಲಿ ಕೊರತೆ

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ಈ ವರ್ಷ ನೈರುತ್ಯ ಮುಂಗಾರು ಒಳನಾಡಿನಲ್ಲಿ ಚುರುಕುಗೊಂಡಿದ್ದರೆ, ಕರಾವಳಿಯಲ್ಲಿ ವಾಡಿಕೆಗಿಂತ ಕಡಿಮೆ ಪ್ರಮಾಣದಲ್ಲಿ ಮಳೆಯಾಗಿದೆ. ಆಗಸ್ಟ್‌ನಲ್ಲಿ ಸುರಿದ ಮಳೆಯು, ಮುಂಗಾರು ಅವಧಿಯ ಮಳೆ ಕೊರತೆಯನ್ನು ನೀಗಿಸಿದೆ.

ಈ ವರ್ಷ ನಿಗದಿತ ಅವಧಿಗೆ ರಾಜ್ಯ ಪ್ರವೇಶಿಸಿದ್ದ ಮುಂಗಾರು, ಪ್ರಾರಂಭದಲ್ಲಿ ಅಬ್ಬರಿಸಿದ್ದರೂ ಬಳಿಕ ಮಳೆಯ ಪ್ರಮಾಣ ಕಡಿಮೆಯಾಗಿತ್ತು. ಜೂನ್ ತಿಂಗಳಲ್ಲಿ ಒಳನಾಡಿನ ಹಲವು ಜಿಲ್ಲೆಗಳು ಸೇರಿ 14 ಜಿಲ್ಲೆಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿತ್ತು. ಜುಲೈ ತಿಂಗಳಲ್ಲಿ ಮಳೆ ಕೊರತೆ ಎದುರಿಸಿದ್ದ ಜಿಲ್ಲೆಗಳ ಸಂಖ್ಯೆ ಹತ್ತಕ್ಕೆ ಇಳಿದಿತ್ತು. ಆಗಸ್ಟ್‌ನಲ್ಲಿ ಉತ್ತರ ಮತ್ತು ದಕ್ಷಿಣ ಒಳನಾಡಿನ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿದ್ದು, ಕರಾವಳಿ ಮತ್ತು ಮಲೆನಾಡಿನ ಜಿಲ್ಲೆಗಳಲ್ಲಿ (ಐದು ಜಿಲ್ಲೆಗಳು) ಮಾತ್ರ ವಾಡಿಕೆಯಷ್ಟು ಮಳೆಯಾಗಿಲ್ಲ. ಒಟ್ಟಾರೆ ಈ ವರ್ಷ ಹತ್ತು ಜಿಲ್ಲೆಗಳಲ್ಲಿ ವಾಡಿಕೆಗಿಂತ ಅಧಿಕ ಮಳೆಯಾದರೆ, ಉಳಿದ ಜಿಲ್ಲೆಗಳಲ್ಲಿ ವಾಡಿಕೆಯಷ್ಟು ಮಳೆ ಸುರಿದಿದೆ.

> ನೈರುತ್ಯ ಮುಂಗಾರು ಚುರುಕುಗೊಂಡಿದ್ದು, ಉತ್ತಮ ಮಳೆಯಾಗುತ್ತಿದೆ. ಮುಂದಿನ ಎರಡು ತಿಂಗಳು ಇದೇ ರೀತಿ ಮಳೆ ಮುಂದುವರಿಯಲ್ಲಿದ್ದು, ವಾಡಿಕೆಯಷ್ಟು ಮಳೆಯಾಗಲಿದೆ
> **ಸಿ.ಎಸ್. ಪಾಟೀಲ,** ರಾಜ್ಯ ಹವಾಮಾನ ಇಲಾಖೆ ನಿರ್ದೇಶಕ

ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪ್ರಕಾರ ಜೂನ್ 1ರಿಂದ ಆಗಸ್ಟ್ 21ರ ಅವಧಿಯಲ್ಲಿ ಒಟ್ಟಾರೆ 65.6 ಸೆಂ.ಮೀ. ಮಳೆಯಾಗಿದೆ. ಈ ಅವಧಿಯಲ್ಲಿ ವಾಡಿಕೆ ಮಳೆ 63.5 ರಷ್ಟಾಗಿದ್ದು, ಶೇ 3ರಷ್ಟು ಅಧಿಕ ಮಳೆ ಸುರಿದಿದೆ. ಜೂನ್ ತಿಂಗಳಲ್ಲಿ ವಾಡಿಕೆ ಮಳೆ 19.9 ಸೆಂ.ಮೀ. ಆಗಿದ್ದರೆ, ರಾಜ್ಯದಲ್ಲಿ 20.3 ಸೆಂ.ಮೀ. ಮಳೆ ದಾಖಲಾಗಿತ್ತು.

ಮುಂಗಾರಿನಲ್ಲಿ ವಾಡಿಕೆಗಿಂತ ಅಧಿಕ ಮಳೆಯಾದ ಜಿಲ್ಲೆಗಳು(ಸೆಂ.ಮೀ.ಗಳಲ್ಲಿ)

ಜಿಲ್ಲೆ	ವಾಡಿಕೆ ಮಳೆ	ಸುರಿದ ಮಳೆ	ಹೆಚ್ಚಳ (ಶೇ)
ವಿಜಯಪುರ	21.5	33	54
ಗದಗ	20.9	31	49
ತುಮಕೂರು	17.9	26.4	47
ಬಾಗಲಕೋಟೆ	19.9	29.1	47
ದಾವಣಗೆರೆ	25.8	35.3	37

ಮುಂಗಾರಿನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾದ ಜಿಲ್ಲೆಗಳು (ಸೆಂ.ಮೀ.ಗಳಲ್ಲಿ)

ಜಿಲ್ಲೆ	ವಾಡಿಕೆ ಮಳೆ	ಸುರಿದ ಮಳೆ	ಕೊರತೆ (ಶೇ)
ಬೀದರ್	42.4	36.1	15
ಚಿಕ್ಕಮಗಳೂರು	120	102	14
ಚಾಮರಾಜನಗರ	16	14	13
ಶಿವಮೊಗ್ಗ	167.8	146.5	13
ಮೈಸೂರು	28.3	25.3	11

ಮುಂಗಾರಿನಲ್ಲಿ ಪ್ರದೇಶವಾರು ಮಳೆ (ಸೆಂ.ಮೀ.ಗಳಲ್ಲಿ)

ಪ್ರದೇಶ	ವಾಡಿಕೆ ಮಳೆ	ಸುರಿದ ಮಳೆ
ದಕ್ಷಿಣ ಒಳನಾಡು	20.1	23.5
ಉತ್ತರ ಒಳನಾಡು	30.1	36.3
ಕರಾವಳಿ	128.9	118
ಮಲೆನಾಡು	261.5	260.2

ಜುಲೈ ತಿಂಗಳಲ್ಲಿ ಕೆಲ ಜಿಲ್ಲೆಗಳು ಮಳೆಯ ತೀವ್ರ ಕೊರತೆ ಎದುರಿಸಿದ್ದು, ರಾಜ್ಯದಲ್ಲಿ ಒಟ್ಟಾರೆ 26.3 ಸೆಂ.ಮೀ. ಮಳೆಯಾಗಿತ್ತು. ತಿಂಗಳ ವಾಡಿಕೆ ಮಳೆ 27.1 ಸೆಂ.ಮಿ.ಯಾಗಿತ್ತು. ಆಗಸ್ಟ್ ತಿಂಗಳಲ್ಲಿ ಈವರೆಗೆ ವಾಡಿಕೆ ಮಳೆ 16.4 ಸೆಂ.ಮೀ. ಆಗಿದ್ದರೆ, 19 ಸೆಂ.ಮೀ. ಮಳೆ ಸುರಿದಿದೆ. ವಾಡಿಕೆಗಿಂತ ಶೇ 16 ರಷ್ಟು ಅಧಿಕ ಮಳೆಯಾಗಿದೆ.

ಉತ್ತಮ ಮಳೆ ಮುಂದುವರಿಕೆ: ರಾಜ್ಯದಲ್ಲಿ ಈ ವರ್ಷ ಮುಂಗಾರು ಪೂರ್ವ ಉತ್ತಮ ಮಳೆಯಾಗಿತ್ತು. ಹವಾಮಾನ ಇಲಾಖೆ ಪ್ರಕಾರ ಮೇ ತಿಂಗಳು ದಾಖಲೆ ಪ್ರಮಾಣದಲ್ಲಿ ಮಳೆ ಸುರಿದಿತ್ತು. ಒಂದೇ ತಿಂಗಳು ಸರಾಸರಿ 24.5 ಸೆಂ.ಮೀ. ಮಳೆಯಾಗಿತ್ತು. ಬಳಿಕ ಎರಡು ತಿಂಗಳು, ಕೆಲ ಜಿಲ್ಲೆಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಮಳೆಯಾಗಿದೆ. ಆಗಸ್ಟ್ ಮೊದಲ ವಾರದಿಂದ ಮಳೆ ಮತ್ತೆ ಬಿರುಸು ಪಡೆದಿದ್ದು, ಮುಂದಿನ ಎರಡು ತಿಂಗಳು ಉತ್ತಮ ಮಳೆಯಾಗಲಿದೆ ಎಂದು ಹವಾಮಾನ ತಜ್ಞರು ಮುನ್ಸೂಚನೆ ನೀಡಿದ್ದಾರೆ.

'ಕಳೆದ ವರ್ಷ ಮುಂಗಾರಿನಲ್ಲಿ ಮಳೆ ಕೊರತೆ ಎದುರಾಗಿತ್ತು. ಈ ವರ್ಷ ಮುಂಗಾರು ಪೂರ್ವದಲ್ಲಿ ಉತ್ತಮ ಮಳೆಯಾದರೂ, ಜೂನ್ ಮತ್ತು ಜುಲೈನಲ್ಲಿ ಕಡಿಮೆ ಪ್ರಮಾಣದಲ್ಲಿ ಮಳೆ ಸುರಿದ ಪರಿಣಾಮ ರೈತರು ಕಂಗಾಲಾಗಿದ್ದರು. ಬೀದರ್, ಚಾಮರಾಜನಗರ, ಬಳ್ಳಾರಿ, ಕೊಪ್ಪಳ ಸೇರಿ ವಿವಿಧ ಜಿಲ್ಲೆಗಳಲ್ಲಿ ಜೂನ್ ತಿಂಗಳು ಶೇ 40ಕ್ಕೂ ಅಧಿಕ ಮಳೆ ಕೊರತೆ ಎದುರಾಗಿತ್ತು. ಆಗಸ್ಟ್‌ನಲ್ಲಿ ವಾಡಿಕೆಗಿಂತ ಉತ್ತಮ ಮಳೆಯಾಗಿದೆ' ಎಂದು ಹವಾಮಾನ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

ಸುದ್ದಿ 2 ನಿಮಿಷ

ನೋಟಿಸ್ ಸ್ವೀಕರಿಸಲು ನಕಾರ: ಸಿಎಸ್ ಪ್ರಮಾಣಪತ್ರಕ್ಕೆ ಸುಪ್ರೀಂ ತಾಕೀತು

ನವದೆಹಲಿ: ಮೂರು ಇಲಾಖೆಗಳ ಸಹಾಯಕ ಎಂಜಿನಿಯರ್ ಹಾಗೂ ಜೂನಿಯರ್ ಎಂಜಿನಿಯರ್ ನೇಮಕಾತಿ ಪ್ರಕರಣಕ್ಕೆ ಸಂಬಂಧಿಸಿದಂತೆ ನೋಟಿಸ್ ಸ್ವೀಕರಿಸಲು ಕರ್ನಾಟಕ ಸರ್ಕಾರ ನಿರಾಕರಿಸಿದ್ದಕ್ಕೆ ಆಘಾತ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ಮುಂದಿನ ವಿಚಾರಣೆಯ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರೇ ಪ್ರಮಾಣಪತ್ರ ಸಲ್ಲಿಸಬೇಕು ಎಂದು ತಾಕೀತು ಮಾಡಿದೆ.

ಹೈಕೋರ್ಟ್ ದ್ವಿಸದಸ್ಯ ಪೀಠದ ಆದೇಶ ಪ್ರಶ್ನಿಸಿ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಸಲ್ಲಿಸಿರುವ ವಿಶೇಷ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅಹ್ಸಾನುದ್ದೀನ್ ಅಮಾನುಲ್ಲಾ ಹಾಗೂ ಎಸ್.ವಿ.ಎನ್.ಭಟ್ಟಿ ಪೀಠವು, 'ರಾಜ್ಯ ಸರ್ಕಾರಕ್ಕೆ ನೋಟಿಸ್ ನೀಡಲು ಪೀಠವೇ ನಿರ್ದೇಶನ ನೀಡಿತ್ತು. ರಾಜ್ಯ ಸರ್ಕಾರದ ತಿರಸ್ಕಾರದ ಧೋರಣೆಯನ್ನು ಕಡೆಗಣಿಸಲು ಸಾಧ್ಯವಿಲ್ಲ' ಎಂದು ಕಟುವಾಗಿ ಹೇಳಿದೆ.

'ಲೋಕೋಪಯೋಗಿ ಇಲಾಖೆ, ನಗರಾಭಿವೃದ್ಧಿ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಗಳಿಗೆ ನೀಡಿರುವ ನೋಟಿಸ್ ಅನ್ನು ಯಾವ ಕಾರಣಕ್ಕೆ ನಿರಾಕರಿಸಲಾಗಿದೆ ಎಂಬ ಬಗ್ಗೆ ಮುಖ್ಯ ಕಾರ್ಯದರ್ಶಿಯವರು ವೈಯಕ್ತಿಕ ಪ್ರಮಾಣಪತ್ರ ಸಲ್ಲಿಸಬೇಕು ಹಾಗೂ ಲೋಪ ಎಸಗಿದ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ಎಂದು ವಿವರಣೆ ನೀಡಬೇಕು' ಎಂದು ಪೀಠ ನಿರ್ದೇಶನ ನೀಡಿದೆ.

ಜತೆಗೆ, ಈ ಪ್ರಕರಣದ ಬಗ್ಗೆ ರಾಜ್ಯ ಸರ್ಕಾರವು ವಿವರವಾದ ಪ್ರತಿಕ್ರಿಯೆ ಸಲ್ಲಿಸಬೇಕು ಹಾಗೂ ರಾಜ್ಯದ ನಿಲುವನ್ನು ಸ್ಪಷ್ಟಪಡಿಸಬೇಕು ಎಂದೂ ಪೀಠ ಸೂಚಿಸಿದೆ. ಪ್ರಕರಣದ ವಿಚಾರಣೆಯನ್ನು ಸೆಪ್ಟೆಂಬರ್ 12ಕ್ಕೆ ಮುಂದೂಡಲಾಗಿದೆ.

ಪ್ರಕರಣವೇನು?: ಸಹಾಯಕ ಎಂಜಿನಿಯರ್ ಹಾಗೂ ಜೂನಿಯರ್ ಎಂಜಿನಿಯರ್ ಹುದ್ದೆಗಳ ಭರ್ತಿಗೆ ಕೆಪಿಎಸ್‌ಸಿ 2016ರ ಜನವರಿಯಲ್ಲಿ ಅರ್ಜಿ ಆಹ್ವಾನಿಸಿತ್ತು. ತನ್ನ ಅರ್ಜಿಯನ್ನು ಕೆಪಿಎಸ್‌ಸಿ ತಿರಸ್ಕರಿಸಿದೆ ಎಂದು ಆರೋಪಿಸಿ ಶಿವಮೊಗ್ಗದ ಸುಬ್ರಹ್ಮಣ್ಯಂ ಆರ್.ಎಂಬವರು ಹೈಕೋರ್ಟ್ ಮೆಟ್ಟಿಲೇರಿದ್ದರು.

ವಾಣಿಜ್ಯ ಸೇವೆಗೆ ಬಳಕೆ: 21 ಖಾಸಗಿ ವಾಹನಗಳ ವಶ

ಬೆಂಗಳೂರು: ಹೆಚ್ಚುವರಿ ಆದಾಯಕ್ಕಾಗಿ ತಮ್ಮ ಖಾಸಗಿ ಕಾರುಗಳನ್ನು ಆ್ಯಪ್ ಮೂಲಕ ಬಾಡಿಗೆಗೆ ನೀಡುತ್ತಿರುವುದನ್ನು ಪತ್ತೆಹಚ್ಚಿರುವ ಕಸ್ತೂರಿನಗರ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು 21 ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

'ಐಟಿ-ಬಿಟಿ ಸೇರಿದಂತೆ ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವವರು ಅವರ ಖಾಸಗಿ ಬಳಕೆಯ ಕಾರುಗಳನ್ನು ಝೂಮ್ ಆ್ಯಪ್‌ನಲ್ಲಿ ನೋಂದಾಯಿಸಿಕೊಂಡು ವಾಣಿಜ್ಯ ಸಂಚಾರಕ್ಕೆ ಬಳಸುತ್ತಿರುವ ಬಗ್ಗೆ ದೂರುಗಳು ಬಂದಿದ್ದವು. ಅದಕ್ಕಾಗಿ ನಾವೇ ಆ್ಯಪ್‌ನಲ್ಲಿ ಬಾಡಿಗೆಗೆ ವಾಹನ ಬುಕ್ ಮಾಡಿ ಪರೀಕ್ಷೆ ನಡೆಸಿದ್ದೆವು. ವಾಣಿಜ್ಯ ಸಂಚಾರಕ್ಕೆ ಬಳಸುವ ವಾಹನಗಳು ಹಳದಿ ನಂಬರ್ ಪ್ಲೇಟ್ ಹೊಂದಿರುತ್ತವೆ. ನಾವು ಬುಕ್ ಮಾಡಿದಾಗ ಬಿಳಿ ನಂಬರ್ ಪ್ಲೇಟ್ ಹೊಂದಿರುವ ಒಟ್ಟು 21 ವಾಹನಗಳು ಬಂದಿದ್ದು, ಅವುಗಳನ್ನು ವಶಪಡಿಸಿಕೊಂಡಿದ್ದೇವೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

'ಹೆಚ್ಚುವರಿಯಾಗಿ ಆದಾಯ ಗಳಿಸಲು ಮಾತ್ರ ಕಾರುಗಳನ್ನು ನೀಡಿದ್ದೆವು. ಬೇರೆ ಉದ್ದೇಶ ಇರಲಿಲ್ಲ' ಎಂದು ವಾಹನ ಮಾಲೀಕರು ತಿಳಿಸಿದ್ದಾರೆ. 'ಖಾಸಗಿ ವಾಹನಗಳನ್ನು ಸಾರ್ವಜನಿಕ ಸೇವೆಗೆ ಬಳಸುವುದು ಸಾರಿಗೆ ನಿಯಮದ ಉಲ್ಲಂಘನೆಯಾಗುತ್ತದೆ. ವಾಹನಗಳನ್ನು ಕಾನೂನುಬಾಹಿರವಾಗಿ ಬಳಸುವುದು ಕಂಡು ಬಂದರೆ ಅವುಗಳನ್ನು ವಶಪಡಿಸಿಕೊಳ್ಳಲಾಗುವುದು' ಎಂದು ಸಾರಿಗೆ ಅಧಿಕಾರಿಗಳು ತಿಳಿಸಿದ್ದಾರೆ.

ಚಿತ್ರಾವಳಿ

ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯುತ್ತಿರುವ ಸಮುದಾಯ–50 ಸಾಂಸ್ಕೃತಿಕ ಉತ್ಸವದಲ್ಲಿ ಸಾಹಿತಿ ಬೊಳುವಾರು ಮಹಮ್ಮದ್ ಕುಂಞಿ ಅವರಿಗೆ ಸೋಮವಾರ ರಂಗ ಗೌರವ ಸಲ್ಲಿಸಲಾಯಿತು. ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, ರಂಗಕರ್ಮಿ ಶ್ರೀನಿವಾಸ್ ಜಿ. ಕಪ್ಪಣ್ಣ, ಸಾಹಿತಿ ಬಂಜಗೆರೆ ಜಯಪ್ರಕಾಶ್, ಲಕ್ಷ್ಮಿ ಚಂದ್ರಶೇಖರ್ ಉಪಸ್ಥಿತರಿದ್ದರು

ಯಶವಂತಪುರ ವಿಧಾನಸಭಾ ಕ್ಷೇತ್ರದ ದೊಡ್ಡ ಬಿದರಕಲ್ಲು ವಾರ್ಡ್‌ನ ಜೆಡಿಎಸ್ ಕಾರ್ಯಕರ್ತರ ಸಮಾವೇಶ ಹಾಗೂ ಪಕ್ಷದ ಸದಸ್ಯತ್ವ ನೋಂದಣಿ ಮಿಸ್ಡ್‌ಕಾಲ್ ಅಭಿಯಾನಕ್ಕೆ ಬೆಂಗಳೂರು ನಗರ ಜೆಡಿಎಸ್ ಘಟಕದ ಅಧ್ಯಕ್ಷ ಎಚ್.ಎಂ. ರಮೇಶ್‌ಗೌಡ, ವಿಧಾನ ಪರಿಷತ್ ಸದಸ್ಯ ಟಿ.ಎನ್ ಜವರಾಯಿಗೌಡ ಅವರು ಸೋಮವಾರ ಚಾಲನೆ ನೀಡಿದರು. ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಎ. ತಿಪ್ಪೇಸ್ವಾಮಿ, ಬಿಬಿಎಂಪಿ ಮಾಜಿ ಸದಸ್ಯ ಎ.ಎಂ. ಹನುಮಂತೇಗೌಡ, ಶೈಲಾ ಸಂತೋಜಿ ರಾವ್, ಬೆಂಗಳೂರು ನಗರ ಜೆಡಿಎಸ್ ಘಟಕದ ಕಾರ್ಯಾಧ್ಯಕ್ಷ ಕೆ.ವಿ. ನಾರಾಯಣಸ್ವಾಮಿ, ಪ್ರಧಾನ ಕಾರ್ಯದರ್ಶಿ ಎಸ್ ರಮೇಶ್ ಉಪಸ್ಥಿತರಿದ್ದರು

ಪೀಣ್ಯ ದಾಸರಹಳ್ಳಿ ಸಮೀಪದ ಕಾಳಸ್ತ್ರೀ ನಗರದ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕ ಎಸ್ ಮುನಿರಾಜು ಅವರು ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್ ನೀಡಿ ಅಭಿನಂದಿಸಿದರು. ಬಿಜೆಪಿ ಮುಖಂಡರಾದ ಬಿ.ಟಿ. ಶ್ರೀನಿವಾಸ್, ನಾಗಣ್ಣ ಇದ್ದಾರೆ.

‘ಸೆಕೆಂಡರಿ ಟ್ರಾನ್ಸ್‌ಫರ್ ಸ್ಟೇಷನ್’ ದೇಶಕ್ಕೇ ಮಾದರಿ

ಸಂಗ್ರಹವಾಗುವ ಕಸ ಆಟೊ ಟಿಪ್ಪರ್‌ಗಳಿಂದ ನೇರವಾಗಿ ಘಟಕಕ್ಕೆ ರವಾನೆ • ಹಲವು ರಾಜ್ಯಗಳ 30 ಪಾಲಿಕೆಗಳಿಗೆ ಪ್ರೇರಣೆ

• ಆರ್. ಮಂಜುನಾಥ್

ಬೆಂಗಳೂರು: ಮನೆಗಳಿಂದ ಸಂಗ್ರಹವಾಗುವ ಕಸ, ಆಟೊ ಟಿಪ್ಪರ್‌ಗಳಿಂದ ನೇರವಾಗಿ ವರ್ಗಾವಣೆ ಕೇಂದ್ರಕ್ಕೆ ರವಾನೆಯಾಗಿ, ಅಲ್ಲಿಂದ ಸಂಸ್ಕರಣೆ ಘಟಕಕ್ಕೆ ವಾಸನೆ, ಸೋರಿಕೆ ಇಲ್ಲದೆ ಸಾಗಣೆಯಾಗುವ ನಗರದಲ್ಲಿನ ‘ಸೆಕೆಂಡರಿ ಟ್ರಾನ್ಸ್‌ಫರ್ ಸ್ಟೇಷನ್’ಗಳು (ಎಸ್‌ಟಿಎಸ್) ರಾಜ್ಯಕ್ಕಷ್ಟೇ ಅಲ್ಲ, ದೇಶದ 20ಕ್ಕೂ ಹೆಚ್ಚು ಪಾಲಿಕೆಗಳಿಗೆ ಮಾದರಿಯಾಗಿವೆ.

ಹೊಸ ಎಸ್‌ಟಿಎಸ್ ನಿರ್ಮಾಣ ಎಲ್ಲೆಲ್ಲಿ?

ಪ್ಯಾಕೇಜ್ 1	ಹೆಬ್ಬಾಳ, ಪುಲಕೇಶಿನಗರ, ಸಿ.ವಿ. ರಾಮನ್ ನಗರ, ಶಾಂತಿನಗರ
ಪ್ಯಾಕೇಜ್ 2	ಯಲಹಂಕ, ದಾಸರಹಳ್ಳಿ, ಮಹದೇವಪುರ, ಕೆ.ಆರ್. ಪುರ
ಪ್ಯಾಕೇಜ್ 3	ಬೊಮ್ಮನಹಳ್ಳಿ, ಬೆಂಗಳೂರು ದಕ್ಷಿಣ, ರಾಜರಾಜೇಶ್ವರನಗರ, ಯಶವಂತಪುರ
ಪ್ಯಾಕೇಜ್ 4	ಜಯನಗರ, ಪದ್ಮನಾಭನಗರ, ಚಿಕ್ಕಪೇಟೆ, ಬಸವನಗುಡಿ
ಪ್ಯಾಕೇಜ್ 5	ಮಲ್ಲೇಶ್ವರ, ಮಹಾಲಕ್ಷ್ಮಿ ಲೇಔಟ್, ರಾಜಾಜಿನಗರ, ಗಾಂಧಿನಗರ
ಪ್ಯಾಕೇಜ್ 6	ಗೋವಿಂದರಾಜನಗರ (ನಾಗರಬಾವಿ), ಗಾಂಧಿನಗರ (ಜಕ್ಕರಾಯನ ಕೆರೆ), ಬ್ಯಾಟರಾಯನಪುರ

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ವತಿಯಿಂದ ಈಜಿಪುರ–ಕೋರಮಂಗಲದಲ್ಲಿ 2024ರ ಮಾರ್ಚ್‌ನಲ್ಲಿ ಎಸ್‌ಟಿಎಸ್ ಆರಂಭವಾಯಿತು. ‘ಪರಿಶುದ್ಧ್ ವೆಂಚರ್ಸ್’ ನಿರ್ವಹಿಸುತ್ತಿರುವ ಈ ಘಟಕದ ಯಶಸ್ಸಿನಿಂದ ಬಿಬಿಎಂಪಿ ವ್ಯಾಪ್ತಿಯ ಎಲ್ಲ ವಿಧಾನಸಭೆ ಕ್ಷೇತ್ರಗಳಲ್ಲೂ ಎಸ್‌ಟಿಎಸ್‌ಗಳನ್ನು ಸ್ಥಾಪಿಸಲು ಬಿಎಸ್‌ಡಬ್ಲ್ಯುಎಂಎಲ್ ನಿರ್ಧರಿಸಿದೆ.

ರಾಜ್ಯದ ಕೆಲವು ಪಾಲಿಕೆಗಳಲ್ಲದೆ, ಲಖನೌ, ಭುವನೇಶ್ವರ, ವೈಜಾಗ್, ಗ್ಯಾಂಗ್ಟಕ್, ತಂಬರಂ, ಕೊಚ್ಚಿ, ಜುನಾಗಢ, ಪಟಿಯಾಲ, ಚೆನ್ನೈ ಸೇರಿದಂತೆ ದೇಶದ ವಿವಿಧೆಡೆಯ 20ಕ್ಕೂ ಹೆಚ್ಚು ಪಾಲಿಕೆಗಳ ಪ್ರತಿನಿಧಿಗಳು ‘ಪರಿಶುದ್ಧ್ ವೆಂಚರ್ಸ್’ ಎಸ್‌ಟಿಎಸ್‌ಗೆ ಭೇಟಿ ನೀಡಿ, ಅಂತಹದ್ದೇ ಘಟಕಗಳನ್ನು ತಮ್ಮ ನಗರಗಳಲ್ಲಿ ಸ್ಥಾಪಿಸಿಕೊಳ್ಳಲು ಸಲಹೆ ಹಾಗೂ ಯೋಜನೆಯ ವಿವರಗಳನ್ನು ಪಡೆದುಕೊಂಡಿದ್ದಾರೆ. ಫಿಲಿಪ್ಪೀನ್ಸ್‌ನ ಮೇಯರ್, ಜರ್ಮನಿಯ ಸಂಸದರ ನಿಯೋಗ, ಇಂಡೋನೇಷ್ಯಾದ ಬಾಲಿ, ಕತಾರ್ ನಗರಗಳ ಪ್ರತಿನಿಧಿಗಳು ಘಟಕಕ್ಕೆ ಭೇಟಿ ನೀಡಿ ಮೆಚ್ಚುಗೆ ಸೂಚಿಸಿದ್ದಾರೆ. ಯೋಜನೆ ವಿವರಗಳನ್ನು ಪಡೆದುಕೊಂಡಿದ್ದು, ಅಲ್ಲಿ ಸ್ಥಾಪಿಸಲು ನೆರವಾಗಬೇಕೆಂದು ಕೋರಿದ್ದಾರೆ ಎಂದು ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳು ಮಾಹಿತಿ ನೀಡಿದರು.

ಈಜಿಪುರವಲ್ಲದೆ, ಚಾಮರಾಜಪೇಟೆಯ ಬಿನ್ನಿಪೇಟೆಯಲ್ಲಿ ಎಸ್‌ಟಿಎಸ್ ಕಾರ್ಯನಿರ್ವಹಿಸುತ್ತಿದೆ. ಸರ್ವಜ್ಞ ನಗರದಲ್ಲಿ ಈಗಾಗಲೇ ಘಟಕ ಉದ್ಘಾಟನೆಗೆ ಸಿದ್ಧವಾಗಿದೆ. ಮಿಲ್ಲರ್ಸ್ ರಸ್ತೆಯಲ್ಲಿರುವ ಬಿಎಸ್‌ಡಬ್ಲ್ಯುಎಂಎಲ್ ಕಚೇರಿಯ ಹಿಂಭಾಗದಲ್ಲಿ ಎಸ್‌ಟಿಎಸ್ ನಿರ್ಮಾಣವಾಗುತ್ತಿದೆ. ಇವುಗಳಲ್ಲದೆ, ಹೊಸದಾಗಿ 23 ಎಸ್‌ಟಿಎಸ್‌ಗಳನ್ನು ನಿರ್ಮಿಸಲು, ಬಿಎಸ್‌ಡಬ್ಲ್ಯುಎಂಎಲ್ ಟೆಂಡರ್ ಕರೆದಿದ್ದು, ಸದ್ಯದಲ್ಲಿಯೇ ಬಿಡ್ ತೆರೆಯಲಿದೆ.

ಕಾರ್ಯವಿಧಾನ: ಮನೆಗಳಿಂದ ಸಂಗ್ರಹವಾಗುವ ತ್ಯಾಜ್ಯ ಆಟೊ ಟಿಪ್ಪರ್‌ಗಳ ಮೂಲಕ ನೇರವಾಗಿ ಎಸ್‌ಟಿಎಸ್ ಘಟಕಕ್ಕೆ ಬರಲಿದೆ. ಸಿ.ಸಿ ಟಿ.ವಿ ಕ್ಯಾಮೆರಾ ನಿಗಾದಲ್ಲಿ ಆಟೊದ ಬರುವಿಕೆಯಿಂದ ಹಿಡಿದು, ಅದರ ರೂಟ್ ನಂಬರ್, ಸಂಖ್ಯಾಫಲಕ, ತ್ಯಾಜ್ಯದ ತೂಕ ಎಲ್ಲವೂ ವೆಬ್‌ಸೈಟ್‌ನಲ್ಲಿ ದಾಖಲಾಗಲಿದೆ. ಆಟೊದಿಂದ ನೇರವಾಗಿ ‘ಇಂಧನ ಸಾಗಿಸುವ ಕಂಟೈನರ್’ಗಳ ಮಾದರಿಯಲ್ಲಿರುವ ‘ಕ್ಯಾಪ್ಸೂಲ್’ಗಳಿಗೆ ತ್ಯಾಜ್ಯ ರವಾನೆಯಾಗುತ್ತದೆ. ದ್ರವ–ತ್ಯಾಜ್ಯವನ್ನು ಹೊರಹಾಕಿ, ಕಂಪ್ರೆಸ್ ಮಾಡಿ ತುಂಬಲಾಗುತ್ತದೆ. ‘ಕ್ಯಾಪ್ಸೂಲ್’ಗಳ ತಳಭಾಗದಲ್ಲೂ ದ್ರವ–ತ್ಯಾಜ್ಯ ಹೆಚ್ಚಿನ ಸಂಗ್ರಹಕ್ಕೆ ಅವಕಾಶವಿದೆ. ಇದನ್ನು ಜಿಪಿಎಸ್ ನಿಯಂತ್ರಣದಲ್ಲಿರುವ ಟ್ರಕ್‌ಗಳ ಮೂಲಕ ಸಂಸ್ಕರಣೆ ಘಟಕಗಳಿಗೆ ರವಾನಿಸಲಾಗುತ್ತದೆ.

ಸುಮಾರು 16 ಟನ್ ತ್ಯಾಜ್ಯ ಒಂದೇ ‘ಕ್ಯಾಪ್ಸೂಲ್’ನಲ್ಲಿ ರವಾನೆಯಾಗುತ್ತದೆ. ಇದು ಯಾವುದೇ ರೀತಿಯ ದ್ರವ–ತ್ಯಾಜ್ಯ, ವಾಸನೆಯನ್ನೂ ಹೊರಹಾಕುವುದಿಲ್ಲ. ಅಲ್ಲದೆ, ಆಟೊದಿಂದ ತ್ಯಾಜ್ಯವನ್ನು ‘ಕ್ಯಾಪ್ಸೂಲ್’ ಒಳಗೆ ಸೇರಿಸುವ ಅವಧಿಯಲ್ಲೂ ವಾಸನೆಯು ಸ್ಟೇಷನ್‌ನಿಂದ ಹೊರಹೋಗದಂತೆ ಜೈವಿಕ ದ್ರವವನ್ನು ಸಿಂಪಡಿಸಲಾಗುತ್ತದೆ. ಒಣ ತ್ಯಾಜ್ಯ ಹಾಗೂ ಮಿಶ್ರ ತ್ಯಾಜ್ಯದ ವಿಂಗಡಣೆ, ಸಾಗಣೆಗೂ ಎಸ್‌ಟಿಎಸ್‌ನಲ್ಲಿ ಅವಕಾಶವಿದೆ. ಈಜಿಪುರದಲ್ಲಿರುವ ಎಸ್‌ಟಿಎಸ್‌ನಲ್ಲಿ ಪ್ರತಿದಿನ ಏಳು ವಾರ್ಡ್‌ಗಳ ಸುಮಾರು 160 ಟನ್ ತ್ಯಾಜ್ಯ ವಿಲೇವಾರಿಯಾಗುತ್ತಿದೆ.

ಹೊಸ ಎಸ್‌ಟಿಎಸ್ ಘಟಕ ಸ್ಥಾಪಿಸಲು ಬಿಬಿಎಂಪಿ 25 ಸಾವಿರ ಚದರಡಿ ಜಾಗವನ್ನು ನೀಡಲಿದ್ದು, ಟರ್ನ್‌ಕೀ ಆಧಾರದಲ್ಲಿ ನಿಗದಿಯಾದ ದರದಲ್ಲಿ, ಎಸ್‌ಟಿಎಸ್‌ಗಳನ್ನು ವಿನ್ಯಾಸಗೊಳಿಸಿ, ನಿರ್ಮಾಣ ಮಾಡಿ, ಸರಬರಾಜು, ಅಳವಡಿಕೆ, ನಿರ್ವಹಣೆಯನ್ನು ಗುತ್ತಿಗೆದಾರರು ಮಾಡಬೇಕಾಗುತ್ತದೆ ಎಂದು ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳು ತಿಳಿಸಿದರು.

ಕ್ಯಾಪ್ಸೂಲ್‌ಗಳನ್ನು ಹೊತ್ತೊಯ್ಯಲು ಸಿದ್ಧವಾಗುತ್ತಿರುವ ಟ್ರಕ್

ಆಟೊ ಟಿಪ್ಪರ್‌ನಿಂದ ಕ್ಯಾಪ್ಸೂಲ್‌ಗೆ ತ್ಯಾಜ್ಯ ವರ್ಗಾವಣೆ

ಎಸ್‌ಟಿಎಸ್ ಸ್ಥಾಪನೆ ಉದ್ದೇಶ

- ಘನತ್ಯಾಜ್ಯ ನಿರ್ವಹಣೆ ನಿಯಮ–2016 ಅನುಷ್ಠಾನ
- ದಕ್ಷ ಯಾಂತ್ರೀಕರಣದಿಂದ ಸಾರ್ವಜನಿಕ ಆರೋಗ್ಯ ಮತ್ತು ಪರಿಸರದ ಗುಣಮಟ್ಟ ವೃದ್ಧಿ
- ಪಾಲಿಕೆ ವ್ಯಾಪ್ತಿಯಿಂದ ತ್ಯಾಜ್ಯ ಸಂಗ್ರಹ ಮತ್ತು ವರ್ಗಾವಣೆ
- ಸ್ವಚ್ಛ ಮತ್ತು ನೈರ್ಮಲ್ಯಯುಕ್ತ ಸಾಗಣೆ ವ್ಯವಸ್ಥೆ
- ರಸ್ತೆಗಳಲ್ಲಿ ತ್ಯಾಜ್ಯ ವರ್ಗಾವಣೆ ಮುಕ್ತ/ ಬ್ಲ್ಯಾಕ್ ಸ್ಪಾಟ್ ನಿರ್ಮೂಲನೆ
- ಕಾಂಪ್ಯಾಕ್ಟರ್‌ಗಳಿಂದ ರಸ್ತೆಯಲ್ಲಿ ದ್ರವತ್ಯಾಜ್ಯ (ಲಿಚೆಟ್) ಸುರಿಯದಂತೆ ಕ್ರಮ
- ತ್ಯಾಜ್ಯ ನಿರ್ವಹಣೆಯಲ್ಲಿ ಮಾನವ ಸ್ಪರ್ಶವನ್ನು ಕಡಿತಗೊಳಿಸುವುದು

ಹೆಚ್ಚು ನಿಖರ, ವಾಸನೆರಹಿತ: ಕರೀಗೌಡ

‘ಎಸ್‌ಟಿಎಸ್‌ಗಳ ನಿರ್ಮಾಣದಿಂದ ತ್ಯಾಜ್ಯ ನಿರ್ವಹಣೆ, ಸಾಗಣೆ ಹೆಚ್ಚು ನಿಖರವಾಗುತ್ತದೆ. ಮನೆಗಳಿಂದ ಸಂಗ್ರಹವಾಗುವ ತ್ಯಾಜ್ಯ ಆಟೊ ಟಿಪ್ಪರ್‌ಗಳಿಂದ ನೇರವಾಗಿ ಎಸ್‌ಟಿಎಸ್‌ಗೆ ಹೋಗುವುದರಿಂದ ರಸ್ತೆಯಲ್ಲಿ ಕಾಂಪ್ಯಾಕ್ಟರ್‌ಗೆ ಕಸ ವರ್ಗಾಯಿಸುವ ಪ್ರಕ್ರಿಯೆ ಇರುವುದಿಲ್ಲ. ಎಸ್‌ಟಿಎಸ್‌ಗಳು ವಾಸನೆರಹಿತವಾಗಿ ಕಾರ್ಯನಿರ್ವಹಿಸಲಿದ್ದು, ಕ್ಯಾಪ್ಸೂಲ್‌ಗಳಲ್ಲಿ ಸಾಗಣೆಯಾಗುವ ತ್ಯಾಜ್ಯದಿಂದ ದ್ರವತ್ಯಾಜ್ಯ ಸೋರಿಕೆಯೂ ಆಗುವುದಿಲ್ಲ’ ಎಂದು ಬಿಎಸ್‌ಡಬ್ಲ್ಯುಎಂಎಲ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕರೀಗೌಡ ಅವರು ತಿಳಿಸಿದರು.

ಅಂಕಿ ಅಂಶಗಳು

23
ಒಟ್ಟು ‘ಸೆಕೆಂಡರಿ ಟ್ರಾನ್ಸ್‌ಫರ್ ಸ್ಟೇಷನ್’ಗಳ (ಎಸ್‌ಟಿಎಸ್) ನಿರ್ಮಾಣ

₹255.45 ಕೋಟಿ
ಎಸ್‌ಟಿಎಸ್‌ಗಳ ನಿರ್ಮಾಣ ವೆಚ್ಚ

₹11.10 ಕೋಟಿ
ಪ್ರತಿ ಎಸ್‌ಟಿಎಸ್‌ಗೆ ವೆಚ್ಚ

265 ಟನ್
ಪ್ರತಿ ಎಸ್‌ಟಿಎಸ್‌ನ ಸಾಮರ್ಥ್ಯ

ಚಿಟಿಕೆ ಸುದ್ದಿ

ಇಬ್ಬರಿಗೆ ಹಿಂದಿ ಪುರಸ್ಕಾರ

ಬೆಂಗಳೂರು: ಬೆಂಗಳೂರಿನ ಹಿಂದಿ ಬರಹಗಾರರ ಸಾಹಿತ್ಯ ಸಂಸ್ಥೆ ಶಬ್ದ್ 2025ನೇ ಸಾಲಿನ ಆಜ್ಞೇಯ ಶಬ್ದ ಸೃಜನ್ ಸಮ್ಮಾನ್ ಹಾಗೂ ದಕ್ಷಿಣ ಭಾರತ ಶಬ್ದ ಹಿಂದಿ ಸೇವೀ ಸಮ್ಮಾನ್‌ಗೆ ಇಬ್ಬರು ಬರಹಗಾರರನ್ನು ಆಯ್ಕೆ ಮಾಡಿದೆ.

ಕವಿಯಿತ್ರಿ ಜೆಸಿಂತಾ ಕರ್ಕೆಟ್ಟಾ ಅವರ ‘ಪ್ರೇಮ್ ಮೇ ಪೇಡ್ ಹೋನಾ’ ಎನ್ನುವ ಕವನ ಸಂಕಲನಕ್ಕೆ ಆಜ್ಞೇಯ ಶಬ್ದ ಸೃಜನ್ ಸಮ್ಮಾನ್ ಗೌರವ ಲಭಿಸಿದೆ. ಪ್ರಶಸ್ತಿಯು ಒಂದು ಲಕ್ಷ ನಗದು ಬಹುಮಾನ ಹೊಂದಿದೆ.

ಇದಲ್ಲದೇ ಪ್ರೌಢಶಿಕ್ಷಣದಲ್ಲಿ ಹಿಂದಿ ಭಾಷೆ ಹಾಗೂ ಸಾಹಿತ್ಯದ ಉತ್ತೇಜನಕ್ಕೆ ಕೊಡುಗೆ ನೀಡಿರುವ ಪ್ರಭಾಶಂಕರ್ ಪ್ರೇಮಿ ಅವರಿಗೆ ದಕ್ಷಿಣ ಭಾರತ ಶಬ್ದ ಹಿಂದಿ ಸೇವೀ ಸಮ್ಮಾನ್ ಅನ್ನು ₹25 ಸಾವಿರ ನಗದು ಬಹುಮಾನದೊಂದಿಗೆ ನೀಡಲಾಗುತ್ತದೆ. ಬೆಂಗಳೂರಿನಲ್ಲಿ ಈ ವರ್ಷದ ಡಿಸೆಂಬರ್ 28ರಂದು ನಡೆಯುವ ಸಮಾರಂಭದಲ್ಲಿ ಇಬ್ಬರಿಗೂ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಶಬ್ದ ಸಂಸ್ಥೆ ಅಧ್ಯಕ್ಷ ಶ್ರೀ ನಾರಾಯಣ್ ಸಮೀರ್ ತಿಳಿಸಿದ್ದಾರೆ.

ಎನ್‌ಪಿಎಸ್‌ಗೆ ಬದಲಾಗಲು ಅವಕಾಶ

ನವದೆಹಲಿ (ಪಿಟಿಐ): ಏಕೀಕೃತ ಪಿಂಚಣಿ ವ್ಯವಸ್ಥೆಯನ್ನು (ಯುಪಿಎಸ್) ಆಯ್ಕೆ ಮಾಡಿಕೊಂಡ ಕೇಂದ್ರ ಸರ್ಕಾರದ ನೌಕರರಿಗೆ ರಾಷ್ಟ್ರೀಯ ಪಿಂಚಣಿ ವ್ಯವಸ್ಥೆಗೆ (ಎನ್‌ಪಿಎಸ್) ಬದಲಾಗುವ ಒಂದು ಬಾರಿಯ ಅವಕಾಶವನ್ನು ಕೇಂದ್ರ ಹಣಕಾಸು ಸಚಿವಾಲಯವು ಕಲ್ಪಿಸಿದೆ.

ಕೇಂದ್ರ ಸರ್ಕಾರವು ತನ್ನ ನೌಕರರಿಗೆ ಯುಪಿಎಸ್ ಆಯ್ಕೆಯನ್ನು ಏಪ್ರಿಲ್ 1ರಿಂದ ನೀಡಿದೆ. ಜುಲೈ 20ರವರೆಗೆ 31,555 ನೌಕರರು ಯುಪಿಎಸ್ ಆಯ್ಕೆ ಮಾಡಿಕೊಂಡಿದ್ದಾರೆ. ಯುಪಿಎಸ್ ಆಯ್ಕೆ ಮಾಡಿಕೊಂಡವರಿಗೆ ಎನ್‌ಪಿಎಸ್‌ಗೆ ಬರಲು ಒಂದು ಬಾರಿಯ ಅವಕಾಶವನ್ನು ನೀಡಲಾಗುತ್ತಿದೆ.

‘ಚಿಕ್ಕರಸಂಪಾಳ್ಯದಲ್ಲಿ ಕೂಲಿ ಮಾಡುತ್ತಿದ್ದ ದೂರುದಾರ’

ಚಾಮರಾಜನಗರ: ‘ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳ ಪ್ರಕರಣದ ದೂರದಾರ, ತಮಿಳುನಾಡಿನ ಈರೋಡ್ ಜಿಲ್ಲೆಯ ಸತ್ಯಮಂಗಲ ತಾಲ್ಲೂಕಿನ ಚಿಕ್ಕರಸಂಪಾಳ್ಯದಲ್ಲಿ ಕೂಲಿ ಕೆಲಸ ಮಾಡುತ್ತಿದ್ದರು’ ಎಂದು, ಅವರ ಎರಡನೇ ಪತ್ನಿ ಎಂದು ಹೇಳಿಕೊಂಡಿರುವ ಮಲ್ಲಿಕಾ ಎಂಬವರು ಮಾಧ್ಯಮಗಳಿಗೆ ತಿಳಿಸಿದ್ದಾರೆ.

‘11 ವರ್ಷಗಳ ಹಿಂದೆ ಧರ್ಮಸ್ಥಳ ಬಿಟ್ಟುಬಂದಿದ್ದ ಅವರು, ಕೆಲವು ತಿಂಗಳ ಹಿಂದೆ ಕೂಲಿಗೆ ಹೋದವರು ಮರಳಿ ಬಂದಿಲ್ಲ’ ಎಂದಿದ್ದಾರೆ.

‘ಪತಿ ಯಾವ ಧರ್ಮಕ್ಕೂ ಮತಾಂತರವಾಗಿರಲಿಲ್ಲ. ಶವಗಳನ್ನು ಹೂತಿರುವ ಬಗ್ಗೆ ನನ್ನೊಂದಿಗೆ ಮಾತನಾಡಿಲ್ಲ. 7 ವರ್ಷ ಧರ್ಮಸ್ಥಳದಲ್ಲಿ ಪತಿಯೊಂದಿಗೆ ಸ್ವಚ್ಛತಾ ಕೆಲಸ ಮಾಡಿದ್ದೆ. ಇಬ್ಬರು ಮಕ್ಕಳೊಂದಿಗೆ ಬದುಕುತ್ತಿದ್ದೇನೆ. ಈಚೆಗೆ ಎಸ್‌ಐಟಿ ಪೊಲೀಸರು ಬಂದು ವಿಚಾರಣೆ ಮಾಡಿಕೊಂಡು ಹೋಗಿದ್ದಾರೆ’ ಎಂದು ಹೇಳಿದರು.

ರಂಗಕರ್ಮಿ ಪ್ರಕಾಶ್ ಬೆಳವಾಡಿ ಆರೋಪ • ರಾಜ್ಯಪಾಲರಿಗೆ ಮನವಿ ಸಲ್ಲಿಸುವುದಾಗಿ ಹೇಳಿಕೆ

‘ಬಫರ್ ವಲಯ ಕಡಿತ ಕೆರೆ ನಾಶಕ್ಕೆ ಬುನಾದಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿರುವ ಕೆರೆಗಳಿಗೆ ಏಕರೂಪದಲ್ಲಿದ್ದ 30 ಮೀಟರ್ ಬಫರ್ ವಲಯ(ಸಂರಕ್ಷಿತ ಪ್ರದೇಶ) ಕಡಿತಗೊಳಿಸಲು ಅವಕಾಶ ಕಲ್ಪಿಸುವ ತಿದ್ದುಪಡಿಯು ಕೆರೆಗಳ ನಾಶಕ್ಕೆ ಕಾರಣವಾಗಲಿದೆ. ಮೇಲ್ನೋಟಕ್ಕೆ ವಿರೋಧಿಸಿದಂತೆ ನಟಿಸುವ ವಿರೋಧ ಪಕ್ಷಗಳ ಸದಸ್ಯರು ಆಡಳಿತ ಪಕ್ಷದೊಂದಿಗೆ ಕೈಜೋಡಿಸಿ, ವಿನಾಶದಲ್ಲಿ ಪಾಲುದಾರರಾಗಿದ್ದಾರೆ ಎಂದು ರಂಗಕರ್ಮಿ ಪ್ರಕಾಶ್ ಬೆಳವಾಡಿ ಆರೋಪಿಸಿದರು.

ಬೆಂಗಳೂರು ಟೌನ್‌ಹಾಲ್ ಸಂಘಟನೆ ನಡೆಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕೆಲವು ವರ್ಷಗಳ ಹಿಂದೆ ಮಳೆ ಬಂದು ನಗರದಲ್ಲಿ ಪ್ರವಾಹ ಉಂಟಾದರೆ ದೊಡ್ಡ ಸುದ್ದಿ. ಈಗ ಬೆಂಗಳೂರು ಮಾತ್ರವಲ್ಲ, ದೇಶದ ಎಲ್ಲ ನಗರಗಳಲ್ಲಿ ಪ್ರವಾಹ ಉಂಟಾಗುವುದು ಸಾಮಾನ್ಯ ಸುದ್ದಿಯಾಗಿದೆ. ಈಗಲಾದರೂ ಪ್ರವಾಹ ಕಡಿಮೆ ಮಾಡುವುದು ಹೇಗೆ ಎಂಬ ಬಗ್ಗೆ ಚಿಂತನೆ ನಡೆಸುವ ಬದಲು ಕೆರೆಗಳ ಬಫರ್ ವಲಯ ಕಡಿಮೆ ಮಾಡಿ ಪ್ರವಾಹ ಹೆಚ್ಚಿಸಲು ಮುಂದಾಗಿರುವುದು ಆತಂಕಕಾರಿ ವಿಚಾರ. ಈ ಬಗ್ಗೆ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗಿದೆ’ ಎಂದು ಹೇಳಿದರು.

ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಬಫರ್ ವಲಯ ಕಡಿತ ಮಾಡುವುದರ ವಿರುದ್ಧ ಇರುವಂತೆ ನಟಿಸುತ್ತಿವೆ. ವಿಧಾನ ಪರಿಷತ್‌ನಲ್ಲಿ ಈ ಮಸೂದೆ ಅಂಗೀಕಾರವಾಗದಂತೆ ಮಾಡಬಹುದಿತ್ತು. ಆದರೆ, ಸಭಾತ್ಯಾಗ ಮಾಡಿ, ಅಂಗೀಕಾರವಾಗುವಂತೆ ಮಾಡಿದ್ದಾರೆ. ಇವರು ಅಧಿಕಾರಕ್ಕೆ ಬಂದರೆ ಇನ್ನಷ್ಟು ಹಾನಿ ಉಂಟಾಗುವ ಯೋಜನೆ ತರುವ ಅಪಾಯವಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಬೆಂಗಳೂರು ಎನ್‌ವಿರಾನ್‌ಮೆಂಟ್ ಟ್ರಸ್ಟ್‌ನ ದತ್ತಾತ್ರೇಯ ಟಿ. ದೇವರೆ ಮಾತನಾಡಿ, ‘ರಿಯಲ್ ಎಸ್ಟೇಟ್ ಹಿತಾಸಕ್ತಿಗಾಗಿ ಬಫರ್ ವಲಯ ಕಡಿಮೆ ಮಾಡಲು ನಿರ್ಧರಿಸಲಾಗಿದೆ’ ಎಂದು ಆರೋಪಿಸಿದರು.

ಸಿವಿಕ್ ಸಂಸ್ಥೆಯ ಕಾತ್ಯಾಯಿನಿ ಚಾಮರಾಜ್ ಮಾತನಾಡಿ, ‘ಕಾನೂನು ಪ್ರಕಾರ ಪರಿಸರ ಉಳಿಸಲು ಕ್ರಮ ಕೈಗೊಳ್ಳಬೇಕು. ಆದರೆ, ಆಡಳಿತ ಪಕ್ಷ, ವಿರೋಧ ಪಕ್ಷಗಳು ಸೇರಿ ಕೆರೆ ನುಂಗಲು ಯೋಜನೆ ರೂಪಿಸುತ್ತಿವೆ. ಗ್ರೇಟರ್ ಬೆಂಗಳೂರು ವಿರುದ್ಧ ಈಗಾಗಲೇ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್, ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದೇವೆ. ಬಫರ್ ವಲಯ ಕಡಿತಗೊಳಿಸುವುದರ ವಿರುದ್ಧವೂ ದಾವೆ ಹೂಡುತ್ತೇವೆ’ ಎಂದರು.

‘ಸುರಂಗ ರಸ್ತೆ ಯೋಜನೆಯು ಬೆಂಗಳೂರಿನಲ್ಲಿ ಇನ್ನಷ್ಟು ಪ್ರವಾಹ ಹೆಚ್ಚಿಸಲಿದೆ. ಅಂತರ್ಜಲ ಕುಸಿಯಲು ಕಾರಣವಾಗಲಿದೆ’ ಎಂದು ಸಿಟಿಜನ್ಸ್ ಫಾರ್ ಸಿಟಿಜನ್ಸ್ ಸಂಸ್ಥಾಪಕ ರಾಜ್‌ಕುಮಾರ್ ದುಗರ್ ವಿವರಿಸಿದರು.

‘ಜನರ ಜೀವಿಸುವ ಹಕ್ಕು ಸೇರಿದಂತೆ ಹತ್ತು ಕಾನೂನುಗಳನ್ನು ಸರ್ಕಾರ ಉಲ್ಲಂಘಿಸುತ್ತಿದೆ. ಬಫರ್ ವಲಯ ಕಡಿತ ಮಾಡುವುದನ್ನು ಸಾರ್ವಜನಿಕರು ವಿರೋಧಿಸಬೇಕು’ ಎಂದು ಬೆಂಗಳೂರಿನ ನಾಗರಿಕರ ಕಾರ್ಯಸೂಚಿಯ ಸಂದೀಪ್ ಅನಿರುದ್ಧನ್ ಹೇಳಿದರು.

ಕೆಎಸ್‌ಆರ್‌ಟಿಸಿ ನೌಕರರಿಂದ ಲಂಚ ಪಡೆದ ಅಧಿಕಾರಿಗಳು: ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಕಾದ ಮಾರ್ಗದಲ್ಲಿ ಕರ್ತವ್ಯಕ್ಕೆ ನಿಯೋಜಿಸಲು ಆ್ಯಪ್ ಆಧಾರಿತ ಪಾವತಿ ಮೂಲಕ ಲಂಚ ಪಡೆದ ಕೆಎಸ್‌ಆರ್‌ಟಿಸಿಯ ಇಬ್ಬರು ಅಧಿಕಾರಿಗಳ ವಿರುದ್ಧ ಮೇಲಧಿಕಾರಿಗಳಿಗೆ ಸಿಬ್ಬಂದಿ ದೂರು ನೀಡಿದ್ದಾರೆ.

ಬೆಂಗಳೂರು ಕೇಂದ್ರೀಯ ವಿಭಾಗದ ಘಟಕ 1ರಲ್ಲಿ ಸಹಾಯಕ ಸಂಚಾರ ನಿರೀಕ್ಷಕಿಯಾಗಿರುವ (ಎಟಿಐ) ಸಂಗೀತಾ ಮತ್ತು ಸಹಾಯಕ ಸಂಚಾರ ಅಧೀಕ್ಷಕಿಯಾಗಿರುವ (ಎಟಿಎಸ್) ಸ್ವಪ್ನಾ ಅವರು ಚಾಲಕರು ಮತ್ತು ನಿರ್ವಾಹಕರಿಂದ ಲಂಚ ಪಡೆದಿದ್ದಾರೆ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರಿಗೆ ಜಯದೇವ ಎಂ. ಅವರು ದೂರು ನೀಡಿ, ದಾಖಲೆಗಳನ್ನು ಸಲ್ಲಿಸಿದ್ದಾರೆ.

ಸಂಗೀತಾ ಅವರ ಖಾತೆಗೆ ಈ ವರ್ಷ ಫೆಬ್ರುವರಿ 27ರಂದು ₹50,000, ಜೂನ್ 26ರಂದು ₹1,100 ಪಾವತಿಯಾಗಿದೆ. ಸ್ವಪ್ನಾ ಅವರ ಖಾತೆಗೆ ಫೆಬ್ರುವರಿ 24 ಮತ್ತು ಮಾರ್ಚ್ 12ರಂದು ತಲಾ ₹5,000, ಮಾರ್ಚ್ 28, ಏಪ್ರಿಲ್ 4, 9, 24 ಮತ್ತು ಮೇ 11ರಂದು ತಲಾ ₹1,000, ಮೇ 7ರಂದು ₹500 ಪಾವತಿಯಾಗಿದೆ.

ಬಸಣ್ಣ ಹುಡೇದ ಎಂಬ ಚಾಲಕರೊಬ್ಬರ ಖಾತೆಯಿಂದ ಈ ಇಬ್ಬರು ಅಧಿಕಾರಿಗಳಿಗೆ ಪಾವತಿಯಾಗಿದೆ. ಈ ಇಬ್ಬರು ಅಧಿಕಾರಿಗಳ ವಿರುದ್ಧ ಸರ್ಕಾರದ ನಿಯಮಾವಳಿ, ಲೋಕಾಯುಕ್ತ ಕಾಯ್ದೆ ಹಾಗೂ ಕೆಎಸ್‌ಆರ್‌ಟಿಸಿ ಶಿಸ್ತು ಪ್ರಾಧಿಕಾರದ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಬೇಕು ಎಂದು ದೂರಿನಲ್ಲಿ ಒತ್ತಾಯಿಸಿದ್ದಾರೆ.

‘ಇಬ್ಬರು ಅಧಿಕಾರಿಗಳ ವಿರುದ್ಧ ದೂರು ಬಂದಿದೆ. ಆಂತರಿಕ ತನಿಖೆ ನಡೆಯುತ್ತಿದೆ’ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಸೆ.2ಕ್ಕೆ ಅಸ್ತಿತ್ವ ಕಳೆದುಕೊಳ್ಳಲಿದೆ ಬಿಬಿಎಂಪಿ

ಒಂದನೇ ಪುಟದಿಂದ...

ಆಯಾ ಪಾಲಿಕೆಗಳ ವ್ಯಾಪ್ತಿಯಲ್ಲಿರುವ ‘ಬಿಬಿಎಂಪಿಯ ವಲಯ ಆಯುಕ್ತರ ಕಚೇರಿ’ಗಳನ್ನೇ ಆಯುಕ್ತರ ಕಚೇರಿಯನ್ನಾಗಿ ಪರಿವರ್ತಿಸಲಾಗುತ್ತದೆ ಎಂದು ತಿಳಿಸಿದರು.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ- 2024 ಅನ್ನು 2025ರ ಮೇ 15ರಿಂದ ಜಾರಿಗೊಳಿಸಲಾಗಿದ್ದು, ಬಿಬಿಎಂಪಿ ವ್ಯಾಪ್ತಿಯನ್ನು ಗ್ರೇಟರ್ ಬೆಂಗಳೂರು ಪ್ರದೇಶ ಎಂದು ಹೆಸರಿಸಲಾಗಿತ್ತು. ಆ ಪ್ರದೇಶದ ವ್ಯಾಪ್ತಿಯಲ್ಲಿಯೇ ಐದು ನಗರ ಪಾಲಿಕೆಗಳನ್ನು ರಚಿಸಿ ಜುಲೈ 19ರಂದು ಕರಡು ಅಧಿಸೂಚನೆ ಹೊರಡಿಸಲಾಗಿತ್ತು. ಆಗಸ್ಟ್ 18ರವರೆಗೆ ಸಾರ್ವಜನಿಕರಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶವಿತ್ತು. ವಿಧಾನಸಭೆ ಕ್ಷೇತ್ರಗಳನ್ನು ಎರಡು, ಮೂರು ನಗರ ಪಾಲಿಕೆಗಳಿಗೆ ಸೇರಿಸಿರುವುದು ಸೇರಿದಂತೆ ಸಾವಿರಾರು ಆಕ್ಷೇಪಣೆಗಳು ಬಂದಿದ್ದು, ಅವುಗಳನ್ನು ಪರಿಗಣಿಸಿ ಸೆಪ್ಟೆಂಬರ್ 2ರಂದು ಅಂತಿಮ ಅಧಿಸೂಚನೆ ಹೊರಬೀಳಲಿದೆ.

ವಿಧಾನಸಭೆ ಕ್ಷೇತ್ರಗಳ ಪ್ರದೇಶಗಳನ್ನು ಒಂದೇ ನಗರ ಪಾಲಿಕೆಗೆ ಬರುವಂತೆ ಪುನರ್ ವಿಂಗಡಿಸಿ ಅಂತಿಮ ಅಧಿಸೂಚನೆಯಾಗಿ, ಅಸ್ತಿತ್ವಕ್ಕೆ ಬರುವ ಐದು ನಗರ ಪಾಲಿಕೆಗಳು, ವಾರ್ಡ್ ವಿಂಗಡಣೆಯಾಗಿ, ಮೀಸಲಾತಿ ನಿಗದಿಯಾಗಿ, ಚುನಾವಣೆ ಮುಗಿದು ಅಧಿಸೂಚನೆ ಹೊರಬೀಳುವವರೆಗೂ ಬಿಬಿಎಂಪಿಯಲ್ಲಿ ಈಗಿರುವ 198 ವಾರ್ಡ್‌ಗಳಂತೆಯೇ ಕಾಮಗಾರಿಗಳು ನಡೆಯಲಿವೆ. ಯಾವ ನಗರ ಪಾಲಿಕೆಗಳಿಗೆ ಯಾವ ವಾರ್ಡ್‌ಗಳು ವಿಂಗಡಣೆಯಾಗಲಿವೆ ಎಂಬುದು ಸೆಪ್ಟೆಂಬರ್ 2ರಂದು ಹೊರಬೀಳುವ ಅಂತಿಮ ಅಧಿಸೂಚನೆಯಲ್ಲಿ ಸ್ಪಷ್ಟವಾಗಲಿದೆ. ನಗರ ಪಾಲಿಕೆಗಳಿಗೆ ಹೊಸ ಕಾಯ್ದೆ ರಚನೆಯಾಗುವವರೆಗೂ ಬಿಬಿಎಂಪಿ-2020 ಕಾಯ್ದೆಯೇ ಅನ್ವಯವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದರು.

100 ದಿನಗಳ ಕ್ರಿಯಾಯೋಜನೆ!

ಬಿಬಿಎಂಪಿಯಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರವಾಗಿ ಪರಿವರ್ತನೆಯಾಗಲು ಖಾಸಗಿ ಸಂಸ್ಥೆಗಳ ಬೆಂಬಲ ಪಡೆಯಲಾಗಿದ್ದು, ಟೆಂಡರ್ ಮೂಲಕ ಸಲಹೆಗಾರರನ್ನು ಅಂತಿಮಗೊಳಿಸಲಾಗಿದೆ. ಬಿಬಿಎಂಪಿ ವ್ಯಾಪ್ತಿಯ ಸ್ವತ್ತುಗಳ ಮರುಹಂಚಿಕೆಗೆ 100 ದಿನದ ಕ್ರಿಯಾಯೋಜನೆ ರೂಪಿಸಲಾಗಿದೆ. ಆಗಸ್ಟ್ ನಿಂದ ಯೋಜನೆ ಸಿದ್ಧತೆ ಆರಂಭವಾಗಿದ್ದು, ನಾಲ್ಕು ವಾರದಲ್ಲಿ ಆರಂಭಿಕ ವರದಿ, 10 ವಾರದಲ್ಲಿ ಜಿಬಿಎ ಪರಿವರ್ತನೆಯಾಗಲು ವರದಿ ಸಲ್ಲಿಕೆಯಾಗಲಿದೆ. ಸಾಂಸ್ಥಿಕ ಚೌಕಟ್ಟು, ಸದೃಢ ಆಡಳಿತ ಹಾಗೂ ನಗರ ಪಾಲಿಕೆಗಳು ಮತ್ತು ಇತರೆ ಇಲಾಖೆಗಳ ನಡುವೆ ಸಮನ್ವಯ–ಹೊಣೆಗಾರಿಕೆಯ ಕಾರ್ಯವಿಧಾನಗಳನ್ನು ಖಾಸಗಿ ಸಂಸ್ಥೆ ರಚಿಸಿಕೊಡಲಿದೆ. ಒಟ್ಟಾರೆ 52 ವಾರ ಅಂದರೆ ಒಂದು ವರ್ಷ ಖಾಸಗಿ ಸಂಸ್ಥೆ ಬಿಬಿಎಂಪಿಯಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರವಾಗಲು, ಪಾಲಿಕೆಗಳು ಸಂಪೂರ್ಣ ಅಸ್ತಿತ್ವ ಕಂಡುಕೊಳ್ಳಲು ನೆರವು ನೀಡಲಿದೆ ಎಂದು ಅಧಿಕಾರಿಗಳು ತಿಳಿಸಿದರು.

2007ರಲ್ಲಿ ರಚನೆ

ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸುತ್ತಮುತ್ತಲಿನ ಏಳು ನಗರಸಭೆ, ಒಂದು ಪುರಸಭೆ ಹಾಗೂ 110 ಹಳ್ಳಿಗಳನ್ನು ಸೇರಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು 2007ರಲ್ಲಿ ರಚಿಸಲಾಯಿತು. 198 ವಾರ್ಡ್‌ಗಳನ್ನು ರಚಿಸಿ, 2010ರಲ್ಲಿ ಚುನಾವಣೆ ನಡೆಸಲಾಗಿತ್ತು. 2020ರ ಸೆಪ್ಟೆಂಬರ್ 10ಕ್ಕೆ ಬಿಬಿಎಂಪಿ ಕೌನ್ಸಿಲ್ ಅವಧಿ ಮುಗಿದಿತ್ತು.

ಇತಿಹಾಸದ ಪುಟ ಸೇರಿದ ಮಿಗ್–21

ಬಿಕಾನೇರ್ (ಪಿಟಿಐ): ಆರು ದಶಕಗಳ ಕಾಲ ಭಾರತೀಯ ವಾಯುಪಡೆಯಲ್ಲಿ ಕಾರ್ಯನಿರ್ವಹಿಸಿದ ಮಿಗ್–21 ಯುದ್ಧವಿಮಾನವು ರಾಜಸ್ಥಾನದ ಬಿಕಾನೇರ್‌ನಲ್ಲಿರುವ ನಾಲ್ ವಾಯುನೆಲೆಯಲ್ಲಿ ಕೊನೆಯ ಬಾರಿಗೆ ಹಾರಾಟ ನಡೆಸುವುದರೊಂದಿಗೆ ಇತಿಹಾಸದ ಪುಟ ಸೇರಿತು.

ಚಂಡೀಗಢದಲ್ಲಿ ಸೆಪ್ಟೆಂಬರ್ 26ರಂದು ಈ ಯುದ್ಧವಿಮಾನದ ಔಪಚಾರಿಕ ಬೀಳ್ಕೊಡುಗೆ ಕಾರ್ಯಕ್ರಮ ನಡೆಯಲಿದೆ. ಸಾಂಕೇತಿಕ ಬೀಳ್ಕೊಡುಗೆಯ ಭಾಗವಾಗಿ ಆಗಸ್ಟ್ 18 ಮತ್ತು 19ರಂದು ಏರ್ ಚೀಫ್ ಮಾರ್ಷಲ್ ಎ.ಪಿ.ಸಿಂಗ್ ಅವರು ಮಿಗ್–21 ವಿಮಾನದ ಹಾರಾಟ ನಡೆಸಿದರು. ಯುದ್ಧವಿಮಾನದ ಕೊನೆಯ ಹಾರಾಟವು ವಾಯುಪಡೆಗೆ ಅತ್ಯಂತ ಭಾವನಾತ್ಮಕ ಗಳಿಗೆಯಾಗಿತ್ತು.

ಮಣ್ಣಿನ ಮೂರ್ತಿ: ಜಾಗೃತಿ ಜಾಥಾ

ಬೆಂಗಳೂರು: ಗೌರಿ-ಗಣೇಶ ಹಬ್ಬ ಆಚರಣೆಗೆ ನಗರ ಸಿದ್ಧಗೊಂಡಿದ್ದರೆ, ಇತ್ತ ಪರಿಸರ ಸ್ನೇಹಿ ಗೌರಿ-ಗಣೇಶ ಮೂರ್ತಿಗಳನ್ನು ಬಳಸಬೇಕು ಎಂದು ಎನ್‌ಎಸ್‌ಎಸ್ ವಿದ್ಯಾರ್ಥಿಗಳು ನಗರದ ಬೀದಿಗಳಲ್ಲಿ ಸಂಚರಿಸಿ ಜಾಗೃತಿ ಮೂಡಿಸಿದರು.

ವಿಜಯನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕ-1 ಹಾಗೂ ಡಿಗ್ನಿಟಿ ಫೌಂಡೇಷನ್ ಸಹಯೋಗದೊಂದಿಗೆ ಸೋಮವಾರ ಸ್ವಯಂಸೇವಕರು ಹಾಗೂ ಡಿಗ್ನಿಟಿ ಫೌಂಡೇಷನ್‌ನ ಸ್ವಯಂಸೇವಕರು ವಿಜಯನಗರದ ಸುತ್ತಮುತ್ತ ಸ್ಥಳಗಳಲ್ಲಿ ಜಾಥಾ ಕೈಗೊಂಡರು.

ಸ್ವಯಂ-ಸೇವಕರು ನಗರದ ಪ್ರಮುಖ ಬೀದಿಗಳಲ್ಲಿ ಹಾಗೂ ವಿಜಯನಗರದ ಮೆಟ್ರೊ ನಿಲ್ದಾಣದಲ್ಲಿ ಪಿಒಪಿ ಮೂರ್ತಿಗಳನ್ನು ಬಳಸದೆ ಪರಿಸರ ಸ್ನೇಹಿ ಮೂರ್ತಿಗಳನ್ನು ಬಳಸಬೇಕು. ಇದರಿಂದ ಪರಿಸರ ಮಾಲಿನ್ಯ ಹಾಗೂ ಜಲ ಮಾಲಿನ್ಯವನ್ನು ಕಾಪಾಡಿದಂತಾಗುತ್ತದೆ ಎಂದರು.

ಜಾಥಾದಲ್ಲಿ ಕಾಲೇಜಿನ ಪ್ರಾಂಶುಪಾಲೆ ಶುಭ, ಎನ್.ಎಸ್.ಎಸ್ ಕ್ರಾರ್ಯಕ್ರಮ ಅಧಿಕಾರಿ ಎಸ್.ಜಿ. ರಾಘವೇಂದ್ರ, ಅಧ್ಯಾಪಕರಾದ ರಘುನಂದನ್, ಶಿವಣ್ಣ ಎಂ., ಪದ್ಮನಾಭ ಆರ್., ಎಲ್.ಸಿ.ರಾಜು, ದೇವಿಕಾ, ಡಾ. ವಾಸುದೇವರೆಡ್ಡಿ ಹಾಗೂ ಸ್ಮಿತಾ ಭಾವಿಕಟ್ಟೆ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

‘ಆರ್ಥಿಕತೆಗೆ ‘ಗ್ಯಾರಂಟಿ’ ಹೊಡೆತ: ಸಿಎಜಿ ವರದಿ ಸರಿಯಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ಯಾರಂಟಿ ಯೋಜನೆಗಳಿಂದ ಆರ್ಥಿಕತೆಗೆ ಹೊಡೆತ ಬೀಳುತ್ತಿದೆ ಎಂದು ಮಹಾಲೇಖಪಾಲರ (ಸಿಎಜಿ) ವರದಿಯಲ್ಲಿ ಉಲ್ಲೇಖಿಸಿರುವುದು ಸತ್ಯಕ್ಕೆ ದೂರವಾದುದು’ ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ ತಿಳಿಸಿದರು.

ವಿಧಾನಸೌಧದಲ್ಲಿ 31 ಜಿಲ್ಲೆಗಳ ಗ್ಯಾರಂಟಿ ಅನುಷ್ಠಾನ ಸಮಿತಿಗಳ ಅಧ್ಯಕ್ಷರ ಜೊತೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಗ್ಯಾರಂಟಿ ಯೋಜನೆಗಳಿಂದಾಗಿ ರಾಜ್ಯದ ಜನರ ತಲಾದಾಯ ಹೆಚ್ಚಳವಾಗಿದೆ. ಜಿಎಸ್‌ಟಿ ಸಂಗ್ರಹವೂ ಏರಿಕೆ ಆಗಿದೆ’ ಎಂದರು.

‘ಸಿಎಜಿ ವರದಿ ಸಿದ್ಧಪಡಿಸುವಾಗ ಅನುದಾನ ಬಳಕೆ ಕುರಿತಂತೆ ಪರಿಶೀಲಿಸಿ, ವರದಿಯಲ್ಲಿ ತಿಳಿಸಬೇಕು. ಅದನ್ನು ಬಿಟ್ಟು ಯೋಜನೆಗಳ ಕುರಿತಂತೆ ವ್ಯಾಖ್ಯಾನಿಸಬಾರದು. ಯೋಜನೆಗಳಿಂದ ಅಭಿವೃದ್ಧಿ ಮತ್ತು ಆದಾಯ ಕುಂಠಿತವಾಗುತ್ತದೆ ಎಂದು ಹೇಳಿರುವುದು ಸರಿಯಲ್ಲ. ಈ ಬಗ್ಗೆ ಸಿಎಜಿಗೆ ಉತ್ತರಿಸುವ ಕುರಿತು ಮುಖ್ಯಮಂತ್ರಿಯವರ ಜೊತೆ ಚರ್ಚೆ ನಡೆಸಲಾಗುವುದು’ ಎಂದು ತಿಳಿಸಿದರು.

ಶೇ 98ರಷ್ಟು ಅನುಷ್ಠಾನ: ‘ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳು ಶೇ 98ರಷ್ಟು ಅನುಷ್ಠಾನಗೊಂಡಿವೆ. ಈ ಯೋಜನೆಗಳಿಗಾಗಿ ಈವರೆಗೆ ₹94,177 ಕೋಟಿ ವೆಚ್ಚ ಮಾಡಲಾಗಿದೆ’ ಎಂದರು.

‘ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಮೂರು ಜಿಲ್ಲಾ ಮಟ್ಟದ ಸಮಿತಿಗಳಿಗೆ ಪ್ರಶಸ್ತಿ ನೀಡಲು ಕೂಡಾ ನಿರ್ಧರಿಸಲಾಗಿದೆ’ ಎಂದು ಹೇಳಿದರು.

‘ಗ್ಯಾರಂಟಿ ಯೋಜನೆ ಬೇಡವೆಂದು ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ವಯಂಪ್ರೇರಿತವಾಗಿ ಹಿಂದೆ ಸರಿದಿದ್ದಾರೆ. ಇದು ಒಳ್ಳೆಯ ಬೆಳವಣಿಗೆ. ಅಗತ್ಯ ಇರುವವರಿಗೆ ಯೋಜನೆ ತಲುಪಿಸಲು ಸಹಕಾರಿ. ಆದಾಯ ತೆರಿಗೆ ಪಾವತಿ ಗೊಂದಲಗಳಿಂದಾಗಿ 1.2 ಲಕ್ಷ ಅರ್ಹರು ಗೃಹ ಲಕ್ಷ್ಮಿ ಯೋಜನೆಯ ಲಾಭದಿಂದ ಹೊರಗುಳಿದಿದ್ದರು. ಅವರಲ್ಲಿ 59 ಸಾವಿರ ಜನರನ್ನು ಗೊಂದಲ ನಿವಾರಿಸಿ, ಯೋಜನೆಯ ವ್ಯಾಪ್ತಿಗೆ ತರಲಾಗಿದೆ. 15 ದಿನಗಳ ಒಳಗೆ ಉಳಿದವರನ್ನೂ ಯೋಜನೆಯ ವ್ಯಾಪ್ತಿಗೆ ತರಲಾಗುವುದು’ ಎಂದರು.

ಪ್ರಾಧಿಕಾರದ ಉಪಾಧ್ಯಕ್ಷರಾದ ದಿನೇಶ್ ಗೂಳಿಗೌಡ, ಪುಷ್ಪಾ ಅಮರ್‌ನಾಥ್, ಸೂರಜ್ ಹೆಗಡೆ, ಕೃಷ್ಣಪ್ಪ ಇದ್ದರು.

ತ್ಯಾಜ್ಯ ಸುರಿಯುತ್ತಿರುವವರ ಮೇಲೆ ಯಾವುದೇ ಕ್ರಮ ಕೈಗೊಳ್ಳದ ಗ್ರಾ.ಪಂ.

ಕಸ ಎಲ್ಲೆಂದರಲ್ಲಿ: ಇದು ಬಿದರಹಳ್ಳಿ

• ಶಿವರಾಜ್ ಮೌರ್ಯ

ಕೆ.ಆರ್.ಪುರ: ಬಿದರಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರಮುಖ ರಸ್ತೆಗಳ ಬದಿಯಲ್ಲಿ, ಬೀದಿಬದಿಗಳಲ್ಲಿ ಕಸ ಕಸದ ರಾಶಿ ಬಿದ್ದಿದೆ. ಈ ಬಗ್ಗೆ ಯಾವುದೇ ಕ್ರಮ ವಹಿಸದ ಬಿದರಹಳ್ಳಿ ಪಂಚಾಯಿತಿ ವಿರುದ್ಧ ಸ್ಥಳೀಯರು ಅಕ್ರೋಶ ವ್ಯಕ್ತಪಡಿಸಿದ್ದಾರೆ.

ಬಿದರಹಳ್ಳಿಯಿಂದ ಕಿತ್ತಗನೂರು ಹಾಗೂ ರಾಂಪುರ ಸಂಪರ್ಕ ಮುಖ್ಯರಸ್ತೆಗಳು, ಪ್ರಮುಖ ಬಿದಿ ಬದಿಗಳಲ್ಲಿ ಹಸಿ ಮತ್ತು ಒಣ ತ್ಯಾಜ್ಯ, ನಿರ್ಮಾಣ ಹಂತದ ಕಟ್ಟಡಗಳ ತ್ಯಾಜ್ಯ, ಪ್ಲಾಸ್ಟಿಕ್ ತ್ಯಾಜ್ಯ ತಂದು ಸುರಿಯಲಾಗುತ್ತಿದೆ. ಗ್ರಾಮ ಪಂಚಾಯಿತಿ ಸರಿಯಾದ ರೀತಿಯಲ್ಲಿ ಕಸ ನಿರ್ವಹಣೆ ಮಾಡುತ್ತಿಲ್ಲ. ಬಿದರಹಳ್ಳಿ ಸುತ್ತಮುತ್ತಲಿನ ಪ್ರದೇಶದಲ್ಲಿ ಹೊಸ ಬಡಾವಣೆಗಳು ತಲೆ ಎತ್ತಿವೆ. ಇದರಿಂದ ಕಸದ ಸಮಸ್ಯೆ ಇನ್ನಷ್ಟು ಹೆಚ್ಚಾಗಿದೆ ಎಂದು ಸ್ಥಳೀಯರು ದೂರಿದರು.

‘ಮಾಂಸದ ಅಂಗಡಿಗಳ ಮಾಲೀಕರು ಕೋಳಿ, ಕುರಿ ಮಾಂಸದ ತ್ಯಾಜ್ಯವನ್ನು ಯಾವುದೇ ಭಯವಿಲ್ಲದೆ ಖಾಲಿ ಜಾಗ, ರಸ್ತೆಗಳಲ್ಲಿ ಸುರಿದು ಹೋಗುತ್ತಾರೆ. ತ್ಯಾಜ್ಯ ಸಂಗ್ರಹಗೊಂಡು ಗಬ್ಬು ನಾರುತ್ತಿದೆ. ಆದರೆ ಗ್ರಾಮ ಪಂಚಾಯಿತಿ ಅಧಿಕಾರಿಗಳು ಈ ಸಮಸ್ಯೆಗೂ ತಮಗೂ ಸಂಬಂಧವೇ ಇಲ್ಲದಂತೆ ವರ್ತಿಸುತ್ತಿದ್ದಾರೆ’ ಎಂದು ಬಿದರಹಳ್ಳಿ ನಿವಾಸಿ ರಮೇಶ್ ದೂರಿದರು.

ಮುಖ್ಯರಸ್ತೆಯಲ್ಲಿ ನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತಿವೆ. ಶಾಲೆ, ಕಾಲೇಜುಗಳಿಗೆ ಇದೇ ಮಾರ್ಗದಲ್ಲಿ ಸಂಚರಿಸಬೇಕಿದೆ. ಕೆಲವೊಮ್ಮೆ ತ್ಯಾಜ್ಯಕ್ಕೆ ಬೆಂಕಿ ಹಚ್ಚಲಾಗುತ್ತಿದೆ. ಇದರಿಂದ ತ್ಯಾಜ್ಯದ ವಿಷಪುರಿತ ಗಾಳಿ ಸಾರ್ವಜನಿಕರ ಶ್ವಾಸಕೋಶ ಸೇರುತ್ತಿದೆ ಎಂದು ಹೇಳಿದರು.

ಕಸ ಸುರಿಯದಂತೆ ಗ್ರಾಮ ಪಂಚಾಯಿತಿ ಕಾಟಚಾರಕ್ಕೆ ನೋಟಿಸ್ ಬೋರ್ಡ್‌ಗಳನ್ನು ಹಾಕಿ ಕೈತೊಳೆದುಕೊಂಡಿದೆ. ಕಸ ಸುರಿಯುವವರ ವಿರುದ್ಧ ಯಾವುದೇ ರೀತಿಯ ಕ್ರಮ ಕೈಗೊಳ್ಳುತ್ತಿಲ್ಲ. ಗ್ರಾಮ ಪಂಚಾಯಿತಿ ಸಿಬ್ಬಂದಿ ಕಚೇರಿಗೆ ಸೀಮಿತರಾಗಿದ್ದಾರೆ. ಹಿರಿಯ ಅಧಿಕಾರಿಗಳು ಗ್ರಾಮ ಪಂಚಾಯಿತಿ ಅಧಿಕಾರಿಗಳ ಬಗ್ಗೆ ಗಮನ ಹರಿಸುತ್ತಿಲ್ಲ ಎಂದು ಬಿದರಹಳ್ಳಿ ನಿವಾಸಿ ದಿಲೀಪ್ ದೂರಿದರು.

ಹಿರಂಡಹಳ್ಳಿಯಲ್ಲೂ ಕಸದ ಸಮಸ್ಯೆ ವ್ಯಾಪಕವಾಗಿದೆ. ಎಲ್ಲೆಂದರಲ್ಲಿ ಕಸ ಸುರಿಯುವುದರಿಂದ ಬೀದಿ ನಾಯಿಗಳು ಆಹಾರ ಹುಡುಕಿಕೊಂಡು ರಸ್ತೆಗೆ ಬರುತ್ತವೆ. ನಾಯಿಗಳು ಅಡ್ಡಬಂದು ಹಲವು ಬಾರಿ ರಸ್ತೆ ಅಪಘಾತಗಳು ಉಂಟಾಗಿವೆ ಎಂದು ದಲಿತ ಮುಖಂಡ ಅದೂರು ಮಂಜುನಾಥ್ ಹೇಳಿದರು.

ಕಸ ವಿಲೇವಾರಿ ಮಾಡುತ್ತಿಲ್ಲ. ರಸ್ತೆಯ ಅಕ್ಕಪಕ್ಕದಲ್ಲಿ ಬೆಳೆದಿರುವ ಹುಲ್ಲು ತೆಗೆದು ಸ್ವಚ್ಛಗೊಳಿಸುವ ಕಾರ್ಯಗಳೂ ಆಗುತ್ತಿಲ್ಲ. ಚರಂಡಿಗಳು ಕಸಕಡ್ಡಿ ತುಂಬಿ ತುಳುಕುತ್ತಿವೆ ಎಂದು ಕರ್ನಾಟಕ ರಿಪಬ್ಲಿಕನ್ ಸೇನೆಯ ಕಾರ್ಮಿಕ ಘಟಕದ ಅಧ್ಯಕ್ಷ ಕಾವೇರಪ್ಪ ಹೇಳಿದರು. ಎಲ್ಲೆಂದರಲ್ಲಿ ಬಿಸಾಡಿರುವ ಕಸ ವನ್ನು ವಿಲೇವಾರಿ ಮಾಡಬೇಕು. ಕಸ ತಂದು ಹಾಕುವವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಬಿದರಹಳ್ಳಿಯಿಂದ ಕಿತ್ತಗನೂರು ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯಲ್ಲಿ ಕಸ ಎಸೆಯಲಾಗಿದೆ

‘ಬಸ್ ನಿಲ್ದಾಣದ ಸಮಸ್ಯೆ ಪರಿಹರಿಸಲು ಕ್ರಮ’

ಪ್ರಜಾವಾಣಿ ವಾರ್ತೆ

ನೆಲಮಂಗಲ: ಬಸ್ ನಿಲ್ದಾಣದಲ್ಲಿ ಬಸ್‌ಗಳ ಪ್ರವೇಶ ಹಾಗೂ ನಿರ್ಗಮನ ಮಾರ್ಗಗಳ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಪಟ್ಟಣದಲ್ಲಿ ನಿರ್ಮಾಣವಾಗುತ್ತಿರುವ ಬಸ್ ನಿಲ್ದಾಣದ ಕಾಮಗಾರಿ ಪರಿಶೀಲಿಸಿ ಮಾತನಾಡಿದ ಅವರು, ‘ಬಸ್‌ನಿಲ್ದಾಣಕ್ಕೆ ಹೊಂದಿಕೊಂಡಿರುವ ಮುಖ್ಯರಸ್ತೆಯಿಂದ ಇಂದಿರಾನಗರ ಕಡೆ ಹೋಗುವ ಬಸ್ ಒಳ ಪ್ರವೇಶಿಸುವ ಮಾರ್ಗ ಕೇವಲ 22 ಅಡಿ ಇದ್ದು, ನಿಲ್ದಾಣದ ಜಾಗವನ್ನು ಬಳಸಿಕೊಂಡು 40 ಅಡಿಗಳಿಗೆ ರಸ್ತೆಯನ್ನು ವಿಸ್ತರಿಸಲು ಸಾಧ್ಯತೆ ಇದೆಯೇ ಎಂಬುದನ್ನು ಪರಿಶೀಲಿಸಲಾಗುವುದು’ ಎಂದರು.

ಶಾಸಕರ ನೇತೃತ್ವದಲ್ಲಿ ನಗರಸಭೆ ಅಧ್ಯಕ್ಷರು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ಹಾಗೂ ಅಧಿಕಾರಿಗಳ ನಿಯೋಗ ಕೆಎಸ್‌ಆರ್‌ಟಿಸಿ ಹಾಗೂ ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರನ್ನು ಭೇಟಿ ಮಾಡಿ ಚರ್ಚಿಸಬಹುದು. ಸದ್ಯಕ್ಕೆ ಉದ್ಘಾಟನೆ ಬೇಡ, ಸಾರ್ವಜನಿಕವಾಗಿ ಬಳಕೆಯಾಗಲಿ ಎಂದು ಹೇಳಿದರು.

ಪಪ್ಪಾಯ ಹಣ್ಣನ್ನು ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಸೇವನೆ ಮಾಡುವುದರಿಂದ ಜೀರ್ಣಕ್ರಿಯೆ ಸರಾಗವಾಗಿ ಆಗುತ್ತದೆ

ಬಂಗು: ಮುಖಕ್ಕೆ ಬೇಡದ ರಂಗು

• ಡಾ. ಬಿ. ಆರ್. ಸುಹಾಸ್

ಚರ್ಮ ಎಂದಕೂಡಲೇ ನಮಗೆ ಸೌಂದರ್ಯದ ಭಾವವುಂಟಾಗುತ್ತದೆ. ಸೌಂದರ್ಯ ಚರ್ಮದಾಳಕ್ಕಿದೆ ಎಂಬ ಮಾತೂ ಇದೆ. ಅದರಲ್ಲೂ ಸ್ತ್ರೀಯರಲ್ಲಿ ಸೌಂದರ್ಯಪ್ರಜ್ಞೆ ಹೆಚ್ಚು. ಚರ್ಮವೈದ್ಯರ ಬಳಿಗೆ ಬರುವವರಲ್ಲಿ ರೋಗಗಳಿಲ್ಲದಿದ್ದರೂ, ಸೌಂದರ್ಯದ ಸಮಸ್ಯೆಗಳಿರುತ್ತವೆ. ಅಂಥ ಸಮಸ್ಯೆಗಳಲ್ಲಿ 'ಬಂಗು' ಅಥವಾ 'ಮೆಲಾಸ್ಮ' (Melasma) ಬಹಳ ಸಾಮಾನ್ಯವಾದುದು. ಇದು ಸ್ತ್ರೀಯರಲ್ಲಿ ಹೆಚ್ಚಾಗಿ ಉಂಟಾಗುತ್ತದೆ. ಕೆಲವೊಮ್ಮೆ ಪುರುಷರಲ್ಲೂ ಉಂಟಾಗುತ್ತದೆ. ಗರ್ಭಿಣಿಯರಲ್ಲಿ ಉಂಟಾದಾಗ ಇದನ್ನು 'ಕ್ಲೊಯಾಸ್ಮ' (Chloasma) ಎಂದು ಕರೆಯುತ್ತಾರೆ.

ಮೆಲಾಸ್ಮ ಅಥವಾ ಬಂಗು ಎಂದರೆ ಬೇರೇನಿಲ್ಲ, ನಮ್ಮ ಚರ್ಮಕ್ಕೆ ಬಣ್ಣವನ್ನು ಕೊಡುವ 'ಮೆಲನಿನ್' ದ್ರವ ಅಥವಾ ಅದನ್ನು ಉತ್ಪತ್ತಿ ಮಾಡುವ 'ಮೆಲನೋಸೈಟ್' ಕೋಶಗಳು ಹೆಚ್ಚಾಗಿರುತ್ತವೆ. ಇದು ಒಂದು ವಿನ್ಯಾಸದಲ್ಲಿ ಆದಾಗ 'ಬಂಗು' ಎನ್ನುತ್ತಾರೆ. ಸಾಮಾನ್ಯವಾಗಿ ಇದು ಮುಖದಲ್ಲಿ ಆಗುತ್ತದೆ. ಅಪರೂಪವಾಗಿ ಮುಂದೋಳುಗಳಲ್ಲಾಗಬಹುದು. ಬಂಗಿನಲ್ಲಿ ಚರ್ಮದ ಬಣ್ಣ ಹೆಚ್ಚಾಗಿರುವುದರ ಜೊತೆಗೆ ರಕ್ತಸಂಚಾರ ಕೂಡ ಹೆಚ್ಚಾಗುತ್ತದೆ. ಇದರೊಂದಿಗೆ ಕೊಬ್ಬಿನ ಉತ್ಪತ್ತಿಯಲ್ಲಿ ಏರುಪೇರಾಗಿ ಚರ್ಮ ತೆಳ್ಳಗಾಗಿರುತ್ತದೆ.

ಬಗೆಗಳು

ಬಂಗಿನಲ್ಲಿ ಕಂದುಬಣ್ಣದ ಮಚ್ಚೆಗಳಾಗುತ್ತವೆ. ಇವುಗಳಲ್ಲಿ ನವೆ ಅಥವಾ ಬೇರಾವುದೇ ಲಕ್ಷಣಗಳಿರುವುದಿಲ್ಲ. ಬಂಗನ್ನು ಮೂರು ರೀತಿಗಳಲ್ಲಿ ವಿಂಗಡಿಸುತ್ತಾರೆ. ಒಂದು, ಮಧ್ಯಮುಖ ಅಥವಾ 'ಸೆಂಟ್ರೋಫೇಷಿಯಲ್' (Centrofacial) ಬಗೆ. ಇದರಲ್ಲಿ ಕಂದುಬಣ್ಣದ ಮಚ್ಚೆಗಳು ಹಣೆ, ಮೂಗು, ಮೇಲ್ತುಟಿಯ ಭಾಗ, ಕೆನ್ನೆಗಳು, ಮತ್ತು ಗಲ್ಲದಲ್ಲಿ ಆಗುತ್ತವೆ. ಎರಡನೆಯ ಬಗೆ 'ಮಾಲಾರ್' (Malar)). ಇದರಲ್ಲಿ ಕಂದುಮಚ್ಚೆಗಳು ಕೆನ್ನೆಗಳು ಮತ್ತು ಮೂಗಿನ ಮೇಲಾಗುತ್ತವೆ. ಮೂರನೆಯದು, 'ಮ್ಯಾಂಡಿಬುಲಾರ್' (Mandibular) ಬಗೆ. ಇದರಲ್ಲಿ ದವಡೆಗಳ ಭಾಗಗಳಲ್ಲಿ ಮಚ್ಚೆಗಳಾಗುತ್ತವೆ. ಬಂಗಿನಲ್ಲಿ ಮೆಲನಿನ್ ದ್ರವದ ಹೆಚ್ಚಳ ಎಷ್ಟು ಆಳಕ್ಕಿದೆ ಎಂಬುದರ ಆಧಾರದಲ್ಲಿ ಅದನ್ನು 'ಎಪಿಡರ್ಮಲ್' (ಚರ್ಮದ ಮೇಲ್ಪದರದ), 'ಡರ್ಮಲ್' (ಚರ್ಮದ ಒಳಪದರದ), ಹಾಗೂ 'ಮಿಕ್ಸೆಡ್' ಅಥವಾ ಮಿಶ್ರ ಬಗೆಗಳೆಂದೂ ವಿಂಗಡಿಸಬಹುದು.

ಕಾರಣಗಳು

ಬಂಗು ಏಕೆ ಉಂಟಾಗುತ್ತದೆ? ಇದಕ್ಕೆ ಒಂದು ನಿರ್ದಿಷ್ಟ ಕಾರಣ ಎಂದಿಲ್ಲ. ಆನುವಂಶಿಕ ಕಾರಣಗಳು, ಹಾರ್ಮೋನುಗಳ ವ್ಯತ್ಯಾಸ, ಗರ್ಭನಿರೋಧಕ ಮಾತ್ರೆಗಳ ಸೇವನೆ, ಗರ್ಭಿಣಿಯಾದ ಸಂದರ್ಭ, ಬಿಸಿಲಿನಲ್ಲಿರುವ ಅತಿನೇರಳೆ ಕಿರಣಗಳ ಪ್ರಚೋದನೆ – ಮೊದಲಾದ ಕಾರಣಗಳಿರುತ್ತವೆ. ಹೆಣ್ಣು ಗರ್ಭಿಣಿಯಾದಾಗ 'ಈಸ್ಟ್ರೋಜನ್', 'ಪ್ರೊಜೆಸ್ಟರಾನ್' ಎಂಬ ಗರ್ಭಕ್ಕೆ ಸಂಬಂಧಿಸಿದ ಹಾರ್ಮೋನುಗಳು ಹಾಗೂ ಮೆಲನೋಸೈಟ್ ಕೋಶಗಳನ್ನು ಪ್ರಚೋದಿಸುವ 'ಮೆಲನೋಸೈಟ್ ಸ್ಟಿಮುಲೇಟಿಂಗ್ ಹಾರ್ಮೋನ್', ಇವು ಹೆಚ್ಚಾಗಿ ಮೆಲನೋಸೈಟ್‌ಗಳನ್ನು ಪ್ರಚೋದಿಸುತ್ತವೆ. ಅದರಿಂದ ಮೆಲನಿನ್ ಹೆಚ್ಚು ಉತ್ಪತ್ತಿಯಾಗಿ ಬಂಗು ಉಂಟಾಗುತ್ತದೆ. ಗರ್ಭನಿರೋಧಕ ಮಾತ್ರೆಗಳಲ್ಲೂ ಈ ಹಾರ್ಮೋನ್‌ಗಳಿರುವುದರಿಂದ ಅವುಗಳ ಸೇವನೆಯಿಂದಲೂ ಬಂಗು ಉಂಟಾಗಬಹುದು. ಆದರೆ ಎಲ್ಲರಲ್ಲೂ ಹೀಗಾಗುವುದಿಲ್ಲ. ಆನುವಂಶಿಕ ಪ್ರವೃತ್ತಿ ಇರುವವರಲ್ಲಿ ಮುಖ್ಯವಾಗಿ ಆಗುತ್ತದೆ. ಕುಟುಂಬದಲ್ಲಿ ಯಾರಿಗಾದರೂ ಬಂಗು ಇದ್ದರೆ ಅದು ಆಗುವ ಸಾಧ್ಯತೆ ಹೆಚ್ಚು. ಬಂಗು ಒಮ್ಮೆ ಬಂದರೆ, ಅದನ್ನು ಚಿಕಿತ್ಸೆ ಮಾಡಿ ನಿವಾರಿಸಿದರೂ ಬಿಸಿಲಿನ ಕಿರಣಗಳು ಬಿದ್ದಾಗ ಬಣ್ಣದ ಕೋಶಗಳು ಪುನಃ ಪ್ರಚೋದನೆಗೊಂಡು ಬಂಗು ಮರುಕಳಿಸಬಹುದು. ಕೆಲವರು ಈ ಬಂಗು ಕಷ್ಟ ಕಾಲಕ್ಕೆ ಬಂದಿತು, ಅದು ಕಷ್ಟಗಳ ಮುನ್ಸೂಚನೆ ಎಂದು ಹೆದರುತ್ತಾರೆ. ಆದರೆ ಹಾಗೆ ಹೆದರುವ ಅಗತ್ಯವಿಲ್ಲ. ಇದರಿಂದ ಬೇರಾವುದೇ ಆರೋಗ್ಯ ಸಮಸ್ಯೆಯೂ ಉಂಟಾಗುವುದಿಲ್ಲ. ಬಂಗು ಆಗುವುದರಿಂದ ಮುಖದ ಸೌಂದರ್ಯ ಕುಂದಿ, ಈ ಕಾರಣದಿಂದ ವ್ಯಕ್ತಿಯಲ್ಲಿ ಸ್ವಲ್ಪ ಖಿನ್ನತೆ ಆವರಿಸಿಕೊಳ್ಳಬಹುದು. ಆದರೆ ಯಾವುದೇ ಸಮಸ್ಯೆ ಬರುವಂತೆ ಇದೂ ಬಂದಿದೆಯೆಂದು ಅರಿತು ಖಿನ್ನರಾಗದೇ ಚಿಕಿತ್ಸೆಗೆ ಮುಂದಾಗಬೇಕು.

> ಬಂಗು ಬಂದರೆ ಕಷ್ಟಕಾಲ ಬಂತು. ಕಷ್ಟಗಳ ಮುನ್ಸೂಚನೆ ಎಂದು ಹೆದರುವವರಿದ್ದಾರೆ. ಆದರೆ ಹಾಗೆಲ್ಲ ಹೆದರುವ ಅಗತ್ಯವಿಲ್ಲ. ಬೇರಾವುದೇ ಆರೋಗ್ಯ ಸಮಸ್ಯೆಯನ್ನು ಉಂಟುಮಾಡದ ಬಂಗನ್ನು ಚಿಕಿತ್ಸೆಗಳ ಮೂಲಕ ನಿವಾರಿಸಬಹುದು

ಚಿಕಿತ್ಸೆ

ಬಂಗಿನ ನಿವಾರಣೆಗೆ ಈಗ ಅನೇಕ ಯಶಸ್ವಿ ಚಿಕಿತ್ಸೆಗಳಿವೆ. ಕೋಜಿಕ್ ಆಮ್ಲ, ಹೈಡ್ರೋಕ್ವಿನೋನ್, ಆರ್ಬುಟಿನ್ ಗ್ಲೈಕೋಲಿಕ್ ಆಮ್ಲ, ಮೊದಲಾದ ಔಷಧಗಳು ಮುಲಾಮುಗಳ ರೂಪದಲ್ಲಿ ದೊರೆಯುತ್ತವೆ. ಇವು ಮೆಲನಿನ್ ಉತ್ಪತ್ತಿಯನ್ನು ನಿರೋಧಿಸುತ್ತವೆ. ಗ್ಲೈಕೋಲಿಕ್ ಆಮ್ಲ ಮೆಲನಿನ್ ನಿರೋಧಿಸುವುದರೊಂದಿಗೆ ಚರ್ಮದ ಮೇಲ್ಪದರವನ್ನು ನಿಧಾನವಾಗಿ ಕೀಳುವುದರ ಮೂಲಕ ಬಣ್ಣ ಹೆಚ್ಚಾಗಿರುವ ಕೋಶಗಳನ್ನು ಕಳೆದು ಹೊಸ ಚರ್ಮಕೋಶಗಳು ಬೆಳೆಯುವಂತೆಯೂ ಮಾಡುತ್ತದೆ. ರೆಟಿನಾಯ್ಡ್ ಕೂಡ ಹೀಗೆಯೇ ಕೆಲಸ ಮಾಡುತ್ತದೆ. ಇವುಗಳನ್ನು ಏಕವಾಗಿ ಅಥವಾ ಒಟ್ಟಾಗಿರುವ ಮುಲಾಮುಗಳಾಗಿ ಚಿಕಿತ್ಸೆಗೆ ನೀಡಲಾಗುತ್ತದೆ. ಕ್ಲಿಗ್ಮಾನ್ ಫಾರ್ಮುಲಾ ಎಂಬ ಚಿಕಿತ್ಸೆಯಲ್ಲಿ ಹೈಡ್ರೋಕ್ವಿನೋನ್, ರೆಟಿನಾಯ್ಡ್ ಹಾಗೂ ಸ್ಟೀರಾಯ್ಡ್‌ಗಳನ್ನು ಒಟ್ಟಾಗಿ ಬೆರೆಸಿರುವ ಮುಲಾಮನ್ನು ಬಳಸಲಾಗುತ್ತದೆ. ಇವುಗಳನ್ನು ರೋಗಿಗಳು ತಾವಾಗಿಯೇ ಉಪಯೋಗಿಸದೇ ಚರ್ಮವೈದ್ಯರ ನಿರ್ದೇಶನದಲ್ಲಿ ಉಪಯೋಗಿಸಬೇಕು.

ಈ ಮುಲಾಮುಗಳಲ್ಲಿ ಕೆಲವು ಉರಿಯನ್ನು ತರಬಹುದು. ಹಾಗೇನಾದರೂ ಆದರೆ ಕೂಡಲೇ ವೈದ್ಯರಿಗೆ ತಿಳಿಸಬೇಕು. ಸ್ಟಿರಾಯ್ಡ್ ಇರುವ ಮುಲಾಮನ್ನು ಅನಿರ್ದಿಷ್ಟಾವಧಿಯವರೆಗೆ ಬಳಸಿದರೆ ಹಲವಾರು ದುಷ್ಪರಿಣಾಮಗಳು ಆಗುತ್ತವೆ. ಮುಲಾಮುಗಳಲ್ಲಿ ಏನಿರುತ್ತದೆ ಎಂದು ರೋಗಿಗಳಿಗೆ ತಿಳಿಯದಿರುವುದರಿಂದ ಅವನ್ನು ವೈದ್ಯರ ನಿರ್ದೇಶನದಲ್ಲೇ ಬಳಸಬೇಕು.

ಮುಲಾಮುಗಳು ಯಶಸ್ವಿಯಾಗದಿದ್ದರೆ 'ಕೆಮಿಕಲ್ ಪೀಲ್' ಚಿಕಿತ್ಸೆಯನ್ನು ಮಾಡಬಹುದು. ಇದರಲ್ಲಿ 'ಗ್ಲೈಕೋಲಿಕ್' ಆಮ್ಲವನ್ನು ಹೆಚ್ಚಿನ ಅಂಶದಲ್ಲಿ ಬಂಗಿನ ಚರ್ಮದ ಮೇಲೆ ಸವರಿ ಸ್ವಲ್ಪ ಸಮಯದ ನಂತರ ನೀರಿನಿಂದ ತೊಳೆಯಲಾಗುತ್ತದೆ. ಗ್ಲೈಕೋಲಿಕ್ ಆಮ್ಲದಂತೆಯೇ 'ಸ್ಯಾಲಿಸಿಲಿಕ್' ಆಮ್ಲ ಮೊದಲಾದ ಇತರ ರಾಸಾಯನಿಕಗಳನ್ನೂ ಕೆಮಿಕಲ್ ಪೀಲ್ ಮಾಡಲು ಬಳಸಲಾಗುತ್ತವೆ. ಇವಲ್ಲದೇ, ಮಾತ್ರೆಯ ರೂಪದಲ್ಲಿ ಸೇವಿಸಬಹುದಾದ ಗ್ಲುಟಥೈಯೋನ್, ಹಾಗೂ ಟ್ರಾನೆಕ್ಸಮಿಕ್ ಆಮ್ಲ ಬಂಗಿನ ನಿವಾರಣೆಗೆ ಒಳ್ಳೆಯ ಔಷಧಗಳಾಗಿವೆ. ಇವೂ ಮೆಲನಿನ್ ಉತ್ಪತ್ತಿಯನ್ನು ನಿರೋಧಿಸುತ್ತವೆ. ಈಗ ಈ ಔಷಧಗಳನ್ನುಳ್ಳ ಸಾಬೂನುಗಳು ಹಾಗೂ ಫೇಸ್ ವಾಶ್ ಕೂಡ ಲಭ್ಯವಿವೆ. ಇವು ಸಮಾಧಾನಕರ ಪರಿಣಾಮಗಳನ್ನುಂಟುಮಾಡುತ್ತವೆ. ಬಂಗಿಗೆ ಲೇಸರ್ ಚಿಕಿತ್ಸೆ ಕೂಡ ಲಭ್ಯವಿದೆ. ಚಿಕಿತ್ಸೆಯಿಂದ ಬಂಗು ನಿವಾರಣೆಯಾದರೂ ಅದು ಬಿಸಿಲಿನ ಅತಿನೇರಳೆ ಕಿರಣಗಳಿಂದ ಪುನಃ ಉಂಟಾಗಬಹುದಾದ್ದರಿಂದ, ಬಿಸಿಲಿನ ಅತಿನೇರಳೆ ಕಿರಣಗಳನ್ನು ತಡೆಗಟ್ಟುವ ಸನ್ ಸ್ಕ್ರೀನ್ ಮುಲಾಮು ಅಥವಾ ದ್ರಾವಣಗಳನ್ನು ಹಗಲಿನಲ್ಲಿ ನಿರಂತರವಾಗಿ ಬಳಸಬೇಕಾಗುತ್ತದೆ.

❖

ಜೀವ-ಜೀವನ ಎರಡೂ ಮುಖ್ಯ

• ರಮ್ಯಾ ಶ್ರೀಹರಿ

ಬದುಕು ತಾಳ್ಮೆಯನ್ನು ಬೇಡುತ್ತದೆ. ಇಂದು ನಡೆದ ಘಟನೆಗಳು, ಅನುಭವಿಸಿದ ಭಾವಗಳು, ತೊಳಲಾಡಿಸಿದ ಆಲೋಚನೆಗಳು, ಕಾಡುವ ಪ್ರಶ್ನೆಗಳು, ಸಂದಿಗ್ಧತೆಗಳು - ಎಲ್ಲವೂ 'ಇಂದೇ, ಈ ಕ್ಷಣವೇ ಅರ್ಥವಾಗಿಬಿಡಬೇಕು, ಬಗೆಹರಿದುಹೋಗಬೇಕು, ಮುಂದೇನು ಮಾಡುವುದೆಂದು ಸ್ಪಷ್ಟವಾಗಿ ಕಾಣಿಸಿಬಿಡಬೇಕು' ಎನ್ನುವ ನಮ್ಮ ಆತುರವನ್ನು ಬದುಕು ಪುರಸ್ಕರಿಸುವುದಿಲ್ಲ.

ಈ ಜೀವನಕ್ಕೆ ಅದರದೇ ಆದ ನಡೆಯಿದೆ; ಆ ನಡೆಗೆ ಅನನ್ಯ ಲಾಲಿತ್ಯವಿದೆ. ನಾವು ಊಹಿಸದ ರೀತಿಯಲ್ಲಿ ಬದುಕು ಬಿಕ್ಕಟ್ಟುಗಳನ್ನು ತಂದಿಡುತ್ತದೆ; ಒಗಟಿನಂತಹ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಹಾದಿಯಲ್ಲಿ ಬೆಲೆಕಟ್ಟಲಾಗದ ಜೀವನದ ತತ್ವಗಳನ್ನು ತಿಳಿಸಿಕೊಟ್ಟು, ನಮ್ಮ ಹೃದಯವನ್ನು ಪರಿಷ್ಕರಿಸಿ, ಹೊಸ ಒಳನೋಟಗಳನ್ನಿತ್ತು ಅಷ್ಟೇ ಅನೂಹ್ಯ ರೀತಿಯಲ್ಲಿ ಸಮಸ್ಯೆಗಳಿಂದ ಬಿಡುಗಡೆಯನ್ನೂ ಒದಗಿಸುತ್ತದೆ.

ಬದುಕು ಎಂದರೆ ಈಗ ಒದಗುತ್ತಿರುವ 'ಅನುಭವ'ವಷ್ಟೇ ಅಲ್ಲ; ಆ ಅನುಭವವನ್ನು ಅರ್ಥೈಸಿಕೊಳ್ಳುವ ಪ್ರಕ್ರಿಯೆಯೂ ಹೌದು. ಅನುಭವವನ್ನು ಅರ್ಥೈಸಿಕೊಳ್ಳುವುದು ಎಂದರೆ ಹಿಂದೆ ಆಗಿಹೋದದ್ದರ ನೆನಪುಗಳನ್ನು, ಮುಂದೆ ಹೀಗಾಗಬೇಕು ಎನ್ನುವ ಬಯಕೆಗಳನ್ನು, ಇಂದು ಮನದಲ್ಲಿ ಏಳುತ್ತಿರುವ ಭಾವನೆಗಳ, ದೇಹದಲ್ಲಾಗುತ್ತಿರುವ ಸಂವೇದನೆಗಳ ಪ್ರವಾಹವನ್ನೂ, ಲೋಕದ ವಸ್ತುಸ್ಥಿತಿಯನ್ನೂ ಎಲ್ಲವನ್ನೂ ಒಟ್ಟು ಸೇರಿಸಿ ಮನನ ಮಾಡಿ ಸಂಸ್ಕರಿಸಿ ಪಾಕಗೊಳಿಸುವ ಕಾಯಕ. ನಾವು ಸುಮ್ಮನೇ 'ಇದ್ದುಬಿಡ'ಲಾರೆವು ಪಶು, ಪಕ್ಷಿ, ಕೀಟಗಳಂತೆ, ಮರ, ಗಿಡ, ನದಿಗಳಂತೆ; ಆ ಇರುವಿಕೆಯನ್ನು ಕ್ಷಣಕ್ಷಣವೂ ಮನಸ್ಸಿನ, ಬುದ್ಧಿಯ, ಹೃದಯದ, ಆತ್ಮದ ಅನೇಕ ಚೌಕಟ್ಟುಗಳಿಗೆ ಒಳಪಡಿಸಿ ಅರ್ಥವನ್ನು, ಮೌಲ್ಯವನ್ನು, ಸೌಂದರ್ಯವನ್ನು ಮಥಿಸಿ ತೆಗೆದಾಗಲೇ ನಮ್ಮ ಇರುವಿಕೆಗೊಂದು ಘನತೆ.

ಸಾವು-ಬದುಕು ಕೇವಲ ಭೌತಿಕವಷ್ಟೇ ಅಲ್ಲ, ಭಾವನಾತ್ಮಕವಾದದ್ದು. ಒಬ್ಬ ಸಂವೇದನಾಶೀಲ ಮನುಷ್ಯ ಹುಟ್ಟು-ಸಾವುಗಳನ್ನು ಭೌತಿಕ ಅಸ್ತಿತ್ವದ ಆದಿ ಅಂತ್ಯಗಳೆಂದು ಮಾತ್ರ ಭಾವಿಸುವುದಿಲ್ಲ, ಹಾಗೆ ಒಂದೇ ಹುಟ್ಟು ಒಂದೇ ಸಾವು ಎನ್ನುವುದೂ ಅವನ ನಿಲುವಲ್ಲ, ಪ್ರತಿಕ್ಷಣವೂ ಹೊಸಹುಟ್ಟು ಪಡೆಯುವ, ಪ್ರತಿಕ್ಷಣವೂ ರೂಪಾಂತರ ಹೊಂದುವ ಅನೇಕ ಸಾಧ್ಯತೆಗಳಿಗೆ ಅವನು ಸದಾ ತೆರೆದುಕೊಂಡಿರುತ್ತಾನೆ. ಮನುಷ್ಯನು ಕಾಲದ ಜೊತೆಗೆ ಪರಿಪಕ್ವಗೊಳ್ಳುವುದರಲ್ಲಿ, ಕಾಲದ ಚಿಕಿತ್ಸಕ ಗುಣದಲ್ಲಿ ನಂಬಿಕೆಯಿಟ್ಟಿರುವವನು; ಕಾಲ ಸಾಧ್ಯವನ್ನು ಅಸಾಧ್ಯವಾಗಿಸಿ, ಅಸಾಧ್ಯವನ್ನು ಸಾಧ್ಯವಾಗಿಸುವ ಮಹಾಮಾಂತ್ರಿಕ ಎಂಬ ಅರಿವಿರುವವನು. ಕಾರಣಾಂತರಗಳಿಂದ ಇಂದು ನಮಗೆ ಬದುಕು ಅರ್ಥಹೀನ, ಬಲು ಕಠಿಣ, ನಿರ್ದಯಿ ಎಂದೆಲ್ಲಾ ಅನಿಸುತ್ತಿರಬಹುದು, ಹಾಗೆ ಎಲ್ಲರಿಗೂ ಒಂದಲ್ಲ ಒಂದು ಕ್ಷಣದಲ್ಲಿ ಅನಿಸುವುದು ಸಹಜ; ಆದರೆ ಅದು ಶಾಶ್ವತ ಸ್ಥಿತಿಯಲ್ಲ. ಇಂದು ದೊಡ್ಡ ಪರ್ವತದಂತೆ ನಮ್ಮ ಮುಂದಿರುವ ಸವಾಲುಗಳು ಇನ್ನು ಕೆಲವೇ ದಿನಗಳಲ್ಲಿ ಬಲು ಕ್ಷುಲ್ಲಕ ಎನಿಸಲೂಬಹುದು.

ನಮ್ಮ ಬದುಕು ನಿಜಕ್ಕೂ ಪರಿವರ್ತನೆಯಾಗುವುದು ನಾವು ಎಣಿಸಿದ್ದೆಲ್ಲಾ ನಡೆದಾಗಲಲ್ಲ, ನಾವು ಆಸೆಪಟ್ಟಿದ್ದನ್ನೆಲ್ಲಾ ಹೊಂದಿದಾಗ, ಸಾಧಿಸಿದಾಗಲೂ ಅಲ್ಲ; ಅಥವಾ ಆಳವಾದ ಧ್ಯಾನದ ಗಳಿಗೆಗಳಲ್ಲೋ, ಆಧ್ಯಾತ್ಮಿಕ ಪ್ರವಚನ, ಪ್ರವಾಸದಲ್ಲಿದ್ದಾಗಲೂ ಅಲ್ಲ. ತೀವ್ರ ಸಂಘರ್ಷದ ಸಮ್ಮುಖದಲ್ಲಿ, ನಮ್ಮ ನಂಬಿಕೆಗಳು ಮಾನಸಿಕ ಆಸರೆಗಳೆಲ್ಲಾ ಮಣ್ಣುಪಾಲಾಗಿ, ದಿಕ್ಕೇತೋಚದಂತಹ, ಇನ್ನು ಬದುಕೇ ಮುಗಿದು ಹೋಯಿತೆನ್ನುವ ಭ್ರಮನಿರಸನದ ಸಂಕಟದ ಸಮಯದಲ್ಲೂ ಆ ಕ್ಷಣದ ಅಸಹಾಯಕತೆಗೆ ಶರಣಾಗದೆ, ಬದುಕಿನಿಂದ ಓಡಿಹೋಗದೇ, ನಮ್ಮ ಬುದ್ಧಿ-ವಿವೇಕಗಳು ಉದ್ವಿಗ್ನತೆಯ ವಶವಾಗದಂತೆ ಪ್ರೀತಿ ಮತ್ತು ಸಮತ್ವದ ಕೈಗೊಪ್ಪಿಸಿ, ಜೀವನದ ಬಗೆಗೆ ಆಶ್ಚರ್ಯ, ಕುತೂಹಲಗಳನ್ನುಳಿಸಿಕೊಂಡು ಬದುಕಿನ ಎಲ್ಲವನ್ನೂ ಸ್ವೀಕರಿಸುವ ದಿಟ್ಟ ನಿರ್ಧಾರ ಕೈಗೊಂಡಾಗ ಮಾತ್ರ ಬದುಕು ನಿಜಕ್ಕೂ ಪರಿವರ್ತನೆಯಾಗುತ್ತದೆ.

ಬದುಕು ಬದಲಾಗಲಿ, ನಂತರ ಬದುಕಿನ ಬಗೆಗಿನ ಭಾವವನ್ನು ಬದಲಾಯಿಸಿಕೊಳ್ಳುವೆ – ಎನ್ನುವ ನಮ್ಮ ಹಟವನ್ನು ಸ್ವಲ್ಪ ಬದಿಗಿರಿಸಿ, ಬದುಕಿನ ಬಗೆಗಿನ ಭಾವವನ್ನು ಬದಲಾಯಿಸಿಕೊಂಡು ನೋಡಿದಾಗ ಬದುಕು ಬದಲಾಗುವುದು ಖಂಡಿತ. ಬದುಕೆಂದರೆ ಕೇವಲ ಹೊರಪ್ರಪಂಚದ ಆಗುಹೋಗುಗಳಲ್ಲ, ಆ ಆಗುಹೋಗುಗಳನ್ನು ನಾವು ಸ್ವೀಕರಿಸುವ ರೀತಿ. ನಮ್ಮ ಒಳಪ್ರಪಂಚದ ಸ್ಥಿತಿಗತಿಯೇ ನಮ್ಮ ಹೊರಪ್ರಪಂಚದ ಆಗುಹೋಗುಗಳನ್ನು ಅರ್ಥೈಸಿಕೊಳ್ಳುವ ಸಾಧನೆ ಸಲಕರಣೆಗಳನ್ನು ನೀಡುವುದು ಎಂದಾದರೆ ನಮ್ಮ ಒಳಪ್ರಪಂಚದ ಸೌಖ್ಯ-ಸಮಾಧಾನಗಳೇ ನಮ್ಮ ಹೊರಪ್ರಪಂಚದ ತಾಪವನ್ನು, ನಷ್ಟಗಳನ್ನು ಭರಿಸುವ ಶಕ್ತಿ ನೀಡುವುದಲ್ಲವೇ?

ಮುಚ್ಚಿದ ಬಾಗಿಲುಗಳನ್ನು ಬಡಿಯುತ್ತಾ, ಯಾರೋ ಅದನ್ನು ತೆರೆಯುತ್ತಿಲ್ಲವೆಂದು ಕೊರಗುತ್ತಾ ಇರುವ ಬದಲು ಕಿಟಕಿಗಳಿಂದ ಕಾಣುವ ನೋಟವನ್ನು ಆಸ್ವಾದಿಸಬಹುದು. ಮುಚ್ಚಿದ ಬಾಗಿಲು ತೆರೆಯುವುದೊಂದೇ ಬಿಡುಗಡೆಯ ದಾರಿಯಲ್ಲ; ನೆಲವನ್ನು ಬಗೆದು ತೆಗೆಯುವ ಸುರಂಗಮಾರ್ಗವೂ, ನಮ್ಮನ್ನು ಸೀಮಿತಗೊಳಿಸುವ ಗೋಡೆ-ಸೂರುಗಳನ್ನು ಒಡೆದು ಜಿಗಿದು ಹೊರ ಬರುವ ಮಾರ್ಗಗಳೂ ಬಿಡುಗಡೆಯ ಹಾದಿಗಳೇ ಹೌದು ಎನ್ನುವುದನ್ನು ಅರಿತಾಗ ಬದುಕು ಒಡ್ಡುವ ಅಸಂಖ್ಯ ಅವಕಾಶಗಳು ಬದುಕಿನ ಬಗೆಗೆ ಭರವಸೆ ಮೂಡಿಸುತ್ತವೆ. ಬದುಕು ನಮ್ಮನ್ನು ನಾವೇ ಬಂಧಿಸಿಕೊಂಡಿರುವ ಗೋಡೆಗಳನ್ನು, ಬೇಲಿಗಳನ್ನು ಒಡೆದು ಕೆಡವಲು ಸದಾ ಪ್ರೇರೇಪಿಸುತ್ತಿರುತ್ತದೆ. ನಮ್ಮ ಸುತ್ತಾ ನಾವೇ ಕಟ್ಟಿಕೊಂಡಿರುವ ಸೆರೆಮನೆಯಿಂದ, ನಮ್ಮ ಕಣ್ಣನ್ನು ಮುಚ್ಚಿರುವ ಕಟ್ಟಿನಿಂದ ಮುಕ್ತರಾಗಬೇಕಷ್ಟೇ. ಅದರ ನಂತರ ಬದುಕೆಷ್ಟು ಅನಾದಿ, ಅನಂತ ಎನ್ನುವುದರ ದರ್ಶನವಾಗುತ್ತದೆ.

ಕಡೆಗೂ ಈ ಜೀವನ ನಮ್ಮನ್ನು ನಮ್ಮ ಬಳಿಯೇ ಕರೆದುಕೊಂಡು ಹೋಗುತ್ತದೆ. ಜೀವನದ ಎಲ್ಲಾ ಮಾರ್ಗಗಳೂ ಅಂತರಂಗದ ಕಡೆಗೇ ಹೌದು. ಒಳಲೋಕವೊಂದು ಸಿಂಗಾರಗೊಂಡಿದ್ದರೆ, ಸಮೃದ್ಧವಾಗಿದ್ದರೆ ಸರಿ; ಹೊರಗಿನ ಆಡಂಬರ ಇದ್ದರೂ ಇಲ್ಲದಿದ್ದರೂ ನಡೆದೀತು. ಅಂತರ್ಯದ ಶಾಂತಿ, ಸಮಾಧಾನ ಬಾಹ್ಯದಲ್ಲಿ ಪ್ರತಿಫಲನಗೊಳ್ಳದೇ ಇರದು. ನಾವು ಆಸೆಪಡುವ ಎಲ್ಲವೂ ನಮ್ಮೊಳಗೇ ಇದೆ. ಅದು ಹಾಗೆ ನಮ್ಮೊಳಗೇ ಇರುವುದರಿಂದಲೇ ಅದರ ಮೇಲೆ ಅದಮ್ಯ ಮೋಹ ಉಂಟಾಗಿರುತ್ತದೆ. ನಾವು ಯಾವುದೋ ಸ್ಥಿತಿಯನ್ನು, ಸಾಧನೆಯನ್ನು, ಪ್ರೀತಿಯನ್ನು ಹುಡುಕಿ ಹೊರಡುತ್ತೇವೆ, ಅಲೆದು ಬಳಲುತ್ತೇವೆ, ಅದು ನಮ್ಮ ಭಾಗ್ಯದಲ್ಲಿಲ್ಲವಲ್ಲ ಎಂದು ನರಳುತ್ತೇವೆ. ನಾವು ಹುಡುಕುತ್ತಿರುವುದು ಸಿಕ್ಕಿಬಿಡಬಾರದೇ, ಆ ಪ್ರೀತಿ ಕೈಗೂಡಿಬಿಡಬಾರದೇ ಎಂದು ಹೃದಯ ಬಿರಿಯುವಂತೆ ಅತ್ತು ಪ್ರಾರ್ಥಿಸುತ್ತೇವೆ. ಆದರೆ ನಾವು ಯಾವುದಕ್ಕೆ ಆರ್ತರಾಗಿ ಮೊರೆಯಿಟ್ಟು ಕನಲುತ್ತಿರುವೆವೋ ಅದು ಮಾತ್ರ ಮೌನವಾಗಿ, ಬೆಚ್ಚಗೆ, ನಮ್ಮದೇ ನಿರೀಕ್ಷೆಯಲ್ಲಿ ನಮ್ಮೊಳಗೇ ಕುಳಿತು ಕಾಯುತ್ತಿರುತ್ತದೆ.

ನಾವು ಹುಡುಕಿ ಹೊರಟದ್ದು ಹೊರಗೆಲ್ಲೂ ನಮಗೆಂದಿಗೂ ಸಿಗದಿರುವ ಹಿಂದಿನ ಉದ್ದೇಶ ಇದೇ ಇರಬಹುದು: 'ನಮ್ಮನ್ನು ಮತ್ತೆ ನಮಗೇ ಮರಳಿಸಿ ಕೊಡುವುದು'. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಗಣಿತ

ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿಗಳು

ಅಭ್ಯಾಸ 3.3

(V) ಒಂದು ಎರವಲು ಗ್ರಂಥಾಲಯದಲ್ಲಿ ಮೊದಲ ಮೂರು ದಿನಕ್ಕೆ ಒಂದು ನಿಗದಿತ ಶುಲ್ಕವಿರುತ್ತದೆ. ಆ ಬಳಿಕದ ಪ್ರತಿಯೊಂದು ದಿನಕ್ಕೂ ಒಂದು ಹೆಚ್ಚುವರಿ ಶುಲ್ಕವಿರುತ್ತದೆ. ಪುಸ್ತಕವನ್ನು ಏಳು ದಿನ ತನ್ನಲ್ಲಿ ಇರಿಸಿಕೊಂಡದ್ದಕ್ಕಾಗಿ ಸರಿತಾ ₹ 27 ನ್ನು ಪಾವತಿಸಿದರೆ, ಪುಸ್ತಕವನ್ನು 5 ದಿನ ಇರಿಸಿಕೊಂಡದ್ದಕ್ಕಾಗಿ ಸೂಸಿ ₹ 21 ನ್ನು ಪಾವತಿಸಿದಳು. ನಿಗದಿತ ಶುಲ್ಕ ಮತ್ತು ಪ್ರತಿಯೊಂದು ಹೆಚ್ಚುವರಿ ದಿನದ ಶುಲ್ಕವನ್ನು ಕಂಡುಹಿಡಿಯಿರಿ

ಪರಿಹಾರ:– (..........ಹಿಂದಿನ ಸಂಚಿಕೆಯಿಂದ)

ಸಮೀಕರಣ(1)ರಲ್ಲಿ ' y ಬೆಲೆಯನ್ನು ಆದೇಶಿಸಿದಾಗ

$x + 4y = 27$

$x + 4(3) = 27$

$x = 27 - 12 = 15$

ಆದ್ದರಿಂದ ಮೊದಲ ಮೂರು ದಿನಕ್ಕೆ ನಿಗದಿತ ಶುಲ್ಕವು ರೂ . 15/– ಮತ್ತು ಪ್ರತಿಯೊಂದು ದಿನಕ್ಕೂ ಹೆಚ್ಚುವರಿ ಶುಲ್ಕವು ರೂ 3/– ಆಗಿದೆ

****

ಅಧ್ಯಾಯ–4
ವರ್ಗ ಸಮೀಕರಣ

ಪೀಠಿಕೆ:– ಬ್ಯಾಬಿಲೋನಿಯನ್ನರು ಮೊಟ್ಟಮೊದಲು ವರ್ಗ ಸಮೀಕರಣಗಳಿಗೆ ಪರಿಹಾರ ಕಂಡುಹಿಡಿದರೆಂದು ನಂಬಲಾಗಿದೆ. ಉದಾಹರಣೆಗೆ, ಎರಡು ಧನ ಸಂಖ್ಯೆಗಳ ಮೊತ್ತ ಮತ್ತು ಗುಣಲಬ್ಧಗಳನ್ನು ನೀಡಿದಾಗ ಆ ಎರಡು ಸಂಖ್ಯೆಗಳನ್ನು ಹೇಗೆ ಕಂಡುಹಿಡಿಯುವುದೆಂಬುದನ್ನು ಅವರು ತಿಳಿದಿದ್ದರು ಮತ್ತು ಈ ಸಮಸ್ಯೆಯು $x^2-px+q=0$ ರೂಪದ ವರ್ಗ ಸಮೀಕರಣವನ್ನು ಬಿಡಿಸುವುದಕ್ಕೆ ಸಮಾನವಾಗಿದೆ.

ಗ್ರೀಕ್ ಗಣಿತಜ್ಞರಾದ ಯೂಕ್ಲಿಡ್‌ರವರು ಉದ್ದಗಳನ್ನು ಕಂಡುಹಿಡಿಯಲು ಒಂದು ರೇಖಾಗಣಿತೀಯ ವಿಧಾನವನ್ನು ಅಭಿವೃದ್ಧಿಪಡಿಸಿದ್ದರು. ಇದು ನಮ್ಮ ಈಗಿನ ಪರಿಭಾಷೆಯಲ್ಲಿ ವರ್ಗ ಸಮೀಕರಣಗಳ ಪರಿಹಾರ ಎಂಬ ಅರ್ಥವನ್ನು ನೀಡುತ್ತದೆ. ಸಾಮಾನ್ಯ ರೂಪದಲ್ಲಿ ವರ್ಗ ಸಮೀಕರಣಗಳನ್ನು ಬಿಡಿಸುವುದರ ಕೀರ್ತಿಯು ಪ್ರಾಚೀನ ಭಾರತದ ಗಣಿತಜ್ಞರಿಗೆ ಸಲ್ಲುತ್ತದೆ. ವಾಸ್ತವವಾಗಿ ಬ್ರಹ್ಮಗುಪ್ತರು (ಕ್ರಿ.ಶ. 598–665) $ax^2+bx+c=0$ ರೂಪದ ವರ್ಗ ಸಮೀಕರಣವನ್ನು ಬಿಡಿಸಲು ಸ್ಪಷ್ಟವಾದ ಸೂತ್ರವನ್ನು ನೀಡಿದರು. ನಂತರ ಶ್ರೀಧರಾಚಾರ್ಯರು (ಕ್ರಿ.ಶ. 1025) ವರ್ಗ ಸಮೀಕರಣವನ್ನು ಬಿಡಿಸಲು ವರ್ಗ ಪೂರ್ಣಗೊಳಿಸುವ ವಿಧಾನದಿಂದ 'ವರ್ಗ ಸಮೀಕರಣದ ಸೂತ್ರ' (ಭಾಸ್ಕರ II ಇವರು ಉಲ್ಲೇಖಿಸಿದಂತೆ) ಎಂದು ಕರೆಯಲ್ಪಡುವ ಒಂದು ಸೂತ್ರವನ್ನು ವ್ಯುತ್ಪತ್ತಿಸಿದರು. ಅರಬ್ ಗಣಿತಜ್ಞರಾದ ಅಲ್–ಖ್ವಾರಿಜ್ಮಿಯವರು (Al-Khwarizmi, ಸುಮಾರು ಕ್ರಿ.ಶ. 800) ಸಹ ವಿವಿಧ ರೀತಿಯ ವರ್ಗ ಸಮೀಕರಣಗಳ ಬಗ್ಗೆ ಅಧ್ಯಯನ ಮಾಡಿದ್ದರು. ಅಬ್ರಹಾಂ ಬಾರ್ ಹಿಯ್ಯ ಹ–ನಸಿಯವರು *(Abraham bar Hiyya Ha-Nasi)* ಕ್ರಿ.ಶ. 1145ರಲ್ಲಿ ಯೂರೋಪಿನಲ್ಲಿ ಪ್ರಕಟವಾದ ತನ್ನ ಪುಸ್ತಕ 'ಲಿಬರ್ ಎಂಬಾಡೋರಮ್'(*Liber embadorum*)ದಲ್ಲಿ ವಿವಿಧ ವರ್ಗ ಸಮೀಕರಣಗಳ ಸಂಪೂರ್ಣ ಪರಿಹಾರಗಳನ್ನು ನೀಡಿದ್ದಾರೆ. ಈ ಅಧ್ಯಾಯದಲ್ಲಿ ನೀವು ವರ್ಗ ಸಮೀಕರಣಗಳು ಮತ್ತು ಅವುಗಳ ಮೂಲಗಳನ್ನು ಕಂಡುಹಿಡಿಯುವ ವಿವಿಧ ವಿಧಾನಗಳನ್ನು ಅಭ್ಯಾಸ ಮಾಡುವಿರಿ. ನಿತ್ಯ ಜೀವನದ ಸನ್ನಿವೇಶಗಳಲ್ಲಿ ವರ್ಗ ಸಮೀಕರಣಗಳ ಕೆಲವು ಅನ್ವಯಗಳನ್ನೂ ಸಹ ಇಲ್ಲಿ ಕಾಣಬಹುದು

ಸಮಸ್ಯೆ ಮತ್ತು ಪರಿಹಾರ

(1) ಜಾನ್ ಮತ್ತು ಜೀವಂತಿ ಇವರಿಬ್ಬರ ಬಳಿ ಇರುವ ಒಟ್ಟು ಗೋಲಿಗಳ ಸಂಖ್ಯೆ 45 ಆಗಿದೆ. ಇವರಿಬ್ಬರೂ ತಲಾ 5 ಗೋಲಿಗಳನ್ನು ಕಳೆದುಕೊಂಡರೆ ಇವರ ಬಳಿ ಇರುವ ಗೋಲಿಗಳ ಸಂಖ್ಯೆಗಳ ಗುಣಲಬ್ಧ 124 ಆಗುತ್ತದೆ. ಹಾಗಾದರೆ ಆರಂಭದಲ್ಲಿ ಅವರ ಬಳಿ ಇದ್ದ ಗೋಲಿಗಳ ಸಂಖ್ಯೆ ಎಷ್ಟು ಕಂಡುಹಿಡಿಯಿರಿ

(2) ಒಂದು ಗುಡಿ ಕೈಗಾರಿಕೆಯು ಒಂದು ದಿನದಲ್ಲಿ ನಿರ್ದಿಷ್ಟ ಸಂಖ್ಯೆಯ ಆಟಿಕೆಗಳನ್ನು ತಯಾರಿಸುತ್ತದೆ. ಪ್ರತಿ ಆಟಿಕೆಯ ಉತ್ಪಾದನಾ ವೆಚ್ಚವು, (ರೂಪಾಯಿಗಳಲ್ಲಿ) 55ರಿಂದ, ಒಂದು ದಿನದಲ್ಲಿ ಉತ್ಪಾದಿಸಿದ ಆಟಿಕೆಗಳ ಸಂಖ್ಯೆಯನ್ನು ಕಳೆದಷ್ಟಕ್ಕೆ ಸಮನಾಗಿರುತ್ತದೆ. ಒಂದು ನಿರ್ದಿಷ್ಟ ದಿನದಲ್ಲಿ, ಆಟಿಕೆಗಳ ಒಟ್ಟು ಒತ್ಪಾದನಾ ವೆಚ್ಚವು ರೂ. 750 ಆಗಿದ್ದರೆ, ಆ ದಿನ ಉತ್ಪಾದಿಸಿದ ಆಟಿಕೆಗಳ ಸಂಖ್ಯೆಯನ್ನು ಕಂಡುಹಿಡಿಯಿರಿ

ಪರಿಹಾರ :

(1) ಜಾನ್‌ನ ಬಳಿ ಇದ್ದ ಗೋಲಿಗಳ ಸಂಖ್ಯೆಯು x ಆಗಿರಲಿ.

ಆಗ ಜೀವಂತಿಯ ಬಳಿ ಇದ್ದ ಗೋಲಿಗಳ ಸಂಖ್ಯೆ = $45 - x$

5 ಗೋಲಿಗಳನ್ನು ಕಳೆದುಕೊಂಡಾಗ, ಜಾನ್‌ನ ಬಳಿ ಉಳಿದ ಗೋಲಿಗಳ ಸಂಖ್ಯೆ = $x - 5$

5 ಗೋಲಿಗಳನ್ನು ಕಳೆದುಕೊಂಡಾಗ, ಜೀವಂತಿಯ ಬಳಿ ಉಳಿದ ಗೋಲಿಗಳ ಸಂಖ್ಯೆ = $45 - x - 5$

$= 40 - x$

∴ ಅವುಗಳ ಗುಣಲಬ್ಧ $=(x - 5)(40 - x)$

$= 40x - x^2 - 200 + 5x$

$= -x^2 + 45x - 200$

ಹೀಗೆ, $-x^2 + 45x - 200 = 124$

ಅಂದರೆ, $-x^2 + 45x - 324 = 0$

ಆದ್ದರಿಂದ, ಜಾನ್‌ನ ಬಳಿ ಇದ್ದ ಗೋಲಿಗಳ ಸಂಖ್ಯೆಯು ವರ್ಗ ಸಮೀಕರಣ $x^2 - 45x + 324 = 0$ಯನ್ನು ಸರಿದೂಗಿಸುತ್ತದೆ. ಇದು ಸಮಸ್ಯೆಯ ಅಪೇಕ್ಷಿತ ಗಣಿತೀಯ ರೂಪವಾಗಿದೆ.

(ii) ಆ ದಿನ ತಯಾರಿಸಿದ ಆಟಿಕೆಗಳ ಸಂಖ್ಯೆ x ಆಗಿರಲಿ

ಆದ್ದರಿಂದ, ಆ ದಿನದ ಪ್ರತಿ ಆಟಿಕೆಯ ಉತ್ಪಾದನಾ ವೆಚ್ಚ (ರೂಪಾಯಿಗಳಲ್ಲಿ) = $55 - x$

ಆದ್ದರಿಂದ, ಆ ದಿನದ ಒಟ್ಟು ಆಟಿಕೆಗಳ ಉತ್ಪಾದನಾ ವೆಚ್ಚ (ರೂಪಾಯಿಗಳಲ್ಲಿ)

$= x(55 - x)$

$\therefore x(55-x) = 750$

$55x - x^2 = 750$

$-x^2 + 55x - 750 = 0$

$x^2 - 55x + 750 = 0$

ಆದ್ದರಿಂದ, ಆ ದಿನ ತಯಾರಿಸಿದ ಆಟಿಕೆಗಳ ಸಂಖ್ಯೆಯು ವರ್ಗ ಸಮೀಕರಣ $x^2 - 55x - 750 = 0$ ಯನ್ನು ಸರಿದೂಗಿಸುತ್ತದೆ. ಇದು ಸಮಸ್ಯೆಯ ಅಪೇಕ್ಷಿತ ಗಣಿತೀಯ ರೂಪವಾಗಿರುತ್ತದೆ.

3) ಈ ಕೆಳಗಿನವುಗಳು ವರ್ಗ ಸಮೀಕರಣಗಳೇ ಎಂಬುದನ್ನು ಪರೀಕ್ಷಿಸಿ.

(i) $(x-2)^2 + 1 = 2x - 3$ (ii) $x(x+1) + 8 = (x+2)(x-2)$

(iii) $x(2x+3) = x^2 + 1$ (iv) $(x+2)^3 = x^3 - 4$

ಪರಿಹಾರ :

(i) ಎಡಭಾಗ $= (x - 2)^2 + 1$

$= x^2 - 4x + 4 + 1$

(ಮುಂದುವರಿಯುವುದು)

MATHS

DIFFERENTIABILITY

Logarithmic Function (General) *(...Contd)*

The function defined by $f(x) = \log_a x$, $x > 0, a > 0, a \neq 1$ is called the logarithmic function.

Definition: $\log_a x = y \Leftrightarrow a^y = x$

Let $f(x) = \log_a x, x > 0, a > 0, a \neq 1$;

$D_f = (0, \infty), R_f = R$

The graph of $f(x) = \log_a x$ for $a > 1$ and $a < 1$ are as in figure.

For a > 1,

$$f(x) = \log_a x \begin{cases} <0 \text{ for } 0 < x < 1 \\ = 0 \text{ for } x = 1 \\ > 0 \text{ for } x > 1 \end{cases}$$





Also y increases as x increases.

For 0 < a < 1,

$$f(x) = \log_a x \begin{cases} >0 \text{ for } 0 < x < 1 \\ = 0 \text{ for } x = 1 \\ < 0 \text{ for } x > 1 \end{cases}$$

Also y decreases as x increases.

Logarithmic Function (Natural)



The function f defined by $y = f(x) = \log_e x, x > 0$ is called *Logarithmic Function*.

log x is not defined for x zero or negative.

$\therefore D_f = (0, \infty)$

Also, $y = \log_e x \Leftrightarrow x = e^y$

$\therefore x \to 0$ when $y \to \infty$ and $x \to \infty$ when $y \to \infty$

$\therefore R_f = (-\infty, \infty)$

Also $x = 1 \Rightarrow y = \log 1 = 0 \Rightarrow (1, 0)$ lies on the graph.

Note:

1. General Logarithmic Function is defined by $y = f(x) = \log_a x$, where $a \neq 1$ and $a > 0$.

Here, $D_f = (0, \infty)$ and $R_f = (-\infty, \infty)$ and the point (1, 0) lies on the graph.

2. $\log_a x$ decreases if $0 < a < 1$ and increases if $a > 1$

3. $\log_a x$ is not defined if $x \leq 0$

4. $\log_a a = 1$

5. $\log_a 1 = 0$

6. $a^{\log_a x} = x$, where $a \neq 0$ and $a \neq \pm 1$

7. $\log_a a^x = x$

8. $e^{\log_e f(x)} = f(x)$

9. $\log_e e^{f(x)} = f(x)$

10. $x^{\log_a y} = y^{\log_a x}$; where $x > 0, y > 0, a > 0, a \neq 1$.

11. $\log_a x = \frac{1}{\log_x a}$; $a>0, a\neq 1, x>0, x \neq 1$.

12. The function $\log_a x$ and a^x are inverse of each other. So their graphs are *mirror images* of each other in the line mirror $y = x$.

13. The functions $\log_e x$ and e^x are inverse of each other and so their graphs are mirror images of each other in the line *mirror* $y = x$.



Use of Chain Rule

1. Prove that $\frac{d}{dx}|f(x)| = \frac{f(x)}{|f(x)|} \cdot f'(x)$

Soln :– Let $y = |f(x)| = \left[(f(x))^2\right]^{\frac{1}{2}}$

$$\therefore \frac{dy}{dx} = \frac{1}{2}\left[(f(x))^2\right]^{\frac{1}{2}-1} \frac{d}{dx}(f(x))^2$$

$$[\therefore |f(x)|^2 = (f(x))^2]$$

$$\Rightarrow \frac{1}{2\left[(f(x))^2\right]^{\frac{1}{2}}} \cdot 2f(x)f'(x) = \frac{f(x)}{|f(x)|} \cdot f'(x)$$

Hence $\frac{d}{dx}|f(x)| = \frac{f(x)}{|f(x)|} \cdot f'(x)$

Cor. $\frac{d}{dx}|(x)| = \frac{x}{|x|} \cdot \frac{d}{dx}(x) = \frac{x}{|x|} \cdot 1 = \frac{x}{|x|}, x \neq 0$

Cor. $\frac{d}{dx}\log_e|x| = \frac{1}{|x|} \cdot \frac{d}{dx}|x| = \frac{1}{|x|} \cdot \frac{x}{|x|}$

$= \frac{x}{|x|^2} = \frac{x}{x^2} = \frac{1}{x}$ (where $x \neq 0$)

Cor. $\frac{d}{dx}\log_e f(x) = \frac{1}{f(x)} \cdot \frac{d}{dx}f(x) = \frac{f'(x)}{f(x)}$

(Contd......)

‘ಹೈದರ್ ಆಲಿ, ಟಿಪ್ಪು ದಸರಾ ಮುನ್ನಡೆಸಿದ್ದರು..’

ಮಹಾರಾಜರು ಪಟ್ಟದಲ್ಲಿ ಇಲ್ಲದಿದ್ದಾಗ ಉತ್ಸವ ನಡೆಸಿದ್ದರು
ಕಾಂಗ್ರೆಸ್ ಶಾಸಕ ತನ್ವೀರ್ ಸೇಠ್ ಪ್ರತಿಕ್ರಿಯೆ

ಪ್ರಜಾವಾಣಿ ವಾರ್ತೆ

ಮೈಸೂರು: ‘ಯದುವಂಶದ ಮಹಾರಾಜರು ಪಟ್ಟದಲ್ಲಿ ಇಲ್ಲದಿದ್ದ ಸಂದರ್ಭದಲ್ಲಿ ಹೈದರ್ ಅಲಿ ಹಾಗೂ ಟಿಪ್ಪು ಸುಲ್ತಾನ್ ಅವರೇ ದಸರಾ ಉತ್ಸವ ಮುನ್ನಡೆಸಿದ್ದರು ಎಂಬುದನ್ನು ಮರೆಯಬಾರದು’ ಎಂದು ಕಾಂಗ್ರೆಸ್ ಶಾಸಕ ತನ್ವೀರ್ ಸೇಠ್ ಇಲ್ಲಿ ಹೇಳಿದ್ದಾರೆ.

ತನ್ವೀರ್ ಸೇಠ್

ದಸರಾ ಉತ್ಸವ ಉದ್ಘಾಟಿಸಲು ಲೇಖಕಿ ಬಾನು ಮುಷ್ತಾಕ್ ಅವರಿಗೆ ಆಹ್ವಾನ ನೀಡಿರುವುದಕ್ಕೆ ಬಿಜೆಪಿಯ ಕೆಲವರಿಂದ ವಿರೋಧ ವ್ಯಕ್ತವಾಗಿರುವ ಕುರಿತು ಇಲ್ಲಿ ಸೋಮವಾರ ಪ್ರತಿಕ್ರಿಯಿಸಿದರು. ‘ವ್ಯಕ್ತಿ ಸ್ವಾನಮಾನ ಗುರುತಿಸಿ ಆಹ್ವಾನಿಸಲಾಗಿದೆ. ಕಾದಂಬರಿಕಾರ ಎಸ್.ಎಲ್. ಭೈರಪ್ಪ ಅವರನ್ನು ಆಹ್ವಾನಿಸಿದ್ದಾಗ ನಾವು ಟೀಕಿಸಿರಲಿಲ್ಲ’ಎಂದರು.

> ಬಾನು ಮುಷ್ತಾಕ್ ಅವರು ದಸರಾ ಉತ್ಸವ ಉದ್ಘಾಟಿಸುವುದರಲ್ಲಿ ನನಗೆ ಸಂತೋಷವಿದೆ. ಇದರಲ್ಲಿ ಹಿಂದೂ-ಮುಸ್ಲಿಂ ಭೇದಭಾವ ಮಾಡುವುದು ಸೂಕ್ತವಲ್ಲ. ನಾವೆಲ್ಲ ಭಾರತೀಯರು
> **ಎಚ್.ಡಿ. ರೇವಣ್ಣ,** ಶಾಸಕ

> ‘ಅಲ್ಲಾಹ್ ಹೊರತುಪಡಿಸಿ ಇಸ್ಲಾಂ ಧರ್ಮ ಇನ್ನೊಂದು ದೇವರನ್ನು ಒಪ್ಪುವುದಿಲ್ಲ. ಪರಂಪರೆ, ಸಂಸ್ಕೃತಿ, ನಾಡದೇವತೆ ಬಗ್ಗೆ ಭಕ್ತಿ ಇರುವವರಿಂದ ದಸರಾ ಉದ್ಘಾಟಿಸಬೇಕು
> **ಸಿ.ಟಿ.ರವಿ,** ವಿಧಾನಪರಿಷತ್ ಸದಸ್ಯ

‘ದಸರಾ, ಜಾತಿ, ಧರ್ಮಕ್ಕೆ ಸೀಮಿತವಲ್ಲ’

ಮೈಸೂರು: ‘ದಸರಾ ನಾಡಹಬ್ಬ, ಜಾತಿ, ಧರ್ಮಕ್ಕೆ ಸೀಮಿತವಲ್ಲ. ಒಂದು ಧರ್ಮವನ್ನು ಹೊರಗಿಟ್ಟು ದಸರಾ ಮಾಡಲು ಸಾಧ್ಯವೇ’ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಪ್ರಶ್ನಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಸರ್ ಮಿರ್ಜಾ ಇಸ್ಮಾಯಿಲ್ ದಿವಾನರಾಗಿ ದಸರಾ ಮಾಡಿಲ್ಲವೇ, ಕವಿ ನಿಸಾರ್ ಅಹಮದ್ ದಸರಾ ಉದ್ಘಾಟಿಸಿಲ್ಲವೇ?’ ಎಂದು ಪ್ರಶ್ನಿಸಿದರು.

‘ಇಂತಹ ವಿಷಯಗಳಿಗೆಲ್ಲಾ ತಕರಾರು ತೆಗೆಯಬಾರದು. ತಾಯಿ ಚಾಮುಂಡೇಶ್ವರಿಯನ್ನು ನಂಬುವುದು, ಬಿಡುವುದು ಉದ್ಘಾಟಕರಿಗೆ ಸೇರಿದ್ದು. ಇದು ಊರ ಹಬ್ಬ, ಎಲ್ಲರೂ ಸೇರಿಯೇ ಮಾಡಬೇಕು’ ಎಂದು ಅಭಿಪ್ರಾಯಪಟ್ಟರು.

‘ಸಾಬರು ಬಿಟ್ರೆ ಬೇರಾರೂ ಸಿಗಲ್ವಾ’

ಹೊಸಪೇಟೆ (ವಿಜಯನಗರ): ‘ದಸರಾ ಮಹೋತ್ಸವ ಉದ್ಘಾಟನೆಗೆ ಬಾನು ಮುಷ್ತಾಕ್ ಏಕೆ ಬೇಕು? ಸಾಬರು ಬಿಟ್ಟರೆ ಇವರಿಗೆ ಯಾರೂ ಸಿಗೋದಿಲ್ವಾ’ ಎಂದು ಶಾಸಕ ಅರವಿಂದ ಬೆಲ್ಲದ ಪ್ರಶ್ನಿಸಿದರು. ‘ಮುಸ್ಲಿಮರಾದ ಬಾನು ಮುಷ್ತಾಕ್ ಅವರು ಪೂಜೆ ಮಾಡಲು ಒಪ್ಪಿದರೆ ಅಥವಾ ಹಿಂದೂ ಧರ್ಮದಲ್ಲಿ ನಂಬಿಕೆ ಇದೆ ಎಂದರೆ, ಆಲೋಚಿಸಬಹುದು’ ಎಂದು ಸುದ್ದಿಗಾರರಿಗೆ ತಿಳಿಸಿದರು.

ಅವರೇಕೆ ಪೂಜಿಸಬೇಕು –ಅಶೋಕ ಪ್ರಶ್ನೆ: ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್.ಅಶೋಕ ಅವರು, ‘ಬಾನು ಮುಷ್ತಾಕ್‌ರಿಂದ ಚಾಮುಂಡೇಶ್ವರಿ ದೇವಿಗೆ ಏಕೆ ಪೂಜೆ ಮಾಡಿಸಬೇಕು? ಹಿಂದೂ ಧರ್ಮಕ್ಕೆ ಕಳಂಕ ತರುವಂತೆ ಸರ್ಕಾರ ನಡೆದುಕೊಳ್ಳುತ್ತಿದೆ. ಮುಸ್ಲಿಮರಲ್ಲಿ ಮೂರ್ತಿ ಪೂಜೆಗೆ ನಿಷೇಧ ಇದೆ. ಬಾನು ಮುಷ್ತಾಕ್ ಪೂಜೆ ಮಾಡಿದರೆ ಅವರ ಧರ್ಮದವರೇ ವಿರೋಧಿಸುವರು ಎಂದು ಹೇಳಿದರು.

ಬಾಯಲ್ಲಿ ಜಿಲೆಟಿನ್ ಕಡ್ಡಿ ಇಟ್ಟು ಸ್ಫೋಟಿಸಿ ಪ್ರೇಯಸಿ ಕೊಲೆ

ಪ್ರಜಾವಾಣಿ ವಾರ್ತೆ

ಸಾಲಿಗ್ರಾಮ (ಮೈಸೂರು ಜಿಲ್ಲೆ): ‘ಮಹಿಳೆಯ ಬಾಯಿಯಲ್ಲಿ ಜಿಲೆಟಿನ್ ಕಡ್ಡಿ ಇಟ್ಟು, ವೈರ್‌ಗಳ ಮೂಲಕ ವಿದ್ಯುತ್ ಹರಿಸಿ ಸಿಡಿಯುವಂತೆ ಮಾಡಿ, ಕೊಂದ ಆರೋಪದ ಮೇರೆಗೆ ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರದ ಸಿದ್ದರಾಜು ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಸಿದ್ದರಾಜು

‘ಆರೋಪಿಯು ತಾಲ್ಲೂಕಿನ ಭೇರ್ಯ ಗ್ರಾಮದ ಲಾಡ್ಜ್‌ನಲ್ಲಿ ಪ್ರೇಯಸಿಯನ್ನು ಕೊಲೆ ಮಾಡಿದ್ದು ಗೊತ್ತಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ. ಹುಣಸೂರು ತಾಲ್ಲೂಕಿನ ಗೆರಸನಹಳ್ಳಿಯ ರಕ್ಷಿತಾ (20) ಕೊಲೆಯಾದ ಮಹಿಳೆ.

‘ಕೇರಳ ಮೂಲದವನನ್ನು ವಿವಾಹವಾಗಿದ್ದ ಮಹಿಳೆ ಹಾಗೂ ಆರೋಪಿಯ ನಡುವೆ ಅನೈತಿಕ ಸಂಬಂಧವಿತ್ತು. ಕಪ್ಪಡಿ ಕ್ಷೇತ್ರಕ್ಕೆ ಭೇಟಿ ನೀಡಿದ್ದ ಇಬ್ಬರೂ ಶನಿವಾರ ಲಾಡ್ಜ್‌ಗೆ ಬಂದು, ದಂಪತಿ ಎಂದು ತಿಳಿಸಿ ಕೊಠಡಿ ಪಡೆದಿದ್ದರು. ಭಾನುವಾರ ಬೆಳಿಗ್ಗೆ ಕೊಠಡಿಯ ಬಾಗಿಲು ತೆರೆದಿದ್ದ ಆರೋಪಿ ಲಾಡ್ಜ್ ಸಿಬ್ಬಂದಿಗೆ ತಿಳಿಸಿದ್ದು, ಅವರು ಬಾಗಿಲು ತೆರೆದಾಗ ಮಹಿಳೆಯ ಬಾಯಿ ಛಿದ್ರಗೊಂಡಿತ್ತು. ಸ್ಥಳದಲ್ಲಿ ಎಲೆಕ್ಟ್ರಿಕ್ ವೈರ್‌ಗಳು ಸಿಕ್ಕಿವೆ.’ ಎಂದು ಎಎಸ್‌ಪಿ ಮಲಿಕ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

‘ಭಿನ್ನಾಭಿಪ್ರಾಯವಿಲ್ಲ, ಸಮಸ್ಯೆಯೂ ಇಲ್ಲ’

ಒಂದನೇ ಪುಟದಿಂದ...

‘ಆದರೆ, ದಸರಾ ಉತ್ಸವಕ್ಕೆ ಧಾರ್ಮಿಕ ಪರಂಪರೆ, ಪದ್ಧತಿ ಹಾಗೂ ವಿಧಿ ಇದೆ. ಬಾನು ಅವರಿಗೆ ತಾಯಿ ಚಾಮುಂಡೇಶ್ವರಿ ದೇವಿಯಲ್ಲಿ ನಂಬಿಕೆ ಇದೆಯೇ ಎಂಬುದು ಎಲ್ಲರ ಪ್ರಶ್ನೆ. ಅವರು ದೇವಿಯನ್ನು ಗೌರವಿಸುವುದಾಗಿ ಸ್ಪಷ್ಟನೆ ಕೊಟ್ಟರೆ, ಧಾರ್ಮಿಕ ಭಾವನೆಗಳ ಕುರಿತು ಗೌರವವಿದ್ದರೆ ನಮಗೆ ಸಮಸ್ಯೆ ಇಲ್ಲ’ ಎಂದರು.

‘ದಸರಾ ಉತ್ಸವ ಜಾತ್ಯತೀತವಾಗಿ ನಡೆದುಕೊಂಡು ಬರುತ್ತಿದೆ. ಇದು, ಧಾರ್ಮಿಕ ವಿಚಾರವೂ ಹೌದು. ಕಾಂಗ್ರೆಸ್ ಪಕ್ಷದ ಸರ್ಕಾರವಿದ್ದಾಗ ಧಾರ್ಮಿಕ ಆಚರಣೆ, ದೇಶದ ಪರಂಪರೆಗೆ ಧಕ್ಕೆ ಆಗುವಂತಹ ನಡವಳಿಕೆ ಇದ್ದವರನ್ನೂ ಆಹ್ವಾನಿಸಲಾಗಿತ್ತು.

ಗಿರೀಶ ಕಾರ್ನಾಡ, ಕೆ.ಎಸ್.ನಿಸಾರ್ ಅಹಮದ್ ಅವರನ್ನೂ ಆಹ್ವಾನಿಸಿದ್ದರು. ಇಲ್ಲಿ ಜಾತ್ಯತೀತ ದೃಷ್ಟಿಯಿಂದ ಯಾವುದೇ ಸಮಸ್ಯೆ ಇಲ್ಲ. ಆದರೆ, ಸರ್ಕಾರಿ ವ್ಯವಸ್ಥೆಯಲ್ಲೂ ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡಿಯೇ ವಿಧಿ ಆರಂಭಿಸಲಾಗುತ್ತದೆ. ಅತಿಥಿಗಳನ್ನು ಆಹ್ವಾನಿಸುವಾಗ ಯಾರ ಭಾವನೆಗೂ ಧಕ್ಕೆ ಆಗದಂತೆ ನೋಡಿಕೊಳ್ಳಬೇಕು’ ಎಂದು ಅವರು ಹೇಳಿದರು.

ಕೊಡಗು ಜಿಲ್ಲೆ ವಿರಾಜಪೇಟೆಯಲ್ಲಿ ಈ ಕುರಿತು ಪ್ರತಿಕ್ರಿಯಿಸಿದ ಅವರು, ‘ಧಾರ್ಮಿಕ ಪೂಜೆಗಳು ವೈಯಕ್ತಿಕವಾದವು. ಅದನ್ನು ನಾವು ಮನೆಗಳಲ್ಲಿಯೇ ಮಾಡಿಕೊಳ್ಳುತ್ತೇವೆ. ದಸರಾ ಮಹೋತ್ಸವ ಸರ್ಕಾರವೇ ಮಾಡುವ ಉತ್ಸವ. ಸರ್ಕಾರ ಮಾಡಿರುವ ಆಯ್ಕೆಗೆ ನನ್ನ ವಿರೋಧ ಇಲ್ಲ’ ಎಂದು ಹೇಳಿದರು

‘ಚಾಮುಂಡಿ ಬೆಟ್ಟ ಬಾನು ಹತ್ತಬಾರದು’

ಒಂದನೇ ಪುಟದಿಂದ...

‘ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಪ್ರತಿನಿಧಿಸುವ ಹಳದಿ ಮತ್ತು ಕೆಂಪು ಬಣ್ಣದ ಧ್ವಜ ಹಾಗೂ ಭುವನೇಶ್ವರಿ ತಾಯಿಯ ಪರಿಕಲ್ಪನೆಯನ್ನು ಒಪ್ಪದ ಬಾನು ಮುಷ್ತಾಕ್ ಅವರು ದುಷ್ಟರ ಸಂಹಾರ ಮಾಡಿದ ಚಾಮುಂಡೇಶ್ವರಿ ದೇವಿಯನ್ನು ಹೇಗೆ ಒಪ್ಪಲು ಸಾಧ್ಯ’ ಎಂದು ಪ್ರಶ್ನಿಸಿದರು.

‘ಬಾನು ಮುಷ್ತಾಕ್ ಹಿಂದೂ ಧರ್ಮದ ಮೇಲೆ ನಂಬಿಕೆ ಇಲ್ಲದವರು ಮತ್ತು ಮೂರ್ತಿ ಪೂಜೆ ಒಪ್ಪದವರು. ಒಂದು ವೇಳೆ ಅವರು ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮತ್ತು ದೀಪ ಹಚ್ಚುವ ಕೆಲಸ ಮಾಡುತ್ತಾರೆ ಎಂದಾದರೆ ಉದ್ಘಾಟನೆಗೆ ಬರಲಿ. ಅದಕ್ಕೆ ನಮ್ಮ ವಿರೋಧವಿಲ್ಲ’ ಎಂದರು.

‘2023ರ ಜನ ಸಾಹಿತ್ಯ ಸಮ್ಮೇಳನದಲ್ಲಿ ಮಾತನಾಡಿದ್ದ ಬಾನು ಮುಷ್ತಾಕ್ ಅವರು ಕನ್ನಡ ಭುವನೇಶ್ವರಿಯನ್ನು ಅರಿಶಿನ– ಕುಂಕುಮದ ಬಣ್ಣದ ಬಾವುಟ ಮಾಡಿಬಿಟ್ಟಿದ್ದೀರಿ. ನಾನು ಎಲ್ಲಿ ನಿಲ್ಲಬೇಕು ಎಂದು ಪ್ರಶ್ನಿಸಿದ್ದರು. ಕನ್ನಡ ಧ್ವಜವನ್ನೇ ಒಪ್ಪದವರು ಚಾಮುಂಡೇಶ್ವರಿಯನ್ನು ಹೇಗೆ ಒಪ್ಪುತ್ತಾರೆ’ ಎಂದು ಅವರು ಪ್ರಶ್ನಿಸಿದರು.

‘ಹೈದರಾಲಿ, ಟಿಪ್ಪು ಕಾಲದಲ್ಲಿ ದಸರಾ ನಡೆದಿರಬಹುದು. ಆದರೆ, ಅವರು ಚಾಮುಂಡೇಶ್ವರಿಗೆ ಪೂಜೆ ಮಾಡಿದ್ದಾರಾ? ಭುವನೇಶ್ವರಿಗೆ ವಿರೋಧ ಮಾಡುವವರನ್ನು ಸಹಿಸಲು ಸಾಧ್ಯವಿಲ್ಲ. ಕುವೆಂಪು ಅವರು ಕೂಡ ಜೈ ಭಾರತ ಜನನಿಯ ತನುಜಾತೆ, ಜಯಹೇ ಕರ್ನಾಟಕ ಮಾತೆ ಎಂದು ಹೇಳಿದ್ದಾರೆ. ಕಾಂಗ್ರೆಸ್ ನಾಯಕರು ಎಷ್ಟು ದಿನ ಓಲೈಕೆ ರಾಜಕಾರಣ ಮಾಡುತ್ತಾರೆ. ನವರಾತ್ರಿ ದುರ್ಗೆಗೆ ಸಂಬಂಧಿಸಿದ್ದು, ಒಂಬತ್ತು ದಿನಗಳ ಆರಾಧನೆ ಮಾಡುತ್ತೇವೆ’ ಎಂದು ಶೋಭಾ ಹೇಳಿದರು.

‘ವಿರೋಧಕ್ಕೆ ಏನು ಹೇಳಬೇಕು?’

ಒಂದನೇ ಪುಟದಿಂದ...

‘ದಸರಾ ಎನ್ನುವುದು ಧರ್ಮದ ಆಚರಣೆಯಲ್ಲ. ಧರ್ಮದ ವಿಚಾರದ ಚರ್ಚೆ ಜನರಿಗೆ ಬಿಟ್ಟಿದ್ದು. ಬಾನು ಮುಷ್ತಾಕ್ ಅವರು ಇಡೀ ದೇಶಕ್ಕೆ ಕಿರೀಟ ಅಲ್ಲವೇ? ನೀವು ಅವರನ್ನು ಯಾವ ರೀತಿ ನೋಡುತ್ತೀರಾ? ಯಾಕೆ ಅವರನ್ನು ಪ್ರತ್ಯೇಕ ಮಾಡುತ್ತೀರಾ? ದೇಶಕ್ಕೆ, ಕನ್ನಡ ನಾಡಿಗೆ ಅವರು ಗೌರವ ತಂದು ಕೊಟ್ಟವರು. ನಾಡಹಬ್ಬಕ್ಕೆ ಸರ್ವರೂ ಸಹಭಾಗಿಗಳು. ಸಾಂಸ್ಕೃತಿಕವಾಗಿ ಆಚರಿಸುವ ನಾಡ ಹಬ್ಬಕ್ಕೆ ಸಂವಿಧಾನಾತ್ಮಕವಾಗಿ ಆಯ್ಕೆ ಮಾಡಿದ್ದೇವೆ. ಇದರ ಬಗ್ಗೆ ಯಾಕೆ ಅಪಸ್ವರ’ ಎಂದು ಬಿಜೆಪಿ ನಾಯಕರನ್ನು ಅವರು ಪ್ರಶ್ನಿಸಿದರು.

ದೀಪಾ ಭಾಸ್ತಿ ಬಿಟ್ಟಿದ್ದೇಕೆ?

‘ಬಾನು ಮುಷ್ತಾಕ್ ಅವರು ಹಿಂದೂ ಸಂಸ್ಕೃತಿ, ಪರಂಪರೆ, ಆಚಾರ–ವಿಚಾರಗಳನ್ನು ಒಪ್ಪಿ, ಅದರ ಬಗ್ಗೆ ನಂಬಿಕೆ ಇಟ್ಟು ಬರುವುದಾದರೆ ಸ್ವಾಗತಿಸುತ್ತೇವೆ. ಆದರೆ, ದೀಪಾ ಭಾಸ್ತಿ ಅವರನ್ನು ಬಿಟ್ಟಿದ್ದೇಕೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರಶ್ನಿಸಿದ್ದಾರೆ.

ವಿಜಯೇಂದ್ರ

‘ಬಾನು ಮುಷ್ತಾಕ್ ಮತ್ತು ಕೊಡಗಿನ ದೀಪಾ ಇಬ್ಬರಿಗೆ ಸೇರಿ ಅಂತರ ರಾಷ್ಟ್ರೀಯ ಬುಕರ್ ಪ್ರಶಸ್ತಿ ಬಂದಿದೆ. ಬಾನು ಜತೆಗೆ ದೀಪಾ ಅವರನ್ನೂ ಆಹ್ವಾನಿಸಬಹುದಿತ್ತು. ದೀಪಾ ಅವರನ್ನು ಕರೆಯಬೇಕೆಂದು ಸಿದ್ದರಾಮಯ್ಯ ಅವರಿಗೆ ಏಕೆ ಅನಿಸಲಿಲ್ಲ? ಕೊಡಗಿನ ಬಗ್ಗೆ ಆಸಕ್ತಿ ಕಡಿಮೆಯೇ’ ಎಂದು ಅವರು ಪ್ರಶ್ನಿಸಿದರು.

> ಅನುವಾದಕಿ, ಕೊಡಗಿನ ದೀಪಾ ಭಾಸ್ತಿ ಅವರಿಗೂ ದಸರೆಯ ಉದ್ಘಾಟನೆಯ ವೇದಿಕೆಯಲ್ಲಿ ಅವಕಾಶ ಕೊಟ್ಟರೆ ಸಮಾನ ಗೌರವ ನೀಡಿದಂತಾಗುತ್ತದೆ
> **ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್,** ಸಂಸದ

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಕೇಂದ್ರ ಕಚೇರಿ ಕಲಬುರಗಿ
(ಉಗ್ರಾಣ ಇಲಾಖೆ)
Mobile No. 77606 86172 (COSP), 77609 92029 (S.O).

ಸಂ.ಕಕರಸಾ/ಕೇಕ/ಉ&ಮಖಿನಿ/03/2025–26 ದಿನಾಂಕ:25.08.2025

ಟೆಂಡರ್ ಪ್ರಕಟಣೆ. (ಇ–ಪ್ರೊಕ್ಯೂರ್‌ಮೆಂಟ್ ಮೋಡ್‌ನಲ್ಲಿ ಮಾತ್ರ)

ಈ ಕೆಳಗಿನ ವಸ್ತುಗಳನ್ನು ಪೂರೈಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಪ್ರಿ ಕ್ವಾಲಿಫಿಕೇಶನ್ ಮತ್ತು ಕಮರ್ಷಿಯಲ್) ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

Sl. No.	Tender No. & date	Tender Nomenclature	Value	Last date for submission of tender
1.	KKRTC/2025-26/IND139 Dtd: 22.08.2025	Procurement of U Bolts, Centre Bolts.	Rs.0.70 Crores	11.09.2025
2.	KKRTC/2024-25/INDO140 Dtd: 22.08.2025	Procurement of Spring Clamps.	Rs.0.46 Crores	11.09.2025
3.	KKRTC/2024-25/IND0125/ CALL-2 Dtd:23.08.2025	Procurement of Oil Seals.	Rs.0.90 Crores	15.09.2025
4.	KKRTC/2024-25/IND0119/ CALL-3 Dtd:23.08.2025	Procurement of Fuel injection pipes.	Rs.0.41 Crores	15.09.2025
5.	KKRTC/2025-26/IND0148 Dtd:23.08.2025	Supply of Air Suspenion Parts.	Rs.0.91 Crores	15.09.2025
6.	KKRTC/2024-25/IND0101/ CALL-3 Dtd:23.08.2025	Supply of Piston Assembly and ring set.	Rs.0.89 Crores	15.09.2025
7.	KKRTC/2024-25/INDO118/ CALL-3 Dtd:23.08.2025	Procurement of Cylinder Liners.	Rs. 0.15 Crores	15.09.2025
8.	KKRTC/2024-25/INDO103/ CALL-3 Dtd:23.03.2025	Procurement of Engine Valves, Guids and Inserts.	Rs. 1.71 Crores	15.09.2025
9.	KKRTC/2024-25/IND0093/ CALL-2 Dtd:20.08.2025	Procurement of SMF Battery for UPS.	Rs.0.52 Crores	22.09.2025
10.	KKRTC/2024-25/INDO105/ CALL-3 Dtd:21.08.2025	Tie Rod, Drag Links & Repair Kit.	Rs.1.23 Crores	22.09.2025
11.	KKRTC/2024-25/IND0102/ CALL-2 Dtd:22.08.2025	Procurement of Propller Shaft and Components.	Rs.1.96 Crores	22.09.2025
12.	KKRTC/2025-26/IND0147 Dtd:23.08.2025	Procurement of FIP spares.	Rs.3.04 Crores	22.09.2025
13.	KKRTC/2024-25/IND0111/ CALL-2 Dtd:23.08.2025	Procurement of NRC Engine Spares.	Rs. 2.83 Crores	22.09.2025
14.	KKRTC/2024-25/IND0109/ CALL-3 Dtd:25.08.2025	Procurement of Vinyl Flooring Mat.	Rs. 0.39 Crores	24.09.2025
15.	KKRTC/2025-26/IND0145 Dtd:25.08.2025	Procurement of QR code based retro reflective Tapes.	Rs. 0.31 Crores	24.09.2025

ಟೆಂಡರ್, ನೊಂದಣಿ, ಟೆಂಡರ್ ಫಾರ್ಮ ದಾಖಲಾತಿಗಳ ಎಲ್ಲಾ ವಿವರಗಳು https://kppp.karnataka.gov.in/ನಲ್ಲಿ ಲಭ್ಯವಿರುತ್ತವೆ. ಅಗತ್ಯವಿದ್ದರೆ ಹೆಚ್ಚಿನ ಮಾಹಿತಿಗಾಗಿ cospnekrtc@gmail.com ಅಥವಾ support@eprochelpdesk.com ಗೆ–ಮೇಲ್ ಮುಖಾಂತರ ಸಂಪರ್ಕಿಸಬಹುದಾಗಿದೆ. ಪರಿಭಾಷೆಯಲ್ಲಿನ ಬದಲಾವಣೆಗಳಿಗೆ ಸಂಬಂಧಿಸಿದಂತೆ ಯಾವುದೇ ಅಡೆಂಡಮ್ /ಕೊರಿಜೆಂಡಮ್ ಮತ್ತು ಟೆಂಡರ್ ಷರತ್ತು ಮತ್ತು ನಿಭಂಧನೆಗಳು, ಸ್ಪೆಸಿಫಿಕೇಶನ್ ಮತ್ತು ಘಟನೆಗಳ ಕ್ಯಾಲೆಂಡರ್ ಇತ್ಯಾದಿಗಳನ್ನು ಇ–ಪ್ರಕ್ಯೂರಮೆಂಟ್ ಪೋರ್ಟಲ್ ಮೂಲಕ ಮಾತ್ರ ಅಪ್ಲೋಡ್ ಮಾಡಲಾಗುತ್ತದೆ.

ವಾ.ಸಾ.ಸಂ.ಇ/ಕಲಬುರಗಿ/433/ಕೆಎಸ್ಎಂಸಿಎ/2025–26 ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು.

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ KEONICS ISO 9001 : 2008
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ. 59, 1ನೇ ಮಹಡಿ, ಕುಮಾರ ಪಾರ್ಕ್ ಪಶ್ಚಿಮ,
ರೈಲ್ವೆ ಪ್ಯಾರಲಲ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು 560020

ಸಂಖ್ಯೆ: KSEDCL/ITS/GOODS-005/2025-26 ದಿನಾಂಕ: 26.08.2025

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಮೆ: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್), ಸಂಸ್ಥೆಯು **1.Empanelment of Vendors for Supply, Installation, Testing, Commissioning and Warranty of UPS (Call-3)**”ಗಾಗಿ ಸಂಸ್ಥೆಗಳನ್ನು ಆಯ್ಕೆ ಮಾಡಲು 20 ದಿನಗಳ ಅವಧಿಗೆ ಓಪನ್ ಇ–ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬಿಡ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **http://kppp.karnataka.gov.in** ನಲ್ಲಿ ವಿವರವನ್ನು ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಕಿಯೋನಿಕ್ಸ್ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ: 080 2222 5645)

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ವಿವರ	ಟೆಂಡರ್‌ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ
1	KEONICS/ 2025-26/ IND0294	Tender for Empanelment of Vendors for Supply, Installation, Testing, Commissioning and Warranty of UPS at Karnataka State Electronics Development Corporation Limited (KEONICS) for a period of 01 Year (Call-3)	**11.09.2025**

DIPR/CP/2472/SA/2025-26 ಸಹಿ/– ನಿರ್ದೇಶಕರು (ಹಣಕಾಸು)

ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು–3 ರವರ ಕಚೇರಿ, 1ನೇ ಮಹಡಿ, ಬೃ.ಬೆಂ.ಮ.ಪಾಲಿಕೆ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–560052.

ಸಂಖ್ಯೆ: ಉಪ್ರವ್ಯ–3/ಬೆಂಘತ್ಯಾನಿನಿ/ಟೆಂಡರ್/09/2025–26 ದಿನಾಂಕ: 25.08.2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

1. ಅನುಮೋದಿತ ತಂತ್ರಜ್ಞಾನದೊಂದಿಗೆ ಹಸಿ ತ್ಯಾಜ್ಯವನ್ನು ಸಂಸ್ಕರಿಸಿ ಎಸ್‌ಓಪಿರಂತೆ ಕಾಂಪೋಸ್ಟ್ ಉತ್ಪತ್ತಿ ಮಾಡಲು ಬೃ.ಬೆಂ.ಮ.ಪಾಲಿಕೆಯಿಂದ ಸ್ಥಾಪಿತವಾಗಿರುವ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡಬೇಕಾಗಿರುತ್ತದೆ.
2. ಈ ನಿಟ್ಟಿನಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಬೆಂ.ಘ.ತ್ಯಾ.ನಿ.ನಿ ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. 3. ಟೆಂಡರ್ ದಾಖಲೆಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಜಾಲತಾಣದ (**https://kppp.karnataka.gov.in**) ಮೂಲಕ ಪ್ರತಿ ಕಾಮಗಾರಿಯ ಐಟಂಗೆ ನಿರ್ದಿಷ್ಟಪಡಿಸಿರುವ ಶುಲ್ಕವನ್ನು (ಮರುಪಾವತಿಸಲಾಗುವುದಿಲ್ಲ) ಕರ್ನಾಟಕ ಪಬ್ಲಿಕ್ ಪೋರ್ಟಲ್‌ನಲ್ಲಿ ಇ–ಪಾವತಿಸುವುದರ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್ಡರುಗಳು ಬಿಡ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮೂಲಕ ಸಲ್ಲಿಸುವುದು.

ಕಾಮಗಾರಿಗಳ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)	ಪೂರ್ಣಗೊಳಿಸಲು ನಿಗದಿತ ಅವಧಿ
ಸೀಗೆಹಳ್ಳಿಯಲ್ಲಿರುವ 120 ಟಿ ಪಿ ಡಿ ಸಾಮರ್ಥ್ಯದ ಹಸಿ ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ ಯಂತ್ರೋಪಕರಣಗಳು ಮತ್ತು ವಾಹನಗಳನ್ನು ದುರಸ್ತಿ ಮಾಡುವುದು.	14.86	ರೂ.29,720/– ಗಳನ್ನು ಆನ್‌ಲೈನ್/ ಆರ್‌ಟಿಜಿಎಸ್/ಎನ್‌ಇಎಫ್‌ಟಿ/ಓಟಿಸಿಯು ಇ–ಪಾವತಿ ಮೂಲಕ ಮಾಡಬಹುದು	03 ತಿಂಗಳು
ಚಿಕ್ಕನಾಗಮಂಗಲದಲ್ಲಿರುವ 300 ಟಿ ಪಿ ಡಿ ಸಾಮರ್ಥ್ಯದ ಹಸಿ ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ ಯಂತ್ರೋಪಕರಣಗಳು ಮತ್ತು ವಾಹನಗಳನ್ನು ದುರಸ್ತಿ ಮಾಡುವುದು.	36.49	ರೂ.72,980/– ಗಳನ್ನು ಆನ್‌ಲೈನ್/ ಆರ್‌ಟಿಜಿಎಸ್/ಎನ್‌ಇಎಫ್‌ಟಿ/ಓಟಿಸಿಯು ಇ–ಪಾವತಿ ಮೂಲಕ ಮಾಡಬಹುದು	03 ತಿಂಗಳು

ಟೆಂಡರ್ ವೇಳಾಪಟ್ಟಿ: 1) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: **03.09.2025**ರ ಮಧ್ಯಾಹ್ನ **3:00** ಗಂಟೆಗೆ ಮುಖ್ಯ ಅಭಿಯಂತರರು ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)ರವರ ಕಚೇರಿ, ಬೆಂಘತ್ಯಾನಿನಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–560052 ಇಲ್ಲಿ ನಡೆಸಲಾಗುವುದು. 2) ಬಿಡ್‌ಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ **11.09.2025**ರ ಸಂಜೆ **4:00** ಗಂಟೆಯೊಳಗೆ ಸಲ್ಲಿಸುವುದು. 3) ತಾಂತ್ರಿಕ ಬಿಡ್‌ಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ: **12.09.2025**ರ ಸಂಜೆ **4:30** ಗಂಟೆಯ ನಂತರ ತೆರೆಯಲಾಗುವುದು.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3,
ಬೆಂ.ಘ.ತ್ಯಾ.ನಿ.ನಿ, ಬೆಂಗಳೂರು

ಡಿಐಪಿಆರ್/ಸಿಪಿ/2484/ಸಿಸಿಎಲ್/2025–26

ಶ್ರೀ ಧನಲಕ್ಷ್ಮೀ ಸಹಕಾರಿ ಸಕ್ಕರೆ ಕಾರ್ಖಾನೆ ನಿ. ಖಾನಪೇಟ,
ತಾ: ರಾಮದುರ್ಗ ಜಿ:ಬೆಳಗಾವಿ ರಾಜ್ಯ ಕರ್ನಾಟಕ
ಇದರ ಆಡಳಿತ ಮಂಡಲಿಯ ನಿರ್ದೇಶಕರನ್ನು ಆಯ್ಕೆ ಮಾಡಲು ಚುನಾವಣೆಯನ್ನು ನಡೆಸುವ ಸಲುವಾಗಿ ಕಾರ್ಯಕ್ರಮದ ವೇಳಾಪಟ್ಟಿ
ರಿಟರ್ನಿಂಗ್ ಅಧಿಕಾರಿ ಹಾಗೂ ಉಪವಿಭಾಗಾಧಿಕಾರಿ ಬೈಲಹೊಂಗಲ ಇವರ ಕಾರ್ಯಾಲಯ

ಕ್ರ.ಚುನಾವಣೆ.ಸಿಆರ್–01/2025–26 ದಿನಾಂಕ:08.08.2025.

ನಮೂನೆ XII ನಿಯಮ 14(3)(ಎ)

ಚುನಾವಣಾ ನೋಟಿಸು

ಶ್ರೀ ಧನಲಕ್ಷ್ಮೀ ಸಹಕಾರಿ ಸಕ್ಕರೆ ಕಾರ್ಖಾನೆ ನಿ. ಖಾನಪೇಟ ತಾ–ರಾಮದುರ್ಗ ಜಿ: ಬೆಳಗಾವಿ ಇದರ ಆಡಳಿತ ಮಂಡಲಿಯ ನಿರ್ದೇಶಕರ ಸ್ಥಾನಕ್ಕೆ ಚುನಾವಣೆಯನ್ನು ಜರುಗಿಸುವ ಕುರಿತು ಮಾನ್ಯ ಆಯುಕ್ತರು ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಇವರ ಆದೇಶಾನುಸಾರ ಚುನಾವಣೆಯನ್ನು ಕಾರ್ಖಾನೆಯ ಪೋಟ ನಿಯಮ ಸಂಖ್ಯೆ: 41ರ ಪ್ರಕಾರ, ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 14(3)ರ ಮೇರೆಗೆ ದಿನಾಂಕ:**14.09.2025** ರಂದು ರವಿವಾರ ಬೆಳಿಗ್ಗೆ 9–00 ಗಂಟೆಯಿಂದ ಸಾಯಂಕಾಲ 4-00 ಗಂಟೆಯವರೆಗೆ **ಶ್ರೀಮತಿ ಆಯ್.ಎಸ್.ಯಾದವಾಡ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ರಾಮದುರ್ಗ**ದಲ್ಲಿ ಜರುಗಿಸಲಾಗುವದೆಂದು ಈ ಮೂಲಕ ನೋಟಿಸು ನೀಡಲಾಗಿರುತ್ತದೆ.

ಚುನಾಯಿಸಬೇಕಾದ ಆಡಳಿತ ಮಂಡಲಿಯ ನಿರ್ದೇಶಕರ ಸ್ಥಾನಗಳು ಈ ಕೆಳಗಿನಂತೆ ಇರುತ್ತವೆ.

ಅ. ನಂ	ಮತಕ್ಷೇತ್ರ	ಆಯ್ಕೆ ಮಾಡಬೇಕಾದ ಅಭ್ಯರ್ಥಿಗಳ ಸಂಖ್ಯೆ
1	‘ಅ’ ವರ್ಗ– ಕಬ್ಬು ಬೆಳೆಗಾರರ ಸದಸ್ಯರ ಮತಕ್ಷೇತ್ರದಿಂದ– (ಈ ಪೈಕಿ 1) ಸಾಮಾನ್ಯ ವರ್ಗ–10 (ಹತ್ತು), 2) ಪರಿಶಿಷ್ಟ ಜಾತಿ–01 (ಒಂದು), 3) ಪರಿಶಿಷ್ಟ ಪಂಗಡ–01 (ಒಂದು), 4) ಹಿಂದುಳಿದ ವರ್ಗ “ಅ”– 1 (ಒಂದು), 5) ಹಿಂದುಳಿದ ವರ್ಗ “ಬ” – 1 (ಒಂದು) ಹಾಗೂ 5) ಮಹಿಳೆ–02 (ಎರಡು) ಮೀಸಲು ಸ್ಥಾನಗಳು.)	**16**
2	‘ಬ’ ವರ್ಗ– ಸದಸ್ಯ ಸಹಕಾರ ಸಂಘಗಳ ಮತಕ್ಷೇತದಿಂದ 01 (ಒಂದು)	**1**
3	‘ಡ’ ವರ್ಗ– ಕಬ್ಬು ಬೆಳಗಾರರಲ್ಲದ ಸದಸ್ಯರ ಮತಕ್ಷೇತ್ರದಿಂದ 01 (ಒಂದು)	**1**
	ಒಟ್ಟು ಸ್ಥಾನಗಳು	**18**

ಚುನಾವಣಾ ವೇಳಾಪಟ್ಟಿ ಈ ಕೆಳಗಿನಂತಿರುತ್ತದೆ ಎಂದು ಕೂಡ ಈ ಮೂಲಕ ನೋಟಿಸು ನೀಡಲಾಗಿದೆ.

ಅ. ನಂ	ವಿವರ	ದಿನಾಂಕ	ವೇಳೆ	ಸ್ಥಳ
1	ಉಮೇದುವಾರರಾಗಿ ಸ್ಪರ್ಧಿಸಲು ಇಚ್ಛಿಸುವಂತಹ ಅಭ್ಯರ್ಥಿಗಳು ನಾಮಪತ್ರವನ್ನು ಸಲ್ಲಿಸಲು ಪ್ರಾರಂಭದ ದಿನಾಂಕ	30–08–2025 (ಶನಿವಾರ)	ಬೆಳಿಗ್ಗೆ 11–00 ಗಂಟೆಯಿಂದ ಮಧ್ಯಾಹ್ನ 3–00 ಗಂಟೆ ವರೆಗೆ	ಕಾರ್ಖಾನೆಯ ಕಛೇರಿಯಲ್ಲಿ
2	ಉಮೇದುವಾರರಿಂದ ನಾಮಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ	06–09–2025 (ಶನಿವಾರ)	ಬೆಳಿಗ್ಗೆ 11–00 ಗಂಟೆಯಿಂದ ಮಧ್ಯಾಹ್ನ 3–00 ಗಂಟೆ ವರೆಗೆ	ಕಾರ್ಖಾನೆಯ ಕಛೇರಿಯಲ್ಲಿ
3	ರಿಟರ್ನಿಂಗ್ ಅಧಿಕಾರಿಯಿಂದ ನಾಮಪತ್ರಗಳ ಪರಿಶೀಲನೆ	07–09–2025 (ರವಿವಾರ)	ಬೆಳಿಗ್ಗೆ 11–00 ಗಂಟೆಗೆ	ಕಾರ್ಖಾನೆಯ ಕಛೇರಿಯಲ್ಲಿ
4	ಉಮೇದುವಾರರಿಂದ ನಾಮಪತ್ರವನ್ನು ಹಿಂದಕ್ಕೆ ಪಡೆಯುವ ಕೊನೆಯ ದಿನಾಂಕ	08–09–2025 (ಸೋಮವಾರ)	ಬೆಳಿಗ್ಗೆ 11–00 ಗಂಟೆಯಿಂದ ಮಧ್ಯಾಹ್ನ 3–00 ಗಂಟೆ ವರೆಗೆ	ಕಾರ್ಖಾನೆಯ ಕಛೇರಿಯಲ್ಲಿ
5	ಮತದಾನದ ದಿನಾಂಕ, ಸಮಯ ಮತ್ತು ಸ್ಥಳ	14–09–2025 (ರವಿವಾರ)	**ಬೆಳಿಗ್ಗೆ 9–00 ಗಂಟೆಯಿಂದ ಸಾಯಂಕಾಲ 4–00 ಗಂಟೆ ವರೆಗೆ**	**ಶ್ರೀಮತಿ ಆಯ್.ಎಸ್ ಯಾದವಾಡ ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ರಾಮದುರ್ಗ**
6	ಮತಗಳ ಎಣಿಕೆ	14–09–2025 (ರವಿವಾರ)	ಮತದಾನ ಮುಕ್ತಾಯದ ನಂತರ	

ಸೂಚನೆಗಳು :
1 ಮಾಧ್ಯಮಿಕ ಸಹಕಾರ ಸಂಘಗಳ ಚುನಾವಣಾಧಿಕಾರಿಗಳಿಂದ ಅನುಮೋದಿಸಲ್ಪಟ್ಟ ಅಂತಿಮ ಅರ್ಹ ಮತದಾರರ ಯಾದಿಯಲ್ಲಿ ಹೆಸರಿದ್ದವರು ಮಾತ್ರ ಆಯಾ ಮತಕ್ಷೇತ್ರದಿಂದ ಚುನಾವಣೆಯಲ್ಲಿ ಮತದಾನ ಮಾಡಲು, ಸೂಚಕರಾಗಲು ಮತ್ತು ಸ್ಪರ್ಧಿಸಲು ಅವಕಾಶವಿರುತ್ತದೆ
2 ಚುನಾವಣೆ ಪ್ರಕ್ರಿಯೆಯಲ್ಲಿ ರಜಾದಿನಗಳಿದ್ದರೂ ಸಹ ಚುನಾವಣಾ ನಿಮಿತ್ತ ರಿಟರ್ನಿಂಗ್ ಅಧಿಕಾರಿಯ ಕಾರ್ಯಾಲಯ ತೆರೆದಿರುತ್ತದೆ.
3 ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13(ಎ) ರನ್ವಯ ಕಾರ್ಖಾನೆಯಿಂದ ನೀಡಿದ ಗುರುತಿನ ಚೀಟಿ ಮತದಾನದ ವೇಳೆ ಕಡ್ಡಾಯವಾಗಿರುತ್ತದೆ.

ವಿಶೇಷ ಸೂಚನೆ:
1) ದಿನಾಂಕ:14.09.2025 ರಂದು ಜರುಗಲಿರುವ ಚುನಾವಣೆಯ ವೇಳಾಪಟ್ಟಿ ನೋಟೀಸನ್ನು ಎಲ್ಲ ಅರ್ಹ ಮತದಾರರಿಗೆ ತಲುಪಿಸುವ ವ್ಯವಸ್ಥೆ ಮಾಡಲಾಗಿರುತ್ತದೆ. ಒಂದು ವೇಳೆ ಚುನಾವಣಾ ವೇಳಾಪಟ್ಟಿ ತಲುಪದೇ ಇದ್ದಲ್ಲಿ ಈ ಪ್ರಕಟಣೆಯನ್ನೇ ನೋಟೀಸು ಎಂದು ಪರಿಗಣಿಸಿ ಚುನಾವಣೆಗೆ ಹಾಜರಾಗಲು ತಿಳಸಿದೆ.

ಸಹಿ/– (ಪ್ರವೀಣ ಜೈನ್) ರಿಟರ್ನಿಂಗ್ ಅಧಿಕಾರಿಗಳು
ಸ್ಥಳ: ಖಾನಪೇಟ ಶ್ರೀ ಧನಲಕ್ಷ್ಮೀ ಸಹಕಾರಿ ಸಕ್ಕರೆ ಕಾರ್ಖಾನೆ ನಿ. ಖಾನಪೇಟ
ದಿನಾಂಕ:08.08.2025 ತಾ–ರಾಮದುರ್ಗ ಜಿ: ಬೆಳಗಾವಿ ಹಾಗೂ ಉಪವಿಭಾಗಾಧಿಕಾರಿಗಳು ಬೈಲಹೊಂಗಲ ಉಪವಿಭಾಗ

THE FEDERAL BANK LIMITED
Regd. Office: Aluva, Kerala.
ZONAL OFFICE: 2nd Floor, Halcyon Complex, No.9, St. Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/2025-26 NOTICE FOR PRIVATE SALE OF GOLD 25/08/2025

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 10-09-2025 as shown below:

Br. Bangalore/St. Marks Road: No. 9, Halcyon Complex, St. Marks Road, Bangalore, Karnataka-560 001, Ph. No. 080-32994454 :- 11046400014148, 11046400014577,11046400014056. **Br. Bangalore/Indiranagar: 315/1, 100 Feet Road, Indiranagar, Bangalore-560 038, Ph No. 080-25212341 :-** 15356900001057,15356400059043,15356400060892,15356400060660,15356900001073,15356400042015,15356400063326,15356400060249,15356400059563, 15356900000588,15356100091338,15355600004346,15356100091452,15356400061510,15356100092419,15356400060496,15356400059423,15356100091916, 15356400055033,15356900004168,15355600004635,15356900002923,15356900004416,15356400054713,15356100092757,15356400059407,15356400060199, 15356400061031,15356400061296,15356400061114,15356400044680,15356100092005,15356400060686,15356400060652.

Br.Bangalore/Krishnarajapuram: Vsr Complex, Old Madras Road, Krishnarajapuram, Bangalore Urban, Karnataka- 560 036 Ph. No. 080-25619070 :- 15616100192588,15616400024234,15616100193784,15616400024572,15616100195946,15616400024242,15616400023491,15616100190855,15616400023509, 15616400024259,15616100192869,15616100190848,15616400026650,15616100191945,15616400025041,15616100188230,15616400023574,15616400024937, 15616400024879,15616400025405,15616400022212,15610051020001.

Br. Bng/Rajaji Nagar: No. 60/60, Raj Chambers, Dr. Rajkumar Road, 2nd Block, Rajaji Nagar, Bangalore-560010, Ph: 080-23522007 :- 13346400285260, 13346400258010,13346400261352,13346400265114,13346400283075,13346400284016,13346400284040,13346400284495,13346500016490,13346500017332, 13346400289833,13346900015654,13346900014582,13346900014590,13346400282689,13346100675406,13346400265924,13346100685215,13346400287191, 13346400286029,13346400283620,13346400264299,13346400264307,13346100675315,13346100690389,13346400281442,13346400285385,13346400283323, 13346400283331,13346400290633,13346100681255,13346400289312,13346400284727,13346900015118,13346400286086,13346900014731,13346500017936, 13346400289841,13346400290211,13346900016686,13346400282432,13346400290054,13346400279958,13346400275246,13346900014913,13346100680802, 13346400286078,13346400275428,13346400275436,13346400275451,13346400275469,13346400275477,13346400288942,13346400237501,13346400287480, 13346400286607,13346900014277,13346400277697,13346400277689,13346400277671,13346100684622,13346900013519,13346400289866,13346400288678, 13346400288652,13346400282408,13346400282390,13346400287498,13346400288306,13346900015274,13346900013865,13346900015282,13346100677048, 13346900015191,13346400284610,13346900016520,13346400284628,13346400284826,13346400284636,13346400290799,13346400287423,13346400290419, 13346400288421,13346100680018,13346900013998,13346400290013,13346900015258,13346400290021,13346100686999,13346900014459,13346100686973.

Br. Basaveshwaranagar : #33, 1st main road, 3rd Stage, 4th block, West of Chord Road, Basaveshwaranagar, Bangalore, Karnataka- 560 079 :- 24666400005583,24666900000852,24665600000196,24666400008637,24666400010070,24666400011557,24666400010492,24666400011037,24666400002481, 24666400011052,24666400010534,24666400011078,24666400008728,24666400011045,24666400010757,24666400011185,24666900000837,24666400009882, 24666400011318,24666400011201,24666400010468. **Br. Bangalore/Vignana Nagar: chikkNo. 124, S R Plaza, Vignana Nagara, Main Road, Bangalore- 560 037 Ph. No. 080-25348901 :-** 16296900003613,16296900003704,16296900005139.

Br. Bangalore/Vijayanagar: Ground Floor of TRS Arcade, #3, 1st main road, Income Tax Layout, Opposite to AM Hospital, Vijayanagar, Bangalore-560 040 Ph No. 080-23159121 :- 16436400119903,16436400101083,16436400124291,16436500008196,16436400124440,16436400095608, 16436400119416,16436400124366,16436400103642,16436400117444,16436900000538,16436400124747,16436400098768,16436400123921,16436400124374, 16436400124408,16436400073670,16436400087563,16436400115265,16436500011174,16436400096036,16436400089734,16436400123210,16436400115091, 16436400100234,16436100362050,16436400122592,16436400114961,16436400082739,16436400111272,16436400109458,16436400116552,16436400122758, 16436400123020,16436500007198,16436500010762,16436400122790,16436400123665,16436500007461,16436400123228.

Br. Chikkajala: Sri Byraveshwara Complex, No 82/3, Chikkajala Village, Chikkajala Post, KIAL Road, Bangalore North Taluk, Bangalore- 562 157, Ph. 080-28467032 :- 20866400056974,20866400059051,20866400057121,20866100057223,20866400051132,20866100055128, 20866900001082,20866900000928,20866900000902,20866900000985,20866900000829,20866900000886,20866400057881,20866400058079,20866400051447, 20866400039384,20866400057337,20866400058624,20866400058681,20866400056495,20866900000639.

Br. Chikkaballapura: No 1153/3, BB Road, Chikkaballapur, Karnataka, Chikkaallapura- 562 101 :- 20216400060560,20216400053540.

Br. Devanahalli: 135/9, Next To Corporation Bank, D B Cross, Devanahalli , Bangalore Rural- 562 110, Ph No. 080 27683906 :- 15296400108574,15296400186430,15296400187768,15296400188683,15296400189012,15296400189111,15296400189525,15296400172596,15296400190564, 15296400190960,15296400191810,15296400199912.

Br. Hirandahalli: Sy. No.81/1, Hirandahalli Main Road, Opp. Aswathakatte, Virgonagar P O, Bangalore- 560 049 Ph No:8867121675 :- 21636100019021,21636100018973,21636400105330,21636400109142,21636400104127,21636400058141,21636400106510,21636400104077,21636400100752, 21636100019013,15616400025405,21636400110009,21636400100307,21636400105140,21636100018981,21636400110603,21636400104077,21635500002710, 21636400104127,21636100019013,21636100018981,21636400104747,21636400104390,21636100018973,21636400104390,21636400108086,21636400105868.

Br. Hoskote: Gangamma Gudi Road, M V Extension, Hoskote, Bangalore- 562 114 Ph: 080-27933430 :- 15856400040513,15856400046858, 15856400039887,15856400051361,15856400040943,15856400040984,15856400048144,16596400086152,15856400041131,15856400029441,15856400029516, 15856400041792,15856100095825,15856100096310,15856400050942,15856400046767,15856400041792,15856400046346,15856400029516,15856400047070.

Bangalore 25-08-2025 Vice President & Zonal Head

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ಅನುಭವ ಬಂದ ಹಾಗೆಲ್ಲ ಜಗತ್ತು ಅರ್ಥವಾಗುತ್ತದೆ.
–ಕನ್‌ಫ್ಯೂಷಿಯಸ್

ಸಂಪಾದಕೀಯ

ಬೀದಿ ನಾಯಿಗಳ ನಿಯಂತ್ರಣ ಸಹಾನುಭೂತಿಯ ನಿರ್ದೇಶನ

ಬೀದಿ ನಾಯಿಗಳಿಗೆ ಸಂಬಂಧಿಸಿದಂತೆ ಈ ಹಿಂದೆ ನೀಡಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ಮಾರ್ಪಾಡು ಮಾಡಿರುವುದು ಸ್ವಾಗತಾರ್ಹ. ಹಿಂದಿನ ಆದೇಶವು ಅಮಾನವೀಯ, ಅವಾಸ್ತವಿಕ ಎನ್ನುವ ಟೀಕೆಗಳು ಇದ್ದವು. ಈಗ ತ್ರಿಸದಸ್ಯ ಪೀಠವು ನೀಡಿರುವ ಸೂಚನೆಗಳು ಹೆಚ್ಚು ಸುಧಾರಿತ ರೂಪದಲ್ಲಿವೆ. ಬೀದಿ ನಾಯಿಗಳಿಂದ ಆಗುತ್ತಿರುವ ಸಮಸ್ಯೆಯನ್ನು ಹೆಚ್ಚು ಸಮತೋಲನದಿಂದ ನೋಡುವ ಕೆಲಸವನ್ನು ಈ ಪೀಠವು ಮಾಡಿದೆ. ಬೀದಿ ನಾಯಿಗಳಿಂದ ಆಗುವ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು ಎಂದು ಹೇಳಿದ್ದ ಈ ಮೊದಲಿನ ಆದೇಶವು, ದೆಹಲಿ ಮತ್ತು ರಾಷ್ಟ್ರ ರಾಜಧಾನಿ ಪ್ರದೇಶದ ವ್ಯಾಪ್ತಿಯಲ್ಲಿನ ಎಲ್ಲ ಬೀದಿ ನಾಯಿಗಳನ್ನು ಆಶ್ರಯ ತಾಣಗಳಿಗೆ ಸ್ಥಳಾಂತರ ಮಾಡಬೇಕು ಎಂದು ಹೇಳಿತ್ತು. ಈ ಸೂಚನೆಯು ಸಮಸ್ಯೆಯನ್ನು ಪರಿಹರಿಸುವಂತೆ ಇರಲಿಲ್ಲ. ಏಕೆಂದರೆ, ಬೀದಿ ನಾಯಿಗಳನ್ನು ಸ್ಥಳಾಂತರ ಮಾಡಿದ ನಂತರದಲ್ಲಿ ಅಲ್ಲಿಗೆ ಬೇರೆಡೆಯಿಂದ ಬೀದಿ ನಾಯಿಗಳು ಬಂದು ನೆಲಸುವ ಸಾಧ್ಯತೆ ಇತ್ತು. ಈಗ ಸುಪ್ರೀಂ ಕೋರ್ಟ್, ವಾಸ್ತವಕ್ಕೆ ಹೆಚ್ಚು ಹತ್ತಿರವಾಗಿರುವ ಹಾಗೂ ಮಾನವೀಯವಾದ ನೆಲೆಯಲ್ಲಿ ಸೂಚನೆಗಳನ್ನು ನೀಡಿದೆ. ಬೀದಿ ನಾಯಿಗಳಿಗೆ ಲಸಿಕೆ ನೀಡಬೇಕು, ಅವುಗಳ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ಮಾಡಬೇಕು, ನಂತರ ಆ ನಾಯಿಗಳನ್ನು ಅವುಗಳ ವಾಸಸ್ಥಾನಕ್ಕೆ ತಂದುಬಿಡಬೇಕು ಎಂದು ಕೋರ್ಟ್ ಸೂಚನೆ ನೀಡಿದೆ. ಆದರೆ, ರೇಬಿಸ್ ಇರುವ ಹಾಗೂ ತೀರಾ ವ್ಯಗ್ರವಾದ ವರ್ತನೆಯನ್ನು ತೋರುವ ನಾಯಿಗಳನ್ನು ವಾಪಸ್ ತಂದು ಬೀದಿಯಲ್ಲಿ ಬಿಡುವಂತಿಲ್ಲ ಎಂದು ಸ್ಪಷ್ಟಪಡಿಸಿದೆ. ಅಂತಹ ನಾಯಿಗಳನ್ನು ಆಶ್ರಯತಾಣಗಳಲ್ಲಿಯೇ ಇರಿಸಬೇಕಾಗುತ್ತದೆ. ಸಾರ್ವಜನಿಕ ಸ್ಥಳಗಳಲ್ಲಿ ನಾಯಿಗಳಿಗೆ ಆಹಾರ ನೀಡುವುದಕ್ಕೆ ಕೋರ್ಟ್ ನಿಷೇಧ ವಿಧಿಸಿದೆ. ಈ ಕೆಲಸಕ್ಕೆ ಜಾಗ ಗೊತ್ತುಮಾಡಬೇಕು ಎಂದು ಸೂಚನೆ ನೀಡಿದೆ.

ಬೀದಿ ನಾಯಿಗಳ ಕುರಿತಾದ ಸುಪ್ರೀಂ ಕೋರ್ಟ್‌ನ ಪರಿಷ್ಕೃತ ತೀರ್ಪು ವಸ್ತುಸ್ಥಿತಿಗೆ ಹತ್ತಿರವಾಗಿದೆ ಹಾಗೂ ಸಮಸ್ಯೆ ಪರಿಹರಿಸುವಲ್ಲಿ ಸಹಾನುಭೂತಿಯ ಅಗತ್ಯವನ್ನು ಗುರ್ತಿಸಿದೆ.

ಬೀದಿ ನಾಯಿಗಳಿಂದ ಸೃಷ್ಟಿಯಾಗುವ ಅಪಾಯಗಳನ್ನು ಹೊಸ ಆದೇಶವು ಗುರುತಿಸಿದೆ. ಅದೇ ಸಂದರ್ಭದಲ್ಲಿ ಶ್ವಾನಪ್ರಿಯರ ಕಳವಳಗಳಿಗೆ ಕಿವಿಗೊಡುವ ಕೆಲಸವನ್ನೂ ಮಾಡಿದೆ. ಪ್ರಾಣಿಗಳ ಜನನ ನಿಯಂತ್ರಣಕ್ಕೆ ಸಂಬಂಧಿಸಿದ ನಿಯಮಗಳು ಈಗಾಗಲೇ ಜಾರಿಯಲ್ಲಿ ಇವೆ, ಅವುಗಳ ಪರಿಣಾಮಕಾರಿ ಅನುಷ್ಠಾನದ ಕೆಲಸ ಆಗಬೇಕಿದೆ. ಹೊಸ ಆದೇಶದ ವ್ಯಾಪ್ತಿಯು ದೊಡ್ಡದಿದೆ, ಅದು ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಅನ್ವಯವಾಗುತ್ತದೆ. ಸ್ಥಳೀಯ ಆಡಳಿತ ಸಂಸ್ಥೆಗಳು ಪ್ರಾಣಿಗಳ ಜನನ ನಿಯಂತ್ರಣ (ಎಬಿಸಿ) ನಿಯಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ಅಗತ್ಯವಿರುವ ಸಂಪನ್ಮೂಲ ತಮ್ಮಲ್ಲಿ ಎಷ್ಟಿದೆ ಎಂಬ ಬಗ್ಗೆ ಮಾಹಿತಿ ಒದಗಿಸಬೇಕು ಎಂದು ಕೋರ್ಟ್ ಸೂಚಿಸಿದೆ. ತಮ್ಮ ವ್ಯಾಪ್ತಿಯಲ್ಲಿ ಬೀದಿ ನಾಯಿಗಳಿಗೆ ಲಭ್ಯವಿರುವ ಆಶ್ರಯ ತಾಣಗಳು ಎಷ್ಟು, ಪಶು ಚಿಕಿತ್ಸಕರು, ನಾಯಿಗಳನ್ನು ಹಿಡಿಯುವ ಸಿಬ್ಬಂದಿ ಸಂಖ್ಯೆ, ಬೋನುಗಳು ಹಾಗೂ ಅವುಗಳನ್ನು ಹಿಡಿಯಲು ಲಭ್ಯವಿರುವ ವಾಹನಗಳ ಸಂಖ್ಯೆ ಎಷ್ಟು ಎಂಬುದನ್ನೂ ಅವು ತಿಳಿಸಬೇಕಿದೆ. ಆದರೆ, ನ್ಯಾಯಾಲಯದ ಸೂಚನೆಗಳ ಅನುಸಾರವಾಗಿ ಬೀದಿ ನಾಯಿಗಳನ್ನು ನಿಯಂತ್ರಿಸಲು ಬೇಕಿರುವ ಸಂಪನ್ಮೂಲವು ಹಲವು ಸ್ಥಳೀಯ ಆಡಳಿತ ಸಂಸ್ಥೆಗಳ ಬಳಿ ಇಲ್ಲ ಎಂಬುದು ವಾಸ್ತವ. ಬೀದಿಗಳಲ್ಲಿ ನಾಯಿಗಳನ್ನು ಹಿಡಿಯುವುದು, ಅವುಗಳಿಗೆ ಲಸಿಕೆ ನೀಡುವುದು, ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ಹಾಗೂ ಅವುಗಳನ್ನು ಮತ್ತೆ ಮೂಲ ಸ್ಥಳಕ್ಕೆ ತಂದುಬಿಡಲು ಬಹಳಷ್ಟು ಶ್ರಮ ಹಾಗೂ ಹಣದ ಅಗತ್ಯ ಇರುತ್ತದೆ. ಈಗಿರುವ ನಿಯಮಗಳು ಯಾವ ಪ್ರಕ್ರಿಯೆ ಅನುಸರಿಸಬೇಕು ಎಂಬುದನ್ನು ಹೇಳುತ್ತವೆಯಾದರೂ, ಆ ನಿಯಮಗಳನ್ನು ಪಾಲಿಸುವ ಕೆಲಸ ಆಗುತ್ತಿಲ್ಲ.

ದೆಹಲಿಯೊಂದರಲ್ಲೇ ಸರಿಸುಮಾರು 10 ಲಕ್ಷ ಬೀದಿ ನಾಯಿಗಳು ಇವೆ. ದೇಶದಲ್ಲಿ ಅವುಗಳ ಸಂಖ್ಯೆ ಕೋಟಿಯನ್ನು ದಾಟಬಹುದು. ಕೋರ್ಟ್‌ನ ಆದೇಶವನ್ನು ಅನುಷ್ಠಾನಕ್ಕೆ ತರಲು ನಗರ ಆಡಳಿತ ಸಂಸ್ಥೆಗಳಿಗೆ ಹೆಚ್ಚಿನ ನೆರವಿನ ಅಗತ್ಯ ಎದುರಾಗಬಹುದು. ಬೀದಿ ನಾಯಿಗಳಿಗೆ ಆಹಾರ ನೀಡಲು ಪ್ರತ್ಯೇಕವಾದ ಸ್ಥಳವನ್ನು ಗುರುತಿಸುವುದು ಹಾಗೂ ಆ ಸ್ಥಳದ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಒದಗಿಸುವುದು ಸುಲಭದ ಕೆಲಸವಲ್ಲ. ನಾಯಿಗಳಿಗೆ ಬೀದಿಯಲ್ಲಿ ಆಹಾರ ಕೊಡುವುದನ್ನು ಕೋರ್ಟ್ ನಿಷೇಧಿಸಿದೆಯಾದರೂ, ಅದು ಅನುಷ್ಠಾನಕ್ಕೆ ಬರಲು ಸಮಯ ಬೇಕಾಗುತ್ತದೆ. ‘ವ್ಯಗ್ರ ಸ್ವಭಾವದ ನಾಯಿಗಳನ್ನು’ ಹೇಗೆ ವ್ಯಾಖ್ಯಾನಿಸಲಾಗುತ್ತದೆ ಎಂಬುದು ಸ್ಪಷ್ಟವಿಲ್ಲ. ಘನ ತ್ಯಾಜ್ಯದ ಸರಿಯಾದ ನಿರ್ವಹಣೆಯು ಬೀದಿ ನಾಯಿಗಳ ಸಮಸ್ಯೆಯ ಪರಿಣಾಮಕಾರಿ ನಿರ್ವಹಣೆಗೆ ಒಂದು ಕ್ರಮವಾಗಬಹುದು. ಇದಕ್ಕೆ ಹೆಚ್ಚಿನ ಗಮನ ನೀಡಬೇಕು. ಪ್ರಾಣಿಗಳಿಂದ ಉಂಟಾಗುವ ಸಮಸ್ಯೆಯನ್ನು ಪರಿಹರಿಸುವಲ್ಲಿ ಸಹಾನುಭೂತಿಯ ಅಗತ್ಯವನ್ನು ಕೋರ್ಟ್‌ನ ಈ ಆದೇಶವು ಗುರುತಿಸಿದೆ. ಹೀಗಾಗಿ ಈ ಆದೇಶವು ಸ್ವಾಗತಾರ್ಹವಾಗಿದೆ.

ಎದೆಗೂಡಿನ ಹಂದರ ಬಗೆದರೆ...

ಪಡಸಾಲೆ

ರಘುನಾಥ ಚ.ಹ.

‘ವೈಯಕ್ತಿಕವಾಗಿ ಹೇಳುವುದಾದರೆ, ಜೀವನದಲ್ಲಿ ನನಗೆ ಯಾರೂ ಬಂಧುಗಳಿಲ್ಲ. ಇರುವ ಏಕೈಕ ಬಂಧು ಧರ್ಮಸ್ಥಳದ ಮಂಜುನಾಥ.’

ವಿಧಾನಸಭೆಯಲ್ಲಿ ಶಾಸಕರೊಬ್ಬರು ಭಾವುಕ ದನಿಯಲ್ಲಿ ಹೇಳಿದ ಈ ಮಾತನ್ನು ಏನೆಂದು ಅರ್ಥೈಸುವುದು? ‘ಬಂಧುಗಳು ಎನಗಿಲ್ಲ ಬದುಕಿನಲಿ ಸುಖವಿಲ್ಲ’ (ಪುರಂದರದಾಸರು) ಎಂದು ಲೌಕಿಕಕ್ಕೆ ಬೆನ್ನುಹಾಕಿದ ವ್ಯಕ್ತಿ ಭಗವಂತನಲ್ಲಿ ಮೊರೆಯಿಡುವುದನ್ನೂ ಅರ್ಥ ಮಾಡಿಕೊಳ್ಳಬಹುದು. ಸಾಮಾನ್ಯ ವ್ಯಕ್ತಿಯೊಬ್ಬ ಹೀಗೆ ಹೇಳಿದರೆ, ಭಾವುಕ ಪ್ರತಿಕ್ರಿಯೆ ಎಂದುಕೊಳ್ಳಬಹುದು. ಆದರೆ, ಲೋಕ ವ್ಯವಹಾರಗಳಲ್ಲಿ ನಿರತರಾಗಿ ಕುಟುಂಬವನ್ನು ಹೊಂದಿರುವ ವ್ಯಕ್ತಿಯೊಬ್ಬರು, ಅದರಲ್ಲೂ ವಿಧಾನಸಭಾ ಕ್ಷೇತ್ರವೊಂದನ್ನು ಪ್ರತಿನಿಧಿಸುವ ಶಾಸಕರು ಹೀಗೆ ಹೇಳಿದರೆ ಅದನ್ನು ಸರಿಯೆನ್ನಬಹುದೆ? ಸಹಜ ಎನ್ನಬಹುದೆ?

ಶಾಸಕರು ಆಸ್ತಿಕರಾಗಿರುವುದರಲ್ಲಿ, ತಮ್ಮ ಭಕ್ತಿಯ ಬಗ್ಗೆ ಹೇಳಿಕೊಳ್ಳುವುದರಲ್ಲಿ ಯಾವ ಸಮಸ್ಯೆಯೂ ಇಲ್ಲ. ಆದರೆ, ಜನರಿಂದ ಚುನಾಯಿತನಾದ ಪ್ರತಿನಿಧಿಯೊಬ್ಬರು ದೇವರ ಹೊರತು ತನಗ್ಯಾರೂ ಬಂಧುಗಳಿಲ್ಲವೆಂದು ಹೇಳಿದರೆ, ಅದನ್ನು ‘ಆತ್ಮವಂಚನೆ’ ಎಂದೇ ಹೇಳಬೇಕಾಗುತ್ತದೆ. ಅದು ತನ್ನ ಕ್ಷೇತ್ರದ ಮತದಾರರಿಗೆ ಮಾಡುವ ವಂಚನೆಯೂ ಹೌದು, ಕುಟುಂಬದ ಸದಸ್ಯರಿಗೆ ಮಾಡುವ ವಂಚನೆಯೂ ಹೌದು.

ರಾಜಕಾರಣಿಯೊಬ್ಬನ ಪಾಲಿಗೆ ತನ್ನ ಕ್ಷೇತ್ರಕ್ಕಿಂತಲೂ ಮಿಗಿಲಾದ ‘ಧರ್ಮ’ಸ್ಥಳ ಹಾಗೂ ಕ್ಷೇತ್ರದ ಮತದಾರರು– ನಿವಾಸಿಗಳಿಗಿಂತಲೂ– ಮಿಗಿಲಾದ ದೈವ–ಬಂಧು ಇರಬಾರದು. ತನ್ನ ಕುಟುಂಬದಾಚೆಗೆ, ಮತಕ್ಷೇತ್ರದಾಚೆಗೆ ಬಂಧುಗಳನ್ನು ಯಾರಾದರೂ ಹುಡುಕ ಹೊರಟರೆ ಅವರ ರಾಜಕಾರಣದ ಪ್ರಾಮಾಣಿಕತೆಯೇ ಪ್ರಶ್ನಾರ್ಹ.

ಏಕೈಕ ಬಂಧುವಿನ ರೂಪದಲ್ಲಿ ದೇವರನ್ನು ನೋಡುವ ಶಾಸಕರ ಮಾತನ್ನು ವೈಯಕ್ತಿಕ ನೆಲೆಯಲ್ಲಿ ನೋಡುವ ಅಗತ್ಯವಿಲ್ಲ. ಅದು, ಈ ಹೊತ್ತಿನ ಅನೇಕ ಜನಪ್ರತಿನಿಧಿಗಳ ಹೃದಯದ ಮಾತೂ ಹೌದು. ಇಂಥ ಜನಪ್ರತಿನಿಧಿಗಳೇ, ಧರ್ಮಸ್ಥಳದ ಪಾವಿತ್ರ್ಯಕ್ಕೆ ಧಕ್ಕೆ ಒದಗಿರುವ ಬಗ್ಗೆ ಆತಂಕ ವ್ಯಕ್ತಪಡಿಸುತ್ತಿರುವುದು. ಪಕ್ಷಭೇದ ಮರೆತು ಧರ್ಮಸ್ಥಳ ಕ್ಷೇತ್ರದ ಪಾವಿತ್ರ್ಯ ರಕ್ಷಣೆಗೆ ಬೆಂಬಲ ವ್ಯಕ್ತಪಡಿಸುತ್ತಿರುವುದು. ಧರ್ಮದ ಬಗೆಗಿನ, ಧರ್ಮಸ್ಥಳದ ಬಗೆಗಿನ ಇವರ ಬದ್ಧತೆ ಅಚ್ಚರಿ ಹುಟ್ಟಿಸುವಂತಿದ್ದರೂ ಅಸಹಜವೇನಲ್ಲ. ಆದರೆ, ಈ ಬದ್ಧತೆಯ ಬೆಳಕಿನಲ್ಲಿ ಅಸಹಜವಾಗಿ ಕಾಣಿಸುತ್ತಿರುವ ಸಂಗತಿಯೊಂದನ್ನು ಗಮನಿಸಬೇಕಾಗಿದೆ: ತಮಗೆ ನೇರವಾಗಿ ಸಂಬಂಧಪಡದ ಕ್ಷೇತ್ರವೊಂದರ ಕುರಿತು ಜನಪ್ರತಿನಿಧಿಗಳು ವ್ಯಕ್ತಪಡಿಸುತ್ತಿರುವ ಬದ್ಧತೆ, ತಾವು ಪ್ರತಿನಿಧಿಸುತ್ತಿರುವ ಕ್ಷೇತ್ರದ ಬಗ್ಗೆ ಎಂದಾದರೂ ವ್ಯಕ್ತಪಡಿಸಿದ್ದಾರೆಯೆ? ತಮ್ಮ ಕ್ಷೇತ್ರದ ಪಾವಿತ್ರ್ಯಕ್ಕೆ ಗಾಸಿಯಾಯಿತೆನ್ನುವ ಆತಂಕ, ತಾವು ಪ್ರತಿನಿಧಿಸುವ ಕ್ಷೇತ್ರದ ಅಭಿವೃದ್ಧಿ ನಿರೀಕ್ಷಿತ ಮಟ್ಟದಲ್ಲಿ ಆಗುತ್ತಿಲ್ಲವೆನ್ನುವ ಕಳವಳ ಅವರನ್ನು ಎಂದಾದರೂ ಕಾಡಿದೆಯೆ? ಕಾಡಿದ್ದೇ ಆದಲ್ಲಿ ಆ ಕ್ಷೇತ್ರಗಳು ಯಾಕೆ ಅಭಿವೃದ್ಧಿ ಹೊಂದಿಲ್ಲ.

ಧರ್ಮಸ್ಥಳದ ಬಗ್ಗೆ ಅಪಪ್ರಚಾರ ನಡೆಯುತ್ತಿದೆ ಎಂದು ಜನಪ್ರತಿನಿಧಿಗಳು ವಿಧಾನಮಂಡಲದಲ್ಲಿ ಕಳವಳ, ಆಕ್ರೋಶ ವ್ಯಕ್ತಪಡಿಸಲು ಪೈಪೋಟಿ ನಡೆಸುತ್ತಿದ್ದ ಸಂದರ್ಭದಲ್ಲೇ, ಒಳಮೀಸಲಿನಲ್ಲಿ ತಾವು ಮೂಲೆಗುಂಪಾಗಿರುವ ಬಗ್ಗೆ ಅಲೆಮಾರಿ ಸಮುದಾಯಗಳು ಅಳಲು ತೋಡಿಕೊಳ್ಳುತ್ತಿದ್ದಾರೆ. ನೈಜ ಜನಪ್ರತಿನಿಧಿಯೊಬ್ಬನಿಗೆ ಅಸಹಾಯಕ ವ್ಯಕ್ತಿಗಳಿಗಿಂತಲೂ ಮಿಗಿಲಾದ ಬಂಧು ಅಥವಾ ದೈವವಿರಲಾರದು. ದುರದೃಷ್ಟಕರ ಸಂಗತಿಯೆಂದರೆ, ವಿಧಾನಸೌಧಕ್ಕೆ ಸಮೀಪದಲ್ಲಿರುವ ಸ್ವಾತಂತ್ರ್ಯ ಉದ್ಯಾನದಲ್ಲಿ ನ್ಯಾಯಕ್ಕಾಗಿ ಆಗ್ರಹಿಸಿ ನಡೆಯುತ್ತಿರುವ ಅಲೆಮಾರಿಗಳ ಹೋರಾಟದ ಬಗ್ಗೆ ಜನಪ್ರತಿನಿಧಿಗಳು ಸಂವೇದನಾಶೂನ್ಯರಾಗಿದ್ದಾರೆ. ಅಲೆಮಾರಿಗಳಿಗೆ ನ್ಯಾಯ ದೊರಕಿಸಿಕೊಡುವುದಕ್ಕಿಂತಲೂ ಮಿಗಿಲಾದ ‘ಧರ್ಮಪಾಲನೆ’ ಇಲ್ಲ ಎನ್ನುವುದು ಅವರಿಗೆ ತಿಳಿಯದ್ದೇನಲ್ಲ. ಆದರೆ, ಓಟು ತಂದುಕೊಡದ ‘ಧರ್ಮ’ ಸದ್ಯದ ರಾಜಕಾರಣಿಗಳಿಗೆ ಧರ್ಮವೇ ಅಲ್ಲ.

> ಮಣ್ಣನ್ನು ಅಗೆದು ಅಸ್ಥಿಪಂಜರಗಳನ್ನು ಹುಡುಕುವ ಪ್ರಯತ್ನ ಯಶಸ್ವಿಯಾದಂತಿಲ್ಲ. ಮಣ್ಣನ್ನು ಅಗೆಯುವ ಬದಲು, ತಾವು ಪ್ರತಿನಿಧಿಸುವ ಕ್ಷೇತ್ರಗಳನ್ನು ನಿರ್ಲಕ್ಷಿಸಿ, ಬೇರೊಂದು ಕ್ಷೇತ್ರದ ಪಾವಿತ್ರ್ಯಕ್ಕೆ ಧಕ್ಕೆಯಾಗಿದೆ ಎಂದು ಕಳಕಳಿ ವ್ಯಕ್ತಪಡಿಸುವ ಜನಪ್ರತಿನಿಧಿಗಳ ಅಂತರಂಗದ ಉತ್ಖನನ ನಡೆಯಬೇಕು. ಅಲ್ಲಿ ಅಸ್ಥಿಪಂಜರಗಳ ಬಣವೆಯೇ ಎದುರಾಗಬಹುದು!

ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ದೌರ್ಜನ್ಯದ ಆರೋಪಗಳ ಹಿನ್ನೆಲೆಯಲ್ಲಿ, ‘ವಿಶೇಷ ತನಿಖಾ ತಂಡ’ (ಎಸ್‌ಐಟಿ) ನಡೆಸಿದ ಶೋಧದಲ್ಲಿ ಅಸ್ಥಿಪಂಜರಗಳು ದೊರಕಿಲ್ಲ ಎನ್ನುವುದು ಖಚಿತವಾಗುತ್ತಿರುವಂತೆಯೇ, ಕ್ಷೇತ್ರದ ಪಾವಿತ್ರ್ಯದ ಬಗ್ಗೆ ಮಾತನಾಡುವವರಿಗೆ ಉತ್ಸಾಹಕ್ಕೆ ರೆಕ್ಕೆಗಳು ಮೂಡಿರುವಂತಿದೆ. ‘ಮಂಜುನಾಥನ ದರ್ಶನ ಪಡೆದು ಕ್ಷಮೆ ಕೇಳಲಿ’ ಎಂದು ಕೇಂದ್ರ ಸಚಿವರೊಬ್ಬರು ಮುಖ್ಯಮಂತ್ರಿಯನ್ನು ಒತ್ತಾಯಿಸಿದ್ದಾರೆ. ದರ್ಶನ ಮತ್ತು ಕ್ಷಮೆಯ ಪರಿಕಲ್ಪನೆ ಚೆನ್ನಾಗಿದೆ. ಆದರೆ, ಜನಪ್ರತಿನಿಧಿಗಳು ಮೊದಲು ಮಂಡಿಯೂರಿ ಕ್ಷಮೆ ಯಾಚಿಸಬೇಕಾದುದು ತಮ್ಮ ಮತಕ್ಷೇತ್ರಗಳ ಮತದಾರರನ್ನು ಅಲ್ಲವೇ? ತಾವು ಪ್ರತಿನಿಧಿಸುವ ಕ್ಷೇತ್ರದ ಜನರನ್ನು ಅಭಿವೃದ್ಧಿಯ ಬೆಳಕಿಗೆ ತರಲಾಗದ ತಮ್ಮ ಅಸಾಮರ್ಥ್ಯ–ವೈಫಲ್ಯದ ಬಗ್ಗೆ ಜನಪ್ರತಿನಿಧಿಗಳು ತೋರಿಕೆಗಾದರೂ ಮತದಾರರ ಕ್ಷಮೆ ಕೋರಿರುವ ನಿದರ್ಶನ ಈ ದೇಶದಲ್ಲಿ ಎಲ್ಲಿಯೂ ಇರುವಂತಿಲ್ಲ.

ರಾಜಕೀಯಕ್ಕಾಗಿ ಧರ್ಮವನ್ನು ಬಳಸುವ ರಾಜಕಾರಣಿಗಳು ನೈಜ ಧರ್ಮ ಯಾವುದೆನ್ನುವುದನ್ನು ಯೋಚಿಸುವುದಿಲ್ಲ. ಧರ್ಮದ ಮೂಲ ಮಾದರಿಗಳಿಗಾಗಿ ರಾಮಾಯಣ, ಮಹಾಭಾರತವನ್ನು ಉಲ್ಲೇಖಿಸುತ್ತೇವೆ. ರಾಮಾಯಣದ ಕಥಾನಾಯಕ ಶ್ರೀರಾಮ, ತನ್ನ ಧರ್ಮನಿಷ್ಠೆಯ ಒರೆಗಲ್ಲನ್ನಾಗಿ ನೆಚ್ಚಿದ್ದುದು ತಾನು ಪರಿಪಾಲಿಸುತ್ತಿದ್ದ ಸಾಮ್ರಾಜ್ಯದ ಶ್ರೀಸಾಮಾನ್ಯನ ಅಭಿಪ್ರಾಯಗಳನ್ನು. ಪತ್ನಿಯ ಚಾರಿತ್ರ್ಯದ ಬಗ್ಗೆ ಅಪರಿಮಿತ ನಂಬಿಕೆಯಿದ್ದರೂ, ಜನಾಭಿಪ್ರಾಯಕ್ಕೆ ಅಳುಕಿ ಸೀತೆಯನ್ನು ಅಗ್ನಿಪರೀಕ್ಷೆಗೆ ಗುರಿಪಡಿಸಲು ರಾಮ ಹಿಂಜರಿಯಲಿಲ್ಲ. ಕೊನೆಗೆ, ಪ್ರಜೆಯೊಬ್ಬನ ಮಾತಿಗೆ ಅಳುಕಿ ಒಡಲು ತುಂಬಿಕೊಂಡಿದ್ದ ಪತ್ನಿಯನ್ನೇ ತ್ಯಜಿಸಿದ. ಉಗ್ರ ನೈತಿಕತೆ ರಾಮನ ಧರ್ಮವಾಗಿತ್ತು. ಸರಳವಾಗಿ ಹೇಳುವುದಾದರೆ, ತಾನು ಪ್ರತಿನಿಧಿಸುವ ಪ್ರಜೆಗಳ ಆಶೋತ್ತರಗಳಿಗೆ ಉತ್ತರದಾಯಿ ಆಗಿರುವುದು ರಾಮನ ಧರ್ಮವಾಗಿತ್ತು. ಆ ರಾಮನನ್ನು ಮಾದರಿ ಎಂದು ಹೇಳಿಕೊಳ್ಳುತ್ತಿರುವವರು ಅನುಸರಿಸುತ್ತಿರುವ ಧರ್ಮ ಯಾವುದು? ರಾಮನ ಹೆಸರನ್ನು ಹಾಗೂ ರಾಮಧನುವಿನ ಠೇಂಕಾರವನ್ನಷ್ಟೇ ಉಳಿಸಿಕೊಂಡಿರುವ ಇಂದಿನ ರಾಜಕಾರಣಿಗಳು, ರಾಮನ ಧರ್ಮವನ್ನು ಮೂಲೆಗುಂಪು ಮಾಡಿದ್ದಾರೆ. ಧರ್ಮರಕ್ಷಣೆಯ ಹೆಸರಿನಲ್ಲಿ ಈಗ ಆಗುತ್ತಿರುವುದು, ಭಾರತೀಯ ಸ್ಮೃತಿಗಳ ಮೂಲ ಮಾದರಿಗಳನ್ನು ಅವಮಾನಿಸುವ ಕೆಲಸ.

ರಾಮನನ್ನು ಅಪಾರವಾಗಿ ಪ್ರೇಮಿಸುತ್ತಿದ್ದ ಮಹಾತ್ಮ ಗಾಂಧೀಜಿ ಅವರ ಧರ್ಮದ ಕೇಂದ್ರದಲ್ಲಿ ಇದ್ದುದು ನೈತಿಕತೆಯೇ. ಆದರೆ, ಗಾಂಧಿಯ ಧರ್ಮದ ಪರಿಕಲ್ಪನೆ ಏಕಮುಖವಾಗಿರಲಿಲ್ಲ. ಗಾಂಧಿ ರಾಜಕಾರಣದ ಧರ್ಮದಲ್ಲಿ ಬುದ್ಧನ ಪ್ರೇಮದೊಂದಿಗೆ ಕ್ರಿಸ್ತನ ಕರುಣೆಯೂ ಇದೆ. ಈಶ್ವರನ ಜೊತೆಗೆ ಅಲ್ಲಾಹು ಕೂಡ ಇದ್ದಾನೆ. ಗಾಂಧಿ ಸೇರಿದಂತೆ ಮಾತೃಮಾದರಿಯ ನಾಯಕರೆಲ್ಲರೂ, ದೇಶದ ಬಹುತ್ವವನ್ನು ಪ್ರತಿನಿಧಿಸುವುದು ಹಾಗೂ ಅನುಸರಿಸುವುದನ್ನೇ ರಾಜಕಾರಣದಲ್ಲಿನ ಧರ್ಮದ ರೂಪದಲ್ಲಿ ಕಂಡರು. ಸ್ವಾತಂತ್ರ್ಯಾನಂತರ ಅಂಬೇಡ್ಕರ್ ಅರಿವಿನ ಬೆಳಕಿನಲ್ಲಿ ರೂಪುಗೊಂಡ ಸಂವಿಧಾನ ಕೂಡ ‘ಬಹುತ್ವ ಧರ್ಮ’ವನ್ನೇ ಪ್ರತಿಪಾದಿಸುತ್ತದೆ. ಧರ್ಮ ನಿರಪೇಕ್ಷತೆ ಎನ್ನುವುದನ್ನು ಧರ್ಮರಹಿತ ಎನ್ನುವ ಅರ್ಥದಲ್ಲಿ ನೋಡಬೇಕಾಗಿಲ್ಲ. ಧಾರ್ಮಿಕ ಬಹುತ್ವವೇ ಸಂವಿಧಾನದ ಜೀವಾಳವಾದ ಧರ್ಮ ನಿರಪೇಕ್ಷತೆಯಾಗಿದೆ. ಹಾಗಾಗಿ, ರಾಜಕೀಯದಲ್ಲಿ ಧರ್ಮವನ್ನು ಅಪೇಕ್ಷಿಸುವವರಿಗೆ ಸಂವಿಧಾನವೇ ಧರ್ಮವಾಗಿದೆ. ಈ ವಾಸ್ತವವನ್ನು ಅರ್ಥ ಮಾಡಿಕೊಂಡರೆ, ಧರ್ಮ ರಕ್ಷಣೆಯ ಹೋರಾಟ ಎನ್ನುವುದೇ ಅರ್ಥಹೀನವಾಗುತ್ತದೆ; ರಾಜಕಾರಣದ ಹೆಸರಿನಲ್ಲಿ ಧರ್ಮರಕ್ಷಣೆ ಮಾಡುತ್ತಿದ್ದೇವೆ ಎಂದು ಬಿಂಬಿಸಿಕೊಳ್ಳುತ್ತಿರುವ ವರ್ತಮಾನದ ರಾಜಕಾರಣಿಗಳು ಸಂವಿಧಾನಕ್ಕೆ ಅಪಚಾರ ಮಾಡುತ್ತಿರುವುದು, ಧರ್ಮದ ಹೆಸರಿನಲ್ಲಿ ಅಧರ್ಮ ಎಸಗುತ್ತಿರುವುದು ಸ್ಪಷ್ಟವಾಗಿ ಕಾಣಿಸುತ್ತದೆ.

ಧರ್ಮಸ್ಥಳದಲ್ಲಿ ಅಸ್ಥಿಪಂಜರಗಳಿಗಾಗಿ ನಡೆಸಿದ ಶೋಧ ವರ್ತಮಾನದ ವಿರೋಧಭಾಸಗಳನ್ನು ಸಂಕೇತಿಸುವ ರೂಪಕದಂತಿದೆ. ಒಂದಷ್ಟು ಕಡೆ ಮಣ್ಣು ಅಗೆದು ಅಸ್ಥಿಪಂಜರಗಳ ಹುಡುಕಾಟ ನಡೆಯಿತಷ್ಟೇ; ಆದರೆ, ನಿಜವಾದ ಅಗೆತ ಆಗಬೇಕಾಗಿದ್ದುದು ನಮ್ಮನ್ನು ಪ್ರತಿನಿಧಿಸುವವರ ಮನಸ್ಸುಗಳಲ್ಲಿ. ಯಾವ ಜನಪ್ರತಿನಿಧಿಯ ಮನಸ್ಸಿನಲ್ಲಿ ಉತ್ಖನನ ನಡೆದರೂ, ಅಲ್ಲಿ ಅಸ್ಥಿಪಂಜರಗಳ ಬಣವೆಯೇ ದೊರೆಯುತ್ತದೆ ಎನ್ನುವುದನ್ನು ರಾಜಕಾರಣದ ಸೂಕ್ಷ್ಮಗಳನ್ನು ತಿಳಿದ ಯಾರೂ ಅಲ್ಲಗಳೆಯಲಾರರು. ದುರದೃಷ್ಟಕರ ಸಂಗತಿಯೆಂದರೆ, ಭ್ರಷ್ಟಗೊಂಡ ವ್ಯವಸ್ಥೆಯ ಭಾಗವಾಗಿರುವ ನಮ್ಮ ಎದೆಗಳಲ್ಲೂ ಅಸ್ಥಿಪಂಜರಗಳ ಚೂರುಪಾರು ಮುರುಕುಗಳು ಯಾವುದೋ ಮಾಯದಲ್ಲಿ ಬಂದು ಬಿದ್ದಿರುವುದು. ಸತ್ಯ ಹುದುಗಿರುವುದು ಮಣ್ಣಲ್ಲಲ್ಲ, ಮನಸ್ಸುಗಳಲ್ಲಿ. ಎಷ್ಟು ಜನರ ಅಂತರಂಗದಲ್ಲಿ ಅಂತಃಕರಣದ ಅಂತರ್ಜಲದ ಒರತೆ ಇದೆಯೆಂದು ಹೇಳಲಾಗದು; ಅಸ್ಥಿಪಂಜರಗಳಂತೂ ಇದ್ದೇ ಇವೆ.

ಯಾವುದೋ ಕ್ಷೇತ್ರದ ಬಗ್ಗೆ ಮಾತನಾಡುತ್ತ ತಮ್ಮ ಕ್ಷೇತ್ರವನ್ನು ನಿರ್ಲಕ್ಷಿಸುವ– ಕ್ಷೇತ್ರದ ಮತದಾರರು ತಮ್ಮ ಬಗ್ಗೆ ಏನನ್ನು ಯೋಚಿಸಬಹುದೆನ್ನುವುದರ ಬಗ್ಗೆ ಅಳುಕಿಲ್ಲದ– ಜನಪ್ರತಿನಿಧಿಗಳು ಪ್ರಜಾಪ್ರಭುತ್ವದ ಆಶಯಗಳನ್ನು ನಿರಂತರವಾಗಿ ಮುಕ್ಕಾಗಿಸುತ್ತಿದ್ದಾರೆ. ಕಾಳಜಿ, ವಾತ್ಸಲ್ಯ ಹಾಗೂ ಸೇವೆಯ ಮೂಲಕ ಪ್ರಜೆಗಳ ಮನಸ್ಸನ್ನು ಗೆಲ್ಲುವ ರಾಜಕಾರಣದ ಮಾದರಿ ಈಗ ನೇಪಥ್ಯಕ್ಕೆ ಸರಿದಿದೆ. ಈಗ ಇರುವುದು, ಪ್ರಜೆಗಳನ್ನು ಒಂದಲ್ಲಾ ಒಂದು ಬಗೆಯ ಅಮಲಿನಲ್ಲಿ ಅಥವಾ ಅಂಕೆಯಲ್ಲಿ ಇರಿಸಿಕೊಳ್ಳುವ ರಾಜಕಾರಣ. ಹಣ, ಜಾತಿ, ಧರ್ಮ, ಪಶುಬಲ, ಇವೆಲ್ಲವೂ ಯಶಸ್ವಿ ರಾಜಕಾರಣದ ಭಾಗವಾಗಿವೆ. ರಾಜಕಾರಣದಲ್ಲಿ ಮೌಲ್ಯಗಳೆನ್ನುವ ಅಸ್ಥಿಪಂಜರಗಳನ್ನು ಬಡಪಾಯಿ ಶ್ರೀಸಾಮಾನ್ಯ ಹುಡುಕುತ್ತಿದ್ದಾನೆ. ಸಿಕ್ಕರೆ ನಿರಾಶೆ, ಸಿಗದೆಹೋದರೆ ದಿಗ್ಭ್ರಮೆ.

ವಾಚಕರ ವಾಣಿ

ಹಿಂದಿ ಶಿಕ್ಷಕರಿಗೂ ಕನ್ನಡ ಕಲ್ಪವೃಕ್ಷ

ತಮಿಳುನಾಡಿನ ಸರ್ಕಾರವು ಹಿಂದಿಯನ್ನು ಒತ್ತಟ್ಟಿಗಿಟ್ಟು ದ್ವಿಭಾಷಾ ನೀತಿಯನ್ನು ಅಪ್ಪಿದಾಗ ಇದ್ದ ಹಿಂದಿ ಶಿಕ್ಷಕರು, ಮುಂದೆ ‘ತಮಿಳು’ ಶಿಕ್ಷಕರಾಗಬೇಕಾಯಿತು. ಕರ್ನಾಟಕ ಸರ್ಕಾರವು ದ್ವಿಭಾಷಾ ಸೂತ್ರ ಹಿಡಿದರೆ ‘ಹಿಂದಿ ಟೀಚರ್’ಗಳು ಚಿಂತಿಸಬೇಕಿಲ್ಲ. ಮಕ್ಕಳಿಗೆ ಕಲಿಸಲು ಕನ್ನಡ ‘ಕಲಿತುಕೊಂಡು’ ತಮ್ಮ ಹುದ್ದೆ ಉಳಿಸಿಕೊಳ್ಳಲು ಅಡ್ಡಿಯಿಲ್ಲ.

ಡಿ.ವಿ. ಮೋಹನ ಪ್ರಕಾಶ್, ಮೈಸೂರು

ರಕ್ಷಣೆಗೆ ಯಾರ ಮೊರೆ ಹೋಗುವುದು?

‘**ಬೀದಿ** ನಾಯಿ ರಕ್ಷಿಸಿ ಆಂದೋಲನ’ ನೋಡಿ ಸಂತೋಷ ಮತ್ತು ದಿಗ್ಭ್ರಮೆ ಎರಡೂ ಒಟ್ಟಿಗೆ ಆಯಿತು. ‘ಬೀದಿ ನಾಯಿಗಳಿಂದ ನಮ್ಮನ್ನು ರಕ್ಷಿಸಿ’ ಎಂದು ಬಡ ಪಾದಚಾರಿಗಳು ಯಾರಲ್ಲಿ ಮೊರೆ ಇಡುವುದು ಎಂಬುದು ತಿಳಿಯುತ್ತಿಲ್ಲ. ಸುಪ್ರೀಂ ಕೋರ್ಟ್ ತನ್ನ ತೀರ್ಪು ನೀಡಿದೆ. ಬಿಬಿಎಂಪಿ ಆಡಳಿತ ಕಿವುಡಾಗಿದೆ. ಪಾದಚಾರಿಗಳದ್ದು ಅರಣ್ಯರೋದನವಾಗಿದೆ.

ಚಂದ್ರಶೇಖರ ಎಚ್.ಎಸ್., ಬೆಂಗಳೂರು

‘ಕೋಟಿ’ ಗಳಿಕೆ ವಿದ್ಯೆಯೇ ಮೇಲು!

‘**ಕೋಟಿ** ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು’ ಎಂದು ಸರ್ವಜ್ಞ ಹೇಳಿದ್ದಾನೆ. ಆದರೆ, ದೇಶದ ಹಲವು ರಾಜ್ಯಗಳ ಮುಖ್ಯಮಂತ್ರಿಗಳು ಇದನ್ನು ತಪ್ಪಾಗಿ ಅರ್ಥೈಸಿಕೊಂಡರೋ ಏನೋ? ಮೇಟಿಗಿಂತಲೂ ‘ಕೋಟಿ’ ಮಾಡುವ ವಿದ್ಯೆಯೇ ಮೇಲು ಎಂದು ಅವರು ಅಂದುಕೊಂಡಂತಿದೆ. ಸಿರಿವಂತ ಮುಖ್ಯಮಂತ್ರಿಗಳ ಪಟ್ಟಿ ನೋಡಿದಾಗ ಹಾಗೆಯೇ ಅನಿಸುತ್ತದೆ. ಜನರಿಗೂ ಆ ವಿದ್ಯೆ ಹೇಳಿಕೊಟ್ಟರೆ ಕೋಟಿ ಪುಣ್ಯವೂ ಅವರದಾಗಬಹುದು.

ಶಾಂತಿನಾಥ ಕೆ. ಹೋತಪೇಟಿ, ಹುಬ್ಬಳ್ಳಿ

ಶಿಕ್ಷಕರ ಗಾಯದ ಮೇಲೆ ಬರೆ

ಬೆಂಗಳೂರಿನ ಬಿಬಿಎಂಪಿಯ ಶಾಲಾ–ಕಾಲೇಜುಗಳಲ್ಲಿ ಸುಮಾರು 804 ಅತಿಥಿ ಶಿಕ್ಷಕರು, ಉಪನ್ಯಾಸಕರು ಕರ್ತವ್ಯ ನಿರ್ವಹಿಸುತ್ತಿದ್ದರು. ಸುಮಾರು 15 ವರ್ಷಗಳಿಂದಲೂ ಕಡಿಮೆ ಗೌರವಧನಕ್ಕೆ ದುಡಿಯುತ್ತಿದ್ದ ಅವರಿಗೆ ಇತ್ತೀಚೆಗೆ ಮಾಸಿಕ ₹22,845 ಗೌರವಧನ ನೀಡಲಾಗುತ್ತಿದೆ. ಸರ್ಕಾರದ ಕೆಲ ಗೊಂದಲಕಾರಿ ನಿರ್ಣಯದಿಂದ ಮೂರು ವರ್ಷದಿಂದ ಕಡಿಮೆ ಫಲಿತಾಂಶ ಬಂದಿರುವ ಶಾಲೆಗಳ 37 ಶಿಕ್ಷಕರನ್ನು ಸೇವೆಯಿಂದ ವಜಾಗೊಳಿಸಲಾಗಿದೆ. ಶಿಕ್ಷಕರಿಗೆ, ಬಿಬಿಎಂಪಿಯ ನಿರ್ಧಾರ ಗಾಯದ ಮೇಲೆ ಬರೆ ಎಳೆದಂತಾಗಿದೆ. ಕಡಿಮೆ ಫಲಿತಾಂಶಕ್ಕೆ ಶಿಕ್ಷಕರೊಬ್ಬರೇ ಹೊಣೆಯಲ್ಲ. ಶಿಕ್ಷಕರನ್ನು ಬಲಿಪಶು ಮಾಡುವುದು ಸರಿಯಲ್ಲ.

ಸತ್ಯಮೂರ್ತಿ ಗೂಗಿ, ಬೆಂಗಳೂರು

ಕಪಟ ನಾಟಕ ರೂವಾರಿಗಳಿಗೇನು ಶಿಕ್ಷೆ?

ಭಾರತ ಸನಾತನ ಧರ್ಮದ ನೆಲೆಬೀಡು. ಧಾರ್ಮಿಕ ನಂಬಿಕೆ, ಆಚಾರ ವಿಚಾರ, ಅಪಾರ ಶ್ರದ್ಧೆ, ಸಾಂಸ್ಕೃತಿಕ ಹೊನ್ನ ಮಣ್ಣಿನ ಭೂಮಿ ಇದು. ನಮ್ಮ ಧರ್ಮದ ಮೇಲೆ ಅನಾದಿಕಾಲದಿಂದಲೂ ನಿರಂತರ ದೌರ್ಜನ್ಯ, ಅಪಪ್ರಚಾರ ನಡೆಯುತ್ತಲೇ ಬಂದಿದೆ. ಧರ್ಮಸ್ಥಳದ ತಲೆಬುರುಡೆ ಪ್ರಕರಣ ಇದಕ್ಕೊಂದು ಜೀವಂತ ನಿದರ್ಶನ. ಲಕ್ಷಾಂತರ ದೈವಾರಾಧಕರ ಮನಸ್ಸಿಗೆ ಗಾಸಿ ಉಂಟು ಮಾಡಿ, ಕಪಟ ನಾಟಕವಾಡಿದ ರೂವಾರಿಗಳಿಗೆ ಎಂತಹ ಶಿಕ್ಷೆ ವಿಧಿಸಬೇಕು?

ಮಂಜುನಾಥ್ ಜೈನ್ ಎಂ.ಪಿ., ಮಂಡ್ಯ

ತುಮಕೂರು ವಿ.ವಿ.ಗೆ ‘ತೀನಂಶ್ರೀ’ ಹೆಸರಿಡಿ

ತುಮಕೂರು ವಿಶ್ವವಿದ್ಯಾಲಯಕ್ಕೆ ಹೊಸ ಹೆಸರಿಡುವ ಪ್ರಯತ್ನಗಳು ಮುನ್ನೆಲೆಗೆ ಬಂದಿವೆ. ಯಾವುದೇ, ವಿಶ್ವವಿದ್ಯಾಲಯಕ್ಕೆ ಹೆಸರಿಡಲು ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡಿದವರ ಹೆಸರನ್ನು ಪರಿಗಣಿಸುವುದು ಸೂಕ್ತ. ಈಗಾಗಲೇ, ಶಿವಮೊಗ್ಗದ ವಿ.ವಿ.ಗೆ ಕುವೆಂಪು ಅವರ ಹೆಸರಿಡಲಾಗಿದೆ. ತುಮಕೂರು ಜಿಲ್ಲೆಯವರೇ ಆದ ತೀ.ನಂ. ಶ್ರೀಕಂಠಯ್ಯ ಅವರು, ಕನ್ನಡ ಭಾಷಾಶಾಸ್ತ್ರಕ್ಕೆ ಭದ್ರ ಬುನಾದಿ ಹಾಕಿಕೊಟ್ಟ ಆಚಾರ್ಯರು. ‘ತೀನಂಶ್ರೀ’ ಅವರ ‘ಭಾರತೀಯ ಕಾವ್ಯ ಮೀಮಾಂಸೆ’ಯು ಒಂದು ಆಚಾರ್ಯ ಕೃತಿ ಎಂದು ಕುವೆಂಪು ಬಣ್ಣಿಸಿದ್ದರು. ಹಾಗಾಗಿ, ವಿ.ವಿ.ಗೆ ‘ತೀನಂಶ್ರೀ’ ಹೆಸರಿಡುವುದು ಅರ್ಥಪೂರ್ಣ.

ಲಕ್ಷ್ಮೀಕಾಂತರಾಜು ಎಂ.ಜಿ., ಗುಬ್ಬಿ

ಗಣೇಶೋತ್ಸವ: ಪರಿಸರ ಸ್ನೇಹಿಯಾಗಲಿ

ವಿವಿಧ ವಿನ್ಯಾಸ, ಆಕಾರ ಹಾಗೂ ಕಲಾಕಾರರ ಕುಸುರಿಯಿಂದ ಅರಳಿದ ಗಣಪತಿ ಮೂರ್ತಿಗಳನ್ನು ನೋಡುವುದೇ ಆನಂದ. ಆದರೆ, ಆಚರಣೆ ಆಡಂಬರ ಆಗಬಾರದು. ಪರಿಸರಕ್ಕೆ ತೊಂದರೆಯಾಗದಂತೆ ಅಲಂಕಾರ ಮಾಡಬೇಕು. ಹಾಗೆಯೇ ಪರಿಸರ ಸ್ನೇಹಿ ಗಣೇಶನನ್ನು ಪೂಜಿಸಬೇಕು. ಹಬ್ಬದ ದಿನವಿಡೀ ಕಿವಿಗೆ ಹಾನಿಯಾಗುವ ವಾದ್ಯಗೋಷ್ಠಿಗಳ ಅವಶ್ಯಕತೆಯಿಲ್ಲ. ಪಟಾಕಿಯಂತೂ ಹಚ್ಚಲೇಬಾರದು. ಪಿಒಪಿಯಿಂದ (ಪ್ಲಾಸ್ಟರ್ ಆಫ್ ಪ್ಯಾರೀಸ್) ತಯಾರಿಸಿದ ಮೂರ್ತಿಗಳನ್ನು ಬಳಸದೆ, ಮಣ್ಣಿನ ಮೂರ್ತಿಗಳನ್ನು ಬಳಸುವ ಮೂಲಕ ಪರಿಸರ ಸಂರಕ್ಷಣೆ ಮಾಡುವುದು ಎಲ್ಲರ ಹೊಣೆ.

ಭೂಮಿಕಾ ರಂಗಪ್ಪ ದಾಸರಡ್ಡಿ, ಬದರಿ

ಹಬ್ಬುತ್ತಿದೆ ಇಲಿ ಜ್ವರ, ಇರಲಿ ಎಚ್ಚರ

ರಾಜ್ಯದ ಹಲವೆಡೆ ಇಲಿ ಜ್ವರ ಹರಡುತ್ತಿರುವುದು ವರದಿಯಾಗಿದೆ. ಮಳೆಯ ನಂತರ ನೀರು ನಿಂತಿರುವ ಸ್ಥಳಗಳು ಮತ್ತು ತುರ್ತು ವೈದ್ಯಕೀಯ ಸೌಲಭ್ಯದ ಕೊರತೆಯಿಂದಾಗಿ ರೋಗದ ತೀವ್ರತೆ ಹೆಚ್ಚುತ್ತಿದೆ. ಈ ರೋಗವು ಮನುಷ್ಯರಿಗೂ ಪ್ರಾಣಿಗಳಿಗೂ ಅಪಾಯಕಾರಿ. ಸರ್ಕಾರ ಮತ್ತು ಆರೋಗ್ಯ ಇಲಾಖೆಯು ತಕ್ಷಣವೇ ಗ್ರಾಮೀಣ ಪ್ರದೇಶಗಳಲ್ಲಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಚಿಕಿತ್ಸಾ ಕೇಂದ್ರಗಳ ವ್ಯವಸ್ಥೆ ಮಾಡಬೇಕು ಹಾಗೂ ಲಸಿಕೆಗಳನ್ನು ವಿತರಿಸಬೇಕು.

ವಿಜಯಕುಮಾರ್ ಎಚ್.ಕೆ., ರಾಯಚೂರು

ಬದುಕಿನ ವಿರೋಧಾಭಾಸ

ಸೆಲೆಬ್ರಿಟಿಗಳ ಕೋರ್ಟ್ ಕೇಸ್‌ಗಳು ಈ ಸೋಷಿಯಲ್ ಮೀಡಿಯಾ ಕಾಲದಲ್ಲಿ ಜನರಿಗೆ ಬಿಗ್ ಬಾಸ್ ರಿಯಾಲಿಟಿ ಶೋ ತರಹ ಕಾಣಿಸ್ತಿರೋದು ದುರಂತ!

ರೂಪ ಲಕ್ಷ್ಮಿ, ‘ಫೇಸ್‌ಬುಕ್’ನಿಂದ

ಕಿಡಿನುಡಿ

ಈ ಬಾರಿಯ ದಸರಾ ಮಹೋತ್ಸವದ ಉದ್ಘಾಟನೆಗೆ ಸಾಹಿತಿ ಬಾನು ಮುಷ್ತಾಕ್ ಅವರನ್ನು ಆಯ್ಕೆ ಮಾಡಿರುವುದನ್ನು ಟೀಕಿಸುವವರಿಗೆ ತಾಳ್ಮೆ ಇರಬೇಕು. ಬೆಂಕಿಯ ಕಾವು ತೆಗೆದುಕೊಳ್ಳಲು ಹೋಗಿ ಅದರಲ್ಲಿಯೇ ಸುಟ್ಟು ಹೋಗಬಾರದು.

ತನ್ವೀರ್ ಸೇಠ್, ಶಾಸಕ

25 ವರ್ಷಗಳ ಹಿಂದೆ

ಶನಿವಾರ, 26-8-2000

• ಆಂಧ್ರ: ಮಳೆಗೆ 130 ಬಲಿ

ಹೈದರಾಬಾದ್, ಆಗಸ್ಟ್ 25 (ಪಿಟಿಐ)– ಆಂಧ್ರಪ್ರದೇಶದಲ್ಲಿ ಎಡೆಬಿಡದೆ ಸುರಿಯುತ್ತಿರುವ ಅಧಿಕ ಮಳೆಗೆ ಬಲಿಯಾದವರ ಸಂಖ್ಯೆ 130ಕ್ಕೆ ಏರಿದೆ.

ಸೇನೆ ಮತ್ತು ಭಾರತೀಯ ವಾಯುಪಡೆ ನೀರಿನಿಂದ ಆವೃತವಾಗಿರುವ ಜನರ ರಕ್ಷಣೆ ಹಾಗೂ ಆಹಾರ ಪೂರೈಕೆ ಕಾರ್ಯದಲ್ಲಿ ನಿರತವಾಗಿವೆ. ನಿನ್ನೆ ರಾತ್ರಿಯಿಂದೀಚೆಗೆ ಮಳೆ ನೀರಿನಲ್ಲಿ ಹುದುಗಿದ್ದ 26 ದೇಹಗಳು ಪತ್ತೆಯಾಗಿವೆ.

• ಜೈಲಿನಿಂದ 6 ಕೈದಿಗಳ ಪರಾರಿ

ಹಾಸನ, ಆಗಸ್ಟ್ 25– ನಗರದಲ್ಲಿರುವ ಜಿಲ್ಲಾ ಉಪ ಕಾರಾಗೃಹದಿಂದ ಆರು ಮಂದಿ ವಿಚಾರಣಾಧೀನ ಕೈದಿಗಳು ರಾಜಾರೋಷವಾಗಿ ಮುಖ್ಯದ್ವಾರದ ಮೂಲಕವೇ ಪರಾರಿಯಾಗಿರುವ ಘಟನೆ ಇಂದು ಬೆಳಿಗ್ಗೆ ನಡೆದಿದೆ.

ಉಪ ಕಾರಾಗೃಹದ ನಾಲ್ಕು ದ್ವಾರಗಳನ್ನು ನಿರಾಯಾಸವಾಗಿ ದಾಟಿ ಹೊರಗೆ ಬಂದ ನಂತರ ಕೈದಿಗಳಾದ ಆದಿಲ್ ಷರೀಫ್, ತೇಜಸ್ವಿ, ಶ್ರೀನಿವಾಸ, ರಮೇಶ್, ಅಣ್ಣಪ್ಪ, ಮೋಹನ್ ಪರಾರಿಯಾಗಿದ್ದಾರೆ.

75 ವರ್ಷಗಳ ಹಿಂದೆ

ಶನಿವಾರ, 26-8-1950

• ಸೆ. 1ರಿಂದ ಪೆಟ್ರೋಲ್ ರೇಷನಿಂಗ್ ರದ್ದು

ಬೆಂಗಳೂರು, ಆಗಸ್ಟ್ 25– ಬರುವ ಸೆಪ್ಟೆಂಬರ್ 1ರಿಂದ ಮೈಸೂರು ಸಂಸ್ಥಾನಾದ್ಯಂತ ಪೆಟ್ರೋಲ್ ರೇಷನಿಂಗ್ ರದ್ದಾಗುವುದು.

ಇದರ ಜೊತೆಗೆ ಮದ್ರಾಸ್ ಪ್ರಾಂತ, ಹೈದರಾಬಾದ್, ತಿರುವಾಂಕೂರು–ಕೊಚ್ಚಿ ಒಕ್ಕೂಟ, ಈ ದಕ್ಷಿಣ ಭಾರತ ಭಾಗಗಳು ಮತ್ತು ದೆಹಲಿ, ಒರಿಸ್ಸಾ, ಪಶ್ಚಿಮ ಬಂಗಾಳ, ಬಿಹಾರ, ರಾಜಸ್ತಾನ ಮತ್ತು ಸೌರಾಷ್ಟ್ರ ಈ ಪ್ರದೇಶಗಳಲ್ಲೂ ಪೆಟ್ರೋಲನ್ನು ಡಿ–ರೇಷನ್ ಮಾಡಲು ಸರ್ಕಾರ ನಿರ್ಧರಿಸಿದೆ ಎಂದು ಗೊತ್ತಾಗಿದೆ.

• ಕಾಶ್ಮೀರ ಜನಮತ ಪ್ರದರ್ಶನದ ಮಾರ್ಗಕ್ಕೆ ವಿಶ್ವಸಂಸ್ಥೆಯ ಬೆಂಬಲ

ನ್ಯೂಯಾರ್ಕ್, ಆಗಸ್ಟ್ 25– ಕಾಶ್ಮೀರದ ಜನಾಭಿಪ್ರಾಯ ವ್ಯಕ್ತಪಡಿಸುವುದಕ್ಕೆ ಅವಕಾಶವಾಗುವ ಮಾರ್ಗವನ್ನು ವಿಶ್ವಸಂಸ್ಥೆಯು ಅನುಸರಿಸಲಿದೆ ಎಂದು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯು ಇಂದು ಕಾಶ್ಮೀರ ಬಿಕ್ಕಟ್ಟಿನ ಬಗ್ಗೆ ಅಗ್ರಲೇಖನ ಬರೆದಿದೆ. ಈ ಸಮಸ್ಯೆಯ ಶೀಘ್ರ ಪರಿಹಾರವು ಅನೇಕ ಕಾರಣಗಳಿಂದ ಮುಖ್ಯ ಎಂದಿದೆ.

ಚುರುಮುರಿ

ಭೂತ ಗಣರಾಜ್ಯ

• ಡಿ.ಎಸ್. ಲಿಂಗರಾಜು

ಪ್ರಪಂಚದ ದೆವ್ವ, ಭೂತ, ಪಿಶಾಚಿಗಳೆಲ್ಲಾ ಜನರಲ್ ಬಾಡಿ ಮೀಟಿಂಗ್ ಸೇರಿದ್ದವು. ಸಂಘದ ಅಧ್ಯಕ್ಷನಾದ ಬ್ರಹ್ಮರಾಕ್ಷಸ, ‘ನನ್ನ ಪ್ರೀತಿಯ ದೆವ್ವ, ಭೂತ, ಪ್ರೇತ, ಪಿಶಾಚಿಗಳೇ’ ಅಂತ ಮಾತು ಆರಂಭಿಸಿದಾಗ, ಹಿಂದೆ ಗಲಾಟೆ ಸುರುವಾಯ್ತು. ‘ಯಾರ್ರೀ ಅದು. ಯಾಕೆ ಮನುಷ್ಯರ ಥರಾ ಆಡ್ತಿದ್ದೀರ. ಸ್ವಲ್ಪ ಡೀಸೆನ್ಸಿ ಇರಲಿ’ ಅಂತ ಅಧ್ಯಕ್ಷರು ಮಕ್ಕುಗಿದರು.

‘ಅಧ್ಯಕ್ಸರೇ, ನಾವೆಂಗೋ ನಂನಮ್ಮ ಗೋರಿ ಒಳಗೆ ಅಮಿಕ್ಕಂದು ಮಕ್ಕಂಡಿದ್ವಾ, ಯಾರೋ ಬಂದು, ಇಲ್ಲೇ ಹೂತುದ್ದೇ, ಇಲ್ಲೇ ಒಪ್ಪ ಮಾಡಿದ್ದೆ ಅಂತ ನೆಲ ಗೋರಿಸಿ ತೊಂದ್ರೆ ಕೊಡ್ತಾವ್ರೆ’ ಅಂತ ಪಿಶಾಚಿಯೊಂದು ಬುರುಡೆ ಕತೆ ಸುರು ಮಾಡಿತು.

‘ಇದ್ರೆ ನೆಮ್ದಿಯಾಗಿರ್ಬೇಕ್. ಆದ್ರೆ ಅದಕ್ಕೂ ನಿರ್ವಾಕಿಲ್ಲ. ಬಾಲಿವುಡ್, ಸ್ಯಾಂಡಲ್‌ವುಡ್ ಜನ ದಯ್ಯ, ಭೂತ ಅಂತ ಸಿನಿಮಾ ಮಾಡಿ ನಮ್ಮ ಮರ್ಯಾದೆ ತಗೀತಾವ್ರೆ’ ದೆವ್ವವೊಂದು ದುಃಖಿಸಿತು.

‘ದಿಟ ಕಯ್ಯಾ. ಹವಾ ತಕ್ಕಣಕೆ ಗೋರಿಯಿಂದ ಈಚೆಗೆ ಬಂದ್ರೆ ನಾಯಿಗಳು ನಮ್ಮನ್ನ ನೋಡಿ ವೊವ್ವೋ... ಅಂತ ಅಟ್ಟಾಡುಸ್ತವೆ. ನಾಯಿಗಳ ಕಣ್ಣಿಗೆ ಮಾತ್ರ ನಾವು ಕಾಣುಸ್ತೀವಂತಲ್ಲಾ ಅಧ್ಯಕ್ಸರೇ’ ಅಂತು ಇನ್ನೊಬ್ಬ ದಯ್ಯ.

‘ಅಷ್ಟೇ ಅಲ್ಲ ಕನ್ರೀ, ನೀನು ದೆವ್ವ, ನೀನು ಭೂತ, ನೀನು ಪಿಶಾಚಿ ಅಂತ ರಾಜಕಾರಣಿಗಳು ನಮ್ಮ ಹೆಸರು ತಕ್ಕಂದು ಬೋದಾಡಿಕ್ಯತ್ತಲೇ ಇರತರೆ. ನಡುರಾತ್ರಿವೊತ್ತು ಆಚೆಗೆಲ್ಲೂ ನಾವು ನಡೆಯಂಗೇ ಇಲ್ಲ. ಎತ್ತಗೋದ್ರೂ ಅಪಶಕುನ. ರಾಜಕಾರಣಿಗಳೇ ಎದುರಾಯ್ತರೆ’ ಸೀನಿಯರ್ ದೆವ್ವಕ್ಕೆ ಬೇಜಾರಾಗಿತ್ತು.

‘ಅದುಕ್ಕೇ ನಾನೇಳದು, ನಾವು ನಮ್ಮ ಯಂಗ್ ಪಿಶಾಚಿ, ದೆವ್ವಗಳನ್ನೆಲ್ಲಾ ಆನ್ ಅಫಿಶಿಯಲ್ ಡ್ಯೂಟಿ ಅಂತ ಓಓಡಿ ಕಳ್ಸಿ, ರಾಜಕಾರಣಿಗಳ ಅಮರಿಕ್ಯಂದು ಬಾಳಗೆಡಿಸನ. ಅವರಿಂದ ಯಾರು ಉದ್ಧಾರಾಗೋದೂ ಅಷ್ಟರಾಗೇ ಅದೆ’ ಎಂದರು ಅಧ್ಯಕ್ಷರು. ಆ ಮಾತಿಗೆ ಎಲ್ಲಾ ದೆವ್ವಗಳೂ ‘ಹಂಗೇ ಮಾಡಮು’ ಅಂತ ನಿರ್ಣಯ ತಕ್ಕಂದೋ.

ಸಂಗತ

ಸಾಮಾಜಿಕ ನ್ಯಾಯ ಮಾತಿಗೆ ಸೀಮಿತವೆ?

ಅಲೆಮಾರಿಗಳಿಗೆ ಪ್ರತ್ಯೇಕ ಒಳಮೀಸಲು ಕಲ್ಪಿಸದಿದ್ದರೆ, ಚಾರಿತ್ರಿಕ ಪ್ರಮಾದವು ಜರುಗಲಿಕ್ಕೆ ಸಿದ್ದರಾಮಯ್ಯ ಅವರು ಅವಕಾಶ ಮಾಡಿಕೊಟ್ಟಂತಾಗುತ್ತದೆ.

• ಡಿ.ಎಸ್. ಚೌಗಲೆ

‘**ಮೀಸಲಾತಿಯು** ಈ ನೆಲದ ಕಟ್ಟಕಡೆಯ ವ್ಯಕ್ತಿಗೂ ತಲುಪಬೇಕು’ ಎನ್ನುವುದು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಮಾತು. ಮುಖ್ಯಮಂತ್ರಿ ಸಿದ್ದರಾಮಯ್ಯನವರ ನಿಲುವು ಸಹ ಇದೇ ಆಗಿದೆ ಎನ್ನುವುದು ಅನೇಕರ ಭಾವನೆ.

ಹಲವು ಸಭೆ, ಸಮಾರಂಭಗಳಲ್ಲಿ ಸಿದ್ದರಾಮಯ್ಯ ಅವರು, ‘ಈ ರಾಜ್ಯದ ಕಟ್ಟಕಡೆಯವನಿಗೂ ನ್ಯಾಯ ಸಿಗಬೇಕು. ಹಸಿವು ಮುಕ್ತ ಕರ್ನಾಟಕ ಸಾಕಾರಗೊಳ್ಳಬೇಕು’ ಎಂದು ನ್ಯಾಯದ ವಕ್ತಾರರಂತೆ ಮಾತನಾಡಿದ್ದಾರೆ. ಆ ಮಾತುಗಳನ್ನು ಅನುಷ್ಠಾನಕ್ಕೆ ತರುವ ಕೆಲಸ ಈಗ ಆಗಬೇಕಾಗಿದೆ; ಒಳಮೀಸಲಾತಿಯಲ್ಲಿ ಅಲೆಮಾರಿಗಳಿಗೆ ನ್ಯಾಯ ದೊರಕಿಸಿಕೊಡಬೇಕಿದೆ.

ಈ ವರ್ಷದ ‘ಬುಕ್ ಬ್ರಹ್ಮ’ ಸಾಹಿತ್ಯೋತ್ಸವದಲ್ಲಿ ‘ಉಚಲ್ಯಾ’ ಆತ್ಮಕಥನದ ಖ್ಯಾತಿಯ ಮರಾಠಿ ಲೇಖಕ ಲಕ್ಷ್ಮಣ ಗಾಯಕವಾಡ ಭಾಗವಹಿಸಿದ್ದರು. ಅವರು ಅಲೆಮಾರಿ ಸಮುದಾಯಕ್ಕೆ ಸೇರಿದವರು. “ನಿಮಗೆಲ್ಲರಿಗೂ 1947ರಲ್ಲಿ ಸ್ವಾತಂತ್ರ್ಯ ದೊರಕಿದೆ. ಆದರೆ, ನಮಗೆಲ್ಲಿದೆ ಸ್ವಾತಂತ್ರ್ಯ? ನಾವು ತಾಯಿಯ ಗರ್ಭದಿಂದ ಈ ಪ್ರಪಂಚಕ್ಕೆ ಬಂದೊಡನೆಯೇ ‘ಕ್ರಿಮಿನಲ್ ಟ್ರೈಬ್’ ಎಂಬ ಹಣೆಪಟ್ಟಿ ಹಚ್ಚಿಕೊಂಡು ಜನ್ಮ ತಾಳುತ್ತೇವೆ. ನಂತರ ದ್ವಿತೀಯ ದರ್ಜೆಯ ನಾಗರಿಕರಾಗಿ ಬದುಕು ಸಾಗಿಸುತ್ತೇವೆ” ಎಂದು ಸಂವಾದದಲ್ಲಿ ಗಾಯಕವಾಡ ಅವರು ಹೇಳಿದ ಮಾತು ಸಹೃದಯರನ್ನು ಕಾಡುವಂತಿದೆ.

ಮಾತು ಮುಂದುವರಿಸಿದ ಅವರು, “1952ರಲ್ಲಿ ಅಂದಿನ ಪ್ರಧಾನಿ ಜವಾಹರಲಾಲ್ ನೆಹರೂ ಅವರು ನಮ್ಮನ್ನು ಮನುಷ್ಯರಂತೆ ಕಂಡರು. ನಮಗೆ ಅಂಟಿದ ಶಾಪವನ್ನು ಡಿನೋಟಿಫೈ ಮಾಡಿ ಹೊಡೆದೋಡಿಸಿದರು. ಕ್ರಿಮಿನಲ್ ಟ್ರೈಬ್ ಸಂಕೋಲೆಯಿಂದ ಬಿಡುಗಡೆಗೊಳಿಸಿದರು. ದುರ್ದೈವವೆಂದರೆ, ನಮ್ಮನ್ನು ಇಂದಿಗೂ ಎರಡನೆಯ ದರ್ಜೆಯ ನಾಗರಿಕರನ್ನಾಗಿಯೇ ಕಾಣಲಾಗುತ್ತದೆ. ಮಾನವತಾವಾದಿ ದೇವರಾಜ ಅರಸು ಅವರಂಥ ಪುಣ್ಯಾತ್ಮರನ್ನು ನೀವು (ಕರ್ನಾಟಕದವರು) ಕಂಡಿದ್ದೀರಿ. ಆ ದಿಸೆಯಲ್ಲಿ ನೀವು ಅದೃಷ್ಟಶಾಲಿಗಳು. ಕರ್ನಾಟಕದಲ್ಲಿರುವ ಗಂಟುಚೋರ ಸಮುದಾಯಕ್ಕೆ ನ್ಯಾಯ ಒದಗಿಸಲಾಗಿದೆ” ಎಂದರು.

ಆಂಧ್ರಪ್ರದೇಶ, ಮಹಾರಾಷ್ಟ್ರದಲ್ಲಿರುವ ‘ಉಚಲ್ಯಾ’ಗಳೆಂಬ ಅಲೆಮಾರಿಗಳನ್ನು ನಮ್ಮಲ್ಲಿ ಗಂಟುಚೋರ, ಗಂಟಿಚೋರರೆಂದು ಕರೆಯಲಾಗುತ್ತದೆ. ಈ ಸಮುದಾಯದವರ ಮನೆಮಾತು ತೆಲುಗು. ಅಪರಾಧದ ಹಿನ್ನೆಲೆಯಿಂದ ಮುಕ್ತಗೊಂಡರೂ, ಅಲೆಮಾರಿ ಸಮುದಾಯವನ್ನು ಮುಖ್ಯವಾಹಿನಿಯು ಇನ್ನೂ ಸ್ವೀಕಾರ ಮಾಡಿಲ್ಲ ಎನ್ನುವುದು ಲಕ್ಷ್ಮಣ ಗಾಯಕವಾಡರ ನೋವು. ಈ ನೋವು, ನಾಡಿನ ಬಹುತೇಕ ಅಲೆಮಾರಿ ಸಮುದಾಯಗಳದ್ದೂ ಆಗಿದೆ. ಅವರ ಸ್ಥಿತಿ ಎರಡನೇ ದರ್ಜೆಯ ನಾಗರಿಕನದ್ದೇ ಆಗಿದೆ.

ಅಲೆಮಾರಿಗಳು ಪ್ರಾದೇಶಿಕವಾಗಿ ವಿವಿಧ ರೂಪಗಳಲ್ಲಿ ಚದುರಿ ಹೋದ ಅಸಂಘಟಿತರು. ಇವರ ಬೆಂಬಲಕ್ಕೆ ಯಾರೂ ಇಲ್ಲ. ರಾಜಕೀಯ ಶಕ್ತಿಯಂತೂ ಇಲ್ಲವೇ ಇಲ್ಲ. ಅಲೆಮಾರಿಗಳೊಂದಿಗೆ ಹೋಲಿಸಿದರೆ, ಪರಿಶಿಷ್ಟ ಜಾತಿಯಲ್ಲಿನ ‘ಎಡ’ ಮತ್ತು ‘ಬಲ’ ಸಮುದಾಯಗಳು ಸಾಕಷ್ಟು ಬಲಿಷ್ಠವಾಗಿವೆ. ಅವು ಸಂಘಟಿತವಾಗಿವೆ ಹಾಗೂ ಸುದೀರ್ಘವಾದ ಸಂಘರ್ಷಗಳ ಪರಂಪರೆ ಹೊಂದಿವೆ. ಅವರಿಗೊಂದು ರಾಜಕೀಯ ಒಲವು ಮತ್ತು ಬಲವಿದೆ. ಮತಬ್ಯಾಂಕ್ ರೂಪದಲ್ಲಿ ಪರಿಗಣಿಸುವ ಸಮುದಾಯಗಳಾಗಿವೆ. ಅಲೆಮಾರಿಗಳು ಹಾಗಿಲ್ಲ. ಅಧಿಕಾರ ಕೇಂದ್ರಿತ ರಾಜಕೀಯದಲ್ಲಿ ಅವರಿಗೆ ಯಾವ ಮಹತ್ವವೂ ಇಲ್ಲ. ಸಂಘಟಿತರಲ್ಲದಿರುವುದರಿಂದ ರಾಜಕೀಯ ಇಚ್ಛಾಶಕ್ತಿಯು ಮರೀಚಿಕೆಯೇ ಸರಿ. ಒಗ್ಗಟ್ಟಿಲ್ಲದ ಮೂಕಜೀವಿಗಳು ಅವರು. ಇವರುಗಳಿಗೆ ಶಿಕ್ಷಣದ ಸೌಲಭ್ಯಗಳಿಲ್ಲ. ಎಲ್ಲೋ ಅಲ್ಲೊಬ್ಬರು ಇಲ್ಲೊಬ್ಬರು ಅಕ್ಷರದ ಬೆಳಕಿಗೆ ತಮ್ಮನ್ನು ಇತ್ತೀಚಿನ ವರ್ಷಗಳಲ್ಲಿ ಒಡ್ಡಿಕೊಳ್ಳುತ್ತಿದ್ದಾರೆ. ಅವರಿಗೆ ಒಳಮೀಸಲಿನ ಬಲ ದೊರೆತಲ್ಲಿ, ವ್ಯಕ್ತಿಗತವಾಗಿ ಮುಂದೆ ಬರಲು ಸಾಧ್ಯವಾಗುತ್ತದೆ. ಆ ವೈಯಕ್ತಿಕ ಬೆಳವಣಿಗೆ ಸಮುದಾಯಕ್ಕೆ ಪ್ರೇರಣೆ ಒದಗಿಸುತ್ತದೆ.

ಈ ಹಿಂದೆ ನ್ಯಾಯಮೂರ್ತಿ ಸದಾಶಿವ ಆಯೋಗವು ಅಲೆಮಾರಿಗಳಿಗೆ ಪ್ರತ್ಯೇಕ ಶೇ 1ರಷ್ಟು ಮೀಸಲಾತಿ ನೀಡಿತ್ತು. ಪ್ರಸ್ತುತ, ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಆಯೋಗ ಕೂಡ ಶೇ 1ರಷ್ಟು ಪ್ರತ್ಯೇಕ ಮೀಸಲಾತಿ ಕಲ್ಪಿಸಿದೆ. ಆದರೆ, ಆ ಪ್ರತ್ಯೇಕ ಮೀಸಲಾತಿಯನ್ನು ಸರ್ಕಾರ ಪರಿಗಣಿಸದೆ ಇರುವುದು ದುರದೃಷ್ಟಕರ. ಅಲೆಮಾರಿಗಳಿಗೆ ಪ್ರತ್ಯೇಕವಾಗಿ ಮೀಸಲಾತಿ ನೀಡಬೇಕಿತ್ತೆಂಬುದು ಎಲ್ಲರ ಆಶಯ.

ಪರಿಶಿಷ್ಟ ಜಾತಿಯಲ್ಲಿ ಸೂಕ್ಷ್ಮ ಮತ್ತು ಅತಿಸೂಕ್ಷ್ಮ 59 ಅಲೆಮಾರಿ ಸಮುದಾಯಗಳಿವೆ. ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಕಡೆಗಣಿಸಲಾದ ಹಲವು ವೇಷಧಾರಿಗಳು, ಅಲೆಮಾರಿ ಜೀವನ ನಡೆಸುತ್ತ, ಭಿಕ್ಷೆ ಬೇಡಿ ಬದುಕು ಸಾಗಿಸುತ್ತಾರೆ. ಅವರು ಸಹ ನಮ್ಮ ಮುಖ್ಯವಾಹಿನಿಯ ಒಂದು ಭಾಗ. ಆಚರಣೆ, ಭಾಷೆ, ಉಡುಗೆ ತೊಡುಗೆಗಳು, ಬದುಕು, ಪುರಾಣ, ಜಾನಪದದ ಮೂಲಕ ಅಲೆಮಾರಿಗಳು ತಮ್ಮ ಅಸ್ಮಿತೆಯ ಠಸ್ಸೆಯನ್ನು ಈ ನೆಲದ ಮೇಲೆ ಒತ್ತಿದ್ದಾರೆ. ಶೇ 1ರಷ್ಟು ಪ್ರತ್ಯೇಕ ಒಳಮೀಸಲಾತಿ ನೀಡುವ ಮೂಲಕ ಅವರನ್ನು ಮುಖ್ಯವಾಹಿನಿಗೆ ತರುವ ಹೃದಯವಂತಿಕೆಯನ್ನು ಸರ್ಕಾರ ಪ್ರದರ್ಶಿಸಬೇಕು. ಅಲೆಮಾರಿಗಳಿಗೆ ನ್ಯಾಯ ದೊರಕದೆ ಹೋದರೆ, ಸಾಮಾಜಿಕ ನ್ಯಾಯದ ಕುರಿತ ಸರ್ಕಾರದ ಯಾವ ಮಾತಿಗೂ ಕಿಮ್ಮತ್ತಿರುವುದಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜಕೀಯ ಇಚ್ಛಾಶಕ್ತಿ ಪ್ರದರ್ಶಿಸಿ, ತಮ್ಮ ಸಾಮಾಜಿಕ ನ್ಯಾಯದ ಮಾತುಗಳನ್ನು ಅನುಷ್ಠಾನಕ್ಕೆ ತರಬೇಕು. ಇಲ್ಲದೆ ಹೋದಲ್ಲಿ, ಚಾರಿತ್ರಿಕ ಪ್ರಮಾದವೊಂದು ಜರುಗಲಿಕ್ಕೆ ಅವರು ಅವಕಾಶ ಮಾಡಿಕೊಟ್ಟಂತಾಗುತ್ತದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಗಣಿ ಅಕ್ರಮ ತನಿಖೆಗೆ ಮರುಜೀವ

ಸಚಿವ ಸಂಪುಟ ಉಪ ಸಮಿತಿ ಶಿಫಾರಸಿನಂತೆ 'ಬಿ' ವರದಿ ವಾಪಸ್: ಸಿ.ಎಂ. ಸಿದ್ದರಾಮಯ್ಯ ಘೋಷಣೆ

ಪ್ರಜಾವಾಣಿ ವಾರ್ತೆ

ಅವಿಭಜಿತ ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ 2006ರಿಂದ 2010ರವರೆಗೆ ನಡೆದಿದ್ದ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ 29 ಪ್ರಕರಣಗಳಲ್ಲಿ ವಿಶೇಷ ತನಿಖಾ ತಂಡ ಸಲ್ಲಿಸಿದ್ದ 'ಬಿ' ವರದಿಯನ್ನು ವಾಪಸ್ ಪಡೆಯಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಘೋಷಿಸಿದ್ದಾರೆ. ಇದರಿಂದಾಗಿ ರಾಜ್ಯದಲ್ಲಿ ಕೋಲಾಹಲ ಎಬ್ಬಿಸಿದ್ದ ಗಣಿ ಅಕ್ರಮದ ತನಿಖೆಗೆ ಮರುಜೀವ ಬಂದಂತಾಗಿದೆ.

ನ್ಯಾ.ಸಂತೋಷ್ ಹೆಗ್ಡೆ ನೇತೃತ್ವದ ಕರ್ನಾಟಕ ಲೋಕಾಯುಕ್ತ ನೀಡಿದ್ದ ವರದಿಯ ಅನ್ವಯ ತೆಗೆದುಕೊಳ್ಳಬೇಕಾಗಿದ್ದ ಕ್ರಮಗಳ ಬಗ್ಗೆ ಕಾನೂನು ಸಚಿವ ಎಚ್.ಕೆ.ಪಾಟೀಲ ನೇತೃತ್ವದ ಸಚಿವ ಸಂಪುಟದ ಉಪಸಮಿತಿಯು ಮಾಡಿರುವ ಶಿಫಾರಸಿನ ಅನ್ವಯ, 'ಬಿ' ವರದಿಗಳನ್ನು ವಾಪಸ್ ಪಡೆಯಲು ಸರ್ಕಾರ ಮುಂದಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಬೇಲೆಕೇರಿ, ಮಂಗಳೂರು ಮುಂತಾದ ಬಂದರುಗಳಿಂದ ಕಬ್ಬಿಣದ ಅದಿರನ್ನು ಅಕ್ರಮವಾಗಿ ರಫ್ತು ಮಾಡಿರುವ ಹಲವು ಪ್ರಕರಣಗಳು 'ಬಿ' ವರದಿ ಸಲ್ಲಿಸಲಾಗಿರುವ ಪ್ರಕರಣಗಳ ಪಟ್ಟಿಯಲ್ಲಿ ಸೇರಿವೆ. ಬಂದರಿನಲ್ಲಿ ಕಬ್ಬಿಣದ ಅದಿರನ್ನು ಅಕ್ರಮವಾಗಿ ಸಂಗ್ರಹಿಸಿದ್ದ ಮತ್ತು ಅದಕ್ಕಾಗಿ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ₹2.65 ಕೋಟಿಯಷ್ಟು ಲಂಚ ನೀಡಿದ ಆರೋಪದಲ್ಲಿ ಅದಾನಿ ಎಂಟರ್‌ಪ್ರೈಸಸ್ ವಿರುದ್ಧ ದಾಖಲಾದ ಪ್ರಕರಣದಲ್ಲೂ (ಮೊಕದ್ದಮೆ ಸಂಖ್ಯೆ 34/2014) ವಿಶೇಷ ತನಿಖಾ ತಂಡ ವಿಚಾರಣಾ ನ್ಯಾಯಾಲಯಕ್ಕೆ 'ಬಿ' ವರದಿ ಸಲ್ಲಿಸಿದೆ.

ಸಮಿತಿ ಹೇಳಿದ್ದೇನು?: ಎಚ್.ಕೆ.ಪಾಟೀಲ ನೇತೃತ್ವದ ಉಪ ಸಮಿತಿಯು ತನ್ನ ಮೊದಲ ಶಿಫಾರಸಿನಲ್ಲೇ 'ಬಿ' ವರದಿಯ ಬಗ್ಗೆ ಉಲ್ಲೇಖಿಸಿದೆ.

ಹೀಗೆ 'ಬಿ' ವರದಿ ನೀಡಲಾದ ಕೆಲವು ಪ್ರಕರಣಗಳನ್ನು ಪರಿಶೀಲಿಸಿದಾಗ, ಅದಕ್ಕೆ ನೀಡಲಾದ ಕಾರಣಗಳು ಮೇಲ್ನೋಟಕ್ಕೆ ಸಮಂಜಸವಾಗಿಲ್ಲ ಎಂದು ಅದು ಅಭಿಪ್ರಾಯಪಟ್ಟಿದೆ. ಅಲ್ಲದೇ, ವಿಶೇಷ ತನಿಖಾ ತಂಡವು ಇನ್ನೂ ಎಂಟು ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ 'ಬಿ' ವರದಿ ಸಲ್ಲಿಸಿದ್ದು, ಸಚಿವ ಸಂಪುಟವು ಈ ಬಗ್ಗೆ ಕ್ರಮ ಕೈಗೊಳ್ಳುವವರೆಗೆ ನ್ಯಾಯಾಲಯ ಈ ವರದಿಯನ್ನು ಪರಿಗಣಿಸಬಾರದು ಎಂದು ಮನವಿ ಮಾಡಲೂ ಸಮಿತಿ ಶಿಫಾರಸು ಮಾಡಿದೆ.

'ಬಿ' ವರದಿಗೆ ನೀಡಿದ ಕಾರಣ: ಅಕ್ರಮವಾಗಿ ಕಬ್ಬಿಣದ ಅದಿರು ರಫ್ತು ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ, ರಫ್ತು ಮಾಡಿದ ಪೂರ್ಣ ಅದಿರಿಗೆ ಸಂಬಂಧಿಸಿದ ಇಲಾಖೆಗಳಿಂದ (ಗಣಿ, ಅರಣ್ಯ) ಪರವಾನಗಿ ಪಡೆದಿರುವುದು ತನಿಖೆ ವೇಳೆ ಕಂಡುಬಂದಿದ್ದರಿಂದ ನ್ಯಾಯಾಲಯಕ್ಕೆ 'ಬಿ'ವರದಿ ಸಲ್ಲಿಸಲಾಗಿದೆ ಎಂಬ ಕಾರಣವನ್ನು ಬಹುತೇಕ ಪ್ರಕರಣಗಳಲ್ಲಿ ನೀಡಲಾಗಿದೆ.

ಶಿಫಾರಸುಗಳು

ಸಂಪುಟ ಉಪಸಮಿತಿಯು 'ಬಿ' ವರದಿ ವಾಪಸ್, ಅಕ್ರಮ ಗಣಿಗಾರಿಕೆಯಿಂದ ಆಗಿರುವ ವಾಸ್ತವ ನಷ್ಟ ಅಂದಾಜು, ಗಣಿ ಅಕ್ರಮದ ವಿಚಾರಣೆಗೆ ತ್ವರಿತ ನ್ಯಾಯಾಲಯ ಸ್ಥಾಪನೆ, ಪ್ರಕರಣಗಳ ವಿಚಾರಣೆಗೆ ನೆರವಾಗಲು ಪರಿಣತ ಕಾನೂನು ಅಧಿಕಾರಿಗಳ ತಂಡ ರೂಪಿಸುವುದು ಸೇರಿದಂತೆ 12 ಶಿಫಾರಸುಗಳನ್ನು ಮಾಡಿದೆ.

ವಿಶೇಷ ತನಿಖಾ ತಂಡ ದಾಖಲಿಸಿದ ಪ್ರಕರಣಗಳ ಸ್ಥಿತಿಗತಿ (2011ರಿಂದ 2024ರವರೆಗೆ)

ಸಂಖ್ಯೆ	ವಿವರ
109	ದಾಖಲಿಸಿಕೊಂಡ ಪ್ರಕರಣಗಳು
62	ಆರೋಪ ಪಟ್ಟಿ ಸಲ್ಲಿಸಿದ ಪ್ರಕರಣಗಳು
26	ವಿಚಾರಣೆ ತಡೆಯಲಾಗಿರುವ ಪ್ರಕರಣಗಳು
1	ಕೋರ್ಟ್ ವಿಲೇವಾರಿ ಮಾಡಿರುವ ಪ್ರಕರಣ
35	ವಿಚಾರಣೆ ನಡೆಯುತ್ತಿರುವ ಪ್ರಕರಣಗಳು
29	'ಬಿ' ವರದಿ ಸಲ್ಲಿಸಿರುವ ಪ್ರಕರಣಗಳು
3	'ಸಿ' ವರದಿ ಸಲ್ಲಿಸಿರುವ ಪ್ರಕರಣಗಳು
15	ತನಿಖೆ ನಡೆಯುತ್ತಿರುವ ಪ್ರಕರಣಗಳು
2	ತನಿಖೆ ತಡೆಯಲಾಗಿರುವ ಪ್ರಕರಣಗಳು

'ಬಿ' ವರದಿ ಸಲ್ಲಿಕೆಯಾಗಿದ್ದ ಪ್ರಮುಖ ಪ್ರಕರಣಗಳು

ಮೊಕದ್ದಮೆ ಸಂಖ್ಯೆ	ಆರೋಪಿಗಳು (ಎಫ್‌ಐಆರ್‌ನಲ್ಲಿರುವಂತೆ)	ಆರೋಪ ಏನು?
07/2014	ಶಾಂತದುರ್ಗಾ ಟ್ರಾನ್ಸ್‌ಪೋರ್ಟ್ ಕಂಪನಿ ಪ್ರೈ.ಲಿ. ಗೋವಾ ಮತ್ತು ಗೊತ್ತಿಲ್ಲದ ಸರ್ಕಾರಿ ನೌಕರರು ಹಾಗೂ ಇತರರು	2009ರ ಜನವರಿ ಮತ್ತು 2010ರ ಮೇ ತಿಂಗಳ ನಡುವೆ 20,729.65 ಟನ್ ಕಬ್ಬಿಣದ ಅದಿರನ್ನು ಬೇಲೆಕೇರಿ ಬಂದರಿನಿಂದ ಅನುಮತಿ ಇಲ್ಲದೆ ರಫ್ತು
09/2014	ಎಸ್‌ಎಸ್‌ಟಿಎ ಲಾಜಿಸ್ಟಿಕ್ಸ್ (ಇಂಡಿಯಾ) ಪ್ರೈ ಲಿ. ಬೆಂಗಳೂರು ಮತ್ತು ಹೆಸರು ಗೊತ್ತಿಲ್ಲದ ಸರ್ಕಾರಿ ನೌಕರರು ಹಾಗೂ ಇತರರು	2009 ಜನರಿಯಿಂದ 2010ರ ಮೇ ನಡುವೆ ಕಂಪನಿಯು ಬೇಲೆಕೇರಿ ಬಂದರಿನಿಂದ 24,391 ಟನ್ ಅದಿರನ್ನು ಅಕ್ರಮವಾಗಿ ರಫ್ತು
13/2014	ತೇರಾಪಂತ್ ಫುಡ್ಸ್ ಲಿ. ಹೊಸಪೇಟೆ ಮತ್ತು ಹೆಸರು ಗೊತ್ತಿಲ್ಲದ ಸರ್ಕಾರಿ ನೌಕರರು ಹಾಗೂ ಇತರು	ಬೇಲೆಕೇರಿ ಬಂದರಿನಿಂದ 2009ರ ಜನವರಿ–2010ರ ಮೇ ನಡುವೆ 31,065 ಟನ್ ಅದಿರು ಅಕ್ರಮ ರಫ್ತು
14/2014	ವಿನೋದ್ ಗೋಯಲ್, ಬೆಂಗಳೂರಿನ ಟ್ವೆಂಟಿ ಫಸ್ಟ್ ಸೆಂಚುರಿ ವೈರ್ ರಾಡ್ಸ್ ಪ್ರೈ ಲಿ.ನ ವ್ಯವಸ್ಥಾಪಕ ನಿರ್ದೇಶಕ, ಟ್ವೆಂಟಿ ಫಸ್ಟ್ ಸೆಂಚುರಿ ವೈರ್ ರಾಡ್ಸ್ ಪ್ರೈ ಲಿ, ಗೊತ್ತಿಲ್ಲದ ಸರ್ಕಾರಿ ನೌಕರರು ಹಾಗೂ ಇತರರು	ಕಂಪನಿಯು ಮರ್ಮಗೋವಾ ಬಂದರಿನಿಂದ ಅಧಿಕೃತ ಪರವಾನಗಿ ಇಲ್ಲದೆ 37,693 ಟನ್ ಕಬ್ಬಿಣದ ಅದಿರು ರಫ್ತು
25/2014	ಕೊಮಿನ್ ಇಂಡಿಯಾ ರಿಸೋರ್ಸಸ್ ಪ್ರೈ ಲಿ.ನ ವ್ಯವಸ್ಥಾಪಕ ನಿರ್ದೇಶಕ, ಕೊಮಿನ್ ಇಂಡಿಯಾ ರಿಸೋರ್ಸಸ್ ಪ್ರೈ ಲಿ., ಎಸ್.ಬಿ.ಲಾಜಿಸ್ಟಿಕ್ಸ್‌ನ ಪಾಲುದಾರರಾದ ಕೆ.ಜನಾರ್ದನ ರೆಡ್ಡಿ, ಭೀಮರಾಜು, ದಾವಣಗೆರೆಯ ಭಗವತಿ ಇಂಟರ್‌ನ್ಯಾಷನಲ್‌ನ ಮಾಲೀಕರಾದ ಪ್ರೇಮ ಚನ್ನಪ್ಪ, ಗೊತ್ತಿಲ್ಲದ ಸರ್ಕಾರಿ ನೌಕರರು ಹಾಗೂ ಇತರು	ಕೊಮಿನ್ ಇಂಡಿಯಾ ರಿಸೋರ್ಸಸ್ ಕಂಪನಿಯು ಬೇಲೆಕೇರಿ ಬಂದರಿನಿಂದ 44,520 ಟನ್ ಅದಿರು ರಫ್ತು ಮಾಡಿದೆ. ಎಸ್.ಬಿ.ಲಾಜಿಸ್ಟಿಕ್ಸ್‌ನಿಂದ ಖರೀದಿಸಿದ 2,888 ಟನ್ ಹಾಗೂ ಭಗವತಿ ಇಂಟರ್‌ನ್ಯಾಷನಲ್‌ನಿಂದ ಖರೀದಿಸಿದ 5,007 ಟನ್‌ನಲ್ಲಿ 632 ಟನ್‌ಗೆ ಪರವಾನಗಿ ಇರಲಿಲ್ಲ
26/2014	ಹೊಸಪೇಟೆ ಮೈನ್ಸ್ ಆ್ಯಂಡ್ ಮಿನರಲ್ಸ್‌ನ ಕಾರ್ಯನಿರ್ವಾಹಕ ಪಾಲುದಾರ ಹಬೀಬ್ ಉರ್ ರೆಹಮಾನ್, ಹೊಸಪೇಟೆಯ ಹಿಲ್ ರಾಕ್ ಮಿನರಲ್ಸ್‌ನ ನಿರ್ದೇಶಕ ಶೇಖ್ ಮುಜೀಬ್ ಅಹಮದ್, ಹಿಲ್ ರಾಕ್ ಮಿನರಲ್ಸ್ ಮತ್ತು ಗೊತ್ತಿಲ್ಲದ ಸರ್ಕಾರಿ ನೌಕರರು ಹಾಗೂ ವ್ಯಕ್ತಿಗಳು	2009ರ ಜನವರಿ–2010ರ ಮೇ ನಡುವೆ ಹೊಸಪೇಟೆ ಮೈನ್ಸ್ ಆ್ಯಂಡ್ ಮಿನರಲ್ಸ್ ಕಂಪನಿಯಿಂದ 12,046.58 ಟನ್ ಕಬ್ಬಿಣದ ಅದಿರು ಅಕ್ರಮ ರಫ್ತು
07/2015	ಬೆಂಗಳೂರಿನ ಎಸಿಇ ಎಕ್ಸ್‌ಪೋರ್ಟ್ ಕಂಪನಿಯ ಪಾಲುದಾರ ಜಿ.ರವಿಕುಮಾರ್, ಸಂಡೂರಿನ ವಿಎಸ್‌ಎಲ್ ಮೈನಿಂಗ್ ಕಂಪನಿಯ ನಿರ್ದೇಶಕ ಅನಿಲ್ ಲಾಡ್, ವಿಎಸ್‌ಎಲ್ ಮೈನಿಂಗ್ ಕಂಪನಿ, ಗೊತ್ತಿಲ್ಲದ ಸರ್ಕಾರಿ ನೌಕರರು ಮತ್ತು ವ್ಯಕ್ತಿಗಳು	ಎಸಿಇ ಎಕ್ಸ್‌ಪೋರ್ಟ್ ಕಂನಿಯು ವಿಎಸ್‌ಎಲ್ ಮೈನಿಂಗ್ ಕಂಪನಿಯಿಂದ 16,800 ಟನ್ ಅದಿರು ಖರೀದಿಸಿ ಅಧಿಕೃತ ಪರವಾನಗಿ ಇಲ್ಲದೆ ಎರಡು ಶಿಪ್‌ಮೆಂಟ್‌ಗಳಲ್ಲಿ ಬೇಲೆಕೇರಿ ಬಂದರಿನಿಂದ ರಫ್ತು
09/2015	ಚಿತ್ರದುರ್ಗ ಜಿಲ್ಲೆಯ ಭೀಮಸಮುದ್ರದ ಸೇಸಾ ಗೋವಾ ಲಿಮಿಟೆಡ್, ಚಿತ್ರದುರ್ಗ ಜಿಲ್ಲೆಯ ಅಂದಿನ ಡಿಸಿಎಫ್ ಮತ್ತು ಗೊತ್ತಿಲ್ಲದ ಅರಣ್ಯ ಇಲಾಖೆ ಅಧಿಕಾರಿಗಳು	ಕಂಪನಿಯು ಅರಣ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಸೇರಿಕೊಂಡು, ಅರಣ್ಯ ಇಲಾಖೆಯಿಂದ ಅನುಮತಿ ಸಿಗುವುದಕ್ಕೂ ಮೊದಲೇ 3.25 ಹೆಕ್ಟೇರ್ ಅರಣ್ಯಭೂಮಿಯನ್ನು ಗಣಿಗಾರಿಕೆಗೆ ಬಳಕೆ. ಆ ಭೂಮಿಯನ್ನು ಸಾರ್ವಜನಿಕ ರಸ್ತೆ ಎಂದು ಘೋಷಿಸಿದ್ದ ಅಂದಿನ ಡಿಸಿಎಫ್
11/2015	ಹೊಸಪೇಟೆಯ ಜಿಬಿಎಸ್ ಟ್ರಾನ್ಸ್‌ಪೋರ್ಟ್ ಮಾಲೀಕ ಜಿ.ಬಿ.ಶಿವಕುಮಾರ್, ಹೊಸಪೇಟೆಯ ಶಾಲಿನಿ ಇಂಪೆಕ್ಸ್ ಮಾಲೀಕ ದಿವಂಗತ ಆರ್.ಕೆ.ಜೈನ್, ಗೊತ್ತಿಲ್ಲದ ಸರ್ಕಾರಿ ನೌಕರರು ಮತ್ತು ವ್ಯಕ್ತಿಗಳು	2009–10ರಲ್ಲಿ ಲಕೇರಿ ಬಂದರಿನಲ್ಲಿ ಜಿಬಿಎಸ್ ಟ್ರಾನ್ಸ್‌ಪೋರ್ಟ್ ಕಂಪನಿಯು ಶಾಲಿನಿ ಇಂಪೆಕ್ಸ್ ಕಂಪನಿಯಿಂದ 20 ಸಾವಿರ ಟನ್ ಅದಿರು ಖರೀದಿಸಿ ಇಲಾಖೆಗಳಿಂದ ಅನುಮತಿ ಪಡೆಯದೆ ರಫ್ತು
01/2019	ಸೇಸಾ ಗೋವಾ ಲಿ.ನ ಅಧಿಕೃತ ಪ್ರತಿನಿಧಿ, ಕಂಪನಿಯ ಗೊತ್ತಿಲ್ಲದ ಅಧಿಕಾರಿಗಳು, ಗೊತ್ತಿಲ್ಲದ ಖಾಸಗಿ ಮಾಲೀಕರು/ಕಂಪನಿಗಳು, ಗೊತ್ತಿಲ್ಲದ ಗಣಿ ಮಾಲೀಕರು, ಗೊತ್ತಿಲ್ಲದ ಸರ್ಕಾರಿ ನೌಕರರು ಮತ್ತು ಖಾಸಗಿ ವ್ಯಕ್ತಿಗಳು	2006 ಏಪ್ರಿಲ್‌ನಿಂದ 2010ರ ಡಿಸೆಂಬರ್ ನಡುವೆ ಮಂಗಳೂರು ಬಂದರಿನಿಂದ 57,240 ಟನ್ ಕಬ್ಬಿಣದ ಅದಿರಿನ ಅಕ್ರಮ ರಫ್ತು
01/2020	ಸಂಗೀತಾ ಮಾರ್ಬಲ್ಸ್ ಆ್ಯಂಡ್ ಮಿನರಲ್ಸ್ ಮಾಲೀಕ ಸಂತೋಷ್ ಕುಮಾರ್, ಗೊತ್ತಿಲ್ಲದ ಖಾಸಗಿ ವ್ಯಕ್ತಿಗಳು/ಕಂಪನಿಗಳು, ಗೊತ್ತಿಲ್ಲದ ಗಣಿ ಮಾಲೀಕರು, ಗೊತ್ತಿಲ್ಲದ ಸರ್ಕಾರಿ ನೌಕರರು ಮತ್ತು ಖಾಸಗಿ ವ್ಯಕ್ತಿಗಳು	2006 ಏಪ್ರಿಲ್‌ನಿಂದ 2010ರ ಡಿಸೆಂಬರ್ ನಡುವೆ ಮಂಗಳೂರು ಬಂದರಿನಿಂದ 29,600 ಟನ್ ಕಬ್ಬಿಣದ ಅದಿರನ್ನು ಗಣಿ ಇಲಾಖೆಯ ಪರವಾನಗಿ ಇಲ್ಲದೆ ರಫ್ತು ಮಾಡಿದ ಸಂಗೀತಾ ಆ್ಯಂಡ್ ಮಿನರಲ್ಸ್ ಲಿ.
06/2020	ಎ1–ನಿರ್ದೇಶಕರು, ಕೆನರಾ ಓವರ್‌ಸೀಸ್ ಲಿ., ಎ2–ಕೆನರಾ ಓವರ್‌ಸೀಸ್ ಲಿ., ಎ3–ಗೊತ್ತಿಲ್ಲದ ಖಾಸಗಿ ಉದ್ದಿಮೆದಾರರು, ಎ4–ಗೊತ್ತಿಲ್ಲದ ಗಣಿ ಮಾಲೀಕರು, ಎ5–ಗೊತ್ತಿಲ್ಲದ ಸರ್ಕಾರಿ ನೌಕರರು ಮತ್ತು ಖಾಸಗಿ ವ್ಯಕ್ತಿಗಳು	2006 ಏಪ್ರಿಲ್‌ನಿಂದ 2010ರ ಡಿಸೆಂಬರ್ ನಡುವೆ ಕೆನರಾ ಓವರ್‌ಸೀಸ್ ಲಿಮಿಟೆಡ್ ಮಂಗಳೂರು ಬಂದರಿನಿಂದ 2,46,184 ಟನ್ ಅದಿರು ರಫ್ತು ಮಾಡಿದ್ದು, ಅದರಲ್ಲಿ 1,35,239 ಟನ್ ಅಕ್ರಮ ರಫ್ತು
02/2021	ಪಾಲುದಾರರು, ಮುನೀರ್ ಎಂಟರ್‌ಪ್ರೈಸಸ್, ಹೊಸಪೇಟೆ, ಮುನೀರ್ ಎಂಟರ್‌ಪ್ರೈಸಸ್, ಹೊಸಪೇಟೆ, ಗೊತ್ತಿಲ್ಲದ ಖಾಸಗಿ ಖರೀದಿದಾರರು/ಕಂಪನಿಗಳು, ಗೊತ್ತಿಲ್ಲದ ಸರ್ಕಾರಿ ನೌಕರರು ಮತ್ತು ಖಾಸಗಿ ವ್ಯಕ್ತಿಗಳು	ಮುನೀರ್ ಎಂಟರ್‌ಪ್ರೈಸಸ್ ಕಾರವಾರ ಬಂದರಿನಿಂದ 11,77,114 ಟನ್ ಅದಿರನ್ನು ರಫ್ತು ಮಾಡಿದ್ದು, ಅದರ ಪೈಕಿ 45,280 ಟನ್ ಅಕ್ರಮ
06/2021	ನಿರ್ದೇಶಕರು, ಲಾಲ್ ಮಹಲ್ ಲಿ.(ಹಿಂದಿನ ಶಿವನಾಥ್ ರಾಯ್ ಹರಿನಾರಾಯಣ್ ಇಂಡಿಯಾ ಪ್ರೈ.ಲಿ.), ಲಾಲ್ ಮಹಲ್ ಲಿ., ಗೊತ್ತಿಲ್ಲದ ಖಾಸಗಿ ಖರೀದಿದಾರರು, ಗೊತ್ತಿಲ್ಲದ ಗಣಿ ಮಾಲೀಕರು, ಗೊತ್ತಿಲ್ಲದ ಇತರೆ ಆರೋಪಿಗಳು, ಗೊತ್ತಿಲ್ಲದ ಸರ್ಕಾರಿ ನೌಕರರು ಮತ್ತು ಖಾಸಗಿ ವ್ಯಕ್ತಿಗಳು	01.04.2006ರಿಂದ 31.12.2010ರ ನಡುವೆ ಡಿಎಂಜಿ ಅನುಮತಿ ಇಲ್ಲದೇ 1,03,626 ಟನ್ ಕಬ್ಬಿಣದ ಅದಿರನ್ನು ಕಾರವಾರದ ಬಂದರಿನಿಂದ ರಫ್ತು ಮಾಡಿದ ಆರೋಪ
07/2021	ಪಾಲುದಾರರು, ಲಕ್ಷ್ಮಿ ಬಾಲಾಜಿ ಎಕ್ಸ್‌ಪೋರ್ಟ್ ಆ್ಯಂಡ್ ಇಂಪೋರ್ಟ್, ಹೊಸಪೇಟೆ, ಲಕ್ಷ್ಮಿ ಬಾಲಾಜಿ ಎಕ್ಸ್‌ಪೋರ್ಟ್ ಆ್ಯಂಡ್ ಇಂಪೋರ್ಟ್, ಹೊಸಪೇಟೆ, ಗೊತ್ತಿಲ್ಲದ ಖಾಸಗಿ ಖರೀದಿದಾರರು/ಕಂಪನಿಗಳು, ಗೊತ್ತಿಲ್ಲದ ಗಣಿ ಮಾಲೀಕರು, ಗೊತ್ತಿಲ್ಲದ ಸರ್ಕಾರಿ ನೌಕರರು ಮತ್ತು ಖಾಸಗಿ ವ್ಯಕ್ತಿಗಳು	01.04.2006ರಿಂದ 31.12.2010ರ ನಡುವೆ ಆರೋಪಿಯು 4,56,000 ಟನ್ ಅದಿರು ಖರೀದಿಸಿದ್ದು, ಅದರಲ್ಲಿ 2,97,837 ಟನ್ ರಫ್ತು ಮಾಡಿದ್ದಾರೆ. ಉಳಿದ 1,56,000 ಟನ್ ಅನ್ನು ಅಕ್ರಮವಾಗಿ ಮಾರಾಟ ಮಾಡಿದ್ದಾರೆ

ಸಿಬಿಐ ತನಿಖೆ ಅಪೂರ್ಣ

9 ಬಂದರುಗಳ ಮೂಲಕ ರಫ್ತು ಮಾಡಲಾದ ಪ್ರಕರಣಗಳನ್ನು ಸಿಬಿಐಗೆ ವಹಿಸಲಾಗಿತ್ತು. ಸಿಬಿಐ ಬೆಂಗಳೂರು ಕಚೇರಿಯಲ್ಲಿ 15 ಪ್ರಕರಣಗಳು ದಾಖಲಾದರೆ, ಚೆನ್ನೈ ಕಚೇರಿಯಲ್ಲಿ 22 ಪ್ರಕರಣಗಳು ದಾಖಲಾಗಿದ್ದವು. ಆದರೆ, ಗೋವಾದ ಪಣಜಿ, ಮರ್ಮಗೋವಾ ಬಂದರುಗಳು, ತಮಿಳುನಾಡಿನ ಚೆನ್ನೈ, ಎಣ್ಣೋರ್ ಬಂದರುಗಳು ಮತ್ತು ಕರ್ನಾಟಕದ ಕಾರವಾರ, ಮಂಗಳೂರು ಬಂದರುಗಳಿಂದ ನಡೆದಿರುವ ಅಕ್ರಮ ಸಾಗಣೆಯ ಬಗ್ಗೆ ವಿವಿಧ ಕಾರಣಗಳಿಂದ ತನಿಖೆ ನಡೆಸಲು ಸಾಧ್ಯವಿಲ್ಲ ಎಂದು ಸಿಬಿಐ ಹೇಳಿದೆ. ಆರು ಬಂದರುಗಳ ಮೂಲಕ ಆಗಿರುವ ಅಕ್ರಮಗಳ ಬಗ್ಗೆ ಮೂರ್ನಾಲ್ಕು ವರ್ಷಗಳವರೆಗೆ ಯಾವುದೇ ತನಿಖೆ ನಡೆಸದೇ ಪ್ರಕರಣಗಳನ್ನು ರಾಜ್ಯ ಸರ್ಕಾರಕ್ಕೆ ವಾಪಸ್ ನೀಡಿದೆ. ಜತೆಗೆ, ಆಂಧ್ರಪ್ರದೇಶದ ಕೃಷ್ಣಪಟ್ಟಣ ಬಂದರಿನಿಂದ ಶೇ 30ರಷ್ಟು ಅದಿರು ಅಕ್ರಮವಾಗಿ ರಫ್ತಾಗಿದ್ದರೂ ಸಿಬಿಐ 10 ವರ್ಷ ಯಾವುದೇ ತನಿಖೆ ನಡೆಸಿಲ್ಲ. ಇದು ಗಂಭೀರ ಲೋಪವಾಗಿದ್ದು, ತನಿಖೆ ಪೂರ್ಣಗೊಳಿಸಲು ಇಲ್ಲವೇ ಪ್ರಕರಣ ವಾಪಸ್ ನೀಡಲು ಸೂಚಿಸುವಂತೆ ಕೇಂದ್ರ ಸರ್ಕಾರವನ್ನು ಕೋರಬಹುದು ಎಂದು ಉಪಸಮಿತಿ ವರದಿ ಉಲ್ಲೇಖಿಸಿದೆ.

ಸಿಬಿಐನಲ್ಲಿ ಎಷ್ಟು ಪ್ರಕರಣ?

15 — ಸಿಬಿಐನ ಬೆಂಗಳೂರು ಘಟಕದಲ್ಲಿ ದಾಖಲಾದ ಪ್ರಕರಣಗಳು

22 — ಸಿಬಿಐನ ಚೆನ್ನೈ ಘಟಕ ದಾಖಲಿಸಿಕೊಂಡಿರುವ ಪ್ರಕರಣಗಳು

ಸಿಬಿಐ ಬೆಂಗಳೂರು ಘಟಕದಲ್ಲಿ ದಾಖಲಾದ ಪ್ರಕರಣಗಳ ಸ್ಥಿತಿ ಗತಿ

- 8 ವಿಚಾರಣೆಯ ಹಂತದಲ್ಲಿರುವ ಪ್ರಕರಣಗಳು
- 1 ವಿಲೇವಾರಿ ಆಗಿರುವ ಪ್ರಕರಣ
- 6 ಶಿಕ್ಷೆಯಾದ ಪ್ರಕರಣಗಳು

• ಚೆನ್ನೈ ಘಟಕದಲ್ಲಿ ದಾಖಲಾದ ಪ್ರಕರಣಗಳ ವಿವರ ಇನ್ನೂ ಸಿಕ್ಕಿಲ್ಲ

ಅದಾನಿ ಪ್ರಕರಣವೇನು?

ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್ ವಿರುದ್ಧ 2014ರ ಡಿಸೆಂಬರ್ 19ರಂದು ಪ್ರಕರಣ ದಾಖಲಾಗಿತ್ತು. ಈ ಪ್ರಕರಣದಲ್ಲಿ ಬೇಲೆಕೇರಿಯ ಅದಾನಿ ಎಂಟರ್‌ಪ್ರೈಸಸ್ ಮಾತ್ರವಲ್ಲದೆ ಬಂದರು, ಕಸ್ಟಮ್ಸ್, ಪೊಲೀಸ್, ಗಣಿ ಮತ್ತು ಭೂವಿಜ್ಞಾನ ಇಲಾಖೆ, ತೂಕ ಮತ್ತು ಅಳತೆ, ಕೆಎಸ್‌ಪಿಸಿಬಿ, ಕಂದಾಯ, ಕರಾವಳಿ ನಿಯಂತ್ರಣ ವಲಯ, ಲೋಕೋಪಯೋಗಿ ಸೇರಿದಂತೆ ಇತರ ಇಲಾಖೆಗಳ ಅಥವಾ ಅವುಗಳ ಕಚೇರಿಗಳಿಗೆ ಸೇರಿದ ಗೊತ್ತಿಲ್ಲದ ನೌಕರರು, ಶಾಸಕರು, ಸಂಸದರು ಮತ್ತು ನ್ಯಾಯಾಧೀಶರನ್ನೂ ಆರೋಪಿಗಳು ಎಂದು ಎಫ್‌ಐಆರ್‌ನಲ್ಲಿ ಹೆಸರಿಸಲಾಗಿತ್ತು.

ಬೇಲೆಕೇರಿ ಬಂದರಿನಲ್ಲಿ ಅದಾನಿ ಎಂಟರ್‌ಪ್ರೈಸಸ್‌ಗೆ ಜಾಗ ನೀಡಲಾಗಿತ್ತು ಮತ್ತು ಹಡಗಿನಿಂದ ಸರಕುಗಳನ್ನು ಇಳಿಸುವ ಜವಾಬ್ದಾರಿಯನ್ನು ಕಂಪನಿಗೆ ವಹಿಸಲಾಗಿತ್ತು.

2004ರಿಂದ 2008ರವರೆಗೆ ಕಂಪನಿಯು ಅಕ್ರಮವಾಗಿ ಅದಿರು ಸಂಗ್ರಹಿಸಿದ್ದಲ್ಲದೇ ಅದನ್ನು ರಫ್ತು ಮಾಡಿದೆ. ಇದಕ್ಕಾಗಿ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ₹2,65,68,230 ಲಂಚ ನೀಡಲಾಗಿದೆ. ಬೇಲೆಕೇರಿ ಬಂದರಿಗೆ ಲೋಕಾಯುಕ್ತ ಅಧಿಕಾರಿಗಳು ನಡೆಸಿದ ದಾಳಿಯ ಸಂದರ್ಭದಲ್ಲಿ ವಶಪಡಿಸಿಕೊಳ್ಳಲಾದ ದಾಖಲೆಗಳು ಮತ್ತು ಹಾರ್ಡ್ ಡಿಸ್ಕ್‌ಗಳ ಪರಿಶೀಲನೆಯ ಸಂದರ್ಭದಲ್ಲಿ ಇದು ಗೊತ್ತಾಗಿದೆ. ನಗದು ಖಾತೆಯ ಫೈಲ್‌ಗೆ ಅಟ್ಯಾಚ್ ಮಾಡಿದ್ದ ಇ–ಮೇಲ್ ಒಂದರಲ್ಲಿ ಸರ್ಕಾರಿ ಅಧಿಕಾರಿಗಳಿಗೆ ಲಂಚ ನೀಡಿದ ವಿವರಗಳು ಇದ್ದವು ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿತ್ತು.

'ಬಿ' ವರದಿ ಏಕೆ?: ಆದರೆ, ತನಿಖೆಯ ಸಂದರ್ಭದಲ್ಲಿ ಈ ಇ–ಮೇಲ್ ಒಂದನ್ನು ಬಿಟ್ಟು ಲಂಚ ನೀಡಿರುವುದನ್ನು ಸಾಬೀತು ಪಡಿಸುವ ಬೇರೆ ಯಾವುದೇ ಸಾಕ್ಷ್ಯ ಸಿಗಲಿಲ್ಲ. ಅಲ್ಲದೇ ಈ ಆರೋಪಕ್ಕೆ ಸಂಬಂಧಿಸಿದಂತೆ ಹಾಗೂ ಸರ್ಕಾರಿ ಅಧಿಕಾರಿಗಳ ದುರ್ನಡತೆ ಕುರಿತಾಗಿ ಸರ್ಕಾರದ ಆದೇಶದಂತೆ ಜಿಲ್ಲಾ ನಿವೃತ್ತ ನ್ಯಾಯಾಧೀಶ ಎಂ.ಎನ್.ಗದಗ್ ಅವರು ತನಿಖೆ ನಡೆಸಿದ್ದು, ಆರೋಪಿತ ಅಧಿಕಾರಿಗಳು ತಪ್ಪಿತಸ್ಥರಲ್ಲ ಎಂದು ವರದಿಯಲ್ಲಿ ಹೇಳಿದ್ದಾರೆ. ಸರ್ಕಾರ, ಹಾಗೂ ವಿವಿಧ ಇಲಾಖೆಗಳು ಆ ವರದಿಯನ್ನು 2016ರ ಜೂನ್ 20ರಂದು ಅಂಗೀಕರಿಸಿದ್ದು, ಈ ಕಾರಣದಿಂದ ನ್ಯಾಯಾಲಯಕ್ಕೆ 2017ರ ಜುಲೈ 11ರಂದು ಎಸ್‌ಐಟಿ 'ಬಿ' ವರದಿ ಸಲ್ಲಿಸಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಅಂತರರಾಷ್ಟ್ರೀಯ ಕ್ರಿಕೆಟ್ ಸಂಸ್ಥೆಯ (ಐಸಿಸಿ) ಏಕದಿನ ರ‍್ಯಾಂಕಿಂಗ್ ಪಟ್ಟಿಯ ಸ್ಕ್ರೀನ್ ಶಾಟ್ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅವುಗಳಲ್ಲಿ ಭಾರತದ ಕ್ರಿಕೆಟಿಗರಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರ ಹೆಸರುಗಳು ಇಲ್ಲ. ಇದು ಕೊಹ್ಲಿ ಮತ್ತು ಶರ್ಮಾ ಇಬ್ಬರೂ ಕ್ರಿಕೆಟ್‌ನಿಂದ ನಿವೃತ್ತಿಯಾಗುತ್ತಿರುವುದರ ಸೂಚನೆ ಎಂದು ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ಐಸಿಸಿ ರ‍್ಯಾಂಕಿಂಗ್ ಪಟ್ಟಿಯ ಸ್ಕ್ರೀನ್ ಶಾಟ್ ಅನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಇದೇ ಪೋಸ್ಟ್ ಅನ್ನು ಹಲವರು ಹಂಚಿಕೊಂಡಿರುವುದು ಕಂಡಿತು. ಮುಂದುವರಿದು, ಐಸಿಸಿ ವೆಬ್‌ಸೈಟ್ ಅನ್ನು ಪರಿಶೀಲಿಸಿದಾಗ, ಅದರಲ್ಲಿ ರ‍್ಯಾಂಕಿಂಗ್ ಪಟ್ಟಿ ಕಂಡಿತು. ಪಟ್ಟಿಯಲ್ಲಿ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಕ್ರಮವಾಗಿ ನಾಲ್ಕನೇ ಸ್ಥಾನ ಮತ್ತು ಎರಡನೇ ಸ್ಥಾನವನ್ನು ಪಡೆದಿದ್ದಾರೆ. ನಿರ್ದಿಷ್ಟ ಪದಗಳ ಮೂಲಕ ಗೂಗಲ್‌ನಲ್ಲಿ ಹುಡುಕಾಡಿದಾಗ, ಕೊಹ್ಲಿ ಮತ್ತು ಶರ್ಮಾ ಅವರ ನಿವೃತ್ತಿಯ ಬಗ್ಗೆ ಯಾವುದೇ ಸುದ್ದಿ/ಮಾಹಿತಿ ಸಿಗಲಿಲ್ಲ. ಆದರೆ, ಇವರಿಬ್ಬರ ಹೆಸರುಗಳು ತಾಂತ್ರಿಕ ದೋಷದಿಂದ ರ‍್ಯಾಂಕಿಂಗ್ ಪಟ್ಟಿಯಿಂದ ಕಣ್ಮರೆಯಾಗಿರುವುದರ ಬಗ್ಗೆ 'ಟೈಮ್ಸ್ ಆಫ್ ಇಂಡಿಯಾ'ದಲ್ಲಿ ಆಗಸ್ಟ್ 21ರಂದು ವರದಿಯಾಗಿರುವುದು ಕಂಡಿತು. ಐಸಿಸಿ ತಕ್ಷಣವೇ ಕಾರ್ಯಪ್ರವೃತ್ತವಾಗಿ, ಪಟ್ಟಿಯನ್ನು ಸರಿಪಡಿಸುವ ಮೂಲಕ ಗೊಂದಲ, ಊಹಾಪೋಹಕ್ಕೆ ತೆರೆ ಎಳೆಯಿತು ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ಅನಾಮಿಕ ತ್ಯಾಗಿಗಳು

ದೀಪಾ ಹಿರೇಗುತ್ತಿ

'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಚಳವಳಿಯ ಸಮಯ. ಕರ್ನಾಟಕದ ಹಲವಾರು ಸ್ವಾತಂತ್ರ್ಯ ಹೋರಾಟಗಾರರು ಭೂಗತರಾಗಿ ಸಂಘಟನೆ ಮಾಡುತ್ತಿದ್ದರು. ಹಲವರ ಸುಳಿವು ನೀಡಿದವರಿಗೆ ದೊಡ್ಡ ಮೊತ್ತದ ಬಹುಮಾನವನ್ನು ಬ್ರಿಟಿಷ್ ಸರ್ಕಾರ ಘೋಷಿಸಿತ್ತು. ಕೆಲವರ ವಿರುದ್ಧವಂತೂ ಕಂಡಲ್ಲಿ ಗುಂಡಿಕ್ಕುವ ಆದೇಶವಿತ್ತು. ಇಂತಹ ಸಂದರ್ಭದಲ್ಲಿಯೂ ನಮ್ಮ ಹೋರಾಟಗಾರರು ವೇಷ ಬದಲಿಸಿಕೊಂಡು ಓಡಾಡುತ್ತಿದ್ದರು, ಸಭೆ ಸೇರುತ್ತಿದ್ದರು.

ಚಳವಳಿಯನ್ನು ಮುನ್ನಡೆಸಲು ಅಖಿಲ ಭಾರತ ಸಮಿತಿಯ ಸಭೆಗಳು ದೇಶದಾದ್ಯಂತ ಏಕಕಾಲದಲ್ಲಿ ನಡೆಯುತ್ತಿದ್ದವು. ಮುಂಬೈನಲ್ಲಿ ಈ ಸಭೆಯನ್ನು ನಾ.ದಿವಾಕರರು ರಾತ್ರಿ ಹನ್ನೆರಡು ಗಂಟೆಗೆ ಕನ್ನಡಿಗರೊಬ್ಬರ ಮನೆಯಲ್ಲಿ ನಡೆಸಿದ್ದರು. ಆದರೆ, ಈ ವಿಷಯ ಪೊಲೀಸರಿಗೆ ತಿಳಿದಿದೆಯೆಂಬ ಸುದ್ದಿಯಿಂದ ಸ್ಥಳ ಬದಲಾಯಿಸಬೇಕಾಯಿತು. ಆಗ ಗಿರ್‌ಗಾಂವ್‌ನಲ್ಲಿರುವ ಮಿತ್ರರೊಬ್ಬರ ಮನೆಗೆ ಹೋದರೆ ಅವರ ಬಂಧನವಾಗಿ ಮನೆಗೆ ಬೀಗ ಹಾಕಿತ್ತು. ಮತ್ತೇನು ಮಾಡುವುದು? ಶಂಕರ ಕುರ್ತಕೋಟಿ ಎಂಬ ಕರ್ನಾಟಕದ ಹೋರಾಟಗಾರರಿಗೆ ಅಲ್ಲಿಯೇ ಕನ್ನಡಿಗ ಸರ್ಕಾರಿ ನೌಕರರೊಬ್ಬರ ಮನೆ ಇದೆಯೆಂದು ಗೊತ್ತಿತ್ತು. ಅವರನ್ನು ಬಾಗಿಲು ಬಡಿದು ಎಬ್ಬಿಸಿದಾಗ ಆ ವ್ಯಕ್ತಿ ಈ ಕ್ರಾಂತಿಕಾರಿಗಳನ್ನು ನೋಡಿ ಗಾಬರಿಯಾದ. 'ಅಯ್ಯೋ ನೌಕರಿ ಹೋದರೆ ನಾನು ಹೊಟ್ಟೆಗೆ ಮಣ್ಣು ತಿನ್ನಬೇಕಾದೀತು, ದಯವಿಟ್ಟು ಬರಬೇಡಿ' ಅಂದ. ಕ್ರಾಂತಿಕಾರಿಗಳಿಗೋ ಒಂದು ರಾತ್ರಿಯ ಮಟ್ಟಿಗೆ ವಸತಿ ವ್ಯವಸ್ಥೆ ಆಗಲೇಬೇಕು. ಅದನ್ನು ಹೇಳಿದಾಗ ಆತ ನೀವು ಹೊರಡದಿದ್ದರೆ ಪೋಲೀಸರಿಗೆ ತಿಳಿಸುತ್ತೇನೆಂದು ಹೇಳಿದ. ಆಗ ಒಳಗೆ ಎಲ್ಲವನ್ನು ಕೇಳುತ್ತಿದ್ದ ಅವನ ಹೆಂಡತಿ ಹೊರಬಂದು, 'ದೇಶಕ್ಕಾಗಿ ಪ್ರಾಣವನ್ನು ಪಣವಾಗಿ ಇಟ್ಟ ಈ ಹುಡುಗರನ್ನು ಈ ಮಧ್ಯರಾತ್ರಿ ಹೊರಹಾಕುವ ಪಾಪದ ಕೆಲಸ ಬೇಡ. ನಿಮ್ಮ ಸರ್ಕಾರ ಮತ್ತು ನೌಕರಿಗೆ ಬೆಂಕಿ ಹಾಕಲಿ, ನಾನು ಅವರಿಗೆ ಮಲಗಲು ಸ್ಥಳವನ್ನು ಕೊಡುತ್ತೇನೆ' ಎಂದು ಹೇಳಿ ಜಾಗ ಕೊಟ್ಟಳೆಂದು ಕುರ್ತಕೋಟಿ ದಾಖಲಿಸುತ್ತಾರೆ.

ಧಾರವಾಡದ ಒಂದು ಹಳ್ಳಿಯಲ್ಲಿ ಬ್ರಿಟಿಷರ ಪರವಿದ್ದ ಜಾಗೀರುದಾರನೊಬ್ಬ ಕ್ರಾಂತಿಕಾರಿಗಳಿಗೆ ಗುಂಡು ಹಾರಿಸುವ ಪ್ರಯತ್ನ ಮಾಡಿದಾಗ ಅವನ ಹದಿನಾಲ್ಕು ವರ್ಷದ ಮಗಳು, 'ಗಾಂಧಿಯ ಜನರನ್ನು ಕೊಲ್ಲಬೇಡ' ಎಂದು ಅಪ್ಪನನ್ನು ಬೇಡಿಕೊಳ್ಳುತ್ತಿದ್ದಳೆಂದೂ ಬರೆಯುತ್ತಾರೆ.

ಈ ಘಟನೆಗಳಿಂದ ಹೇಗೆ ಸಾಮಾನ್ಯ ಜನರು ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದರೆಂಬುದು ಅರ್ಥವಾಗುತ್ತದೆ. ದೇಶದ ಭವಿಷ್ಯಕ್ಕಾಗಿ ತಮ್ಮದೇ ಆದ ರೀತಿಯಲ್ಲಿ ತ್ಯಾಗ ಮಾಡಿದ ಅದೆಷ್ಟೋ ಜನರಿದ್ದರು. ಅವರ ಹೆಸರುಗಳು ಇತಿಹಾಸದ ಪುಟಗಳಲ್ಲಿ ದಾಖಲಾಗದೇ ಇರಬಹುದು. ಆದರೆ ಸುಸಜ್ಜಿತ ಸೇನೆಯುಳ್ಳ, ಹಣಬಲವುಳ್ಳ ಬ್ರಿಟಿಷರನ್ನು ದೇಶದಿಂದ ಹೊರಹಾಕಲು ಯೋಗದಾನ ನೀಡಿದ ಭಾರತದ ವೀರ ಪ್ರಜೆಗಳಾಗಿ ಅಂಥವರು ಅಮರರಾಗಿದ್ದಾರೆ. ನಮ್ಮ ಸ್ವಾತಂತ್ರ್ಯ ಅವರು ಕೊಟ್ಟ ಭಿಕ್ಷೆ ಎಂಬುದನ್ನು ನೆನಪಿಡುವ ಜವಾಬ್ದಾರಿ ಮಾತ್ರ ನಮ್ಮದೇ ಆಗಿದೆ.

ಪದಬಂಧ 6146

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಶ್ರೇಷ್ಠವಾದ ನೆಲೆ (4)
3.ಈ ಪರಿಯಾಗಿ ಕರದಲ್ಲಿ ಹಿಡಿದ ಸಾಮಾನು (4)
5.ಮಾತಿಲ್ಲದ ಮೌನ (3)
6.ಬೇರೆಯ ದೇಹವಿದು (4)
8.ಶುಕ್ರವಾರದ ಮರುದಿನ (4)
10.ನಗರದಲ್ಲಿನ ಸುಸಂಸ್ಕೃತ (4)
12.ಪುಷ್ಪದಲ್ಲಿನ ಸಿಹಿ ರಸ ಉಲ್ಟಾ ಆಗಿದೆ (4)
13.ಬೆಳ್ಳುಳ್ಳಿಯಿದು (3)
16.ಸೋಲನ್ನು ಹೀಗೂ ಹೇಳುತ್ತಾರೆ (4)
17.ನಿಂದೆಗೊಂದು ಪರ್ಯಾರ್ಯ ಪದ (4)

ಮೇಲಿಂದ ಕೆಳಕ್ಕೆ
1.ಇಂದ್ರನ ಆಯುಧ (2)
2.ಗೌರವಕ್ಕೆ ಪಾತ್ರನಾದವನು (4)
3.ಬೇರೆಯವರ ಅಧೀನದಲ್ಲಿರುವಿಕೆ (4)
4.ಒಂದು ಪ್ರದೇಶದಿಂದ ಹೊರಕ್ಕೆ ಕಳಿಸುವುದು (2)
7.ತಿರುಗಿದಾಗ ಚರಂಡಿ ಕಾಣುತ್ತಿದೆಯಲ್ಲ (3)
9.ಸಾಗಿಸುವ ಸಾಧನ (3)
11.ಮಧುರವಾದ ಧ್ವನಿಯಿದು (4)
12.ಗೋವುಗಳನ್ನು ಕಾಯುವವನು (4)
14.ಕೆಡುಕಾಗಲೆಂದು ಬಯಸಿ ಹೇಳುವ ಮಾತು (2)
15.ಹಡಗು ಇಲ್ಲಿದೆ (2)



6145ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಒಪ್ಪಂದ 4.ಮರಣ
5.ತಳಹದಿ 6.ಹತ್ಯಾಕಾಂಡ
8.ಟೆಸ 10.ಲುಪಾ
13.ರಸಮಯ 14.ಪಾದರಸ
15.ಗಾಚಾರ 16.ಕುಂಬಾರ

ಮೇಲಿಂದ ಕೆಳಕ್ಕೆ:
1.ಸಮಯಸಾಧಕ 2.ಒಣಹರಟೆ
3.ಕಹಳೆ 5.ತಡಸಲು
7.ಉದರಂಭರಣ 9.ಸಮರಸ
11.ಪಾಳೆಯಗಾರ 12.ಮದನ

ಸುಡೊಕು 6530

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2		4	1	5			8	
				8		5		9
8		3			9		1	
3		9	5		1		7	
	6			9				
5		1	6		8			
	7			3	5	2		4
4		5						
	8			6		3		1

6529 ಸುಡೊಕು

4	7	5	3	9	8	2	6	1
1	2	9	6	4	7	5	8	3
3	6	8	5	1	2	4	9	7
9	5	2	7	8	1	3	4	6
6	4	1	9	5	3	8	7	2
8	3	7	2	6	4	1	5	9
7	1	6	4	3	5	9	2	8
5	9	3	8	2	6	7	1	4
2	8	4	1	7	9	6	3	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

26 ಆಗಸ್ಟ್ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ತೃತೀಯ ಗಂ.13-55 ನಕ್ಷತ್ರ: ಹಸ್ತ ಆಹೋರಾತ್ರ **ಯೋಗ:** ಸಾಧ್ಯ ಗಂ. 12-09 **ಕರಣ:** ಗರ ಗಂ. 13-55 ಸಿಂಹ ಮಾಸದ 09 ನೇ ದಿನ. **ಮಳೆ ನಕ್ಷತ್ರ :** ಮಘಾ 3 ನೇ ಪಾದ. **ರಾಹುಕಾಲ :** ಮಧ್ಯಾಹ್ನ 03-00 04-30, **ಸೂರ್ಯೋದಯ :** 06-22 **ಸೂರ್ಯಾಸ್ತ :** 06-42, **ಮುಸ್ಲಿಂ ದಿನಾಂಕ :** 02 ರಬಿಉಲ್ಲಾವಲ್, **ದಿನ ವಿಶೇಷ :** ಸಾಮವೇದ ಉಪಾಕರ್ಮ, ಗೌರೀ ತೃತೀಯ, **ಅದೃಷ್ಟ ಸಂಖ್ಯೆ :** 3, 11

ಮೇಷ: ಸಂಸಾರದ ಜೊತೆ ಆನಂದದ ಕ್ಷಣಗಳನ್ನು ಅನುಭವಿಸಿದ ನಂತರ ಸಂಪಾದನೆಗಿಂತ ನೆಮ್ಮದಿ ಮುಖ್ಯವೆನ್ನುವ ತೀರ್ಮಾನಕ್ಕೆ ಬರಲಿದ್ದೀರಿ. ಮಂಗಳ ಕಾರ್ಯಗಳಿಗೆ ಅಡ್ಡಿ ಇರುವುದಿಲ್ಲ.

ವೃಷಭ: ಅನಗತ್ಯವಾಗಿ ಹಣವನ್ನು ವ್ಯರ್ಥ ಮಾಡುವ ರೂಢಿ ಬದಲಿಸಿಕೊಳ್ಳಿರಿ. ನಟ–ನಟಿಯರಿಗೆ ಶುಭ ಸುದ್ದಿ ಸಿಗುವುದು. ಈಶ್ವರನ ಆರಾಧನೆಯಿಂದ ಸುಖ ಪ್ರಾಪ್ತಿ ಆಗುತ್ತದೆ.

ಮಿಥುನ: ಮಾಡುವ ಕೆಲಸದಲ್ಲಿ ತೃಪ್ತಿ ಇರುತ್ತದೆ. ಮಗನ ವಿಷಯದಲ್ಲಿ ಪ್ರಗತಿ ಇದ್ದು, ಶುಭ ವಾರ್ತೆ ಕೇಳುವಿರಿ. ವಸ್ತ್ರ ವ್ಯಾಪಾರಿಗಳಿಗೆ ಹೆಚ್ಚಿನ ಆದಾಯ. ಹಸಿರು ಬಣ್ಣ ಶುಭ ತರಲಿದೆ.

ಕರ್ಕಾಟಕ: ಸಂಗಾತಿಯ ಸಲಹೆಗಳತ್ತ ಗಮನಹರಿಸಿ. ಮಕ್ಕಳ ಹೆಸರಿನಲ್ಲಿ ಹರಕೆಯ ರೂಪದಲ್ಲಿ ಮಾಡಬೇಕಾಗಿರುವ ಧರ್ಮಕಾರ್ಯಗಳನ್ನು ಶ್ರದ್ಧೆಯಿಂದ ಆಚರಿಸಿ. ಮಾನಸಿಕವಾಗಿ ಸಧೃಢರಾಗುವಿರಿ.

ಸಿಂಹ: ತಾಂತ್ರಿಕ ವಿದ್ಯೆಯಲ್ಲಿ ಯಶಸ್ಸು ಹೊಂದುವ ಲಕ್ಷಣಗಳಿದ್ದರೂ ವಿದ್ಯಾಭ್ಯಾಸಕ್ಕೆ ತೊಂದರೆಯಾಗುವ ಪರಿಸ್ಥಿತಿ ಎದುರಾಗಬಹುದು. ಬೆನ್ನುನೋವು ಹೋಗಲಾಡಿಸಿಕೊಳ್ಳಲು ಯೋಗದಲ್ಲಿ ಆಸಕ್ತಿ ಮೂಡಲಿದೆ.

ಕನ್ಯಾ: ಕುಟುಂಬದಲ್ಲಿ ಕೆಟ್ಟ ವಿಚಾರಗಳ ಬಗ್ಗೆ ಮಾತನಾಡುವುದು ಭಿನ್ನಾಭಿಪ್ರಾಯ ಬೆಳೆಯಲು ಕಾರಣವಾಗುತ್ತದೆ. ನೀವಾಡಿದ ಮಾತುಗಳು ನಿಮಗೆ ಮುಳ್ಳಾಗಬಹುದು.

ತುಲಾ: ಪಾಲುದಾರಿಕೆ ವ್ಯವಹಾರದಿಂದ ಹೊರಬರುವ ಪ್ರಯತ್ನ ನಡೆಸಿ. ಆಶಾಭಾವನೆ, ವಿಶ್ವಾಸ ಹೆಚ್ಚಲಿದೆ. ಲೇವಾದೇವಿ ವ್ಯವಹಾರ ನಡೆಸುವವರಿಗೆ ಲಾಭ. ಕಮಿಷನ್ ಏಜೆಂಟರಿಗೆ ಯಶಸ್ವಿ ಅವಕಾಶಗಳು ಒದಗಲಿವೆ.

ವೃಶ್ಚಿಕ: ಉದರದಲ್ಲಿ ಹುಣ್ಣುಗಳು ಅಥವಾ ನೋವು ಉಂಟಾಗುವ ಸಾಧ್ಯತೆ ಇದೆ. ಹೊಸ ಯೋಜನೆಗೆ ಹೊಸ ರೂಪ ನೀಡಲು ಅವಕಾಶಗಳು ಎದುರಾಗಲಿವೆ. ಪ್ರೇರಣೆ ಮರುಕಳಿಸಲಿದೆ.

ಧನು: ಮುಖ್ಯ ಕೆಲಸಗಳತ್ತ ಗಮನಹರಿಸಿ. ವೃತ್ತಿರಂಗದಲ್ಲಿ ತಿಳಿವಳಿಕೆಯಂತೆ, ಆಸೆಯಂತೆಯೇ ನಡೆಯಿರಿ. ಇನ್ನೊಬ್ಬರ ಸಲಹೆ ಗುರಿಯನ್ನು, ಯಶಸ್ಸನ್ನು ಬದಲು ಮಾಡಬಹುದು.

ಮಕರ: ತಂದೆಯವರ ಮಾತುಗಳನ್ನು ವೇದವಾಕ್ಯ ಎಂದು ಪರಿಪಾಲಿಸು-ವುದರಿಂದ ಅಭಿವೃದ್ಧಿಯ ಪಥದಲ್ಲಿ ಸಾಗುವಿರಿ. ಕೋರ್ಟ್ ಕಚೇರಿಯ ಕೆಲಸ ಅಲೆದಾಟವನ್ನು ಮಾಡಿಸುವುದು. ಆರೋಗ್ಯದ ಬಗ್ಗೆ ಗಮನ ಹರಿಸಿ.

ಕುಂಭ: ಹತ್ತಿ ಬಟ್ಟೆಗಳ ತಯಾರಕರಿಗೆ ಬೇಡಿಕೆ ಇರಲಿದೆ. ಬ್ಯಾಂಕ್ ಸಂಬಂಧಿಸಿದ ಉದ್ಯೋಗದವರ ವರ್ಗಾವಣೆ ಮಾಡಿಸಿಕೊಳ್ಳುವ ಪ್ರಯತ್ನ ವಿಫಲವಾಗಬಹುದು. ಸಿನೆಮಾ ರಂಗದವರಿಗೆ ಆರ್ಥಿಕವಾಗಿ ಲಾಭ.

ಮೀನ: ವೃತ್ತಿ ಸಂಬಂಧಿತ ಯೋಜನೆಗಳಿಗೆ ಗುರಿಗಳನ್ನು ರೂಪಿಸಿಕೊಳ್ಳುವುದರ ಬಗ್ಗೆ ಹಿರಿಯ ವ್ಯಕ್ತಿಗಳಿಂದ ಮಾರ್ಗದರ್ಶನ ಪಡೆಯಿರಿ. ಸಾರಿಗೆ ವ್ಯವಹಾರ ನಡೆಸುವವರಿಗೆ ಆದಾಯ-ಖರ್ಚು ಸಮನಾಗಿರುತ್ತದೆ.

ಗುಂಡಣ್ಣ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 24,870
ಇಂದಿನ ಅಂತ್ಯ: 24,967
ದಿನದ ಕನಿಷ್ಠ: 25,021
97

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹540
12 ಕ್ಕೆ ₹72
ಮೈಸೂರು: 100 ಕ್ಕೆ ₹548

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹426-653
ದ್ವಿತಳಿ (ಬಿ.ವಿ) ₹456-789

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹186
ಆರ್‌ಎಸ್‌ಎಸ್-5 ₹181
ಗುಡ್ ಲಾಟ್ ₹166

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹25000-26800
ಬೆಂಗಳೂರು ₹28000-30000
ತಿಪಟೂರು ₹25500-29100

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1380 (1375)
ಸೋಯಾ (ರಿಫೈನ್ಡ್) ₹1290 (1285)
ಸೂರ್ಯಕಾಂತಿ (ರಿಫೈನ್ಡ್) ₹1420 (1415)
ಪಾಮೋಲಿನ್ ₹1300 (1280)

ಮುಂಬೈ ಧಾರಣೆ (ಶೇಂಗಾ) 25-08-2025	
ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ (ಹೊಸ)	7400-7500
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1390 (1385)
ಒಂದು ವಾರದ ಡೆಲಿವರಿ	1385 (1380)
ಪಾಮ್ ವಾರದ ಡೆಲಿವರಿ	1298 (1278)
ಸೂರ್ಯಕಾಂತಿ ಎಣ್ಣೆ ಕಚ್ಚಾ	1360 (1350)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	99,950 (99,950)
ಬೆಳ್ಳಿ ಕೆ.ಜಿಗೆ	1,16,100 (1,16,550)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

‘ಸುಂಕ: ತೊಂದರೆ ಆಗುವ ಕ್ಷೇತ್ರಕ್ಕೆ ನೆರವು’

ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಹೇಳಿಕೆ

• ಜ್ಞಾನೇಂದ್ರ ಕೇಸರಿ

ಸಂಜಯ್ ಮಲ್ಹೋತ್ರಾ

ನವದೆಹಲಿ: ಅಮೆರಿಕವು ಭಾರತದ ಸರಕುಗಳ ಮೇಲೆ ವಿಧಿಸಿರುವ ಭಾರಿ ಪ್ರಮಾಣದ ಸುಂಕದ ಕಾರಣದಿಂದಾಗಿ ತೊಂದರೆಗೆ ಒಳಗಾಗಬಹುದಾದ ಹವಳ ಮತ್ತು ಆಭರಣ, ಜವಳಿ, ಸೀಗಡಿ ಹಾಗೂ ಎಂಎಸ್‌ಎಂಇ ವಲಯಕ್ಕೆ ಬೆಂಬಲವಾಗಿ ನಿಲ್ಲಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಕ್ರಮ ಕೈಗೊಳ್ಳಲಿದೆ ಎಂದು ಗವರ್ನರ್ ಸಂಜಯ್ ಮಲ್ಹೋತ್ರಾ ಸೋಮವಾರ ಹೇಳಿದ್ದಾರೆ.

‘ಈ ಬಗ್ಗೆ ಕೇಂದ್ರ ಸರ್ಕಾರವು ಪರಿಶೀಲನೆ ನಡೆಸುತ್ತಿದೆ. ನಾವು ಆರ್‌ಬಿಐ ಕಡೆಯಿಂದ ರೆಪೊ ದರ ಇಳಿಸುವ ಕೆಲಸ ಮಾಡುತ್ತಿದ್ದೇವೆ. ಅರ್ಥ ವ್ಯವಸ್ಥೆಯಲ್ಲಿ ನಗದು ಹರಿವು ಹೆಚ್ಚು ಮಾಡಲು ನಾವು ರೆಪೊ ದರವನ್ನು ಶೇಕಡ 1ರಷ್ಟು ತಗ್ಗಿಸಿದ್ದೇವೆ’ ಎಂದು ಮಲ್ಹೋತ್ರಾ ಅವರು ಹೇಳಿದ್ದಾರೆ.

ಸುಂಕದ ಕಾರಣದಿಂದಾಗಿ ತೊಂದರೆಗೆ ಒಳಗಾಗಬಹುದಾದ ವಲಯಗಳಿಗೆ ನೆರವು ಒದಗಿಸಲು ಸರ್ಕಾರ ಎಷ್ಟರಮಟ್ಟಿಗೆ ಸಿದ್ಧವಾಗಿದೆ ಎಂಬ ಪ್ರಶ್ನೆಗೆ ಪ್ರತಿಯಾಗಿ ಅವರು ಈ ಉತ್ತರ ನೀಡಿದ್ದಾರೆ.

‘ಅರ್ಥ ವ್ಯವಸ್ಥೆಯ ಬೆಳವಣಿಗೆಗೆ ಹಾಗೂ ಸುಂಕದಿಂದಾಗಿ ಹೆಚ್ಚಿನ ಪ್ರಮಾಣದಲ್ಲಿ ತೊಂದರೆಗೆ ಒಳಗಾಗುವ ವಲಯಗಳ ಬೆಳವಣಿಗೆಗೆ, ಒಂದುವೇಳೆ ತೊಂದರೆ ಉಂಟಾದಲ್ಲಿ, ನಮ್ಮಿಂದ ಅಗತ್ಯವಿರುವ ಬೆಂಬಲ ಕ್ರಮಗಳನ್ನು ಕೈಗೊಳ್ಳಲು ಹಿಂದೇಟು ಹಾಕುವುದಿಲ್ಲ’ ಎಂದು ಮುಂಬೈನಲ್ಲಿ ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಶೇಕಡ 50ರಷ್ಟು ಸುಂಕ ವಿಧಿಸಿದ್ದಾರೆ. ಇದು ಭಾರತದಿಂದ ಅಮೆರಿಕಕ್ಕೆ ವಿವಿಧ ಸರಕುಗಳನ್ನು, ಉತ್ಪನ್ನಗಳನ್ನು ರಫ್ತು ಮಾಡುವ ವಹಿವಾಟಿನಲ್ಲಿ ತೊಡಗಿಸಿಕೊಂಡವರಲ್ಲಿ ಆತಂಕ ಮೂಡಿಸಿದೆ.

‘ಈಗ ನಡೆಯುತ್ತಿರುವ ವಾಣಿಜ್ಯ ಒಪ್ಪಂದ ಕುರಿತ ಮಾತುಕತೆಗಳು ಫಲ ನೀಡುತ್ತವೆ, ದುಷ್ಪರಿಣಾಮ ಕಡಿಮೆ ಇರುತ್ತದೆ ಎಂಬುದು ನಮ್ಮ ಭರವಸೆ’ ಎಂದು ಅವರು ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಟ್ಟದ ವಹಿವಾಟುಗಳಲ್ಲಿ ರೂಪಾಯಿ ಬಳಕೆ ಹೆಚ್ಚು ಮಾಡುವುದರ ಬಗೆಗಿನ ಪ್ರಶ್ನೆಗೆ ಅವರು, ‘ಅಂತರರಾಷ್ಟ್ರೀಯ ಮಟ್ಟದ ವ್ಯಾಪಾರಗಳು ರೂಪಾಯಿ ಮೂಲಕ ನಡೆಯುವುದು ಸಾಧ್ಯವಾಗಲು ದಶಕಗಳ ಅವಧಿ ಬೇಕಾಗುತ್ತದೆ’ ಎಂದು ಉತ್ತರಿಸಿದ್ದಾರೆ.

‘ಈ ವಿಚಾರವಾಗಿ ಆರ್‌ಬಿಐ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದೆ. ವ್ಯಾಪಾರ ವಹಿವಾಟುಗಳ ಸ್ಥಳೀಯ ಕರೆನ್ಸಿಯಲ್ಲಿ ನಡೆಯುವಂತೆ ಆಗುವುದು ದೇಶಕ್ಕೆ ಬಹಳ ಮುಖ್ಯ. ಈ ರೀತಿ ಆದಾಗ ನಮಗೆ ವಿದೇಶಿ ವಿನಿಮಯದಲ್ಲಿನ ಏರಿಳಿತಗಳ ಸಮಸ್ಯೆಯಿಂದ ರಕ್ಷಣೆ ಪಡೆಯಲು ಸಾಧ್ಯವಾಗುತ್ತದೆ’ ಎಂದು ಅವರು ಹೇಳಿದ್ದಾರೆ.

ಸುದ್ದಿ 2 ನಿಮಿಷ

2.2 ಲಕ್ಷ ತಾತ್ಕಾಲಿಕ ಉದ್ಯೋಗ ಸೃಷ್ಟಿ: ಫ್ಲಿಪ್‌ಕಾರ್ಟ್

ಬೆಂಗಳೂರು: ಸಾಲು ಸಾಲು ಹಬ್ಬಗಳು ಹತ್ತಿರವಾಗಿರುವ ಈ ಹೊತ್ತಿನಲ್ಲಿ 28 ರಾಜ್ಯಗಳಲ್ಲಿ 2.2 ಲಕ್ಷಕ್ಕೂ ಹೆಚ್ಚಿನ ತಾತ್ಕಾಲಿಕ ಉದ್ಯೋಗಗಳನ್ನು ಸೃಷ್ಟಿ ಮಾಡಿರುವುದಾಗಿ ಇ-ವಾಣಿಜ್ಯ ಕ್ಷೇತ್ರದ ದೈತ್ಯ ಕಂಪನಿ ಫ್ಲಿಪ್‌ಕಾರ್ಟ್ ಹೇಳಿದೆ.

ಸರಕು ಸಾಗಣೆ ಹಾಗೂ ಪೂರೈಕೆ ವ್ಯವಸ್ಥೆಯಲ್ಲಿ, ಗ್ರಾಹಕನ ಮನೆ ಬಾಗಿಲಿಗೆ ಉತ್ಪನ್ನಗಳನ್ನು ತಲುಪಿಸುವ ಕೆಲಸಗಳಿಗಾಗಿ ಈ ಪ್ರಮಾಣದಲ್ಲಿ ಉದ್ಯೋಗದ ಸೃಷ್ಟಿ ಆಗಿದೆ ಎಂದು ಅದು ಹೇಳಿದೆ.

ಕಂಪನಿಯ ಸರಕು ಸಾಗಣೆ ಜಾಲವು ಹಬ್ಬಗಳ ಸಂದರ್ಭದ ಬೇಡಿಕೆಯನ್ನು ಪೂರೈಸುವುದಕ್ಕಾಗಿ ಹೊಸದಾಗಿ 650 ಡೆಲಿವರಿ ಕೇಂದ್ರಗಳನ್ನು ಆರಂಭಿಸಲಿದೆ. ಇವು ಎರಡನೆಯ ಹಾಗೂ ಮೂರನೆಯ ಹಂತದ ನಗರಗಳಲ್ಲಿ ಇರಲಿವೆ ಎಂದು ಕಂಪನಿ ತಿಳಿಸಿದೆ.

ಮಹಿಳೆಯರ ನೇಮಕದಲ್ಲಿ ಶೇ 10ರಷ್ಟು ಹೆಚ್ಚಳ ಆಗಿದೆ, ಹಬ್ಬಗಳ ಸಂದರ್ಭದಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ಹೆಚ್ಚಿನ ಅವಕಾಶ ಕಲ್ಪಿಸಲು ಗಮನ ನೀಡಲಾಗಿದೆ ಎಂದು ಫ್ಲಿಪ್‌ಕಾರ್ಟ್ ಹೇಳಿದೆ.

ತಾತ್ಕಾಲಿಕ ಅವಧಿಗೆ 1.5 ಲಕ್ಷಕ್ಕೂ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಿರುವುದಾಗಿ ಅಮೆಜಾನ್ ಇಂಡಿಯಾ ಕಂಪನಿಯು ಈ ತಿಂಗಳ ಆರಂಭದಲ್ಲಿ ಹೇಳಿತ್ತು.

ಅಮೆರಿಕದಲ್ಲಿ ಬಡ್ಡಿ ದರ ಕಡಿತ ನಿರೀಕ್ಷೆ: ಷೇರು ಸೂಚ್ಯಂಕ ಏರಿಕೆ

ಮುಂಬೈ /ಬ್ಯಾಂಕಾಕ್ (ಪಿಟಿಐ/ಎಪಿ): ಐ.ಟಿ ಮತ್ತು ವಾಹನ ಕಂಪನಿಗಳ ಷೇರು ಖರೀದಿ ಹೆಚ್ಚಳದ ಕಾರಣದಿಂದಾಗಿ ದೇಶದ ಷೇರುಪೇಟೆ ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 329 ಅಂಶ ಏರಿಕೆಯಾಗಿ, 81,635ಕ್ಕೆ ತಲುಪಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 97 ಅಂಶ ಹೆಚ್ಚಳವಾಗಿ, 24,967ಕ್ಕೆ ವಹಿವಾಟು ಕೊನೆಗೊಳಿಸಿದೆ.

ಅಮೆರಿಕದ ಫೆಡರಲ್ ರಿಸರ್ವ್ ಸೆಪ್ಟೆಂಬರ್‌ನಲ್ಲಿ ಬಡ್ಡಿ ದರ ಕಡಿತಗೊಳಿಸುವ ನಿರೀಕ್ಷೆ ಹೆಚ್ಚಿಸಿದೆ. ಇದು ದೇಶದ ಐ.ಟಿ ಕಂಪನಿಗಳ ಷೇರು ಖರೀದಿ ಹೆಚ್ಚಳಕ್ಕೆ ಕಾರಣವಾಗಿದ್ದರಿಂದ ಸೂಚ್ಯಂಕಗಳು ಏರಿಕೆ ಕಂಡವು ಎಂದು ಜಿಯೊಜಿತ್ ಇನ್ವೆಸ್ಟ್‌ಮೆಂಟ್ಸ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ. ಪ್ರಸ್ತಾವಿತ ಜಿಎಸ್‌ಟಿ ಸರಳೀಕರಣವು ಸಹ ಸೂಚ್ಯಂಕಗಳ ಏರಿಕೆಗೆ ನೆರವಾದವು ಎಂದು ತಿಳಿಸಿದ್ದಾರೆ.

ಅಮೆರಿಕದ ಫೆಡರಲ್ ರಿಸರ್ವ್‌ನ ಅಧ್ಯಕ್ಷ ಜೆರೋಮ್ ಪೊವೆಲ್ ಅವರು ಬಡ್ಡಿ ದರ ಕಡಿತಗೊಳಿಸುವ ಸೂಚನೆ ನೀಡಿದ್ದಾರೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಹ ಬಡ್ಡಿ ದರ ಇಳಿಕೆ ಮಾಡುವಂತೆ ಇತ್ತೀಚೆಗೆ ಒತ್ತಡ ಹೇರಿದ್ದರು.

ಡಿಸೆಂಬರ್‌ಗೆ ಹೊಸ ಐ.ಟಿ. ನಿಯಮ

ನವದೆಹಲಿ (ಪಿಟಿಐ): ಹೊಸ ಆದಾಯ ತೆರಿಗೆ ಕಾಯ್ದೆಯ ಅನುಷ್ಠಾನಕ್ಕೆ ಅಗತ್ಯವಿರುವ ನಿಯಮಗಳನ್ನು ಡಿಸೆಂಬರ್‌ಗೆ ಮೊದಲು ಅಧಿಸೂಚನೆಯಲ್ಲಿ ಪ್ರಕಟಿಸುವ ಗುರಿ ಇದೆ ಎಂದು ಆದಾಯ ತೆರಿಗೆ ಇಲಾಖೆ ಹೇಳಿದೆ.

ಸರಳೀಕರಿಸಿದ ಆದಾಯ ತೆರಿಗೆ ವಿವರ ಸಲ್ಲಿಕೆ ನಮೂನೆಗಳನ್ನು ಸಿದ್ಧಪಡಿಸುವ ಕೆಲಸದಲ್ಲಿ ಇಲಾಖೆ ತೊಡಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

ಹೊಸ ಕಾಯ್ದೆ ಬಗ್ಗೆ ಇಲಾಖೆಯು ವಿವರಣೆಗಳನ್ನು ಪ್ರಶ್ನೋತ್ತರದ ಮಾದರಿಯಲ್ಲಿ ನೀಡಲಿದೆ ಎಂದು ಕೇಂದ್ರ ನೇರ ತೆರಿಗೆಗಳ ಮಂಡಳಿಯ (ಸಿಬಿಡಿಟಿ) ಸದಸ್ಯ (ಶಾಸನ) ಆರ್.ಎನ್. ಪರ್ಬತ್ ಅವರು ತಿಳಿಸಿದ್ದಾರೆ.

ಹೊಸ ಕಾಯ್ದೆಯನ್ನು ಅರ್ಥ ಮಾಡಿಕೊಂಡು, ಅದನ್ನು ಅನುಷ್ಠಾನಕ್ಕೆ ತರಲು ಅಧಿಕಾರಿಗಳಿಗೆ ಸಾಧ್ಯವಾಗಬೇಕು ಎಂಬ ಉದ್ದೇಶದಿಂದ ಅವರ ಸಾಮರ್ಥ್ಯ ಹೆಚ್ಚಿಸುವ ಕೆಲಸದಲ್ಲಿಯೂ ಇಲಾಖೆ ತೊಡಗಿದೆ ಎಂದು ಅವರು ಹೇಳಿದ್ದಾರೆ. ಹೊಸ ಕಾಯ್ದೆಯು 2026ರ ಏಪ್ರಿಲ್ 1ರಿಂದ ಜಾರಿಗೆ ಬರಲಿದೆ.

ಹೊಸ ‘ಕೈಗರ್’ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫ್ರಾನ್ಸ್‌ನ ಕಾರು ತಯಾರಕಾ ಕಂಪನಿ ರೆನೊ ಸಮೂಹದ ರೆನೊ ಇಂಡಿಯಾ ಹೊಸ ‘ರೆನೊ ಕೈಗರ್’ ಕಾರು ಬಿಡುಗಡೆ ಮಾಡಿದೆ.

ಸುಧಾರಿತ 100 ಪಿಎಸ್ ಟರ್ಬೋಚಾರ್ಜ್ಡ್ ಎಂಜಿನ್ ಮತ್ತು 35ಕ್ಕೂ ಹೆಚ್ಚು ಸುಧಾರಣೆಗಳನ್ನು ಹೊಂದಿರುವ ಈ ಎಸ್‌ಯುವಿ ಅತ್ಯುತ್ಕೃಷ್ಟ ಕಾರ್ಯಕ್ಷಮತೆ, ಅತ್ಯುತ್ತಮವಾದ ಇಂಧನ ದಕ್ಷತೆ ಹೊಂದಿದೆ ಎಂದು ಕಂಪನಿ ತಿಳಿಸಿದೆ.

ಹೊಸ ಕೈಗರ್ ಆಕರ್ಷಕ ವಿನ್ಯಾಸ, ಸ್ಮಾರ್ಟ್ ತಂತ್ರಜ್ಞಾನ ಮತ್ತು ಸುಧಾರಿತ ಸುರಕ್ಷತಾ ವೈಶಿಷ್ಟ್ಯಗಳನ್ನು ಹೊಂದಿದ್ದು, ಅತ್ಯುತ್ತಮ ಕಾರ್ಯಕ್ಷಮತೆಯನ್ನು ಒದಗಿಸಲು ಇದನ್ನು ಮೇಲ್ದರ್ಜೆಗೆ ಏರಿಸಲಾಗಿದೆ. ಇದು ವಿವಿಧ ವೇರಿಯೆಂಟ್‌ಗಳಲ್ಲಿ ಲಭ್ಯವಿದೆ. ಟರ್ಬೊ ಕೈಗರ್ ವೇರಿಯೆಂಟ್‌ಗಳಾದ ಟೆಕ್ನೋ ಮತ್ತು ಇಮೋಷನ್‌ಗೆ ₹9.99 ಲಕ್ಷದಿಂದ ₹11.29 ಲಕ್ಷದವರೆಗೆ (ಎಕ್ಸ್ ಷೋರೂಂ) ಬೆಲೆಯಿದೆ. ಇದರ ಜೊತೆಗೆ ಹೆಚ್ಚು ಕೈಗೆಟುಕುವ ದರದ ನ್ಯಾಚುರಲಿ ಆಸ್ಪಿರೇಟೆಡ್ ಎಂಜಿನ್ ವೇರಿಯೆಂಟ್‌ಗಳು ₹6.29 ಲಕ್ಷದಿಂದ ₹9.14 ಲಕ್ಷದವರೆಗಿನ (ಎಕ್ಸ್ ಷೋರೂಂ) ಬೆಲೆಯಲ್ಲಿ ಲಭ್ಯವಿವೆ ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಅಡಿಕೆ ಧಾರಣೆ

ಕುಮಟಾ		ಶಿವಮೊಗ್ಗ		ಶಿರಸಿ	
ಚಾಲಿ	36521-43009	ಬೆಟ್ಟೆ	50069-66140	ಬೆಟ್ಟೆ	28999-41699
ಚಿಪ್ಪು	26589-31569	ಗೊರಬಲು	19009-36299	ಬಿಳಿಗೋಟು	23196-35399
ಕೋಕ	7109-22869	ರಾಶಿ	45009-60911	ಚಾಲಿ	38599-43618
ಫ್ಯಾಕ್ಟರಿ	5029-30999	ಸರಕು	55009-96896	ಕೆಂಪುಗೋಟು	13009-26309
ಹೊಸಚಾಲಿ	36310-43379			ರಾಶಿ	45018-50699
ಪುತ್ತೂರು		**ಸಿದ್ದಾಪುರ**		**ಯಲ್ಲಾಪುರ**	
ಕೋಕ	20000-28000	ಬಿಳಿಗೋಟು	24200-32699	ಬಿಳಿಗೋಟು	16899-34009
ಹೊಸತು	26000-48500	ಚಾಲಿ	35219-41699	ಚಾಲಿ	34699-43199
ಹಳತು	37500-52500	ಕೋಕ	18319-27899	ಕೋಕ	12900-20802
ಸಾಗರ		ಕೆಂಪುಗೋಟು	20119-22919	ಕೆಂಪುಗೋಟು	17699-27909
ಬಿಳಿಗೋಟು	13419-26806	ರಾಶಿ	44099-50699	ರಾಶಿ	43319-56129
ಚಾಲಿ	25499-38509			ತಟ್ಟಿಬೆಟ್ಟೆ	29199-39400
ಕೋಕ	7599-26199				

(ಸಾಗರ, ಮುಂದುವರಿದು) ಕೆಂಪುಗೋಟು 27869-34899; ರಾಶಿ 32899-60919; ಸಿಪ್ಪೆಗೋಟು 9199-19601; ತಟ್ಟಿಬೆಟ್ಟೆ 28900-42499

ಭಾರತಕ್ಕೆ ‘ಬಿಬಿಬಿ–’ ರೇಟಿಂಗ್: ಫಿಚ್

ನವದೆಹಲಿ (ಪಿಟಿಐ): ಜಾಗತಿಕ ರೇಟಿಂಗ್ ಸಂಸ್ಥೆ ಫಿಚ್, ಭಾರತಕ್ಕೆ ನೀಡಿರುವ ರೇಟಿಂಗ್ ಅನ್ನು ‘ಬಿಬಿಬಿ–’ ಮಟ್ಟದಲ್ಲಿ ಉಳಿಸಿಕೊಂಡಿದೆ.

ಶೇ 50ರಷ್ಟು ಸುಂಕ ಹೇರುವ ಅಮೆರಿಕದ ನಿರ್ಧಾರವು ಭಾರತದ ಜಿಡಿಪಿ ಬೆಳವಣಿಗೆ ಮೇಲೆ ತುಸು ಪರಿಣಾಮ ಬೀರಲಿದೆ ಎಂದಿದೆ.

ಕಳೆದ ಎರಡು ವರ್ಷಗಳಲ್ಲಿ ದೇಶದ ಪ್ರಗತಿ ಮಂದವಾಗಿದ್ದರೂ, ಇತರೆ ದೇಶಗಳಿಗೆ ಹೋಲಿಸಿದರೆ ಆರ್ಥಿಕ ಮುನ್ನೋಟವು ಸದೃಢವಾಗಿದೆ ಎಂದು ತಿಳಿಸಿದೆ.

ಪ್ರಸ್ತಾವಿತ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸುಧಾರಣೆ ಜಾರಿಗೆ ಬಂದರೆ ಮಾರುಕಟ್ಟೆಯಲ್ಲಿ ಬೇಡಿಕೆಯು ಹೆಚ್ಚಾಗಲಿದೆ. ಇದು ದೇಶದ ಆರ್ಥಿಕ ಬೆಳವಣಿಗೆಗೆ ಇರುವ ಅಡ್ಡಿಗಳನ್ನು ಕಡಿಮೆ ಮಾಡಲಿದೆ ಎಂದು ಹೇಳಿದೆ.

ಇತ್ತೀಚೆಗೆ, ಎಸ್ ಆ್ಯಂಡ್ ಪಿ ಗ್ಲೋಬಲ್ ರೇಟಿಂಗ್ಸ್ ಸಂಸ್ಥೆಯು 18 ವರ್ಷದ ಬಳಿಕ ಭಾರತದ ರೇಟಿಂಗ್ ಅನ್ನು ಮೇಲ್ದರ್ಜೆಗೇರಿಸಿ, ‘ಬಿಬಿಬಿ’ ರೇಟಿಂಗ್ ನೀಡಿದೆ.

ದ್ವಿಚಕ್ರ ವಾಹನ ಮಾರಾಟ ಹೆಚ್ಚಳ ನಿರೀಕ್ಷೆ: ಐಸಿಆರ್‌ಎ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದಲ್ಲಿ ದ್ವಿಚಕ್ರ ವಾಹನಗಳ ಮಾರಾಟವು ಶೇ 6ರಿಂದ ಶೇ 9ರಷ್ಟು ಏರಿಕೆ ಕಾಣುವ ನಿರೀಕ್ಷೆ ಇದೆ ಎಂದು ರೇಟಿಂಗ್ ಸಂಸ್ಥೆ ಐಸಿಆರ್‌ಎ ಸೋಮವಾರ ಹೇಳಿದೆ.

ನಗರ ಪ್ರದೇಶಗಳಲ್ಲಿ ದ್ವಿಚಕ್ರ ವಾಹನ ಬಳಕೆ ಪ್ರಮಾಣ ಹೆಚ್ಚಳವಾಗಿದೆ. ಮುಂಗಾರು ಮಳೆಯು ಚೆನ್ನಾಗಿ ಆಗಿರುವುದರಿಂದಾಗಿ ಗ್ರಾಮೀಣ ಭಾಗದಲ್ಲಿನ ಜನರ ಆದಾಯ ಹೆಚ್ಚಿದೆ. ಜಿಎಸ್‌ಟಿ ದರ ಇಳಿಕೆಯ ಸಾಧ್ಯತೆಯು ವಾಹನಗಳ ಮಾರಾಟ ಹೆಚ್ಚಳಕ್ಕೆ ಕಾರಣ ಆಗಬಹುದು ಎಂದು ಅದು ತಿಳಿಸಿದೆ.

ಜುಲೈ ತಿಂಗಳಿನಲ್ಲಿ ದೇಶೀಯವಾಗಿ ವಾಹನಗಳ ಸಗಟು ಮಾರಾಟ ಶೇ 9ರಷ್ಟು ಏರಿಕೆಯಾಗಿದ್ದು, 15 ಲಕ್ಷ ವಾಹನಗಳು ಮಾರಾಟವಾಗಿವೆ. ಆದರೆ, ಚಿಲ್ಲರೆ ಮಾರಾಟವು ಶೇ 6.5ರಷ್ಟು ಇಳಿಕೆಯಾಗಿದೆ ಎಂದು ತಿಳಿಸಿದೆ.

ಒಳ ಮೀಸಲು ಜಾರಿ: ಆದೇಶ

ಒಂದನೇ ಪುಟದಿಂದ...

ಒಳ ಮೀಸಲಾತಿ ಕಲ್ಪಿಸಲು ರಚಿಸಿದ್ದ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ನೇತೃತ್ವದ ಆಯೋಗವು ಸಲ್ಲಿಸಿದ್ದ ಶಿಫಾರಸುಗಳನ್ನು ಕೆಲವು ಬದಲಾವಣೆಗಳೊಂದಿಗೆ ಅನುಷ್ಠಾನಗೊಳಿಸಲು, ಆಗಸ್ಟ್ 19ರಂದು ನಡೆದಿದ್ದ ಸಚಿವ ಸಂಪುಟದ ವಿಶೇಷ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿತ್ತು.

ನಾಗಮೋಹನದಾಸ್ ಆಯೋಗವು ಪರಿಶಿಷ್ಟ ಜಾತಿಗಳನ್ನು ‘ಎ’, ‘ಬಿ’, ‘ಸಿ’, ‘ಡಿ’, ‘ಇ’ ಎಂದು ಐದು ಪ್ರವರ್ಗಗಳಾಗಿ ವಿಂಗಡಿಸಿ, ಮೀಸಲಾತಿ ಹಂಚಿಕೆ ಮಾಡಿ ಶಿಫಾರಸು ಮಾಡಿತ್ತು. ಆ ವರದಿಯಲ್ಲಿ ಪ್ರವರ್ಗ ‘ಇ’ಯಲ್ಲಿರುವ ಆದಿ ಕರ್ನಾಟಕ, ಆದಿ ಆಂಧ್ರ, ಆದಿ ದ್ರಾವಿಡ ಈ ಮೂರು ಸಮುದಾಯಗಳು ಮೂಲ ಜಾತಿಯನ್ನು ತಿಳಿಸದೇ ಇರುವುದರಿಂದ ಪ್ರವರ್ಗ ‘ಎ’ ಅಥವಾ ಪ್ರವರ್ಗ ‘ಬಿ’ ಅಡಿ ಮೀಸಲಾತಿ ಸೌಲಭ್ಯವನ್ನು ಪಡೆಯಬಹುದು ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಗರಿಷ್ಠ ವಯೋಮಿತಿ ಸಡಿಲಿಕೆಗೂ ಅವಕಾಶ

ಉದ್ಯೋಗಗಳ ನೇಮಕಾತಿಯಲ್ಲಿಎಲ್ಲ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ ಸಡಿಲಿಕೆ ನೀಡಲು ತೀರ್ಮಾನಿಸಲಾಗಿದ್ದು, ಈ ಬಗ್ಗೆ ಪ್ರತ್ಯೇಕ ಆದೇಶ ಹೊರಡಿಸಲು ಕೂಡಾ ಡಿಪಿಎಆರ್ ಅಗತ್ಯ ಕ್ರಮ ವಹಿಸಬೇಕು ಎಂದು ಆದೇಶ ಹೇಳಿದೆ.

ಹೊಸ ದತ್ತಾಂಶ ಅಥವಾ ಮಾಹಿತಿ ಬಂದಾಗ ಅಗತ್ಯ ಮಾರ್ಪಾಡುಗಳನ್ನು ಮಾಡಲು ಕರ್ನಾಟಕ ರಾಜ್ಯ ಎಸ್‌ಸಿ ಮತ್ತು ಎಸ್‌ಟಿ ಆಯೋಗಕ್ಕೆ ಅಧಿಕಾರ ನೀಡುವ ಬಗ್ಗೆ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ ಕಾಯ್ದೆ 2002ಕ್ಕೆ ತಿದ್ದುಪಡಿ ಮಾಡಲಾಗುವುದು ಎಂದೂ ತಿಳಿಸಲಾಗಿದೆ.

‘ಪರಿಶಿಷ್ಟ ಜಾತಿಗಳಲ್ಲಿನ ಚಲನಶೀಲತೆ ಹಾಗೂ ಲಭ್ಯವಾಗುವ ದತ್ತಾಂಶಗಳನ್ನು ಪರಿಶೀಲಿಸಿ, ಕಾಲಕಾಲಕ್ಕೆ ಈ ಜಾತಿಗಳನ್ನು ಅಧ್ಯಯನ ಮಾಡಿ ವರದಿ ನೀಡಲು ಪರಿಶಿಷ್ಟ ಜಾತಿಗಳ ಶಾಶ್ವತ ಆಯೋಗ ರಚಿಸಲಾಗುವುದು. ಒಳ ಮೀಸಲಾತಿ ಹೋರಾಟಗಾರರ ಮೇಲಿನ ಮೊಕದ್ದಮೆಗಳನ್ನು ಹಿಂಪಡೆಯಲು, ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣೆಯಲ್ಲಿರುವ ಅಪರಾಧ ಪ್ರಕರಣಗಳ ಕುರಿತು ಪರಿಶೀಲಿಸಿ ಸರ್ಕಾರಕ್ಕೆ ಶಿಫಾರಸು ಮಾಡುವ ಬಗ್ಗೆ ಸಚಿವ ಸಂಪುಟ ಉಪ ಸಮಿತಿ ಕ್ರಮ ವಹಿಸಬೇಕು. ಎಂದೂ ಆದೇಶದಲ್ಲಿ ತಿಳಿಸಲಾಗಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಸವಿನೆನಪು

ಆರ್. ಸ್ಮಿತಾರೆಡ್ಡಿ (ಚಿನ್ನು) B.E.,
06-05-1981 - 26-8-2007
ವರ್ಷಗಳು ಉರುಳಿದಂತೆಲ್ಲ
ಕಾಡುತಿದೆ ನಿನ್ನಗಲಿಕೆಯ ನೆನಪು..
ಆದರೂ ಸಾಗುತಿದೆ ನಮ್ಮೀ
ಬದುಕಿನ ಜೊತೆಯಲ್ಲೇ
ನಿನ್ನೊಂದಿಗಿನ ಸವಿನೆನಪು...
ತಂದೆ, ತಾಯಿ, ಮಗ–ಸ್ವಯಂರೆಡ್ಡಿ
ಹಾಗೂ ಕುಟುಂಬದವರು

ಸಂಭಾವ್ಯ ಪ್ರವಾಹದ ಬಗ್ಗೆ ಪಾಕಿಸ್ತಾನಕ್ಕೆ ಭಾರತ ಎಚ್ಚರಿಕೆ

ಇಸ್ಲಾಮಾಬಾದ್ (ಪಿಟಿಐ): ಸಂಭಾವ್ಯ ಪ್ರವಾಹದ ಬಗ್ಗೆ ಪಾಕಿಸ್ತಾನಕ್ಕೆ ಭಾರತ ಎಚ್ಚರಿಕೆ ನೀಡಿದೆ ಎಂದು ಪಾಕ್‌ನ ವಿದೇಶಾಂಗ ಕಚೇರಿ ಸೋಮವಾರ ತಿಳಿಸಿದೆ. ಆದರೆ, ಈ ಎಚ್ಚರಿಕೆಯನ್ನು ಸಿಂಧೂ ಜಲ ಆಯೋಗದ ಬದಲು ರಾಜತಾಂತ್ರಿಕ ಮಾರ್ಗಗಳ ಮೂಲಕ ತಿಳಿಸಲಾಗಿದೆ ಎಂದು ಅದು ಒತ್ತಿಹೇಳಿದೆ.

ಸಿಂಧೂ ಜಲ ಒಪ್ಪಂದದ ಎಲ್ಲಾ ನಿಬಂಧನೆಗಳನ್ನು ಸಂಪೂರ್ಣವಾಗಿ ಪಾಲಿಸಲು ಭಾರತ ಬದ್ಧವಾಗಿದೆ ಎಂದು ವಿದೇಶಾಂಗ ಕಚೇರಿಯ ವಕ್ತಾರ ಶಫ್ಕತ್ ಅಲಿ ಖಾನ್ ಪುನರುಚ್ಚರಿಸಿದ್ದಾರೆ.

ತವಿ ನದಿಯಲ್ಲಿನ ಪ್ರವಾಹದ ಬಗ್ಗೆ ಮಾನವೀಯ ನೆಲೆಯಲ್ಲಿ ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಲಾಗಿದೆ ಎಂದು ಭಾರತದ ಮೂಲಗಳು ತಿಳಿಸಿವೆ. ಮೇ ತಿಂಗಳಲ್ಲಿ ಉಭಯ ದೇಶಗಳ ನಡುವೆ ನಡೆದ ನಾಲ್ಕು ದಿನಗಳ ಸಂಘರ್ಷದ ನಂತರ ಭಾರತ ಮತ್ತು ಪಾಕಿಸ್ತಾನದ ನಡುವೆ ನಡೆದ ಮೊದಲ ಅಧಿಕೃತ ಸಂಪರ್ಕ ಇದಾಗಿದೆ.

‘ಸುಳ್ಳು ಜಾತಿ: 170 ಪ್ರಕರಣ’

ಒಂದನೇ ಪುಟದಿಂದ...

‘ಸುಳ್ಳು ಜಾತಿ ಪ್ರಮಾಣ ಪತ್ರ ಪ್ರಕರಣಗಳ ವಿಚಾರದಲ್ಲಿ ಇಲಾಖೆಗಳ ನಡುವೆ ಸಮನ್ವಯದ ಅಗತ್ಯವಿದೆ. ಈ ಬಗ್ಗೆ ಸಮಗ್ರ ವರದಿ ಸಲ್ಲಿಸಬೇಕು’ ಎಂದು ಅವರು ನಿರ್ದೇಶನ ನೀಡಿದ್ದಾರೆ.

‘ಪರಿಶಿಷ್ಟರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ 60 ದಿನಗಳ ಒಳಗೆ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸುವಂತೆ ಸೂಚನೆ ನೀಡಲಾಗಿದೆ. ಆದರೆ, ಕಳೆದ ಆರು ತಿಂಗಳಲ್ಲಿ ಶೇ 84ರಷ್ಟು ಪ್ರಕರಣಗಳಲ್ಲಿ ಮಾತ್ರ ನಿಗದಿತ ಅವಧಿಯ ಒಳಗೆ ಆರೋಪ ಪಟ್ಟಿ ಸಲ್ಲಿಸಲಾಗಿದೆ. ಆರೋಪ ಪಟ್ಟಿ ಸಲ್ಲಿಸುವ ವಿಚಾರದಲ್ಲಿ ಪೊಲೀಸರು ಯಾವುದೇ ನೆಪ ಹೇಳಬಾರದು’ ಎಂದು ತಾಕೀತು ಮಾಡಿದ ಮುಖ್ಯಮಂತ್ರಿ, ‘56 ಪ್ರಕರಣಗಳಲ್ಲಿ ನ್ಯಾಯಾಲಯ ನೀಡಿರುವ ತಡೆಯಾಜ್ಞೆಗಳನ್ನು ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು’ ಎಂದೂ ಸೂಚನೆ ನೀಡಿದ್ದಾರೆ.

‘ದೌರ್ಜನ್ಯ ಪ್ರಕರಣಗಳ ತ್ವರಿತ ವಿಚಾರಣೆಗೆ 11 ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ. ಪ್ರಕರಣಗಳ ಸರಿಯಾದ ವಿಚಾರಣೆ ನಡೆಸಿ, ತ್ವರಿತವಾಗಿ ನ್ಯಾಯ ಒದಗಿಸಲು ಕ್ರಮ ಕೈಗೊಳ್ಳಬೇಕು. ಪ್ರಸ್ತುತ ಶಿಕ್ಷೆಯ ಪ್ರಮಾಣ ಶೇ 10ರಷ್ಟಿದೆ. ಇದು ಹೆಚ್ಚಾಗಬೇಕು. ಆರೋಪಿಗಳ ಜೊತೆ ಪೊಲೀಸರು ಶಾಮೀಲಾದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು’ ಎಂದು ಎಚ್ಚರಿಕೆ ನೀಡಿದ್ದಾರೆ.

‘ರಾಜ್ಯದಲ್ಲಿ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ (ಡಿಸಿಆರ್‌ಇ) 33 ಪೊಲೀಸ್ ಠಾಣೆಗಳನ್ನು ತೆರೆಯಲಾಗಿದೆ. ಇಲ್ಲಿ ಸಿಬ್ಬಂದಿ ಕೊರತೆಯಿದ್ದರೆ ಭರ್ತಿ ಮಾಡಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಬೇಕು. ದೌರ್ಜನ್ಯ ಪ್ರಕರಣಗಳಲ್ಲಿ ಪ್ರತಿ ದೂರು ದಾಖಲಿಸುವ ಪ್ರವೃತ್ತಿ ಹೆಚ್ಚುತ್ತಿರುವುದು ಗಮನಕ್ಕೆ ಬಂದಿದೆ. ಅಂತಹ ಪ್ರಕರಣಗಳಲ್ಲಿ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿ, ದೂರಿನಲ್ಲಿ ಸತ್ಯಾಂಶವಿದ್ದರೆ ಮಾತ್ರ ಎಫ್‌ಐಆರ್ ದಾಖಲಿಸಬೇಕು’ ಎಂದಿದ್ದಾರೆ.

‘ದೌರ್ಜನ್ಯಕ್ಕೆ ಒಳಗಾದವರು ಅಂಗವಿಕಲರಾದರೆ ನೀಡುವ ವೈದ್ಯಕೀಯ ಪರಿಹಾರ ಮೊತ್ತವನ್ನು ಹೆಚ್ಚಿಸುವ ಕುರಿತು ಪರಿಶೀಲಿಸಲಾಗುವುದು’ ಎಂದು ಭರವಸೆ ನೀಡಿದ್ದಾರೆ.

ಸಚಿವರಾದ ಎಚ್.ಕೆ. ಪಾಟೀಲ, ಎಚ್.ಸಿ. ಮಹದೇವಪ್ಪ, ಕೆ.ಎಚ್. ಮುನಿಯಪ್ಪ, ಆರ್.ಬಿ. ತಿಮ್ಮಾಪುರ, ಶಾಸಕರಾದ ಎ.ಸಿ. ಶ್ರೀನಿವಾಸ್, ಎಚ್.ವಿ. ವೆಂಕಟೇಶ್, ಎ.ಆರ್.ಕೃಷ್ಣಮೂರ್ತಿ, ಪಿ.ಎಂ. ನರೇಂದ್ರ ಸ್ವಾಮಿ, ಬಸನಗೌಡ ತುರವಿಹಾಳ್, ಭಾಗೀರಥಿ ಮುರುಳ್ಯ, ಪರಿಷತ್ ಸದಸ್ಯರಾದ ಸುಧಾಮ್ ದಾಸ್, ಡಿ.ತಿಮ್ಮಯ್ಯ, ಶಾಂತಾರಾಂ ಸಿದ್ದಿ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸಭೆಯಲ್ಲಿದ್ದರು.

ಮುಖ್ಯಮಂತ್ರಿ ಎದುರೇ ಬೇಸರ

ಕಲಬುರಗಿಯಲ್ಲಿ ತಮ್ಮನ್ನು ಕೂಡಿ ಹಾಕಿದ ಪ್ರಕರಣವನ್ನು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಸಭೆಯಲ್ಲಿ ಪ್ರಸ್ತಾಪಿಸಿ, ಭಾವಚಿತ್ರ ಮತ್ತು ಕಾರಿಗೆ ಮಸಿ ಬಳಿದ ಚಿತ್ರ ಪ್ರದರ್ಶಿಸಿ ಆಕ್ರೋಶ ವ್ಯಕ್ತಪಡಿಸಿದರು.

ಈ ಕುರಿತು ದೂರು ದಾಖಲಿಸುವಂತೆ ಮುಖ್ಯಮಂತ್ರಿಯವರು, ಪೊಲೀಸ್ ಮಹಾನಿರ್ದೇಶಕರಿಗೆ ಸೂಚನೆ ನೀಡಿದರು.

‘ಕೋಲಾರ ಶಾಸಕರೊಬ್ಬರ ಜಾತಿ ಪ್ರಮಾಣಪತ್ರದ ವಿಚಾರದಲ್ಲಿ ನ್ಯಾಯಾಲಯ ತೀರ್ಪು ನೀಡಿದ್ದರೂ ಜಾರಿ ಮಾಡುವುದರಲ್ಲಿ ಅಧಿಕಾರಿಗಳು ವಿಫಲವಾಗಿದ್ದಾರೆ ಎಂದು ಸಚಿವರೊಬ್ಬರು ಸಭೆಯಲ್ಲಿ ಬೇಸರ ವ್ಯಕ್ತಪಡಿಸಿದರು’ ಎಂದು ಗೊತ್ತಾಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Hotel
ಬೆಂಗಳೂರು, ಹಾಸ್ಟೆಲ್ ಕ್ಯಾಂಟೀನ್ ಒಂದಕ್ಕೆ ಉತ್ತರ ಭಾರತ/ ದಕ್ಷಿಣ ಭಾರತ ಶೈಲಿ ಅಡುಗೆಯವರು (ಸಸ್ಯಹಾರ/ ಶಾಕಹಾರ) ಅಡುಗೆ ಸಹಾಯಕರು, SUPERVISOR,ತರಕಾರಿ ಹೆಚ್ಚುಯುವವರು, ಚಪಾತಿ ಮಾಡುವವರು, ಹೆಲ್ಪರ್, ಕ್ಲೀನರ್ ಬೇಕಾಗಿದ್ದಾರೆ. ಸಂಪರ್ಕಿಸಿ: 9845389560, 9513026683, 9512799918, 9591810811

Multiple Vacancy
REQUIRED EXPERIENCED Telecaller (BOYS & GIRLS) FieldExecutive, Team leader For MNC bank collection. 9886553838, 7019700755.

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted
MNC SAHAKARNAGAR & Koramangal new office urgently required Part/ Fulltime 30- 65yrs, Retired also apply. SSLC passed. Ph: 7795883094/ 8277059719.

ಸೌಂದರ್ಯ-ಆರೋಗ್ಯ

Health Clinic
ಮಂಡಿನೋವು, ಬೆನ್ನುನೋವು, ಕತ್ತುನೋವು, ಲಕ್ವ, ಕೀಲುನೋವು, ಔಷಧಿ ಶಸ್ತ್ರ ಚಿಕಿತ್ಸೆ ಇಲ್ಲದೇ, ಎಲೆಕ್ಟ್ರೋ ಮ್ಯಾಗ್ನೆಟಿಕ್ ಥೆರಪಿಯಾದ ಸಂಪೂರ್ಣ ಉಚಿತ ಚಿಕಿತ್ಸೆ ದೇವನಹಳ್ಳಿಯಲ್ಲಿ ಕೊಡಲಾಗುವುದು. Ph:9036316959.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಗಾಜಾದ ಕೊನೇ ಆಸ್ಪತ್ರೆ ಮೇಲೆ ದಾಳಿ

ದಾರ್ ಅಲ್-ಬಲಾ/ಜೆರುಸಲೇಂ (ಎಪಿ/ರಾಯಿಟರ್ಸ್): ಗಾಜಾದ ಖಾನ್ ಯೂನಿಸ್ ನಗರದಲ್ಲಿರುವ ನಾಸೆರ್ ಆಸ್ಪತ್ರೆಯ ಮೇಲೆ ಇಸ್ರೇಲ್ ಸೇನೆ ಸೋಮವಾರ ಡ್ರೋನ್ ದಾಳಿ ನಡೆಸಿದೆ. ಘಟನೆಯಲ್ಲಿ ಐವರು ಪತ್ರಕರ್ತರು ಸೇರಿ ಒಟ್ಟು 20 ಮಂದಿ ಮೃತಪಟ್ಟಿದ್ದಾರೆ. ಇಡೀ ಗಾಜಾ ಪಟ್ಟಿಯಲ್ಲಿ ಇದೊಂದೇ ಆಸ್ಪತ್ರೆ ಕಾರ್ಯನಿರ್ವಹಿಸುತ್ತಿತ್ತು.

‘ಆಸ್ಪತ್ರೆಯ ನಾಲ್ಕನೇ ಮಹಡಿ ಮೇಲೆ ಮೊದಲ ಡ್ರೋನ್ ಬಂದು ಅಪ್ಪಳಿಸಿತು. ಬಳಿಕ ರಕ್ಷಣಾ ಕಾರ್ಯಗಳು ಆರಂಭವಾದವು, ಪತ್ರಕರ್ತರೂ ಸೇರಿ ಜನರು ಇತ್ತ ಓಡಿ ಬಂದರು. ಅಷ್ಟರಲ್ಲಿ ಮತ್ತೊಂದು ಡ್ರೋನ್ ಅಪ್ಪಳಿಸಿತು’ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದರು.

‘ಸುಮಾರು ಎರಡು ವರ್ಷಗಳಿಂದ ನಡೆಯುತ್ತಿರುವ ಈ ಯುದ್ಧದಲ್ಲಿ ನಾಸೆರ್ ಆಸ್ಪತ್ರೆಯ ಮೇಲೆ ಇಸ್ರೇಲ್ ದಾಳಿ ನಡೆಸಿರಲಿಲ್ಲ. ದಕ್ಷಿಣ ಗಾಜಾದಲ್ಲಿಯೇ ಈ ಆಸ್ಪತ್ರೆಯು ಅತ್ಯಂತ ದೊಡ್ಡ ಆಸ್ಪತ್ರೆ. ಆದರೆ, ಈಗ ಆಸ್ಪತ್ರೆಯಲ್ಲಿ ಸಿಬ್ಬಂದಿ ಮತ್ತು ವಿವಿಧ ವೈದ್ಯಕೀಯ ಪರಿಕರ, ಔಷಧಗಳ ಕೊರತೆ ಇದೆ’ ಎನ್ನುತ್ತಾರೆ ಆರೋಗ್ಯ ಇಲಾಖೆ ಅಧಿಕಾರಿಗಳು.

ಆಸ್ಪತ್ರೆಗಳೇ ಗುರಿ: ಗಾಜಾ ಪಟ್ಟಿಯಲ್ಲಿನ ಹಲವು ಆಸ್ಪತ್ರೆಗಳ ಮೇಲೆ ಇಸ್ರೇಲ್ ದಾಳಿ ನಡೆಸುತ್ತಲೇ ಇದೆ. ಶೋಧ ಕಾರ್ಯವನ್ನೂ ನಡೆಸುತ್ತದೆ. ಆಸ್ಪತ್ರೆಯೊಳಗೆ ಕೂತು ಭಯೋತ್ಪಾದಕರು ಕೆಲಸ ಮಾಡುತ್ತಾರೆ ಎನ್ನುವುದು ಇಸ್ರೇಲ್ ವಾದ. ಆದರೆ, ಇದಕ್ಕೆ ಆ ದೇಶವು ಯಾವುದೇ ಸಾಕ್ಷ್ಯ ಒದಗಿಸಿಲ್ಲ.

ಶಿಫಾ ಹಾಗೂ ಅಲ್ ಔದಾ ಆಸ್ಪತ್ರೆಗೆ ಅಗತ್ಯವಾಗಿರುವ ವಿವಿಧ ಪರಿಕರ, ಔಷಧಗಳನ್ನು ಪೂರೈಸುವ ವ್ಯಕ್ತಿಗಳ ಮೇಲೆಯೂ ಇಸ್ರೇಲ್ ಸೇನೆ ದಾಳಿ ನಡೆಸಿದೆ. ಕೆಲವು ಬಾರಿ ಕ್ಷಿಪಣಿ ದಾಳಿ ನಡೆಸಿದರೆ, ಕೆಲವು ಬಾರಿ ಗುಂಡಿಕ್ಕಿ ಹತ್ಯೆ ಮಾಡಿದೆ.

ಖಾನ್‌ಯೂನಿಸ್ ನಗರದಲ್ಲಿರುವ ನಾಸೆರ್ ಆಸ್ಪತ್ರೆಗೆ ಇಸ್ರೇಲ್ ದಾಳಿಯಲ್ಲಿ ಹಾನಿಯಾಗಿದೆ — ಎಎಫ್‌ಪಿ ಚಿತ್ರ

ತನಿಖೆಗೆ ಆದೇಶಿಸಿ, ಘಟನೆಗೆ ವಿಷಾದಿಸಿದ ಇಸ್ರೇಲ್

ನಾಸೆರ್ ಆಸ್ಪತ್ರೆ ಪ್ರದೇಶದಲ್ಲಿ ದಾಳಿ ನಡೆಸಿದ್ದೇವೆ. ಈ ಬಗ್ಗೆ ತನಿಖೆ ನಡೆಸುವಂತೆ ಸೇನಾ ಪಡೆಗಳ ಮುಖ್ಯಸ್ಥರು ಆದೇಶಿಸಿದ್ದಾರೆ. ಹಮಾಸ್ ಸಂಘಟನೆಗೆ ಸೇರದೇ ಇರುವವರಿಗೆ ಗಾಯಗಳಾಗಿದ್ದರೆ ವಿಷಾದ ವ್ಯಕ್ತಪಡಿಸುತ್ತೇವೆ. ನಾವು ಪತ್ರಕರ್ತರನ್ನು ಗುರಿಯಾಗಿಸಿರಲಿಲ್ಲ. ನಮ್ಮ ಪಡೆಗಳ ಸುರಕ್ಷತೆಯನ್ನೂ ಗಮನದಲ್ಲಿ ಇಟ್ಟುಕೊಂಡು ಹಮಾಸ್ ಸಂಘಟನೆಗೆ ಸೇರದವರಿಗೆ ಹಾನಿಯಾಗಬಾರದು ಎನ್ನುವುದನ್ನೂ ಗಮನದಲ್ಲಿ ಇಟ್ಟುಕೊಂಡು ಕಾರ್ಯನಿರ್ವಹಿಸುತ್ತೇವೆ

ಇಸ್ರೇಲ್ ರಕ್ಷಣಾ ಪಡೆ

ಪತ್ರಕರ್ತೆ ಸೇರಿ ಐವರು ಪತ್ರಕರ್ತರ ಸಾವು


ಮರಿಯಂ

ಅಸೋಸಿಯೇಟೆಡ್ ಪ್ರೆಸ್‌ನ ಹವ್ಯಾಸಿ ಪತ್ರಕರ್ತೆ ಮಾರಿಯಂ ದಗ್ಗಾ, ಅಲ್-ಜಜೀರಾದ ಪತ್ರಕರ್ತ ಮೊಹಮ್ಮದ್ ಸಲಾಂ, ರಾಯಿಟರ್ಸ್‌ನ ಛಾಯಾಗ್ರಾಹಕ ಹುಸ್ಸಂ ಅಲ್ ಮಸ್ರಿ ಅವರು ಇಸ್ರೇಲ್ ದಾಳಿಯಲ್ಲಿ ಮೃತಪಟ್ಟಿದ್ದಾರೆ. ಗುತ್ತಿಗೆ ಆಧಾರದಲ್ಲಿ ರಾಯಿಟರ್ಸ್‌ನಲ್ಲಿ ಛಾಯಾಗ್ರಾಹಕರಾಗಿ ಕೆಲಸ ಮಾಡುತ್ತಿದ್ದ ಹಾತೆಮ್ ಖಾಲಿದ್ ಅವರಿಗೆ ಗಾಯಗಳಾಗಿವೆ.

‘ಎಎಫ್‌ಪಿ ಸೇರಿದಂತೆ ಕೆಲವು ಅಂತರರಾಷ್ಟ್ರೀಯ ಮಟ್ಟದ ಸುದ್ದಿ ಸಂಸ್ಥೆಗಳಿಗಾಗಿ ಕೆಲಸ ಮಾಡುತ್ತಿದ್ದ ಸ್ಥಳೀಯ ಪತ್ರಕರ್ತರಾದ ಮೊಅಝ್ ಅಬು ತಾಹಾ ಮತ್ತು ಅಹ್ಮದ್ ಅಬು ಅಜೀಜ್ ಅವರು ಮೃತಪಟ್ಟಿದ್ದಾರೆ’ ಎಂದು ಪ್ಯಾಲೆಸ್ಟೀನ್ ಪತ್ರಕರ್ತರ ಸಿಂಡಿಕೇಟ್ ಹೇಳಿದೆ.

ಯುದ್ಧ ಆರಂಭವಾದಾಗಿನಿಂದಲೂ 33 ವರ್ಷದ ಮರಿಯಂ ಹವ್ಯಾಸಿ ಪತ್ರಕರ್ತೆಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಮರಿಯಂ ಅವರಿಗೆ 12 ವರ್ಷದ ಮಗನಿದ್ದಾನೆ. ಯುದ್ಧ ಆರಂಭವಾಗುತ್ತಿದ್ದಂತೆಯೇ ಮಗನನ್ನು ಬೇರೆಡೆ ಇವರು ಸ್ಥಳಾಂತರಿಸಿದ್ದರು. ಇದೇ ಆಸ್ಪತ್ರೆ ಸುತ್ತಮುತ್ತವೇ ಇವರು ಕಾರ್ಯನಿರ್ವಹಿಸುತ್ತಿದ್ದರು. ಹಸಿವಿನಿಂದ ನಿತ್ರಾಣಗೊಂಡಿರುವ ಪುಟ್ಟ ಮಕ್ಕಳನ್ನು ಉಳಿಸಿಕೊಳ್ಳಲು ವೈದ್ಯರು ಹೇಗೆ ಹರಸಾಹಸ ಪಡುತ್ತಿದ್ದಾರೆ ಎನ್ನುವ ಕುರಿತು ಇತ್ತೀಚೆಗಷ್ಟೇ ಮರಿಯಂ ವರದಿ ಮಾಡಿದ್ದರು.

200 ಹಮಾಸ್ ಮತ್ತು ಇಸ್ರೇಲ್ ಮಧ್ಯೆ ಯುದ್ಧ ಆರಂಭವಾದಾಗಿನಿಂದ ಇಲ್ಲಿಯವರೆಗೆ ಮೃತಪಟ್ಟಿರುವ ಪತ್ರಕರ್ತರ ಸಂಖ್ಯೆ

18 ರಷ್ಯಾ-ಉಕ್ರೇನ್ ಯುದ್ಧದಲ್ಲಿ ಮೃತಪಟ್ಟಿರುವ ಪತ್ರಕರ್ತರ ಸಂಖ್ಯೆ

ಗೌರೀ: ಮಾತೃಪ್ರೇಮದ ಆದರ್ಶ

• ಎಸ್. ಸೂರ್ಯಪ್ರಕಾಶ ಪಂಡಿತ್

ಇಂದು ಗೌರೀ ಹಬ್ಬ

ಪಾರ್ವತೀ-ಪರಮೇಶ್ವರರನ್ನು ಜಗತ್ತಿನ ಆದಿ ದಂಪತಿಗಳು ಎಂದು ನಮ್ಮ ಪರಂಪರೆ ಒಕ್ಕಣಿಸಿದೆ. ಸೃಷ್ಟಿಯ ಪ್ರತಿಯೊಂದು ವಸ್ತು–ವ್ಯಕ್ತಿಗೂ ತಂದೆ–ತಾಯಿ ಎಂದರೆ ಶಿವ ಮತ್ತು ಪಾರ್ವತಿಯರೇ ಹೌದು ಎಂಬ ವಿಶಾಲ ತತ್ತ್ವವೇ ಈ ಕಲ್ಪನೆಗೆ ಮೂಲ. ಈ ಕಲ್ಪನೆಯ ಹಿಂದೆ ನಮ್ಮ ಪರಂಪರೆಯ ಔದಾರ್ಯ ಎದ್ದುಕಾಣುತ್ತದೆ. ನಾವು ಯಾರೂ ಎಂದಿಗೂ ಅನಾಥರಲ್ಲ – ಎಂಬ ಭರವಸೆಯನ್ನೂ ಧೈರ್ಯವನ್ನೂ ಈ ಕಲ್ಪನೆ ಕೊಡುತ್ತದೆ. ಆಧುನಿಕ ಮನಸ್ಸುಗಳನ್ನು ಕಾಡುತ್ತಿರುವ ದೊಡ್ಡ ಸಮಸ್ಯೆ ಎಂದರೆ ಅನಾಥಪ್ರಜ್ಞೆಯೇ ಹೌದು. ಒಂಟಿತನದ ಈ ಮಾನಸಿಕತೆಯೇ ನಮ್ಮನ್ನು ಹೆಚ್ಚು ಗಲಿಬಿಲಿಗೊಳಿಸುವುದು, ಉದ್ವೇಗಕ್ಕೆ ತಳ್ಳುವುದು, ಪಾಪಕೃತ್ಯಗಳಿಗೂ ಪ್ರೇರಿಸುವುದು. ಈ ಹಿನ್ನೆಲೆಯಲ್ಲಿ ನಾವು ಗೌರೀಗಣೇಶನ ಹಬ್ಬಗಳನ್ನು ವಿಶ್ಲೇಷಿಸಿದರೆ ಆಗ ಹಬ್ಬಗಳು ನಮಗೆ ಒದಗಿಸುವ ಜೀವನೋತ್ಸಾಹ ಮತ್ತು ಜೀವನಪ್ರೀತಿಗಳು ಅರಿವಿಗೆ ಬರುತ್ತವೆ.

ಪಾರ್ವತಿಗೆ ಹಲವು ಹೆಸರುಗಳು; ಅವುಗಳಲ್ಲಿ ‘ಗೌರೀ’ ಎಂಬುದೂ ಒಂದು; ಬೆಳ್ಳಗಿರುವವಳು ಎಂದು ಅರ್ಥ. ಮಾತ್ರವಲ್ಲ, ಅವಳು ಸ್ವರ್ಣಗೌರೀ; ಬಂಗಾರದಂತೆ ಶುಭ್ರವಾಗಿ ಹೊಳೆಯುತ್ತಿರುವವಳು. ಅವಳ ಈ ಶುಭ್ರತೆಯು ಅವಳು ತನ್ನ ಮಕ್ಕಳನ್ನು ಪೊರೆಯುವಾಗ ಕಂಗೊಳಿಸುವಂಥದ್ದು. ನಾವೆಲ್ಲರೂ ಅವಳ ಮಕ್ಕಳೇ ಹೌದು. ಅವಳಿಗೆ ನಮ್ಮ ಬಗ್ಗೆ ಮಾತೃಪ್ರೀತಿ ಇದೆ. ನಮಗೂ ಅವಳ ಬಗ್ಗೆ ಮಾತೃಭಕ್ತಿ ಇರಬೇಕಿನ್ನಿ! ಗೌರೀಹಬ್ಬದ ಮರುದಿನವೇ ಕಾಣಿಸಿಕೊಳ್ಳುವ ಗಣೇಶನ ಹಬ್ಬ ಈ ತಾಯಿ–ಮಕ್ಕಳ ಬಾಂಧವ್ಯವನ್ನು ಸೊಗಸಾಗಿ ಧ್ವನಿಸುತ್ತದೆ. ಗೌರಿಯ ಸಂಸಾರ ಎಂದರೆ ಅದು ಆದರ್ಶ ಕುಟುಂಬ; ಹಲವು ವೈರುದ್ಧ್ಯಗಳ ನಡುವೆಯೂ ಸಾಮರಸ್ಯದಲ್ಲಿರುವ ಕುಟುಂಬವದು. ಈ ಸಾಮರಸ್ಯವನ್ನು ಕಾಪಾಡುವಲ್ಲಿ ಗೌರಿಯ ಪಾತ್ರ ದೊಡ್ಡದು.

ಶಿವ–ಪಾವರ್ತಿಯರ ಆದರ್ಶ ದಾಂಪತ್ಯವನ್ನು ಕಾಳಿದಾಸನು ಮಾತು–ಅರ್ಥಗಳ ಸಾಮರಸ್ಯದಲ್ಲಿ ಕಂಡು ಆರಾಧಿಸಿದ್ದಾನೆ. ಮಾತು–ಅರ್ಥಗಳ ಸಾಮರಸ್ಯ ಬೇರೆ ಅಲ್ಲ, ನಮ್ಮ ಜೀವ–ಜೀವನಗಳ ಸಾಮರಸ್ಯ ಬೇರೆ ಅಲ್ಲ. ಪರಂಪರೆಯು ಪಾರ್ವತಿಯನ್ನು ಶಕ್ತಿಯ ಸ್ವರೂಪದಲ್ಲಿಯೇ ಪೂಜಿಸುವುದೂ ವಿಶೇಷವಾಗಿದೆ. ಶಕ್ತಿಯನ್ನು ಮಾತೃಸ್ವರೂಪದಲ್ಲಿಯೇ ಕಂಡರಿಸುವುದು ಕೂಡ ಗಮನಾರ್ಹ. ನಮ್ಮ ಜೀವನದ ನೆಮ್ಮದಿಗೂ ಕುಟುಂಬಕ್ಕೂ ತಾಯಿಪ್ರೀತಿಗೂ ಇರುವ ನಂಟನ್ನು ಗೌರೀ–ಗಣೇಶನ ಹಬ್ಬಗಳು ಸುಂದರವಾಗಿ ಪ್ರತಿಪಾದಿಸುತ್ತವೆ.

ಗೌರೀಹಬ್ಬದಂದು ಪಾರ್ವತಿಯು ಕೈಲಾಸದಿಂದ ಹೊರಟು ಭೂಲೋಕಕ್ಕೆ ಬರುತ್ತಾಳೆ; ಹೆಣ್ಣೊಬ್ಬಳು ತವರುಮನೆಗೆ ಬರುವಂತೆ. ಅಮ್ಮನನ್ನು ಬಿಟ್ಟಿರಲಾರದ ಗಣಪ ಕೂಡ ಅವಳ ಹಿಂದೆಯೇ ಓಡೋಡಿ ಬರುತ್ತಾನೆ! ತವರಿಗೆ ಬಂದವಳನ್ನು ಆದರಿಸುವುದು, ಆರಾಧಿಸುವುದು ನಮ್ಮ ಕರ್ತವ್ಯ. ತವರಿನ ಸೊಗಸು–ಶಕ್ತಿಗಳನ್ನು ಹೆಣ್ಣುಮಕ್ಕಳೇ ಸರಿಯಾಗಿ ಬಲ್ಲವರು. ಇದಕ್ಕೇ ಇರಬೇಕು, ಗೌರೀಹಬ್ಬದ ಸಂಭ್ರಮ ಹೆಣ್ಣುಮಕ್ಕಳಲ್ಲಿಯೇ ಹೆಚ್ಚು. ಮನೆಯನ್ನು ಸಿದ್ಧಗೊಳಿಸಿ, ಮನವನ್ನು ಶುದ್ಧಗೊಳಿಸಿ, ಗೌರಿಗೆ ಬಾಗಿನವನ್ನು ಸಮರ್ಪಿಸುವ ಮಾನಿನಿಯರ ಮಾತೃಪ್ರೇಮದ ಸೌರಭದಲ್ಲಿಯೇ ಹಬ್ಬದ ದಿಟವಾದ ಸಂಭ್ರಮ ನೆಲೆಗೊಳ್ಳುವುದು. ಇಡಿಯ ಸೃಷ್ಟಿಯನ್ನೇ ಶಕ್ತಿರೂಪದಲ್ಲಿ, ಮಾತೃಸ್ವರೂಪದಲ್ಲಿ ಕಂಡಿರುವ ನಮ್ಮ ಸಂಸ್ಕೃತಿಯ ಕಾಣ್ಕೆ ಬಹಳ ವಿಶೇಷವಾದುದು. ಜಗತ್ತಿನ ಚರಾಚರ ವಸ್ತುಗಳೊಂದಿಗೆ ಸಾಧಿಸಬಲ್ಲ ಸೌಹಾರ್ದದ ಅಂತಃಕರಣಕ್ಕೆ ಮೂಲವೇ ನಮ್ಮ ಪರಂಪರೆಯ ಈ ದರ್ಶನ. ಈ ಅರಿವೇ ನಮ್ಮ ಭಾವ–ಬುದ್ಧಿಗಳ ಶುಭ್ರತೆಗೆ ಕಾರಣ.

ಉತ್ತಮ ಫಲಿತಾಂಶದ ನಿರೀಕ್ಷೆ: ಎಐಎಫ್‌ಎಫ್ ಅಧ್ಯಕ್ಷ ಕಲ್ಯಾಣ್ ಚೌಬೆ

ಕೋಚ್ ಜಮೀಲ್‌ಗೆ ಪೂರ್ಣ ಸ್ವಾತಂತ್ರ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಖಾಲಿದ್ ಜಮೀಲ್ ಅವರು ಭಾರತ ಸೀನಿಯರ್ ಫುಟ್‌ಬಾಲ್ ತಂಡದ ಕೋಚ್ ಹುದ್ದೆಗೇರಿದ ಬಳಿಕ ಆಟಗಾರರಲ್ಲಿ ಹೊಸ ಚೈತನ್ಯ, ಬದಲಾವಣೆಯನ್ನು ಕಂಡಿದ್ದೇವೆ. ತಂಡದ ಆಯ್ಕೆಯಲ್ಲಿ ಜಮೀಲ್ ಅವರಿಗೆ ಪೂರ್ಣ ಸ್ವಾತಂತ್ರ್ಯ ನೀಡಿದ್ದು, ಮುಂದಿನ ಟೂರ್ನಿಗಳಲ್ಲಿ ಉತ್ತಮ ಫಲಿತಾಂಶದ ನಿರೀಕ್ಷೆಯಿದೆ' ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಅಧ್ಯಕ್ಷ ಕಲ್ಯಾಣ್ ಚೌಬೆ ವಿಶ್ವಾಸ ವ್ಯಕ್ತಪಡಿಸಿದರು.

'ಹಲವು ಕ್ಲಬ್‌ಗಳಲ್ಲಿ ಕೆಲಸ ಮಾಡಿರುವ ಜಮೀಲ್ ಅವರು ತಂಡದ ಬಗ್ಗೆ ದೂರದೃಷ್ಟಿ ಹೊಂದಿದ್ದಾರೆ. ತಂಡವನ್ನು ಫಿಫಾ ಟೂರ್ನಿಗೆ ಕೊಂಡೊಯ್ಯುವುದು ನಮ್ಮ ಮುಂದಿರುವ ದೊಡ್ಡ ಗುರಿಯಾಗಿದೆ. ಈ ನಿಟ್ಟಿನಲ್ಲಿ ಜಮೀಲ್ ಅವರಿಗೆ ಎಐಎಫ್‌ಎಫ್ ಸಂಪೂರ್ಣ ಬೆಂಬಲವನ್ನು ನೀಡುತ್ತದೆ. ಜಮೀಲ್ ಮೂಲಕ ಸೀನಿಯರ್ ತಂಡಕ್ಕೆ ಎರಡು ದಶಕಗಳ ಬಳಿಕ ದೇಶೀಯ ಕೋಚ್ ಲಭಿಸಿದ್ದಾರೆ' ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಭಾರತ ಪುರುಷರ ಫುಟ್‌ಬಾಲ್ ತಂಡದ ಕೋಚ್ ಖಾಲಿದ್ ಜಮೀಲ್ ಎಐಎಫ್‌ಎಫ್ ಅಧ್ಯಕ್ಷ ಕಲ್ಯಾಣ್ ಚೌಬೆ ಪ್ರಜಾವಾಣಿ ಚಿತ್ರ

'ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಅನಿಶ್ಚಿತತೆಯಿಂದ ಕ್ಲಬ್‌ಗಳು ಆಟಗಾರರು ಮತ್ತು ಸಿಬ್ಬಂದಿಯ ಜೀವನೋಪಾಯವು ಅಪಾಯದಲ್ಲಿದೆ. ಮಾಸ್ಟರ್ಸ್ ರೈಟ್ ಒಪ್ಪಂದ (ಎಂಆರ್‌ಎ) ಕುರಿತು ಚರ್ಚಿಸಲು ಸುಪ್ರೀಂ ಕೋರ್ಟ್‌ನಿಂದ ಅನುಮತಿ ಪಡೆದ ನಂತರ ಐಎಸ್‌ಎಲ್ ಪಾಲುದಾರರೊಂದಿಗೆ ಮಾತುಕತೆ ನಡೆಯುತ್ತಿದೆ. ಎಲ್ಲರ ಸಹಕಾರದಿಂದ ಬಿಕ್ಕಟ್ಟಿನ ಪರಿಹಾರ ಕಂಡುಕೊಳ್ಳುವ ವಿಶ್ವಾಸವಿದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನಮ್ಮ ನಿಯಂತ್ರಣದಲ್ಲಿ ಇಲ್ಲ: 'ಕಂಠೀರವ ಕ್ರೀಡಾಂಗಣವು ಎಲ್ಲ ಕ್ರೀಡೆಗಳಿಗೂ ಇರುವ ತಾಣ ವಾಗಿದೆ. ಅಂತರರಾಷ್ಟ್ರೀಯ ಫುಟ್‌ಬಾಲ್ ಪಂದ್ಯಕ್ಕೆ ಅದರದ್ದೇ ಆದ ಮಾನದಂಡಗಳು ಇವೆ. ಹೀಗಾಗಿ, ಅ.14ರಂದು ನಡೆಯಲಿರುವ ಭಾರತ–ಸಿಂಗಪುರ ನಡುವಿನ ಎಎಫ್‌ಸಿ ಏಷ್ಯನ್ ಕಪ್ ಕ್ವಾಲಿಫೈಯರ್ ಪಂದ್ಯವನ್ನು ಇಲ್ಲಿ ನಡೆಸಲು ಏಷ್ಯನ್ ಫುಟ್‌ಬಾಲ್ ಒಕ್ಕೂಟ ಅನುಮತಿ ನಿರಾಕರಿಸಿದೆ. ಇದು ನಮ್ಮ ನಿಯಂತ್ರಣದಲ್ಲಿ ಇಲ್ಲ. ಈ ಪಂದ್ಯದ ಆತಿಥ್ಯ ಕೈತಪ್ಪಿರುವುದು ನಿರಾಸೆಯಾಗಿದೆ' ಎಂದು ಎಐಎಫ್‌ಎಫ್ ಉಪಾಧ್ಯಕ್ಷ ಮತ್ತು ಕೆಎಸ್‌ಎಫ್‌ಎ ಅಧ್ಯಕ್ಷ ಎನ್.ಎ. ಹ್ಯಾರಿಸ್ ಹೇಳಿದರು.

ಸಿಎಎಫ್‌ಎ ನೇಷನ್ಸ್ ಕಪ್: 23 ಸದಸ್ಯರ ತಂಡ ಪ್ರಕಟಿಸಿದ ಖಾಲಿದ್

ತಜಕಿಸ್ತಾನದಲ್ಲಿ ಇದೇ 29ರಿಂದ ಆರಂಭವಾಗುವ ಸಿಎಎಫ್‌ಎ ನೇಷನ್ಸ್ ಕಪ್ ಫುಟ್‌ಬಾಲ್ ಟೂರ್ನಿಗಾಗಿ 23 ಸದಸ್ಯರ ಭಾರತ ಸೀನಿಯರ್ ಪುರುಷರ ತಂಡವನ್ನು ಕೋಚ್ ಖಾಲಿದ್ ಜಮೀಲ್ ಸೋಮವಾರ ಪ್ರಕಟಿಸಿದರು.

'ಇಲ್ಲಿನ ದ್ರಾವಿಡ್–ಪಡುಕೋಣೆ ಕ್ರೀಡಾ ಶ್ರೇಷ್ಠತಾ ಕೇಂದ್ರದಲ್ಲಿ ಆ.15ರಿಂದ ಸಂಭವನೀಯ 35 ಆಟಗಾರರಿಗೆ ತರಬೇತಿ ಶಿಬಿರ ನಡೆದಿದ್ದು, ಅದರಲ್ಲಿ ತಂಡವನ್ನು ಅಂತಿಮ-ಗೊಳಿಸಿದ್ದೇವೆ. ತರಬೇತುದಾರನಾಗಿ ನನ್ನ ಪಾಲಿಗೆ ಈ ಟೂರ್ನಿಯು ಮೊದಲ ಸವಾಲಾಗಿದೆ.

ಮೋಹನ್ ಬಾಗನ್ ತಂಡವು ತನ್ನ ಆಟಗಾರರನ್ನು ರಾಷ್ಟ್ರೀಯ ತರಬೇತಿ ಶಿಬಿರಕ್ಕೆ ಬಿಡುಗಡೆ ಮಾಡದಿರುವ ಕುರಿತ ಪ್ರಶ್ನೆಗೆ ಉತ್ತರಿಸಿದ ಜಮೀಲ್, 'ದೇಶದಲ್ಲಿ ಪ್ರತಿಭಾವಂತ ಆಟಗಾರರಿಗೆ ಕೊರತೆಯಿಲ್ಲ. ಲಭ್ಯ ಆಟಗಾರರನ್ನು ಬಳಸಿಕೊಂಡು ನೇಷನ್ಸ್ ಕಪ್ ಟೂರ್ನಿಗೆ ಸಮತೋಲಿತ ಮತ್ತು ಬಲಿಷ್ಠ ತಂಡ ಕಟ್ಟಲಾಗಿದೆ. ಅನುಭವಿ ಸುನಿಲ್ ಚೆಟ್ರಿ ಅವರು ಫಿಟ್ ಆಗಿದ್ದರೆ ಅವರಿಗೆ ಯಾವಾಗಲೂ ಸ್ವಾಗತವಿದೆ' ಎಂದು ಜಮೀಲ್ ಹೇಳಿದರು.

ಭಾರತ ತಂಡ ಹೀಗಿದೆ: ಗೋಲ್‌ಕೀಪರ್: ಗುರುಪ್ರೀತ್ ಸಿಂಗ್ ಸಂಧು, ಅಮರಿಂದರ್ ಸಿಂಗ್, ಹೃತಿಕ್ ತಿವಾರಿ.

ಡಿಫೆಂಡರ್ಸ್: ರಾಹುಲ್ ಭೆಕೆ, ನವೋರೆಮ್ ರೋಷನ್ ಸಿಂಗ್, ಅನ್ವರ್ ಅಲಿ, ಸಂದೇಶ್ ಜಿಂಗನ್, ಚಿಂಗ್ಲೆನ್ಸನಾ ಸಿಂಗ್, ಅಲೆಕ್ಸಾಂಡ್ರೆಯಾ ರಾಲ್ಟೆ, ಮೊಹಮ್ಮದ್ ಉವೈಸ್. ಮಿಡ್‌ಫೀಲ್ಡರ್ಸ್: ನಿಖಿಲ್ ಪ್ರಭು, ಸುರೇಶ್ ಸಿಂಗ್ ವಾಂಗ್‌ಜಾಮ್, ದ್ಯಾನಿಶ್ ಫಾರೂಕ್ ಭಟ್, ಜೀಕ್ಸನ್ ಸಿಂಗ್, ಬೋರಿಸ್ ಸಿಂಗ್, ಆಶಿಕ್ ಕುರುನಿಯನ್, ಉದಾಂತ ಸಿಂಗ್, ನವೋರೆಮ್ ಮಹೇಶ್ ಸಿಂಗ್. ಫಾರ್ವರ್ಡ್ಸ್: ಇರ್ಫಾನ್ ಯಾದವಾಡ, ಮನ್ವೀರ್ ಸಿಂಗ್, ಜಿತಿನ್ ಎಂ.ಎಸ್, ಲಾಲಿಯನ್‌ಜುವಾಲಾ ಚಾಂಗ್ಟೆ, ವಿಕ್ರಮ್ ಪ್ರತಾಪ್ ಸಿಂಗ್.

ವೇಟ್‌ಲಿಫ್ಟಿಂಗ್: ಮರಳಿ ಅರಳಿದ ಮೀರಾ

ಕಾಮನ್‌ವೆಲ್ತ್: ದಾಖಲೆಯೊಂದಿಗೆ ಚಿನ್ನ ಗೆದ್ದ 'ಚಾನು' • ರಿಷಿಕಾಂತ್‌ಗೆ ಸ್ವರ್ಣ

ಅಹಮದಾಬಾದ್ (ಪಿಟಿಐ): ಒಂದು ವರ್ಷದ ನಂತರ ಸ್ಪರ್ಧಾಕಣಕ್ಕೆ ಮರಳಿದ ಮೀರಾಬಾಯಿ ಚಾನು ಅವರು ಸೋಮವಾರ ಇಲ್ಲಿ ನಡೆದ ಕಾಮನ್‌ವೆಲ್ತ್ ವೇಟ್ ಲಿಫ್ಟಿಂಗ್‌ನಲ್ಲಿ ಚಿನ್ನದ ಪದಕ ಜಯಿಸಿದರು.

ಮಹಿಳೆಯರ 48 ಕೆ.ಜಿ. ವಿಭಾಗದಲ್ಲಿ ಕಣಕ್ಕಿಳಿದ 31 ವರ್ಷದ ಮೀರಾ, ಒಟ್ಟು 193 ಕೆಜಿ (84ಕೆಜಿ+109ಕೆಜಿ) ಭಾರ ಎತ್ತಿದರು. ಸ್ನಾಚ್, ಕ್ಲೀನ್ ಮತ್ತು ಜರ್ಕ್‌ನಲ್ಲಿ ಅವರು ನೂತನ ದಾಖಲೆಯನ್ನು ಬರೆದರು. ಹಳೆಯ ದಾಖಲೆಗಿಂತ 14 ಕೆ.ಜಿ ಹೆಚ್ಚು ಭಾರ ಎತ್ತಿದರು. ಮಲೇಷ್ಯಾದ ಐರೀನ್ ಹೆನ್ರಿ 161 ಕೆ.ಜಿ(73ಕೆ.ಜಿ+88ಕೆ.ಜಿ) ಮತ್ತು ವೇಲ್ಸ್‌ನ ನಿಕೋಲ್ ರಾಬರ್ಟ್ಸ್ 150 ಕೆ.ಜಿ(70ಕೆ.ಜಿ+80ಕೆ.ಜಿ) ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಗೆದ್ದರು.

2024ರ ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದರು. ಅದರ ನಂತರ ಅವರು ಗಾಯದಿಂದಾಗಿ ಯಾವುದೇ ಸ್ಪರ್ಧೆಯಲ್ಲಿ ಭಾಗವಹಿಸಿರಲಿಲ್ಲ. ಅವರು ಈ ಮೊದಲು 49 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸುತ್ತಿದ್ದರು. ಆದರೆ ಒಲಿಂಪಿಕ್‌ನಿಂದ ಈ ವಿಭಾಗವನ್ನು ರದ್ದುಪಡಿಸಲಾಗಿದೆ. ಆದ್ದರಿಂದ ಅವರು 48 ಕೆ.ಜಿ. ವಿಭಾಗಕ್ಕೆ ಮರಳಿದ್ದಾರೆ. ಅವರು ಟೋಕಿಯೊ ಒಲಿಂಪಿಕ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದರು.

ಜೂನಿಯರ್ ಬಾಲಕರ ವಿಭಾಗದಲ್ಲಿ ಸೌಮ್ಯಾ ದಳವಿ ಚಿನ್ನದ ಪದಕ ಜಯಿಸಿದರು.

ರಿಷಿಕಾಂತ್‌ಗೆ ಚಿನ್ನ: ರಾಷ್ಟ್ರೀಯ ಕ್ರೀಡಾಕೂಟದ ಚಾಂಪಿಯನ್ ರಿಷಿಕಾಂತ್ ಸಿಂಗ್ ಅವರು ಪುರುಷರ 60 ಕೆಜಿ. ವಿಭಾಗದಲ್ಲಿ ಚಿನ್ನದ ಪದಕ ಜಯಿಸಿದರು. ಅವರು ಒಟ್ಟು 271 ಕೆಜಿ (120 ಕೆ.ಜಿ+151ಕೆ.ಜಿ) ಭಾರ ಎತ್ತಿದರು.

ಅಹಮದಾಬಾದಿನಲ್ಲಿ ಸೋಮವಾರ ನಡೆದ ಕಾಮನ್‌ವೆಲ್ತ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದ ಮೀರಾಬಾಯಿ ಚಾನು ಪಿಟಿಐ ಚಿತ್ರ

ಬೆಂಗಳೂರು ರನ್ನರ್ ಅಪ್; ಪ್ರಸನ್ನ, ಸಿಂಚನಾ ಉತ್ತಮ ಕ್ರೀಡಾಪಟುಗಳು

ಅಥ್ಲೆಟಿಕ್ಸ್: ದಕ್ಷಿಣ ಕನ್ನಡ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಉಡುಪಿ: ಮೂರು ದಿನಗಳಲ್ಲಿ ಒಟ್ಟು 23 ಕೂಟ ದಾಖಲೆಗಳು ನಿರ್ಮಾಣವಾದ ರಾಜ್ಯ ಜೂನಿಯರ್ ಮತ್ತು 23 ವರ್ಷದೊಳಗಿನವರ ಅಥ್ಲೆಟಿಕ್ಸ್‌ನಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು. ಬೆಂಗಳೂರು ರನ್ನರ್ ಅಪ್ ಆಯಿತು.

ರಾಜ್ಯ ಅಥ್ಲೆಟಿಕ್ ಸಂಸ್ಥೆಯ ಸಹಯೋಗದಲ್ಲಿ ಜಿಲ್ಲಾ ಅಥ್ಲೆಟಿಕ್ ಸಂಸ್ಥೆ ಇಲ್ಲಿನ ಅಜ್ಜರಕಾಡು ಜಿಲ್ಲಾ ಕ್ರೀಡಾಂಗ-ಣದಲ್ಲಿ ಆಯೋಜಿಸಿದ್ದ ಕೂಟದ ಜೂನಿಯರ್ ಹಂತದ ಎಲ್ಲ ನಾಲ್ಕು ವಯೋಮಾನ ವಿಭಾಗಗಳಲ್ಲೂ ದಕ್ಷಿಣ ಕನ್ನಡ ಸಮಗ್ರ ಪ್ರಶಸ್ತಿ ಗಳಿಸಿತು. 23 ವರ್ಷದೊಳಗಿನವರ ವಿಭಾಗದಲ್ಲಿ ಬೆಂಗಳೂರು ನಗರ ಪಾರಮ್ಯ ಮೆರೆದರೆ ದಕ್ಷಿಣ ಕನ್ನಡ ಎರಡನೇ ಸ್ಥಾನ ಗಳಿಸಿತು.

ಸೋಮವಾರ ಮುಕ್ತಾಯಗೊಂಡ ಕೂಟದಲ್ಲಿ 23 ವರ್ಷದೊಳಗಿನವರ ವಿಭಾಗದಲ್ಲಿ ಬೆಂಗಳೂರು 127 ಪಾಯಿಂಟ್‌ಗಳನ್ನು ಮತ್ತು ದಕ್ಷಿಣ ಕನ್ನಡ 100 ಪಾಯಿಂಟ್ ಕಲೆಹಾಕಿತು. 20 ವರ್ಷದೊಳಗಿನವರ ವಿಭಾಗದಲ್ಲಿ ದಕ್ಷಿಣ ಕನ್ನಡ 148, ಬೆಂಗಳೂರು 120, 18 ವರ್ಷದೊಳಗಿನವರ ವಿಭಾಗದಲ್ಲಿ ದಕ್ಷಿಣ ಕನ್ನಡ 87, ಉಡುಪಿ 80, 16 ವರ್ಷದೊಳಗಿನವರ ವಿಭಾಗದಲ್ಲಿ ದಕ್ಷಿಣ ಕನ್ನಡ 77, ಬೆಂಗಳೂರು 66 ಮತ್ತು 14 ವರ್ಷದೊಳಗಿನವರ ವಿಭಾಗದಲ್ಲಿ ದಕ್ಷಿಣ ಕನ್ನಡ 43 ಪಾಯಿಂಟ್ ಗಳಿಸಿತು.

ಹರ್ಷಿತಾ

ಕೃಷ್ಣ ಪ್ರಕಾಶ

ಪುರುಷರ 23 ವರ್ಷದೊಳಗಿನವರ ವಿಭಾಗದಲ್ಲಿ ಧಾರವಾಡದ ಪ್ರಸನ್ನಕುಮಾರ್ (1021ಪಾಯಿಂಟ್ಸ್), 20 ವರ್ಷದೊಳಗಿನವರ ವಿಭಾಗದಲ್ಲಿ ತುಮಕೂರಿನ ನಿತಿನ್ ಗೌಡ (981), 18 ವರ್ಷದೊಳಗಿನವರ ವಿಭಾಗದಲ್ಲಿ ಮೈಸೂರಿನ ಚಿರಂತ್ (1012), 16 ವರ್ಷದೊಗಿನವರ ವಿಭಾಗದಲ್ಲಿ ಶಿವಮೊಗ್ಗದ ಶರತ್ ಕೆ.ಜೆ (802) ಮತ್ತು 14 ವರ್ಷದೊಳಗಿನವರ ವಿಭಾಗದಲ್ಲಿ ಮೈಸೂರಿನ ಆದರ್ಶ್ ಉತ್ತಮ ಕ್ರೀಡಾಪಟು ಎನಿಸಿಕೊಂಡರು. ಮಹಿಳೆಯರ 23 ವರ್ಷದೊಳಗಿನವರ ವಿಭಾಗದಲ್ಲಿ ದಕ್ಷಿಣ ಕನ್ನಡದ ಸಿಂಚನಾ (1003), 20 ವರ್ಷದೊಳಗಿವನರ ವಿಭಾಗದಲ್ಲಿ ಉಡುಪಿಯ ಸ್ತುತಿ ಪಿ.ಶೆಟ್ಟಿ (980), 18 ವರ್ಷದೊಳಗಿ-ನವರ ವಿಭಾಗದಲ್ಲಿ ಬೆಂಗಳೂರಿನ ಸುಚಿತ್ರಾ (962), 16 ವರ್ಷದೊಳಗಿನವರ ವಿಭಾಗದಲ್ಲಿ ಬೆಂಗಳೂರಿನ ಶಮಿಕಾ (961) ಮತ್ತು 14 ವರ್ಷದೊಳಗಿನವರ ವಿಭಾಗದಲ್ಲಿ ದಕ್ಷಿಣ ಕನ್ನಡದ ಅದ್ವಿಕಾ ಉತ್ತಮ ಕ್ರೀಡಾಪಟು ಪ್ರಶಸ್ತಿ ಪಡೆದುಕೊಂಡರು.

ಕೊನೆಯ ದಿನ 5 ದಾಖಲೆಗಳು: ಕೊನೆಯ ದಿನ ಒಟ್ಟು 5 ಕೂಟ ದಾಖಲೆಗಳು ನಿರ್ಮಾಣವಾದವು. 23 ವರ್ಷದೊಳಗಿನವರ 200 ಮೀಟರ್ಸ್ ಓಟದಲ್ಲಿ ಪ್ರಸನ್ನ ಕುಮಾರ್ (21.32ಸೆಕೆಂಡು) 3 ವರ್ಷಗಳ ಹಿಂದಿನ ತಮ್ಮದೇ ದಾಖಲೆ (21.45ಸೆ) ಮುರಿದರು. ಮಹಿಳೆಯರ 200 ಮೀ ಓಟದಲ್ಲಿ ಬೆಂಗಳೂರಿನ ಶ್ರೀಯಾ ರಾಜೇಶ್ (24.75 ಸೆ) ಜ್ಯೋತಿಕಾ (24.90ಸೆ) ಅವರ ದಾಖಲೆಯನ್ನು ಮೀರಿದರು.

ಇದೇ ವಯೋಮಾನದವರ 5 ಸಾವಿರ ಮೀ ಓಟದಲ್ಲಿ ಓಂಕಾರ್ (14ನಿಮಿಷ 23.64ಸೆ) ಕಳೆದ ವರ್ಷ ಎ.ಆರ್ ರೋಹಿತ್ (15:03.45) ನಿರ್ಮಿಸಿದ್ದ ದಾಖಲೆ ಮುರಿದರು. 3 ಸಾವಿರ ಮೀಟರ್ಸ್ ಸ್ಟೀಪಲ್ ಚೇಸ್‌ನಲ್ಲಿ ಗಣಪತಿ (9ನಿ 25.93ಸೆ) ಸಂಜೀವ್ ಕುಮಾರ್ (9:52.41) ಹೆಸರಿನಲ್ಲಿದ್ದ ದಾಖಲೆ ಹಿಂದಿಕ್ಕಿದರು. 18 ವರ್ಷದೊಳಗಿನ ಬಾಲಕರ 5 ಸಾವಿರ ಮೀ ರೇಸ್ ವಾಕ್‌ನಲ್ಲಿ ಸಿದ್ರಾಯಪ್ಪ ಪುಂಜಿ (26ನಿ 03.98ಸೆ) ಕಳೆದ ವರ್ಷ ವಿನಾಯಕ ಜಿ.ಕೆ (27:04.25) ಮಾಡಿದ್ದ ದಾಖಲೆಯನ್ನೂ ಇದೇ ವಯೋಮಾನದ ಬಾಲಕರ 200 ಮೀ ಓಟದಲ್ಲಿ ಚಿರಂತ್ (21.38ಸೆ) 2023ರಲ್ಲಿ ಮುತ್ತಣ್ಣ (21.51ಸೆ) ನಿರ್ಮಿಸಿದ್ದ ದಾಖಲೆಯನ್ನೂ ಹಿಂದಿಕ್ಕಿದರು.

600 ಗ್ರಾಮ್ ತೂಕ ಹೆಚ್ಚಳ: ನೇಹಾ ಸಂಗ್ವಾನ್ ಅನರ್ಹ

ನವದೆಹಲಿ (ಪಿಟಿಐ): ಭಾರತದ ನೇಹಾ ಸಂಗ್ವಾನ್ ಅವರನ್ನು ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸುವ ರಾಷ್ಟ್ರೀಯ ಸೀನಿಯರ್ ತಂಡದಿಂದ ಅಮಾನತುಗೊಳಿಸಲಾಗಿದೆ.

ನೇಹಾ ಸಂಗ್ವಾನ್

ಅವರು ದೇಹತೂಕ ನಿಯಮವನ್ನು ಉಲ್ಲಂಘಿಸಿದ ಕಾರಣಕ್ಕೆ ಈಚೆಗೆ ನಡೆದ 20 ವರ್ಷದೊಳಗಿನವರ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಿಂದ ಅನರ್ಹಗೊಳಿಸಲಾಗಿತ್ತು. ಅದೇ ಕಾರಣಕ್ಕಾಗಿ ಈಗ ವಿಶ್ವ ಕುಸ್ತಿಗೆ ತೆರಳುವ ಅವಕಾಶವನ್ನೂ ಕಳೆದುಕೊಂಡಿದ್ದಾರೆ.

ಹರಿಯಾಣದ ಚರ್ಖಿ ದಾದ್ರಿಯ ನೇಹಾ ಅವರು ಹೋದವಾರ 20 ವರ್ಷದೊಳ-ಗಿನವರ ಚಾಂಪಿಯನ್‌ಷಿಪ್‌ನಲ್ಲಿ 59 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಬೇಕಿದ್ದರು. ಈ ವಿಭಾಗದಲ್ಲಿ ಪದಕ ಗೆಲ್ಲುವ ನೆಚ್ಚಿನ ಸ್ಪರ್ಧಿಯೂ ಅವರಾಗಿದ್ದರು. ಆದರೆ ಅವರ ದೇಹ ತೂಕವು ನಿಯಮಕ್ಕಿಂತ 600 ಗ್ರಾಮ್ ಹೆಚ್ಚಾಗಿದ್ದ ಕಾರಣ ಅನರ್ಹಗೊಳಿಸಲಾಯಿತು.

ಆ ಸ್ಪರ್ಧೆಯಲ್ಲಿ ಭಾರತದ ಮಹಿಳಾ ತಂಡವು (140 ಅಂಕ) ಏಳು ಪದಕಗಳನ್ನು ಗೆದ್ದು ರನ್ನರ್ ಅಪ್ ಆಗಿತ್ತು. ಜಪಾನ್ (165 ಅಂಕ) ಮೊದಲ ಸ್ಥಾನ ಗಳಿಸಿತ್ತು. ನೇಹಾ ಅವರು ಅನರ್ಹ-ಗೊಳ್ಳದಿದ್ದರೆ ಹಾಗೂ ಒಂದೊಮ್ಮೆ ಚಿನ್ನದ ಪದಕ ಜಯಿಸಿದ್ದರೆ ಭಾರತವು ಚಾಂಪಿಯನ್ ಆಗುವ ಸಾಧ್ಯತೆ ಇತ್ತು.

ವಿಶ್ವ ಕುಸ್ತಿ ಚಾಂಪಿಯನ್‌ಷಿಪ್ ಸೆಪ್ಟೆಂಬರ್ 13 ರಿಂದ 21ರವರೆಗೆ ಕ್ರೊವೇಷ್ಯಾದಲ್ಲಿ ನಡೆಯಲಿದೆ.

'ತೂಕ ನಿರ್ವಹಣೆಯು ಆಯಾ ಕುಸ್ತಿಪಟುಗಳದ್ದೇ ಹೊಣೆ. ತಮ್ಮ ದೇಹತೂಕದ ಕುರಿತು ಕುಸ್ತಿಪಟುಗಳೇ ಎಚ್ಚರವಹಿಸಬೇಕು. ಬಲ್ಗೇರಿಯಾದಲ್ಲಿ ಒಂದು ವಿಭಾಗದಲ್ಲಿ ಪದಕ ಕೈತಪ್ಪಿತು. ಸರ್ಕಾರದ ಅನುದಾನವನ್ನು ಕುಸ್ತಿಪಟುಗಳ ತರಬೇತಿ ಮತ್ತು ನಿರ್ವಹಣೆಗೆ ವಿನಿಯೋಗಿಸಲಾಗುತ್ತದೆ. ಆದ್ದರಿಂದ ನಮಗೂ ಹೊಣೆಗಾರಿಕೆ ಇರುತ್ತದೆ. ತಲಾ ಒಬ್ಬ ಕುಸ್ತಿಪಟುವಿಗೆ ₹2 ರಿಂದ 3 ಲಕ್ಷದಷ್ಟು ವೆಚ್ಚಮಾಡಲಾಗುತ್ತದೆ. ಇಷ್ಟಾದರೂ ತೂಕ ನಿರ್ವಹಣೆ ಮಾಡಲು ಸಾಧ್ಯವಾಗದಿದ್ದರೆ ಹೇಗೆ? ಆದ್ದರಿಂದ ಇನ್ನೊಬ್ಬ ಉತ್ತಮ ಕುಸ್ತಿಪಟುವಿಗೆ ಅವಕಾಶ ನೀಡುತ್ತೇವೆ' ಎಂದು ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕರ್ನಾಟಕ ಲೋಕಸೇವಾ ಆಯೋಗ
ಉದ್ಯೋಗ ಸೌಧ, ಬೆಂಗಳೂರು–560 001.
ಸಂಖ್ಯೆ: KPSCKA/RCT2/RCTF/5/2025-RCT-2-Part(1)/2125 ದಿನಾಂಕ: 25–08–2025.
ಪತ್ರಿಕಾ ಪ್ರಕಟಣೆ
ಆಯೋಗದ ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ 505 ಆರ್‌ಟಿಬಿ(2) 2023–24/3496, ದಿ:15.03.2024ರಂದು ಅಧಿಸೂಚಿಸಲಾದ ಪದವಿ ಮಟ್ಟದ ವಿವಿಧ ಇಲಾಖೆಗಳಲ್ಲಿನ ಗ್ರೂಪ್ ಸಿ–16 ಹೈದ್ರಾಬಾದ್ ಕರ್ನಾಟಕ ವೃಂದದ ಹುದ್ದೆಗಳ ನೇಮಕಾತಿ ಸಂಬಂಧ ದಿ: 02–09–2025ರ ಕನ್ನಡ ಭಾಷಾ ಪರೀಕ್ಷೆ ಮತ್ತು ದಿ: 03–09–2025ರ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರವೇಶ ಪತ್ರವನ್ನು ಅಭ್ಯರ್ಥಿಗಳು ದಿ: 25–08–2025 ರಿಂದ ಆಯೋಗದ ವೆಬ್‌ಸೈಟ್ http://kpsconline.karnataka.gov.in ರ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆಯೆಂದು ಈ ಮೂಲಕ ತಿಳಿಸಿದೆ.
ಸಹಿ/–
ಕಾರ್ಯದರ್ಶಿ
ಕರ್ನಾಟಕ ಲೋಕಸೇವಾ ಆಯೋಗ.
ವಾ.ಸಾ.ಸಂ.ಇ/ವಾಪ್ರ/2467/ಆಕಾರ್/2025–26

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
ಗ್ರಾಮೀಣಾಭಿವೃದ್ಧಿ ಭವನ, 4 ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು – 560 009
ಸಂಖ್ಯೆ: ಕೆಆರ್‌ಐಡಿಎಲ್/ಎಸಿಟಿ/ಟಿಎನ್‌ಡಿ/ಎಫ್‌ಡಿ/2025–26 ದಿನಾಂಕ: 25.08.2025
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕೆಆರ್‌ಐಡಿಎಲ್, ಇವರು **ಒಂದು ವರ್ಷದ ಅವಧಿಗೆ ಸುಮಾರು ರೂ.1,250.00 ಕೋಟಿ ಹಣವನ್ನು ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಲು** ಸಾರ್ವಜನಿಕ ವಲಯದ ಬ್ಯಾಂಕುಗಳು/ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು/ಖಾಸಗಿ ವಲಯದ ಬ್ಯಾಂಕ್‌ಗಳಿಂದ ಇ-ಬಿಡ್ಡಿಂಗ್ ಮೂಲಕ ಟೆಂಡರ್ ಅನ್ನು ಆಹ್ವಾನಿಸಿದ್ದಾರೆ. ಇತರೆ ನಿಯಮ ಹಾಗೂ ನಿಬಂಧನೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್:www.kppp.karnataka.gov.in ನಲ್ಲಿ ಪರಿವೀಕ್ಷಿಸಬಹುದು. ಸಹಾಯವಾಣಿ ಇ-ಪ್ರೋಕ್ ಸಂಖ್ಯೆ: +91–8046010000, +91–8068948777
- ಇ-ಹರಾಜು ಪ್ರಕಟಣೆ ಪ್ರಕಟಿಸುವ ದಿನಾಂಕ: 25.08.2025
- ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 06.09.2025, ಮಧ್ಯಾಹ್ನ 3.00 ಗಂಟೆವರೆಗೆ.
- ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09.09.2025, ಮಧ್ಯಾಹ್ನ 3.00 ಗಂಟೆಗೆ.
- ಇ-ಹರಾಜು ತೆರೆಯುವ ದಿನಾಂಕ: 12.09.2025, ಬೆಳಿಗ್ಗೆ 10.30 ಗಂಟೆಯಿಂದ ಮಧ್ಯಾಹ್ನ 3.00 ಗಂಟೆವರೆಗೆ.

ಹೆಚ್ಚಿನ ವಿವರಗಳಿಗೆ ದಯವಿಟ್ಟು ಸಂಪರ್ಕಿಸಿ:
ಮುಖ್ಯ ಹಣಕಾಸು ಅಧಿಕಾರಿ
ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು-09.
ದೂ.ಸಂಖ್ಯೆ: 080-28015609, ಇ-ಮೇಲ್: cfo-1@kridl.net
ಸಹಿ/– ಮುಖ್ಯ ಹಣಕಾಸು ಅಧಿಕಾರಿ, ಕೆಆರ್‌ಐಡಿಎಲ್, ಬೆಂಗಳೂರು.

ಕರ್ನಾಟಕ ಸರ್ಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ
ಕಾರ್ಯನಿರ್ವಾಹಕ ಇಂಜಿನೀಯರರ ಕಚೇರಿ, ಬಂದರು ವಿಭಾಗ, ಬೈತಖೋಲ್, ಕಾರವಾರ, ಉತ್ತರ ಕನ್ನಡ ಜಿಲ್ಲೆ–581302
ದೂ: 08382-229672 ಇ–ಮೇಲ್: eepdkwr4@gmail.com/eepdk@rediffmail.com
ನಂ:ಕಾನಿಇಂ/ಬಂವಿಕಾ/ಟೆಂಡರ್/2025–26/523 ದಿನಾಂಕ: 25–08–2025
ಮರು ಟೆಂಡರು ಪ್ರಕಟಣೆ (3ನೇ ಕರೆ)
(ಕೆ.ಪಿ.ಪಿ.ಪಿ ಪದ್ದತಿಯಲ್ಲಿ ಮಾತ್ರ) (ದ್ವಿ ಲಕೋಟೆ ಪದ್ಧತಿ)
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳನ್ನು ಕೈಗೊಳ್ಳಲು ಕೆ.ಪಿ.ಪಿ.ಪಿ ಪದ್ದತಿಯಲ್ಲಿ ಟೆಂಡರ್ ಕರೆಯಲಾಗಿದ್ದು www.kppp.karnataka.gov.in ನಲ್ಲಿ ಹೆಚ್ಚಿನ ಮಾಹಿತಿ ಪಡೆದು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವಧಿ ವಿಸ್ತರಣೆಯ ಮಾಹಿತಿಯನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು. ಈ ಕುರಿತು ಪ್ರತ್ಯೇಕವಾಗಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದಿಲ್ಲ.
"ಜಿಎಸ್‌ಟಿಯನ್ನು ಅನುಮೋದಿತ ಟೆಂಡರ್ ಮೊತ್ತಕ್ಕೆ ಅನುಗುಣವಾಗಿ ಪ್ರತ್ಯೇಕವಾಗಿ ಪಾವತಿಸಲಾಗುವುದು"
ಕಾಮಗಾರಿಯ ಹೆಸರು ಮತ್ತು ಇಂಡೆಂಟ ನಂ: (1) ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲೂಕಿನ ಆಮದಳ್ಳಿ ಮೀನುಗಾರಿಕಾ ಬಂದರಿನ ಅಭಿವೃದ್ಧಿಗಾಗಿ ಬೇಸಿನ ಮತ್ತು ಎಂಟ್ರೆನ್ಸ್ ಚಾನೆಲ್‌ನಲ್ಲಿ ಹೂಳೆತ್ತುವುದು. Indent no: IDD/2024-25/OW/WORK_INDENT122/CALL-3, ಟೆಂಡರಿಗಿಟ್ಟ ಮೊತ್ತ: ರೂ. 45272076.20 (2) ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಹಾರವಾಡಾ ಮತ್ತು ಬೇಲೆಕೇರಿ ಮೀನುಗಾರಿಕಾ ಬಂದರುಗಳ ಅಭಿವೃದ್ಧಿಗಾಗಿ ಬೇಸಿನ ಮತ್ತು ಎಂಟ್ರೆನ್ಸ್ ಚಾನೆಲ್‌ನಲ್ಲಿ ಹೂಳೆತ್ತುವುದು. Indent no: IDD/2024-25/OW/WORK_INDENT123/CALL-3, ಟೆಂಡರಿಗಿಟ್ಟ ಮೊತ್ತ: ರೂ. 33420781.36 (3) ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ತದಡಿ ಮೀನುಗಾರಿಕೆ ಬಂದರಿನಲ್ಲಿ ಮೀನುಗಾರಿಕೆ ದೋಣಿಗಳು ಸುಗಮವಾಗಿ ಮತ್ತು ವೇಗವಾಗಿ ಚಲಿಸಲು ಅನುಕೂಲವಾಗಿಸಲು ನ್ಯಾವಿಗೇಶನ್ ಚಾನೆಲ್‌ನಲ್ಲಿ ಹೂಳೆತ್ತುವುದು. Indent no: IDD/2024-25/OW/WORK_INDENT95/CALL-3, ಟೆಂಡರಿಗಿಟ್ಟ ಮೊತ್ತ: ರೂ. 21436227.12
ಮೇಲಿನ 3 ಕಾಮಗಾರಿಗಳಿಗೆ ಟೆಂಡರ್ ಬಗ್ಗೆ ಸ್ಪಷ್ಟನೆಗಳಿಗಾಗಿ ಕೋರಿಕೆ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ವೇಳೆ: 08–09–2025 ಸಂಜೆ 16.00 ಘಂಟೆಯವರೆಗೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ವೇಳೆ: 09–09–2025 ಸಂಜೆ 16.30 ಘಂಟೆಯವರೆಗೆ
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್, ಬಂದರು ವಿಭಾಗ, ಕಾರವಾರ (ಉ.ಕ)
DIPR/ADK/KSMCA/415/25-26 Dt.25.08.25

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ: ಕವಿಪ್ರನಿನಿ/ಬಿ16/44953/2023–24 ದಿನಾಂಕ: 25.08.2025
ಅಧಿಸೂಚನೆ
ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ದಿನಾಂಕ: 14.10.2024 ರ ಉದ್ಯೋಗ ಪ್ರಕಟಣೆಗನುಗುಣವಾಗಿ ಎಸ್.ಎಸ್.ಎಲ್.ಸಿ./ 10ನೇ ತರಗತಿಯಲ್ಲಿ ಗಳಿಸಿರುವ ಅಂಕಗಳ ಜ್ಯೇಷ್ಠತೆಯ ಆಧಾರದ ಮೇರೆಗೆ ಸಹನ ಶಕ್ತಿ ಪರೀಕ್ಷೆಯಲ್ಲಿ ಅರ್ಹತೆ ಹೊಂದಿ **ಕಿರಿಯ ಸ್ಟೇಷನ್ ಪರಿಚಾರಕ (ಎನ್.ಕೆ.ಕೆ.) ಮತ್ತು ಕಿರಿಯ ಪವರ್‌ಮ್ಯಾನ್ (ಎನ್.ಕೆ.ಕೆ.)** ಹುದ್ದೆಗಳಿಗೆ ಆಯ್ಕೆಯಾಗಿರುವ ಅಭ್ಯರ್ಥಿಗಳ **ಅಂತಿಮ ಆಯ್ಕೆ ಪಟ್ಟಿಗಳನ್ನು** ಕಟ್–ಆಫ್(Cut-Off) ಅಂಕಗಳೊಂದಿಗೆ ಅಂತರ್ಜಾಲ https://kptcl.karnataka.gov.in ನಲ್ಲಿ ಪ್ರಕಟಿಸಲಾಗಿದೆ
ಸಹಿ/– ನಿರ್ದೇಶಕರು, (ಆಡಳಿತ ಮತ್ತು ಮಾನವ ಸಂಪನ್ಮೂಲ)
ನಿಗಮ ಕಾರ್ಯಾಲಯ, ಕವಿಪ್ರನಿನಿ,
ಕಾವೇರಿ ಭವನ, ಬೆಂಗಳೂರು–560009.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ಆರೋಗ್ಯ ಮತ್ತು ನೈರ್ಮಲ್ಯ, ಬಿಬಿಎಂಪಿ ಕೇಂದ್ರ ಕಛೇರಿ, ನಂ. 408,
ಅನೆಕ್ಸ್–3 ಕಟ್ಟಡ, 4ನೇ ಮಹಡಿ, ಎನ್.ಆರ್. ಚೌಕ, ಬೆಂಗಳೂರು – 560002.
ಸಂಖ್ಯೆ: ಬಿಬಿಎಂಪಿ/ಕಾಅ/ಆ&ನೈ/ಟೆಂಡರ್/04/2025–26 ದಿನಾಂಕ: 25–08–2025
ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)
(ದ್ವಿ–ಲಕೋಟೆ ಪದ್ಧತಿ) (ಜಿಒಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ನೈರ್ಮಲ್ಯ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗೆ ಗುತ್ತಿಗೆದಾರರನ್ನು ನೇಮಿಸಲು (ತಾಂತ್ರಿಕ ಮತ್ತು ಆರ್ಥಿಕ) ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ಯಶವಂತಪುರ ಮತಕ್ಷೇತ್ರದ ಅಡಿಯಲ್ಲಿ ಬರುವ ಕೆಂಗೇರಿ ಹೋಬಳಿಯ ಕುಂಬಳಗೂಡು (ಸರ್ವೆ ನಂ. 30) ರಲ್ಲಿ ವಿದ್ಯುತ್ ಚಿತಾಗಾರ, ರುದ್ರಭೂಮಿ ಮತ್ತು ಇತರೆ ಸಂಬಂಧಿತ ಕೆಲಸಗಳಿಗೆ ಹೆಚ್ಚುವರಿ ನಿರ್ಮಾಣ ಕಾಮಗಾರಿ. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 676.60, ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ): 10.15**

ಟೆಂಡರ್ ವೇಳಾಪಟ್ಟಿ: 1) ಆರ್‌ಎಫ್‌ಪಿ ಡಾಕ್ಯೂಮೆಂಟ್‌ನ್ನು ಜಿಒಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಿಂದ ದಿನಾಂಕ: 29–08–2025 ರ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 03–09–2025 ರಂದು 15.00 ಗಂಟೆವರೆಗೆ. 3) ಬಿಡ್ ಪೂರ್ವಭಾವಿ ಸಭೆ ದಿನಾಂಕ: 04–09–2025 ರಂದು 15.30 ಗಂಟೆಗೆ ವಿಶೇಷ ಆಯುಕ್ತರು (ಆ&ನೈ) ರವರ ಕಛೇರಿ ಇಲ್ಲಿ ನಡೆಯುವುದು. 4) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 11–09–2025 ರಂದು 16.00 ಗಂಟೆಯೊಳಗೆ. 5) ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ: 12–09–2025 ರಂದು 16.30 ಗಂಟೆಗೆ. 6) ಆರ್ಥಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ: ತಾಂತ್ರಿಕ ಪ್ರಸ್ತಾವನೆಗಳು ಅನುಮೋದನೆಯ ನಂತರ ಕೆ.ಪಿ.ಪಿ. ಪೋರ್ಟಲ್ ಮೂಲಕ ತಿಳಿಸಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ನೈರ್ಮಲ್ಯ, ಬಿಬಿಎಂಪಿ.

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
"ಸಂಪರ್ಕ ಸೌಧ", ನಂ.8, ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010. ಟೆಲಿಫ್ಯಾಕ್ಸ್: 080–22024000
ಇಮೇಲ್ : mdkrdcl@gmail.com & cekrdcl@gmail.com
ಸಂ. ಕರಅನಿನಿ/ಐಎಫ್‌ಬಿ/2025–26/12 ದಿನಾಂಕ : 25–08–2025
ರಸ್ತೆ ಬಳಕೆದಾರ ಶುಲ್ಕದ ಸಂಗ್ರಹಣೆಗಾಗಿ ಬಿಡ್‌ಗಳಿಗೆ ಆಹ್ವಾನ
ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ಕೆಆರ್‌ಡಿಸಿಎಲ್) ಕೆಳಕಂಡ ರಸ್ತೆಯ ವಿಸ್ತಾರಗಳಲ್ಲಿ ರಸ್ತೆ ಬಳಕೆದಾರ ಶುಲ್ಕದ ಸಂಗ್ರಹಣೆಗಾಗಿ ಹೆಸರಾಂತ ಏಜೆನ್ಸಿಗಳಿಂದ ಬಿಡ್‌ಗಳನ್ನು ಆಹ್ವಾನಿಸಲು ಉದ್ದೇಶಿಸಿದೆ.
1) ವಿಸ್ತಾರದ ಹೆಸರು : ಕರ್ನಾಟಕ ರಾಜ್ಯದ ಮುಂಡರಗಿ – ಹಡಗಲಿ – ಹರಪನಹಳ್ಳಿಯ 51.21 ಕಿ.ಮೀ. ಉದ್ದದ ಕೋರ್ಲಹಳ್ಳಿ ಮತ್ತು ಮಾದಾಪುರ ಶುಲ್ಕ ಕೇಂದ್ರಗಳಿಂದ ಬಳಕೆದಾರ ಶುಲ್ಕದ ಸಂಗ್ರಹಣೆ. **ಅಂದಾಜು ವಾರ್ಷಿಕ ಪಾವತಿ ಇಎಆರ್** : ರೂ. 220.00 ಲಕ್ಷಗಳು. **ಇಎಂಡಿ** : ರೂ. 3.30 ಲಕ್ಷಗಳು.
2) ವಿಸ್ತಾರದ ಹೆಸರು : ಕರ್ನಾಟಕ ರಾಜ್ಯದ ಧಾರವಾಡ – ಕರಡಿಗುಡ್ಡ – ಸವದತ್ತಿಯ (ರಾಹೆ–34) ಅಮ್ಮಿನಭಾವಿ ಗ್ರಾಮದ ಸಮೀಪದ ಶುಲ್ಕ ಕೇಂದ್ರದಿಂದ ಬಳಕೆದಾರ ಶುಲ್ಕದ ಸಂಗ್ರಹಣೆ. **ಅಂದಾಜು ವಾರ್ಷಿಕ ಪಾವತಿ ಇಎಆರ್** : ರೂ. 380.00 ಲಕ್ಷಗಳು. **ಇಎಂಡಿ** : ರೂ. 5.70 ಲಕ್ಷಗಳು.
ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ (ಕೆಪಿಪಿ ಪೋರ್ಟಲ್) http://kppp.karnataka.gov.in ನಲ್ಲಿ ಆಸಕ್ತಿಯುಳ್ಳ ಬಿಡ್ಡುದಾರರು ಬಿಡ್ಡಿಂಗ್ ದಾಖಲೆಗಳನ್ನು ಪಡೆಯಬಹುದು ಮತ್ತು ಟೆಂಡರ್‌ಗಳನ್ನು ಅಪ್‌ಲೋಡ್ ಕೂಡ ಮಾಡಬಹುದು.
ವಿವಿಧ ಕಾರ್ಯಚಟುವಟಿಕೆಗಳ ವೇಳಾಪಟ್ಟಿಯು ಕೆಳಕಂಡಂತಿದೆ :
(1) ಬಿಡ್–ಪೂರ್ವ ಸಭೆಯನ್ನು **10–09–2025 ರಂದು ಸಂಜೆ 3:00 ಗಂಟೆಗೆ** ಕರಅನಿನಿ ಕೇಂದ್ರ ಕಛೇರಿ, ಬೆಂಗಳೂರು ಇಲ್ಲಿ ನಡೆಸಲಾಗುವುದು ಮತ್ತು ಈ ಸಮಯದೊಳಗೆ ಬಿಡ್–ಪೂರ್ವ ವಿಚಾರಣೆಗಳನ್ನು ಸಲ್ಲಿಸಬೇಕು. (2) ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **25–09–2025 ರಂದು ಸಂಜೆ 5:00 ಗಂಟೆಯವರೆಗೆ** (3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : **26–09–2025 ರಂದು ಸಂಜೆ 5:30 ಗಂಟೆಗೆ**
ದಯವಿಟ್ಟು ಗಮನಿಸಿ, ವೇಳಾಪಟ್ಟಿಯಲ್ಲಿನ ಯಾವುದೇ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ ಮತ್ತು ಮುಂದಿನ ಬದಲಾವಣೆಗಳನ್ನು ಕೆಪಿಪಿ ಪೋರ್ಟಲ್ / ಕರಅನಿನಿ ವೆಬ್‌ಸೈಟ್ http://www.krdcl.in ನಲ್ಲಿ ಮಾತ್ರವೇ ಅಪ್‌ಡೇಟ್ ಮಾಡಲಾಗುವುದು.
ಸಹಿ/– ಮುಖ್ಯ ಅಭಿಯಂತರರು, ಕರಅನಿನಿ, ಬೆಂಗಳೂರು.
ವಾಸಾಸಂಇ/ವಾ.ಪ್ರ/2461/ಶ್ರೇಷ್ಠ/2025–26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಬೆಂಗಳೂರು ದಕ್ಷಿಣ ವಿಭಾಗ, ಅಮೃತನಗರ, ಕೋಣನಕುಂಟೆ ಮುಖ್ಯರಸ್ತೆ, ಸೌಧಾಮಿನಿ ಬಡಾವಣೆ, ಬೆಂಗಳೂರು–62
ನಂ.: ಬಿಬಿಎಂಪಿ/ಕಾಪಾಅ/ಬೆಂದವಿ/ಟೆಂಡರ್/07/2025–26 ದಿನಾಂಕ: 25.08.2025
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ದ್ವಿ ಲಕೋಟೆ ಟೆಂಡರ್
ಕಾರ್ಯಪಾಲಕ ಅಭಿಯಂತರರು (ಬೆಂಗಳೂರು ದಕ್ಷಿಣ ವಿಭಾಗ), ಬಿಬಿಎಂಪಿ, ಬೆಂಗಳೂರು–62 ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಂದಾಯಿತ ಅಥವಾ ತತ್ಸಮಾನ ಕೆಪಿಡಬ್ಲ್ಯುಡಿ / ಸಿಪಿಡಬ್ಲ್ಯುಡಿ / ಬಿಡಬ್ಲ್ಯುಎಸ್‌ಎಸ್‌ಬಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. **(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ – ಕೆಡಬ್ಲ್ಯು4)**

ಕ್ರ. ಸಂ.	ಕಾಮಗಾರಿಯ ಹೆಸರು
1	ಉತ್ತರಹಳ್ಳಿ ಉಪ ವಿಭಾಗದ ಸುಬ್ರಹ್ಮಣ್ಯಪುರ ವಾರ್ಡ್ ನಂ. 203ರ ನಾರಾಯಣ ನಗರ 1ನೇ ಬ್ಲಾಕ್ ಮತ್ತು ಅಂಜನಾಪುರ ಉಪ ವಿಭಾಗ ಅಂಜನಾಪುರ ವಾರ್ಡ್ ನಂ. 208ರ ನಾರಾಯಣ ನಗರ 2ನೇ ಮತ್ತು 3ನೇ ಬ್ಲಾಕ್‌ನಲ್ಲಿ ರಸ್ತೆಗಳು ಮತ್ತು ಚರಂಡಿಗಳ ಅಭಿವೃದ್ಧಿ. **ಕಾಮಗಾರಿಯ ಅಂದಾಜು ಮೌಲ್ಯ (ರೂ. ಲಕ್ಷಗಳಲ್ಲಿ): 400.00, ಇಎಂಡಿ (ರೂ. ಗಳಲ್ಲಿ): 6,00,000.00, ವರ್ಗ / ಕಾಯ್ದಿರಿಸಿದೆ: ಇತರೆ.**

ವೇಳಾಪಟ್ಟಿ: (1) ಟೆಂಡರ್‌ಗಳನ್ನು ಆನ್‌ಲೈನ್ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **10.09.2025ರ ಸಂಜೆ 4:00 ಗಂಟೆಗೆ** ಮುಂಚಿತವಾಗಿ ಸಲ್ಲಿಸತಕ್ಕದ್ದು ಮತ್ತು ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗದರ್ಶನದಂತೆ ತೆರೆಯಲಾಗುವುದು. (2) ತಾಂತ್ರಿಕ ಬಿಡ್ ಟೆಂಡರ್ ತೆರೆಯುವ ದಿನಾಂಕ: **12.09.2025ರ ಸಂಜೆ 4:30 ಗಂಟೆಗೆ**. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.in ನಿಂದ ಪಡೆದುಕೊಳ್ಳಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ದಕ್ಷಿಣ ವಿಭಾಗ, ಬಿಬಿಎಂಪಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಗಾಂಧಿನಗರ ವಿಭಾಗ, 2ನೇ ಮಹಡಿ, ಬೃ.ಬೆಂ.ಮ.ಪಾಲಿಕೆ ಸಂಕೀರ್ಣ, ಧನವಂತ್ರಿ ರಸ್ತೆ, ಬೆಂಗಳೂರು–560 009.
ಸಂಖ್ಯೆ:ಕಾಪಾಅ/ಗಾಂಧಿನಗರ/ಟೆಂಡರ್/ಕೆಪಿಪಿಪಿ/005/2025–26 ದಿನಾಂಕ: 25.08.2025
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)(ದ್ವಿಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಈ ಕೆಳಗಿನ ಸಹಿದಾರರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್ /ಎಂ.ಇ.ಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು
1	ವಾರ್ಡ್ ಸಂಖ್ಯೆ–122, ದತ್ತಾತ್ರೇಯ ದೇವಸ್ಥಾನ ವಾರ್ಡ್ ವ್ಯಾಪ್ತಿಯಲ್ಲಿ ಡಾಂಬರು ರಸ್ತೆಗಳಿಗೆ ರೀಸರ್ಫೇಸಿಂಗ್, ಕಾಂಕ್ರೀಟ್ ರಸ್ತೆಗಳಲ್ಲಿ ಬ್ಯಾಡ್ ರೀಚಸ್‌ಗಳಿಗೆ ದುರಸ್ತಿಗಳು ಮತ್ತು ಚರಂಡಿಗಳಿಗೆ ಸುಧಾರಣೆಗಳು ಹಾಗೂ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. **ಅಂದಾಜು ಮೊತ್ತ: ₹.250.00 ಲಕ್ಷಗಳು ಇಎಂಡಿ ಮೊತ್ತ: ₹.3,75,000/–**
2	ವಾರ್ಡ್ ಸಂಖ್ಯೆ–123, ಗಾಂಧಿನಗರ ವಾರ್ಡ್ ವ್ಯಾಪ್ತಿಯಲ್ಲಿ ಡಾಂಬರು ರಸ್ತೆಗಳಿಗೆ ರೀಸರ್ಫೇಸಿಂಗ್, ಕಾಂಕ್ರೀಟ್ ರಸ್ತೆಗಳಲ್ಲಿ ಬ್ಯಾಡ್ ರೀಚಸ್‌ಗಳಿಗೆ ದುರಸ್ತಿಗಳು ಮತ್ತು ಚರಂಡಿಗಳಿಗೆ ಸುಧಾರಣೆಗಳು ಹಾಗೂ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. **ಅಂದಾಜು ಮೊತ್ತ: ₹.250.00 ಲಕ್ಷಗಳು ಇಎಂಡಿ ಮೊತ್ತ: ₹.3,75,000/–**
3	ವಾರ್ಡ್ ಸಂಖ್ಯೆ–124, ಸುಭಾಷ್‌ನಗರ ವಾರ್ಡ್ ವ್ಯಾಪ್ತಿಯಲ್ಲಿ ಡಾಂಬರು ರಸ್ತೆಗಳಿಗೆ ರೀಸರ್ಫೇಸಿಂಗ್, ಕಾಂಕ್ರೀಟ್ ರಸ್ತೆಗಳಲ್ಲಿ ಬ್ಯಾಡ್ ರೀಚಸ್‌ಗಳಿಗೆ ದುರಸ್ತಿಗಳು ಮತ್ತು ಚರಂಡಿಗಳಿಗೆ ಸುಧಾರಣೆಗಳು ಹಾಗೂ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. **ಅಂದಾಜು ಮೊತ್ತ: ₹.250.00 ಲಕ್ಷಗಳು ಇಎಂಡಿ ಮೊತ್ತ: ₹.3,75,000/–**
4	ವಾರ್ಡ್ ಸಂಖ್ಯೆ–125, ಓಕಳಿಪುರ ವಾರ್ಡ್ ವ್ಯಾಪ್ತಿಯಲ್ಲಿ ಡಾಂಬರು ರಸ್ತೆಗಳಿಗೆ ರೀಸರ್ಫೇಸಿಂಗ್, ಕಾಂಕ್ರೀಟ್ ರಸ್ತೆಗಳಲ್ಲಿ ಬ್ಯಾಡ್ ರೀಚಸ್‌ಗಳಿಗೆ ದುರಸ್ತಿಗಳು ಮತ್ತು ಚರಂಡಿಗಳಿಗೆ ಸುಧಾರಣೆಗಳು ಹಾಗೂ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. **ಅಂದಾಜು ಮೊತ್ತ: ₹.250.00 ಲಕ್ಷಗಳು ಇಎಂಡಿ ಮೊತ್ತ: ₹.3,75,000/–**
5	ವಾರ್ಡ್ ಸಂಖ್ಯೆ–126, ಬಿನ್ನಿಪೇಟೆ ವಾರ್ಡ್ ವ್ಯಾಪ್ತಿಯಲ್ಲಿ ಡಾಂಬರು ರಸ್ತೆಗಳಿಗೆ ರೀಸರ್ಫೇಸಿಂಗ್, ಕಾಂಕ್ರೀಟ್ ರಸ್ತೆಗಳಲ್ಲಿ ಬ್ಯಾಡ್ ರೀಚಸ್‌ಗಳಿಗೆ ದುರಸ್ತಿಗಳು ಮತ್ತು ಚರಂಡಿಗಳಿಗೆ ಸುಧಾರಣೆಗಳು ಹಾಗೂ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. **ಅಂದಾಜು ಮೊತ್ತ: ₹.250.00 ಲಕ್ಷಗಳು ಇಎಂಡಿ ಮೊತ್ತ: ₹.3,75,000/–**
6	ವಾರ್ಡ್ ಸಂಖ್ಯೆ–127, ಕಾಟನ್‌ಪೇಟೆ ವಾರ್ಡ್ ವ್ಯಾಪ್ತಿಯಲ್ಲಿ ಡಾಂಬರು ರಸ್ತೆಗಳಿಗೆ ರೀಸರ್ಫೇಸಿಂಗ್, ಕಾಂಕ್ರೀಟ್ ರಸ್ತೆಗಳಲ್ಲಿ ಬ್ಯಾಡ್ ರೀಚಸ್‌ಗಳಿಗೆ ದುರಸ್ತಿಗಳು ಮತ್ತು ಚರಂಡಿಗಳಿಗೆ ಸುಧಾರಣೆಗಳು ಹಾಗೂ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. **ಅಂದಾಜು ಮೊತ್ತ: ₹.250.00 ಲಕ್ಷಗಳು ಇಎಂಡಿ ಮೊತ್ತ: ₹.3,75,000/–**
7	ವಾರ್ಡ್ ಸಂಖ್ಯೆ–128, ಚಿಕ್ಕಪೇಟೆ ವಾರ್ಡ್ ವ್ಯಾಪ್ತಿಯಲ್ಲಿ ಡಾಂಬರು ರಸ್ತೆಗಳಿಗೆ ರೀಸರ್ಫೇಸಿಂಗ್, ಕಾಂಕ್ರೀಟ್ ರಸ್ತೆಗಳಲ್ಲಿ ಬ್ಯಾಡ್ ರೀಚಸ್‌ಗಳಿಗೆ ದುರಸ್ತಿಗಳು ಮತ್ತು ಚರಂಡಿಗಳಿಗೆ ಸುಧಾರಣೆಗಳು ಹಾಗೂ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. **ಅಂದಾಜು ಮೊತ್ತ: ₹.250.00 ಲಕ್ಷಗಳು ಇಎಂಡಿ ಮೊತ್ತ: ₹.3,75,000/–**

ಗುತ್ತಿಗೆದಾರರ ಅರ್ಹತೆ ಮತ್ತು ವರ್ಗ: ಕೆಪಿಪಿ ಪೋರ್ಟಲ್ ಪ್ರಕಾರ
ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ 06.09.2025ರ ಸಂಜೆ 4:00 ಗಂಟೆಯವರೆಗೆ. (2) ತಾಂತ್ರಿಕ ಬಿಡ್‌ಗಳನ್ನು ದಿನಾಂಕ 08.09.2025ರ ಮಧ್ಯಾಹ್ನ 12:30 ಗಂಟೆಗೆ ತೆರೆಯಲಾಗುವುದು. (3) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ (ಕೆಪಿಪಿ ಮೂಲಕ ತಿಳಿಸಲಾಗುವುದು).
ಸಹಿ/– ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.
ಸಂಖ್ಯೆ:ಅಭಿ(6)ಉಖಾಯೋ/ಮಾ.ಸಂ.ಸಂ.ಆ/14/2025–26 ದಿನಾಂಕ: 25–08–2025
ಇ–ಟೆಂಡರ್ ಪ್ರಕಟಣೆ
ವಿಷಯ: ಇ–ಟೆಂಡರ್‌ಗಾಗಿ ಪ್ರೊಕ್ಯೂರ್‌ಮೆಂಟ್ ಟೆಂಡರ್ ಸಂಖ್ಯೆ–01/2025–26
2025–26 ನೇ ಸಾಲಿಗೆ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಕಛೇರಿಯ ವ್ಯಾಪ್ತಿಯಡಿ ಖಾಲಿಯಿರುವ ಈ ಕೆಳಕಂಡ ಹುದ್ದೆಗಳಿಗೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ಟೆಂಡರ್ ಕರೆದಿದ್ದು, ಟೆಂಡರ್ ಸಲ್ಲಿಸಲು ದಿನಾಂಕ: **26–09–2025 ರಂದು ಸಂಜೆ 4.00 ಗಂಟೆಗೆ ಕೊನೆಯ ದಿನವಾಗಿದ್ದು**, ಹೆಚ್ಚಿನ ವಿವರಗಳಿಗೆ **https://kppp.karnataka.gov.in** ವೆಬ್‌ಸೈಟ್‌ನ್ನು ವೀಕ್ಷಿಸಬಹುದು.

ಕ್ರ.ಸಂ.	ಸಿಬ್ಬಂದಿಗಳ ವಿವರಗಳು	ಸಿಬ್ಬಂದಿಗಳ ಸಂಖ್ಯೆ
1	ಜಿಲ್ಲಾ ಎಂ.ಐ.ಎಸ್. ಸಂಯೋಜಕರು	01
2	ಜಿಲ್ಲಾ ಐ.ಇ.ಸಿ. ಸಂಯೋಜಕರು	01
3	ಅಕೌಂಟ್ಸ್ ಮ್ಯಾನೇಜರ್	01
4	ತಾಲ್ಲೂಕು ಎಂ.ಐ.ಎಸ್. ಸಂಯೋಜಕರು	04
5	ತಾಲ್ಲೂಕು ಐ.ಇ.ಸಿ ಸಂಯೋಜಕರು	01
6	ತಾಲ್ಲೂಕು ತಾಂತ್ರಿಕ ಸಹಾಯಕರು	09
7	ಡಾಟಾ ಎಂಟ್ರಿ ಆಪರೇಟರ್	01
	ಒಟ್ಟು	18

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ,
ಬೆಂಗಳೂರು.
ವಾಸಾಸಂಇ/ವಾ.ಪ್ರ/2466/ಅಡ್ವಟೋರ್/2025–26

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ) ಕಚೇರಿ
ಇ–ಟೆಂಡರ್ ಅಧಿಸೂಚನೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (kppp) ಮುಖಾಂತರ ಮಾತ್ರ)
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999–2000ರ ಪ್ರಕಾರ ಆ್ಯಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ ನಿಯಮಗಳನ್ವಯ ಈ ಕೆಳಕಂಡ Works, Service & Goods ಕಾಮಗಾರಿಗಳಿಗೆ ಸರ್ಕಾರಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು/ಸಂಸ್ಥೆಯವರಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ (kppp) ಮುಖಾಂತರ ಇ–ಟೆಂಡರ್ ಆಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರ್‌ಗಳಲ್ಲಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ (kppp) ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರ್‌ನ ಸಂಪೂರ್ಣ ವಿವರಗಳಿಗಾಗಿ / ದಾಖಲೆಗಳಿಗಾಗಿ ಅಂತರ್ ಜಾಲ ವಿಳಾಸ http://www.kppp.karnataka.gov.in ದಲ್ಲಿ **ದಿನಾಂಕ: 01/09/2025** ರಿಂದ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ) ಹು.ಧಾ.ಮ.ಪಾ ಕಚೇರಿಗೆ ಕಚೇರಿ ವೇಳೆಯಲ್ಲಿ ಭೇಟಿ ನೀಡಬಹುದು. ಕಾಮಗಾರಿಯ ಟೆಂಡರ್ ಪೂರ್ವಭಾವಿ ಸಭೆಯನ್ನು ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ) ಹು.ಧಾ.ಮ.ಪಾ ಸರ್. ಸಿದ್ದಪ್ಪ ಕಂಬಳಿ ರಸ್ತೆ, ಹುಬ್ಬಳ್ಳಿ ಇವರ ಕಚೇರಿಯಲ್ಲಿ ನಡೆಸಲಾಗುವುದು. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಟೆಂಡರ್ ಪ್ರಕಟಣೆ	ಕ್ರ. ಸಂ.	ಟೆಂಡರ್ ನಂ.	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಮ್.ಡಿ ಮೊತ್ತ (ರೂ. ಗಳಲ್ಲಿ)
GOODS	1	DMA/2025-26/IND5132	80.00	160000.00
	2	DMA/2025-26/IND5133	98.00	196000.00
	3	DMA/2025-26/IND5134	83.06	166120.00
SERVICE	4	DMA/2024-25/SE4094	128.00	192000.00
	5	DMA/2024-25/SE4093	149.00	224000.00
	6	DMA/2025-26/SE5914	5.00	25000.00
WORKS	7	DMA/2025-26/RD/WORK_INDENT46224	425.00	637500.00
	8	DMA/2025-26/OW/WORK_INDENT47866	100.00	150000.00
	9	DMA/2025-26/OW/WORK_INDENT47864	100.00	150000.00
	10	DMA/2025-26/BD/WORK_INDENT48312	95.00	190000.00

ಕ್ರ.ಸಂ. 6&7ರ ಕಾಮಗಾರಿಗಳಿಗೆ ಟೆಂಡರ್ ಸ್ವೀಕರಿಸುವ ಕೊನೆಯ **ದಿನಾಂಕ 09/09/2025** ರವರೆಗೆ ಹಾಗೂ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 10/09/2025** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 11/09/2025** ರಂದು ತೆರೆಯಲಾಗುವುದು. ಅಥವಾ ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತೆರೆಯಲಾಗುವುದು. ಟೆಂಡರ್‌ಗಳ ಕುರಿತು ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 03–09–2025** ರಂದು **16.30.00** ಗಂಟೆವರೆಗೆ, ಸಂಭಾವ್ಯ ಬಿಡ್‌ದಾರರ ಪೂರ್ವಭಾವಿ ಸಭೆಯ **ದಿನಾಂಕ : 04/09/2025** ರಂದು **11.00.00** ಗಂಟೆಗೆ.
ಕ್ರ.ಸಂ. 1,2,3,4,5,8,9,&10 ಗಳ ಟೆಂಡರ್ ಸ್ವೀಕರಿಸುವ ಕೊನೆಯ **ದಿನಾಂಕ 16/09/2025** ರವರೆಗೆ ಹಾಗೂ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 17/09/2025** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 18/09/2025** ರಂದು ತೆರೆಯಲಾಗುವುದು. ಅಥವಾ ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತೆರೆಯಲಾಗುವುದು. ಟೆಂಡರ್‌ಗಳ ಕುರಿತು ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 05–09–2025** ರಂದು **16.30.00** ಗಂಟೆವರೆಗೆ, ಸಂಭಾವ್ಯ ಬಿಡ್‌ದಾರರ ಪೂರ್ವಭಾವಿ ಸಭೆಯ **ದಿನಾಂಕ : 06/09/2025** ರಂದು 11.00.00 ಗಂಟೆಗೆ.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ) ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ.
ವಾ.ಸಾ.ಇ/ಧಾರವಾಡ/588/ದೇಶಪಾಂಡೆಪಬ್ಲಿಸಿಟಿ/2025–26

ಸಬಲೆಂಕಾ, ಜೊಕೊವಿಚ್ ಶುಭಾರಂಭ

ಅಮೆರಿಕ ಓಪನ್ ಟೆನಿಸ್: ಮಾಜಿ ಚಾಂಪಿಯನ್ ಮೆಡ್ವೆಡೇವ್‌ಗೆ ಆಘಾತ

ಬೆಲರೂಸ್‌ನ ಆಟಗಾರ್ತಿ ಅರಿನಾ ಸಬಲೆಂಕಾ ಚಿತ್ರಗಳು: ಎಪಿ/ಎಎಫ್‌ಪಿ

ನ್ಯೂಯಾರ್ಕ್ (ಎಎಫ್‌ಪಿ): ಪ್ರಶಸ್ತಿ ಉಳಿಸಿಕೊಳ್ಳುವ ಛಲದಲ್ಲಿರುವ ಅರಿನಾ ಸಬಲೆಂಕಾ ಮತ್ತು ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಕಿರೀಟದ ಮೇಲೆ ಕಣ್ಣಿಟ್ಟಿರುವ ಸರ್ಬಿಯಾದ ತಾರೆ ನೊವಾಕ್ ಜೊಕೊವಿಚ್ ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು. ಆದರೆ, ಮಾಜಿ ಚಾಂಪಿಯನ್ ಡೇನಿಯಲ್ ಮೆಡ್ವೆಡೆವ್ ಆರಂಭಿಕ ಸುತ್ತಿನಲ್ಲೇ ಆಘಾತ ಅನುಭವಿಸಿದರು.

ಹಾಲಿ ಚಾಂಪಿಯನ್, ವಿಶ್ವದ ಅಗ್ರಮಾನ್ಯ ಆಟಗಾರ್ತಿ ಸಬಲೆಂಕಾ 7-5, 6-1ರ ನೇರ ಸೆಟ್‌ಗಳಿಂದ ಸ್ವಿಟ್ಜರ್ಲೆಂಡ್‌ನ ರೆಬೆಕಾ ಮಸರೋವಾ ಅವರನ್ನು ಸೋಮವಾರ ಹಿಮ್ಮೆಟ್ಟಿಸಿದರು. ಅಮೆರಿಕದ ಸೆರೆನಾ ವಿಲಿಯಮ್ಸ್ ಬಳಿಕ ಇಲ್ಲಿ 27 ವರ್ಷದ ಸಬಲೆಂಕಾ ಮಹಿಳಾ ಸಿಂಗಲ್ಸ್ ಪ್ರಶಸ್ತಿ ಉಳಿಸಿಕೊಳ್ಳುವ ಪ್ರಯತ್ನದಲ್ಲಿದ್ದಾರೆ. ಸೆರೆನಾ ಅವರು 2012ರಿಂದ 14ರವರೆಗೆ ಸತತ ಮೂರು ಬಾರಿ ಚಾಂಪಿಯನ್ ಆಗಿದ್ದರು.

ಮೂರು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳ ಒಡತಿ ಸಬಲೆಂಕಾ ಅವರಿಗೆ ಮೊದಲ ಸೆಟ್‌ನಲ್ಲಿ ವಿಶ್ವದ 108ನೇ ರ‍್ಯಾಂಕ್‌ನ ರೆಬೆಕಾ ಅವರಿಂದ ಪ್ರಬಲ ಪೈಪೋಟಿ ಎದುರಾಯಿತು. ಆದರೆ, ಎರಡನೇ ಸೆಟ್ ಏಕಪಕ್ಷೀಯವಾಗಿ ಸಾಗಿತು. ಬೆಲಾರೂಸ್‌ನ ಸಬಲೆಂಕಾ ಎರಡನೇ ಸುತ್ತಿನಲ್ಲಿ ರಷ್ಯಾದ ಆಟಗಾರ್ತಿ ಪೋಲಿನಾ ಕುಡೆರ್ಮೆಟೋವಾ ಅವರನ್ನು ಎದುರಿಸಲಿದ್ದಾರೆ.

ಪುರುಷರ ಸಿಂಗಲ್ಸ್ ಹಾಲಿ ಚಾಂಪಿಯನ್, ಅಗ್ರಶ್ರೇಯಾಂಕದ ಯಾನಿಕ್ ಸಿನ್ನರ್ (ಇಟಲಿ) ಮತ್ತು ಎರಡನೇ ಶ್ರೇಯಾಂಕದ ಕಾರ್ಲೋಸ್ ಅಲ್ಕರಾಜ್ (ಸ್ಪೇನ್) ಅವರು ತಮ್ಮ ಅಭಿಯಾನವನ್ನು ಮಂಗಳವಾರ ಆರಂಭಿಸಲಿದ್ಧಾರೆ. ಅದಕ್ಕೂ ಮುನ್ನ ಎಲ್ಲರ ಆಕರ್ಷಣೆಯಾಗಿದ್ದ ಏಳನೇ ಶ್ರೇಯಾಂಕದ ಜೊಕೊವಿಚ್ 6-1, 7-6 (7/3), 6-2ರಿಂದ ಅಮೆರಿಕದ ಲರ್ನರ್ ಟಿಯೆನ್ ಅವರನ್ನು ಮಣಿಸಿ ಎರಡನೇ ಸುತ್ತು ಪ್ರವೇಶಿಸಿದರು.

ನೊವಾಕ್ ಜೊಕೊವಿಚ್

ಇಲ್ಲಿ ನಾಲ್ಕು ಬಾರಿ ಚಾಂಪಿಯನ್ ಆಗಿರುವ 38 ವರ್ಷದ ಜೊಕೊವಿಚ್ ಅವರು 19 ವರ್ಷದ ಟಿಯೆನ್ ಅವರನ್ನು ಮಣಿಸಲು 2 ಗಂಟೆ 25 ನಿಮಿಷ ತೆಗೆದುಕೊಂಡರು. ಎರಡನೇ ಸೆಟ್‌ನಲ್ಲಿ ಟಿಯೆನ್ ಅವರ ಪ್ರಬಲ ಸವಾಲನ್ನು ಮೀರಿ, ಟೈಬ್ರೇಕರ್‌ನಲ್ಲಿ ಜೊಕೊವಿಚ್ ಮೇಲುಗೈ ಸಾಧಿಸಿದರು. ಪದೇ ಪದೇ ಕಾಡುತ್ತಿದ್ದ ಬಲಗಾಲಿನ ನೋವಿಗೆ ಅನುಭವಿ ಆಟಗಾರ ಪಂದ್ಯದ ನಡುವೆ ವೈದ್ಯಕೀಯ ನೆರವು ಪಡೆದರು. ಅವರಿಗೆ ಮುಂದಿನ ಸುತ್ತಿನಲ್ಲಿ ಆತಿಥೇಯ ದೇಶದ ಝುಚಾರಿ ಸ್ವಜ್ದಾ ಎದುರಾಳಿಯಾಗಿದ್ದಾರೆ.

ಮೆಡ್ವೆಡೆವ್‌ಗೆ ಆಘಾತ: ಫ್ರಾನ್ಸ್‌ನ ಬೆಂಜಮಿನ್ ಬೊಂಜಿ ಅವರು 2021ರ ಚಾಂಪಿಯನ್, 13ನೇ ಶ್ರೇಯಾಂಕದ ಮೆಡ್ವೆಡೆವ್ ಅವರಿಗೆ ಆಘಾತ ನೀಡಿದರು. 51ನೇ ಕ್ರಮಾಂಕದ ಬೆಂಜಮಿನ್ 6-3, 7-5, 6-7 (5/7), 0-6, 6-4ರಲ್ಲಿ ಐದು ಸೆಟ್‌ಗಳ ಹೋರಾಟದಲ್ಲಿ ರಷ್ಯಾ ಆಟಗಾರನ ವಿರುದ್ಧ ಗೆಲುವು ಸಾಧಿಸಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ 14ನೇ ಶ್ರೇಯಾಂಕದ ಕ್ಲಾರಾ ಟೌಸನ್ ಅವರೂ ಮೊದಲ ಸುತ್ತಿನಲ್ಲಿ ಹೊರಬಿದ್ದರು. ಶ್ರೇಯಾಂಕರಹಿತ ಆಟಗಾರ್ತಿ ಅಲೆಕ್ಸಾಂಡ್ರಾ ಈಲಾ 6-3, 2-6, 7-6 (13/11)ರಿಂದ ಡೆನ್ಮಾರ್ಕ್‌ನ ಕ್ಲಾರಾ ಅವರನ್ನು ಮಣಿಸಿದರು. ಈ ಮೂಲಕ 20 ವರ್ಷದ ಅಲೆಕ್ಸಾಂಡ್ರಾ, ಗ್ರ್ಯಾನ್‌ಸ್ಲಾಮ್ ಸಿಂಗಲ್ಸ್ ಪಂದ್ಯವನ್ನು ಗೆದ್ದ ಫಿಲಿಪ್ಪಿನ್ಸ್‌ನ ಮೊದಲ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಇಂಡೊನೇಷ್ಯಾದ ಜಾನಿಸ್ ಟ್ಜೆನ್ ಅವರು 6-4, 4-6, 6-4ರಿಂದ 24ನೇ ಶ್ರೇಯಾಂಕದ ವೆರೋನಿಕಾ ಕುದೇರ್ಮೆಟೊವಾ (ರಷ್ಯಾ) ಅವರಿಗೆ ಆಘಾತ ನೀಡಿದರು. 149ನೇ ಕ್ರಮಾಂಕದ ಟ್ಜೆನ್ ಎರಡನೇ ಸುತ್ತಿನಲ್ಲಿ ಬ್ರಿಟನ್‌ನ ಎಮ್ಮಾ ರಾಡುಕಾನು ಅವರನ್ನು ಎದುರಿಸಲಿದ್ದಾರೆ. ರಾಡುಕಾನು ಅವರು 6-1, 6-2ರಿಂದ ಜಪಾನ್‌ನ ಎನಾ ಶಿಬಹರಾ ಅವರನ್ನು ಸೋಲಿಸಿದರು.

ಚೆಸ್: ಜಂಟಿ ಎರಡನೇ ಸ್ಥಾನದಲ್ಲಿ ಪ್ರಜ್ಞಾನಂದ

ಸೇಂಟ್ ಲೂಯಿಸ್, ಅಮೆರಿಕ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಇಲ್ಲಿ ನಡೆಯುತ್ತಿರುವ ಸಿಂಕ್‌ಫೀಲ್ಡ್ ಕಪ್ ಗ್ರ್ಯಾಂಡ್ ಚೆಸ್ ಟೂರ್‌ನಲ್ಲಿ ಸತತ ಐದನೇ ಡ್ರಾ ಸಾಧಿಸಿದರು. ಅವರು ಆರನೇ ಸುತ್ತಿನಲ್ಲಿ ಪೋಲೆಂಡ್‌ನ ಡೂಡಾ ಯಾನ್–ಕ್ರಿಸ್ಟೋಫ್ ಅವರೊಂದಿಗೆ ಅಂಕ ಹಂಚಿಕೊಂಡರು.

ಇದರೊಂದಿಗೆ ಪ್ರಜ್ಞಾನಂದ ಅವರು ಆರು ಸುತ್ತುಗಳಿಂದ ಒಟ್ಟು 3.5 ಅಂಕ ಗಳಿಸಿ, ಜಂಟಿ ಎರಡನೇ ಸ್ಥಾನ ಕಾಪಾಡಿಕೊಂಡಿದ್ದಾರೆ. ಅಮೆರಿಕದ ಗ್ರ್ಯಾಂಡ್‌ಮಾಸ್ಟರ್ ಫ್ಯಾಬಿಯಾನೊ ಕರುವಾನಾ ಒಟ್ಟು 4 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. ತಮ್ಮ ಪ್ರತಿಸ್ಪರ್ಧಿಗಳಿಗಿಂತ ಅರ್ಧ ಅಂಕ ಹೆಚ್ಚು ಪಡೆದಿರುವ ಅವರು ಮುನ್ನಡೆಯಲ್ಲಿದ್ದಾರೆ.

ಪ್ರಜ್ಞಾನಂದ ಅವರಿಗೆ ಅಮೆರಿಕದ ಲೆವೊನ್ ಅರೋನಿಯನ್ ಜೊತೆ ನೀಡಿದ್ದಾರೆ. ವಿಶ್ವ ಚಾಂಪಿಯನ್ ಡಿ. ಗುಕೇಶ್ ಅವರು 3 ಅಂಕಗಳಿಸಿದ್ದು, ಅಮೆರಿಕದ ಸ್ಯಾಮ್ಯುವೆಲ್ ಸೆವಿಯಾನ್ ಅವರೊಂದಿಗೆ ಜಂಟಿ ನಾಲ್ಕನೇ ಸ್ಥಾನದಲ್ಲಿದ್ದಾರೆ. ಫ್ರೆಂಚ್ ಜೋಡಿ ಅಲಿರೇಜಾ ಫಿರೋಜಾ ಮತ್ತು ಮ್ಯಾಕ್ಸಿಮ್ ವಾಶಿರ್ ಲಗ್ರೇವ್ ಅವರು ಕೂಡ ಸ್ಥಾನ ಹಂಚಿಕೊಂಡಿದ್ದಾರೆ.

ಏಷ್ಯನ್ ಶೂಟಿಂಗ್: ಕಿರಿಯರ ಪ್ರಾಬಲ್ಯ ಮುಂದುವರಿಕೆ

ನೀರೂಗೆ ಚಿನ್ನ, ಭೌನೀಶ್‌ಗೆ ಬೆಳ್ಳಿ

ಶಿಮ್ಕೆಟ್ (ಕಜಾಕಸ್ತಾನ) (ಪಿಟಿಐ): ರಾಷ್ಟ್ರೀಯ ಗೇಮ್ಸ್ ಚಾಂಪಿಯನ್ ನೀರೂ ಧಂಡಾ ಅವರು ಇಲ್ಲಿ ನಡೆಯುತ್ತಿರುವ 16ನೇ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ ವೈಯಕ್ತಿಕ ಟ್ರ್ಯಾಪ್ ಸ್ಪರ್ಧೆಯಲ್ಲಿ ಚಿನ್ನದ ಪದಕಕ್ಕೆ ಕೊರಳೊಡ್ಡಿದರು. ಪುರುಷರ ವಿಭಾಗದಲ್ಲಿ ಭೌನೀಶ್ ಮೆಂದಿರತ್ತಾ ಅವರು ಬೆಳ್ಳಿ ಪದಕಕ್ಕೆ ಗುರಿಯಿಟ್ಟರು. ಅದರೊಂದಿಗೆ ಭಾರತದ ಶೂಟರ್‌ಗಳು ಟೂರ್ನಿಯಲ್ಲಿ 50 ಪದಕಗಳನ್ನು ಗೆದ್ದ ಸಾಧನೆ ಮಾಡಿದರು.

50 ಶಾಟ್‌ಗಳ ಫೈನಲ್‌ನಲ್ಲಿ ನೀರೂ ಅವರು 43 ಹಿಟ್‌ಗಳೊಡನೆ ಚಿನ್ನ ಗೆದ್ದರು. ಭಾರತದ ಮತ್ತೊಬ್ಬ ಶೂಟರ್ ಆಶಿಮಾ ಅಹ್ಲಾವತ್ ಅವರು (29) ಕಂಚಿನ ಪದಕ ಜಯಿಸಿದರು. ಕತಾರ್‌ನ ಬೆಸಿಲ್ ರೇ (37) ಬೆಳ್ಳಿ ತಮ್ಮದಾಗಿಸಿಕೊಂಡರು.

ನೀರೂ, ಆಶಿಮಾ ಹಾಗೂ ಪ್ರೀತಿ ರಜಾಕ್ ಅವರು ಒಟ್ಟು 319 ಅಂಕಗಳೊಡನೆ ಮಹಿಳೆಯರ ಟ್ರ್ಯಾಪ್ ತಂಡ ವಿಭಾಗದಲ್ಲಿಯೂ ಚಾಂಪಿಯನ್ ಆದರು. ಚೀನಾ (301) ಬೆಳ್ಳಿಗೆ ತೃಪ್ತಿಪಟ್ಟರೆ, ಕುವೈತ್ (295) ಕಂಚು ಜಯಿಸಿತು.

ಪುರುಷರ ಟ್ರ್ಯಾಪ್ ಫೈನಲ್‌ನಲ್ಲಿ ಭೌನೀಶ್ 45 ಶಾಟ್‌ಗಳಲ್ಲಿ ಗುರಿ ತಲುಪಿದರು. ಚೀನಾದ ಶೂಟರ್‌ಗಳಾದ ಯಿಂಗ್ ಕಿ (47) ಹಾಗೂ ಪೆಂಗ್‌ಯು ಶೆನ್ (35) ಕ್ರಮವಾಗಿ ಚಿನ್ನ ಹಾಗೂ ಕಂಚು ಜಯಿಸಿದರು. ಆದರೆ, ಒಲಿಂಪಿಕ್ಸ್ ಡಬಲ್ ಪದಕವಿಜೇತೆ ಮನು ಭಾಕರ್ ಅವರು ಮಹಿಳೆಯರ 25 ಮೀಟರ್ ಪಿಸ್ತೂಲ್ ವಿಭಾಗದಲ್ಲಿ ನಿರಾಶೆ ಅನುಭವಿಸಿದರು. ನಾಲ್ಕನೇ ಸ್ಥಾನ ಪಡೆದ ಅವರು, ಪದಕ ಗೆಲ್ಲುವ ಅವಕಾಶ ಕೈಚೆಲ್ಲಿದರು.

ಫೈನಲ್ ಸ್ಪರ್ಧೆಯಲ್ಲಿ ಭಾಕರ್ ಅವರು 25 ಅಂಕಗಳನ್ನು ಗಳಿಸಿದರು. ತಲಾ 39 ಅಂಕಗಳನ್ನು ಗಳಿಸಿದ್ದ ಚೀನಾದ ಯೂಯೂ ಜಾಂಗ್ ಹಾಗೂ ಜಿಯಾರುಷುವನ್ ಷಿಯಾವೊ ಅವರು ಶೂಟ್–ಆಫ್‌ನಲ್ಲಿ 4–3 ಅಂಕ ಪಡೆಯುವುದರೊಂದಿಗೆ ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಗೆದ್ದರು.

ನೀರೂ ಧಂಡಾ

ಭಾಕರ್, ಇಶಾ ಹಾಗೂ ಸಿಮ್ರನ್‌ಪ್ರೀತ್ ಕೌರ್ ಬ್ರಾರ್ ಅವರು ತಂಡ ವಿಭಾಗದಲ್ಲಿ 1,749 ಪಾಯಿಂಟ್ಸ್‌ಗಳೊಂದಿಗೆ ಕಂಚಿನ ಪದಕ ಗೆದ್ದುಕೊಂಡರು. ಚೀನಾ ಸ್ವರ್ಣ ಗೆದ್ದರೆ, ಕೊರಿಯಾ ಬೆಳ್ಳಿ ಗೆದ್ದಿತು.

ಜೂನಿಯರ್ಸ್ ಪರಾಕ್ರಮ: ಟೂರ್ನಿಯ 25 ಮೀ. ಪಿಸ್ತೂಲ್ ಸ್ಪರ್ಧೆಯಲ್ಲಿ ಭಾರತದ ಸೀನಿಯರ್ ಶೂಟರ್‌ಗಳು ಪದಕ ಗೆಲ್ಲುವಲ್ಲಿ ವಿಫಲವಾದರೆ, ಜೂನಿಯರ್ ಸ್ಪರ್ಧಿಗಳು ಎಲ್ಲ ಮೂರು ಪದಕಗಳನ್ನು ಜಯಿಸಿ ಪರಾಕ್ರಮ ಮೆರೆದರು. ಪಾಯಲ್ ಖತ್ರಿ 36 ಪಾಯಿಂಟ್ಸ್‌ಗಳೊಂದಿಗೆ ಸ್ವರ್ಣಕ್ಕೆ ಮುತ್ತಿಕ್ಕಿದರೆ, ನಾಮ್ಯ ಕಪೂರ್ (30) ಬೆಳ್ಳಿ ಹಾಗೂ ತೇಜಸ್ವಿನಿ (27) ಕಂಚು ಗೆದ್ದರು.

ಈ ಮೂವರು, ಜೂನಿಯರ್ ಮಹಿಳೆಯರ 25 ಮೀ. ಪಿಸ್ತೂಲ್ ಸ್ಪರ್ಧೆಯ ತಂಡ ವಿಭಾಗದಲ್ಲಿ ರಜತ ಪದಕ ಗೆಲ್ಲುವಲ್ಲಿ ಯಶಸ್ವಿಯಾದರು. ಫೈನಲ್‌ನಲ್ಲಿ ಭಾರತ ತಂಡವು 1,700 ಅಂಕ ಸಂಪಾದಿಸಿದರೆ, ಕೊರಿಯಾ 1,714 ಪಾಯಿಂಟ್ಸ್‌ಗಳೊಡನೆ ಚಿನ್ನ ಜಯಿಸಿತು.

ಮಹಾರಾಜ ಟ್ರೋಫಿ: ಶ್ರೀಜಿತ್–ಅಭಿನವ್ ಶತಕದ ಜೊತೆಯಾಟ

ಟೈಗರ್ಸ್‌ಗೆ ಮಣಿದ ಶಿವಮೊಗ್ಗ ಲಯನ್ಸ್

• ಆರ್. ಜಿತೇಂದ್ರ

ಮೈಸೂರು: ಕೆ.ಎಲ್. ಶ್ರೀಜಿತ್ (66 ರನ್, 40 ಎ, 4X2, 6X6) ಹಾಗೂ ಅಭಿನವ್ ಮನೋಹರ್ (63 ರನ್, 35 ಎ, 4X5, 6X3) ಜೊತೆಯಾಟದ ಅಬ್ಬರದ ಮುಂದೆ ತತ್ತರಿಸಿದ ಶಿವಮೊಗ್ಗ ಲಯನ್ಸ್ 'ಮಹಾರಾಜ ಟ್ರೋಫಿ' ಟೂರ್ನಿಯಿಂದ ನಿರ್ಗಮಿಸಿತು. ಹುಬ್ಬಳ್ಳಿ ಟೈಗರ್ಸ್ 105 ರನ್‌ಗಳ ಅಂತರದಿಂದ ಜಯಿಸಿತು.

ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 'ಮಹಾರಾಜ ಟ್ರೋಫಿ' ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಸೋಮವಾರ ಲೀಗ್ ಹಂತದ ಕೊನೆಯ ಪಂದ್ಯವಾಡಿದ ಟೈಗರ್ಸ್ ತಂಡದ ಶ್ರೀಜಿತ್–ಅಭಿನವ್ ಜೋಡಿಯು ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 62 ಎಸೆತಗಳಲ್ಲಿ 124 ರನ್ ಸೇರಿಸಿದರು. ಇದರಿಂದಾಗಿ ತಂಡ 195 ರನ್‌ಗಳ ಬೃಹತ್ ಮೊತ್ತ ಪೇರಿಸಿತು. ಗುರಿ ಬೆನ್ನತ್ತಿದ ಶಿವಮೊಗ್ಗ 90 ರನ್‌ಗಳಿಗೆ ಕುಸಿಯಿತು.

ಮೊದಲು ಬ್ಯಾಟ್ ಮಾಡಿದ ಟೈಗರ್ಸ್‌ಗೆ ದೇವದತ್ತ ಪಡಿಕ್ಕಲ್ (33 ರನ್, 15 ಎ, 4X5, 6X1) ಬಿರುಸಿನ ಆರಂಭ ಒದಗಿಸಿದರು. ಆದರೆ ನಾಯಕ ಮೊಹಮ್ಮದ್ ತಾಹಾ (8), ಕೆ.ಪಿ. ಕಾರ್ತಿಕೇಯ (12) ನಿರಾಸೆ ಮೂಡಿಸಿದರು. ನಂತರದಲ್ಲಿ ಶ್ರೀಜಿತ್‌ಗೆ ಜೊತೆಯಾದ ಅಭಿನವ್ ಸ್ಮರಣೀಯ ಇನ್ನಿಂಗ್ಸ್ ಕಟ್ಟಿದರು.

ಬೃಹತ್ ಮೊತ್ತ ಬೆನ್ನತ್ತಿದ ಶಿವಮೊಗ್ಗ, ಹುಬ್ಬಳ್ಳಿಯ ಸ್ಪಿನ್ನರ್‌ಗಳ ಕೈಚಳಕಕ್ಕೆ ತಲೆಬಾಗಿತು. ಧ್ರುವ್ ಪ್ರಭಾಕರ್ (29) ಹಾಗೂ ಅನೀಶ್ವರ್ ಗೌತಮ್ (14) ಹೊರತುಪಡಿಸಿ ಉಳಿದ ಆಟಗಾರರು ಪೆವಿಲಿಯನ್ ಪರೇಡ್ ನಡೆಸಿದರು. ಹುಬ್ಬಳ್ಳಿ ತಂಡದ ಪಡಿಕ್ಕಲ್ ಬದಲಿಗೆ ಇಂಪ್ಯಾಕ್ಟ್ ಆಟಗಾರನಾಗಿ ಬಂದ ಸ್ಪಿನ್ನರ್ ಯಶ್‌ರಾಜ್ ಪೂಂಜ 3 ವಿಕೆಟ್ ಗಳಿಸಿದರು.

ಮೂರು ವಿಕೆಟ್ ಪಡೆದ ಯಶ್‌ರಾಜ್ ಪೂಂಜ ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಸಂಕ್ಷಿಪ್ತ ಸ್ಕೋರ್: ಹುಬ್ಬಳ್ಳಿ ಟೈಗರ್ಸ್: 20 ಓವರ್‌ಗಳಲ್ಲಿ 3 ವಿಕೆಟ್‌ಗೆ 195 (ಕೆ.ಎಲ್. ಶ್ರೀಜಿತ್ ಔಟಾಗದೇ 66, ಅಭಿನವ್ ಮನೋಹರ್ ಔಟಾಗದೇ 63, ಮರಿಬಸವಗೌಡ 31ಕ್ಕೆ 2) ಶಿವಮೊಗ್ಗ ಲಯನ್ಸ್: 15.5 ಓವರ್‌ಗಳಲ್ಲಿ 90 (ಧ್ರುವ್ ಪ್ರಭಾಕರ್ 29, ಯಶ್‌ರಾಜ್ ಪೂಂಜ 18ಕ್ಕೆ 3, ಕೆ.ಸಿ. ಕಾರಿಯಪ್ಪ 9ಕ್ಕೆ 2) ಪಂದ್ಯದ ಆಟಗಾರ: ಕೆ.ಎಲ್. ಶ್ರೀಜಿತ್

ಇಂದಿನ ಪಂದ್ಯಗಳು

ಕ್ವಾಲಿಫೈಯರ್–1: ಮಂಗಳೂರು ಡ್ರ್ಯಾಗನ್ಸ್- ಹುಬ್ಬಳ್ಳಿ ಟೈಗರ್ಸ್- ಮಧ್ಯಾಹ್ನ 3.15

ಎಲಿಮಿನೇಟರ್: ಬೆಂಗಳೂರು ಬ್ಲಾಸ್ಟರ್ಸ್- ಗುಲ್ಬರ್ಗ ಮಿಸ್ಟಿಕ್ಸ್–ರಾತ್ರಿ 7.15

ತಂಡ	ಪಂದ್ಯ	ಗೆಲುವು	ಸೋಲು	ಅಂಕ
ಮಂಗಳೂರು ಡ್ರ್ಯಾಗನ್ಸ್	10	7	2	15
ಹುಬ್ಬಳ್ಳಿ ಟೈಗರ್ಸ್	10	7	3	14
ಗುಲ್ಬರ್ಗ ಮಿಸ್ಟಿಕ್ಸ್	10	6	4	12
ಬೆಂಗಳೂರು ಬ್ಲಾಸ್ಟರ್ಸ್	10	5	5	10
ಮೈಸೂರು ವಾರಿಯರ್ಸ್	10	2	6	6
ಶಿವಮೊಗ್ಗ ಲಯನ್ಸ್	10	1	8	3

ಅಗ್ರಸ್ಥಾನಕ್ಕೆ ಡ್ರ್ಯಾಗನ್ಸ್

ಮೈಸೂರು: ಗುಲ್ಬರ್ಗ ಮಿಸ್ಟಿಕ್ಸ್ ಅನ್ನು 39 ರನ್ ಅಂತರದಿಂದ ಮಣಿಸಿದ ಮಂಗಳೂರು ಡ್ರ್ಯಾಗನ್ಸ್ ಅಗ್ರಸ್ಥಾನಕ್ಕೇರಿತು.

ಮಂಗಳವಾರ ನಡೆಯಲಿರುವ ಕ್ವಾಲಿಫೈಯರ್–1 ಪಂದ್ಯದಲ್ಲಿ ಡ್ರ್ಯಾಗನ್ಸ್ ಹಾಗೂ ಹುಬ್ಬಳ್ಳಿ ಟೈಗರ್ಸ್ ಮುಖಾಮುಖಿ ಆಗಲಿವೆ. ಗೆದ್ದ ತಂಡ ನೇರವಾಗಿ ಫೈನಲ್ ಪ್ರವೇಶಿಸಲಿದೆ. ಎಲಿಮಿನೇಟರ್ ಹಣಾಹಣಿಯಲ್ಲಿ ಗುಲ್ಬರ್ಗ ಹಾಗೂ ಬೆಂಗಳೂರು ಬ್ಲಾಸ್ಟರ್ಸ್ ಸೆಣಸಲಿವೆ.

ಸೋಮವಾರ ರಾತ್ರಿ ನಡೆದ ಲೀಗ್ ಹಂತದ ಕೊನೆಯ ಪಂದ್ಯದಲ್ಲಿ ಡ್ರ್ಯಾಗನ್ಸ್ ನೀಡಿದ 181 ರನ್‌ಗಳ ಸವಾಲಿನ ಮೊತ್ತದ ಬೆನ್ನತ್ತಿದ ಗುಲ್ಬರ್ಗ 141 ರನ್ ಗಳಿಸಲಷ್ಟೇ ಶಕ್ತವಾಯಿತು. ಸಚಿನ್ ಶಿಂಧೆ 4 ವಿಕೆಟ್ ಕಬಳಿಸಿ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು.

ಸಂಕ್ಷಿಪ್ತ ಸ್ಕೋರ್: ಮಂಗಳೂರು ಡ್ರ್ಯಾಗನ್ಸ್: 20 ಓವರ್‌ಗಳಲ್ಲಿ 6 ವಿಕೆಟ್‌ಗೆ 180 (ಎಸ್. ಶಿವರಾಜು ಔಟಾಗದೇ 46, ತಿಪ್ಪಾರೆಡ್ಡಿ 45, ಆದರ್ಶ್ ಪ್ರಜ್ವಲ್ 27, ಪೃಥ್ವಿರಾಜ್ ಶೇಖಾವತ್ 21ಕ್ಕೆ 2, ಪ್ರವೀಣ್ ದುಬೆ 33ಕ್ಕೆ 2). ಗುಲ್ಬರ್ಗ ಮಿಸ್ಟಿಕ್ಸ್: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 141 (ಲವನೀತ್ ಸಿಸೋಡಿಯಾ 29, ಸಚಿನ್ ಶಿಂಧೆ 14ಕ್ಕೆ 4). ಪಂದ್ಯದ ಆಟಗಾರ: ಸಚಿನ್ ಶಿಂಧೆ

ಮೊದಲ ಸುತ್ತಿನಲ್ಲೇ ಹೊರಬಿದ್ದ ಸೇನ್

ಪ್ಯಾರಿಸ್ (ಪಿಟಿಐ): ಭಾರತದ ತಾರೆ ಲಕ್ಷ್ಯ ಸೇನ್ ಸೋಮವಾರ ಆರಂಭಗೊಂಡ ಬಿಡಬ್ಲ್ಯುಎಫ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪುರುಷರ ಸಿಂಗಲ್ಸ್‌ನ ಆರಂಭಿಕ ಸುತ್ತಿನಲ್ಲೇ ನಿರಾಸೆ ಅನುಭವಿಸಿದರು.

2021ರ ಆವೃತ್ತಿಯ ಕಂಚು ವಿಜೇತ, 24 ವರ್ಷದ ಸೇನ್ 17-21, 19-21ರಿಂದ ವಿಶ್ವದ ಅಗ್ರಮಾನ್ಯ ಆಟಗಾರ, ಚೀನಾದ ಶಿ ಯು ಕಿ ವಿರುದ್ಧ ನೇರ ಗೇಮ್‌ಗಳಲ್ಲಿ ಸೋತರು.

ಮಹಿಳೆಯರ ಡಬಲ್ಸ್‌ನಲ್ಲಿ ಪಾಂಡಾ ಸಹೋದರಿಯರೂ ಮೊದಲ ಸುತ್ತಿನಲ್ಲಿ ಅಭಿಯಾನ ಮುಗಿಸಿದರು. ರುತುಪರ್ಣ ಮತ್ತು ಶ್ವೇತಪರ್ಣ ಜೋಡಿ 12-21, 11-21ರಿಂದ ಬಲ್ಗೇರಿಯಾದ ಆಟಗಾರ್ತಿಯರಿಗೆ ಶರಣಾದರು.